ಮಂಗಳವಾರ, ಅಕ್ಟೋಬರ್ 15, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 286 | ಪುಟ 14

• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಎಂಥ ಆಹಾರಕ್ರಮವನ್ನು ಅಳವಡಿಸಿಕೊಂಡರೆ ಮಧುಮೇಹವನ್ನು ನಿಯಂತ್ರಿಸಬಹುದು?

ಅನುಭವ ಮಂಟಪ
'ತುಳಿತಕ್ಕೆ ಒಳಗಾದವರ ಹಕ್ಕು: ತಕ್ಷಣ ಜಾರಿಗೆ ಬರಲಿ'

ಮೂವರು ಅರ್ಥಶಾಸ್ತ್ರಜ್ಞರಿಗೆ ನೊಬೆಲ್ 7

ಶಾಂತಿಪಾಲನಾ ಪಡೆ ವಾಪಸ್ ಇಲ್ಲ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,973 ▲	25,127 ▲	₹79,970 (ಬೆಂಗಳೂರು) ▼	₹95,900 (ಬೆಂಗಳೂರು) ▼	84.05 ▲

ಖಾಲಿಸ್ತಾನಿ ಪ್ರತ್ಯೇಕತಾವಾದಿ ನಿಜ್ಜರ್ ಹತ್ಯೆ ಪ್ರಕರಣ: ಹೈಕಮಿಷನರ್ ವಾಪಸ್ ಕರೆಸಿಕೊಂಡ ಭಾರತ

ಕೆನಡಾ ಜತೆ ರಾಜತಾಂತ್ರಿಕ ಸಮರ

ನವದೆಹಲಿ (ಪಿಟಿಐ): ಕೆನಡಾದಲ್ಲಿರುವ ತನ್ನ ಹೈಕಮಿಷನರ್ ಅವರನ್ನು ವಾಪಸ್ ಕರೆಸಿಕೊಳ್ಳುವುದಾಗಿ ಭಾರತ ಸೋಮವಾರ ಹೇಳಿದೆ. ಈ ಬೆಳವಣಿಗೆಯು ಉಭಯ ದೇಶಗಳ ನಡುವಣ ರಾಜತಾಂತ್ರಿಕ ಸಂಬಂಧದಲ್ಲಿ ಮತ್ತಷ್ಟು ಬಿರುಕು ಮೂಡುವಂತೆ ಮಾಡಿದೆ.

ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದಲ್ಲಿ ಭಾರತದ ಹೈಕಮಿಷನರ್ ಮತ್ತು ಇತರ ರಾಜತಾಂತ್ರಿಕ ಅಧಿಕಾರಿಗಳನ್ನೂ ತನಿಖೆಗೆ ಒಳಪಡಿಸುವುದಾಗಿ ಕೆನಡಾ ಸರ್ಕಾರ ಹೇಳಿದೆ. ಅದರ ಬೆನ್ನಲ್ಲೇ ಭಾರತ ಈ ನಿರ್ಧಾರ ತೆಗೆದುಕೊಂಡಿದೆ.

ನಿಜ್ಜರ್ ಹತ್ಯೆಯಲ್ಲಿ ಭಾರತೀಯ ಏಜೆಂಟ್‌ಗಳ ಪಾತ್ರವಿದೆ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಈ ಹಿಂದೆ ಆರೋಪಿಸಿದ ನಂತರ, ಭಾರತ ಮತ್ತು ಕೆನಡಾ ನಡುವಿನ ಸಂಬಂಧ ತೀವ್ರ ಬಿಗಡಾಯಿಸಿತ್ತು.

'ನಮ್ಮ ರಾಜತಾಂತ್ರಿಕ ಅಧಿಕಾರಿಗಳ ಭದ್ರತೆಯ ಖಾತರಿಯನ್ನು ಈಗಿನ ಕೆನಡಾ ಸರ್ಕಾರ ನೀಡಬಹುದು ಎಂಬ ನಂಬಿಕೆಯಿಲ್ಲ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಕಟಣೆ ತಿಳಿಸಿದೆ. 'ಆದ್ದರಿಂದ, ಹೈಕಮಿಷನರ್ ಮತ್ತು ಕೆನಡಾ ಗುರಿಯಾಗಿಸಿಕೊಂಡಿರುವ ಇತರ ರಾಜತಾಂತ್ರಿಕ ಅಧಿಕಾರಿಗಳನ್ನು ವಾಪಸ್ ಕರೆಸಿಕೊಳ್ಳಲು ಸರ್ಕಾರ ನಿರ್ಧರಿಸಿದೆ' ಎಂದು ಹೇಳಿದೆ.

ಸಚಿವಾಲಯವು ಇದಕ್ಕೂ ಮೊದಲು ಪ್ರಕಟಣೆಯಲ್ಲಿ, 'ಭಾರತವು ಕೆನಡಾದಿಂದ ಭಾನುವಾರ ರಾಜತಾಂತ್ರಿಕ ಪತ್ರವೊಂದನ್ನು ಸ್ವೀಕರಿಸಿದೆ. ಆ ದೇಶದಲ್ಲಿ ನಡೆಯುತ್ತಿರುವ ತನಿಖೆಗೆ ಸಂಬಂಧಿಸಿದಂತೆ ಭಾರತದ ಹೈಕಮಿಷನರ್ ಮತ್ತು ಇತರ ರಾಜತಾಂತ್ರಿಕ ಅಧಿಕಾರಿಗಳನ್ನೂ ವಿಚಾರಣೆಗೆ ಒಳಪಡಿಸಬೇಕಾಗಬಹುದು ಎಂದು ಅದರಲ್ಲಿ ತಿಳಿಸಲಾಗಿದೆ' ಎಂದು ಹೇಳಿತ್ತು.

ಅಸಂಬದ್ಧ ಆರೋಪ: ಹೈಕಮಿಷನರ್ ಸಂಜಯ್ ಕುಮಾರ್ ವರ್ಮಾ ಅವರ ವಿರುದ್ಧ ಮಾಡಿರುವ ಆರೋಪಗಳನ್ನು ಭಾರತವು 'ಅಸಂಬದ್ಧ' ಎಂದು ತಿರಸ್ಕರಿಸಿದೆ. ಮುಂದಿನ ದಿನಗಳಲ್ಲಿ ಸೂಕ್ತ ಕ್ರಮದ ಎಚ್ಚರಿಕೆಯನ್ನೂ ನೀಡಿದೆ. 'ಈ ಆರೋಪವು ಜಸ್ಟಿನ್ ಟ್ರುಡೊ ಸರ್ಕಾರದ ರಾಜಕೀಯ ಕಾರ್ಯಸೂಚಿಯ ಒಂದು ಭಾಗ' ಎಂದು ತಿರುಗೇಟು ನೀಡಿದೆ.

ಭಾರತದ ರಾಜತಾಂತ್ರಿಕರ ವಿರುದ್ಧ ಆರೋಪಗಳನ್ನು ಹೊರಿಸಲು ಕೆನಡಾ ಸರ್ಕಾರ ನಡೆಸುತ್ತಿರುವ ಪ್ರಯತ್ನಗಳಿಗೆ ಪ್ರತಿಕ್ರಿಯೆಯಾಗಿ ಮುಂದಿನ ಕ್ರಮವನ್ನು ತೆಗೆದುಕೊಳ್ಳುವ ಹಕ್ಕನ್ನು ಭಾರತವು ಕಾಯ್ದಿರಿಸಿದೆ ಎಂದು ಸ್ಪಷ್ಟಪಡಿಸಿದೆ.

'ಟ್ರುಡೊ ಅವರು 2023ರ ಸೆಪ್ಟೆಂಬರ್‌ನಲ್ಲಿ ಕೆಲವು ಆರೋಪಗಳನ್ನು ಮಾಡಿದ್ದರು. ನಮ್ಮ ವಿನಂತಿಯ ಹೊರತಾಗಿಯೂ ಕೆನಡಾ ಸರ್ಕಾರ ಆ ಆರೋಪಗಳಿಗೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯವನ್ನೂ ನಮ್ಮ ಜತೆ ಹಂಚಿಕೊಂಡಿಲ್ಲ' ಎಂದು ಸಚಿವಾಲಯ ಹೇಳಿದೆ.

ಹರ್ದೀಪ್ ಸಿಂಗ್ ನಿಜ್ಜರ್‌ನನ್ನು 2023ರ ಜೂನ್ 18ರಂದು ವ್ಯಾಂಕೋವರ್‌ನ ಗುರುದ್ವಾರದ ಹೊರಗೆ ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತೀಯ ಮೂಲದ ನಾಲ್ವರನ್ನು ಬಂಧಿಸಲಾಗಿದೆ.

ಕೆನಡಾದ ಡೆಪ್ಯುಟಿ ಹೈಕಮಿಷನರ್ ಸ್ಟೀವರ್ಟ್ ವೀಲರ್ ಅವರು ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಭೇಟಿ ನೀಡಿ ವಿವರಣೆ ಕೊಟ್ಟು ಹಿಂದಿರುಗಿದರು

ತಲಾ 6 ರಾಜತಾಂತ್ರಿಕರ ಗಡೀಪಾರು

ಒಟ್ಟಾವಾ/ ನವದೆಹಲಿ: ಭಾರತದ ಆರು ರಾಜತಾಂತ್ರಿಕ ಅಧಿಕಾರಿಗಳನ್ನು ಕೆನಡಾ ಸರ್ಕಾರ ಸೋಮವಾರ ಗಡೀಪಾರು ಮಾಡಿದೆ. ಇದಕ್ಕೆ ಪ್ರತಿಯಾಗಿ ಭಾರತ ಕೂಡಾ, ಕೆನಡಾದ ಆರು ರಾಜತಾಂತ್ರಿಕ ಅಧಿಕಾರಿಗಳಿಗೆ ದೇಶ ತೊರೆಯುವಂತೆ ಸೂಚಿಸಿದೆ. 'ಅಕ್ಟೋಬರ್ 19ರ ಒಳಗಾಗಿ ದೇಶ ತೊರೆಯುವಂತೆ ಕೆನಡಾದ ಆರು ಮಂದಿ ರಾಜತಾಂತ್ರಿಕ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

'ಹಾಸ್ಯಾಸ್ಪದ ಆರೋಪ'

36 ವರ್ಷಗಳಷ್ಟು ಸೇವಾ ಅನುಭವ ಹೊಂದಿರುವ ಸಂಜಯ್ ಕುಮಾರ್ ವರ್ಮಾ ಅವರು ಭಾರತದ ಹಿರಿಯ ರಾಜತಾಂತ್ರಿಕ ಅಧಿಕಾರಿಗಳಲ್ಲಿ ಒಬ್ಬರಾಗಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

'ಅವರು ಜಪಾನ್ ಮತ್ತು ಸುಡಾನ್‌ನಲ್ಲಿ ರಾಯಭಾರಿಯಾಗಿ ಕೆಲಸ ಮಾಡಿದ್ದಾರೆ. ಇಟಲಿ, ಟರ್ಕಿ, ವಿಯೆಟ್ನಾಂ ಮತ್ತು ಚೀನಾದಲ್ಲೂ ಕೆಲಸ ಮಾಡಿದ್ದಾರೆ. ಕೆನಡಾ ಸರ್ಕಾರವು ಅವರ ಮೇಲೆ ಮಾಡಿರುವ ಆರೋಪ ಹಾಸ್ಯಾಸ್ಪದವಾಗಿದ್ದು, ಅದನ್ನು ಕಡೆಗಣಿಸಲಾಗುವುದು' ಎಂದಿದೆ.

ಕೆನಡಾ ಹೈಕಮಿಷನರ್‌ಗೆ ಸಮನ್ಸ್

ಭಾರತದ ಹೈಕಮಿಷನರ್ ಮತ್ತು ಇತರ ರಾಜತಾಂತ್ರಿಕ ಅಧಿಕಾರಿಗಳನ್ನು ತನಿಖೆಗೆ ಒಳಪಡಿಸುವ ಕೆನಡಾದ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಭಾರತ, ನವದೆಹಲಿಯಲ್ಲಿರುವ ಕೆನಡಾ ಡೆಪ್ಯುಟಿ ಹೈಕಮಿಷನರ್ ಸ್ಟೀವರ್ಟ್ ವೀಲರ್ ಅವರನ್ನು ಕರೆಸಿ ವಿವರಣೆ ಕೇಳಿದೆ. ಆದರೆ, 'ಭಾರತ ಕೇಳಿದ ಎಲ್ಲ ಪುರಾವೆಗಳನ್ನು ಒದಗಿಸಲಾಗಿದೆ' ಎಂದು ಅವರು ಹೇಳಿದ್ದಾರೆ. 'ನಿಜ್ಜರ್ ಹತ್ಯೆ ಪ್ರಕರಣದಲ್ಲಿ ಭಾರತದ ಏಜೆಂಟರ ಪಾತ್ರ ಇರುವುದನ್ನು ಸಾಬೀತುಪಡಿಸುವ ನಂಬಲರ್ಹ ಪುರಾವೆಗಳನ್ನು ಒದಗಿಸಲಾಗಿದೆ' ಎಂದು ಅವರು ಸೋಮವಾರ ತಿಳಿಸಿದರು.

ಬೀಳ್ಕೊಡುಗೆ

ಮೈಸೂರು ದಸರಾ ಜಂಬೂಸವಾರಿ ಯಶಸ್ವಿಗೊಳಿಸಿದ ಆನೆಗಳನ್ನು ಅರಮನೆ ಆವರಣದಿಂದ ಮೂಲ ಶಿಬಿರಗಳಿಗೆ ಸೋಮವಾರ ಲಾರಿಗಳಲ್ಲಿ ಬೀಳ್ಕೊಟ್ಟ ವೇಳೆ ಫೋಟೊ ತೆಗೆದುಕೊಳ್ಳಲು ಜನರು ಮುಗಿಬಿದ್ದರು

ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಮಾಜಿ ಸಚಿವ ನಾಗೇಂದ್ರಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬಿ.ನಾಗೇಂದ್ರ

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ (ಕೆಎಂವಿಎಸ್‌ಟಿಡಿಸಿಎಲ್) ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ₹95 ಕೋಟಿ ವರ್ಗಾವಣೆ ಮಾಡಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣದ ಆರೋಪಿಯೂ ಆದ ಮಾಜಿ ಸಚಿವ ಬಿ.ನಾಗೇಂದ್ರ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಬಳ್ಳಾರಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರ ಸಲ್ಲಿಸಿದ್ದ ಜಾಮೀನು ಅರ್ಜಿ ಮೇಲಿನ ವಿಚಾರಣೆ ಆಲಿಸಿ ಕಾಯ್ದಿರಿಸಿದ್ದ ಆದೇಶವನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಸೋಮವಾರ ಪ್ರಕಟಿಸಿದರು.

'ಆರೋಪಿಯು ₹2 ಲಕ್ಷ ಮೌಲ್ಯದ ವೈಯಕ್ತಿಕ ಬಾಂಡ್ ಮತ್ತು ಇಷ್ಟೇ ಮೊತ್ತಕ್ಕೆ ಇಬ್ಬರ ಭದ್ರತೆ ಒದಗಿಸಬೇಕು' ಎಂಬ ಪ್ರಮುಖ ಷರತ್ತುಗಳೊಂದಿಗೆ ಜಾಮೀನು ನೀಡಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) 144 ಪುಟಗಳ ದೂರನ್ನು ಸಲ್ಲಿಸಿತ್ತು. ದೂರಿನನ್ವಯ, ಹಣ ಅಕ್ರಮ ವರ್ಗಾವಣೆ ಕಾಯ್ದೆ-2002ರ ಕಲಂ 3 ಮತ್ತು 4ರ ಅಡಿಯಲ್ಲಿ ವಿಚಾರಣಾ ನ್ಯಾಯಾಲಯಕ್ಕೆ 4,970 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಈ ಪ್ರಕರಣದಲ್ಲಿ ನಾಗೇಂದ್ರ ಮೊದಲ ಆರೋಪಿಯಾಗಿದ್ದು ಜುಲೈ 22ರಿಂದ ನ್ಯಾಯಾಂಗ ಬಂಧನದಲ್ಲಿದ್ದರು.

ಇ.ಡಿ ಪರ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್ ಮತ್ತು ನಾಗೇಂದ್ರ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿದ್ದರು. ನಾಗೇಂದ್ರ ಅವರ ಪರವಾಗಿ ಹೈಕೋರ್ಟ್ ವಕೀಲ ಎನ್. ಗೌರವ್ ತೇಜಸ್ವಿ ವಕಾಲತ್ತು ವಹಿಸಿದ್ದಾರೆ.

ದರ್ಶನ್‌ಗಿಲ್ಲ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್, ಅವರ ಆಪ್ತೆ ಪವಿತ್ರಾಗೌಡ ಹಾಗೂ ಇಬ್ಬರು ಸಹಚರರ ಜಾಮೀನು ಅರ್ಜಿಯನ್ನು 57ನೇ ಸಿಸಿಎಚ್ ನ್ಯಾಯಾಲಯವು ಸೋಮವಾರ ವಜಾಗೊಳಿಸಿತು.

ಇದೇ ಪ್ರಕರಣದ ಎಂಟನೇ ಆರೋಪಿ ರವಿಶಂಕರ್ ಹಾಗೂ 13ನೇ ಆರೋಪಿ ದೀಪಕ್‌ಗೆ ಜಾಮೀನು ಮಂಜೂರು ಮಾಡಿತು. ದರ್ಶನ್ ಅವರ ವ್ಯವಸ್ಥಾಪಕ ನಾಗರಾಜ್, ಕಾರು ಚಾಲಕ ಲಕ್ಷ್ಮಣ್ ಅವರು ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಗಳೂ ವಜಾಗೊಂಡಿವೆ.

ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಕಳೆದ ವಾರ ನ್ಯಾಯಾಲಯದಲ್ಲಿ ಸುದೀರ್ಘ ವಾದ-ಪ್ರತಿವಾದ ನಡೆದಿತ್ತು. ಜಾಮೀನು ಅರ್ಜಿಗೆ ಸಂಬಂಧಿಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಾಧೀಶ ಜೈಶಂಕರ್ ಅವರು ಸೋಮವಾರ ಪ್ರಕಟಿಸಿದರು.

ಕೊಲೆ ಪ್ರಕರಣದಲ್ಲಿ ಜೂನ್ 11ರಂದು ದರ್ಶನ್ ಸೇರಿದಂತೆ 17 ಆರೋಪಿಗಳನ್ನು ಬಂಧಿಸಲಾಗಿತ್ತು. ತನಿಖೆ ನಡೆಸಿದ್ದ ಪಶ್ಚಿಮ ವಿಭಾಗದ ಪೊಲೀಸರ ವಿಶೇಷ ತನಿಖಾ ತಂಡ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

'ದರ್ಶನ್ ಅವರ ವಿರುದ್ಧ ಸಾಂದರ್ಭಿಕ ಸಾಕ್ಷ್ಯ ಸೃಷ್ಟಿಸಲಾಗಿದೆ. ತನಿಖಾಧಿಕಾರಿಗಳು ಅತ್ಯುತ್ತಮವಾಗಿ ತನಿಖೆ ನಡೆಸಿದ್ದಾರೆಂದು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಆದರೆ, ನನ್ನ ಪ್ರಕಾರ ಇದು ಕಳಪೆ ತನಿಖೆ. ಮೃತದೇಹದ ಮೇಲೆ ನಾಯಿ ಕಚ್ಚಿದ ಗುರುತುಗಳಿವೆ. ಇದನ್ನೇ ಹಲ್ಲೆ ಎಂದು ಮಾಧ್ಯಮಗಳು ಬಿಂಬಿಸಿವೆ' ಎಂದು ದರ್ಶನ್ ಪರ ವಕೀಲ ಸಿ.ವಿ. ನಾಗೇಶ್ ಅವರು ವಾದ ಮಂಡಿಸಿದ್ದರು.

ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ್ದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಸನ್ನ ಕುಮಾರ್, 'ಮರಣೋತ್ತರ ಪರೀಕ್ಷೆಯ ವಿಳಂಬದಿಂದ ತನಿಖೆಗೆ ತೊಂದರೆ ಆಗಿಲ್ಲ. ಊಟ ಮಾಡಿದ ಎರಡು ಗಂಟೆಯಲ್ಲಿ ಸಾವು ಸಂಭವಿಸಿರುವ ಬಗ್ಗೆ ವೈದ್ಯರು ಸ್ಪಷ್ಟಪಡಿಸಿದ್ದಾರೆ. ಶ್ವಾಸಕೋಶಕ್ಕೆ ಸೇರಿದಂತೆ 39ಕ್ಕೂ ಹೆಚ್ಚು ಕಡೆ ಗಾಯಗಳಾಗಿವೆ' ಎಂದು ಪ್ರತಿಪಾದಿಸಿದ್ದರು.

'ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆ ದಾಖಲು, ತನಿಖೆ ಹಾಗೂ ಮರಣೋತ್ತರ ಪರೀಕ್ಷೆಯಲ್ಲಿ ವಿಳಂಬವಾಗಿಲ್ಲ. ಮೃತವ್ಯಕ್ತಿಯ ಚಹರೆ ಪತ್ತೆಯಾದ ಮೇಲೆ ಕುಟುಂಬಸ್ಥರ ಸಮ್ಮುಖದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಎರಡನೇ ಆರೋಪಿ ಕೃತ್ಯ ನಡೆದ ಸ್ಥಳದಲ್ಲಿ ಇದ್ದರು ಎಂಬುದನ್ನು ಡಿಎನ್‌ಎ ವರದಿ ದೃಢಪಡಿಸಿದೆ. ಪವಿತ್ರಾಗೌಡ ಅವರ ಷಡ್ಯಂತ್ರದಿಂದಲೇ ಈ ಕೃತ್ಯ ನಡೆಸಲಾಗಿದೆ' ಎಂದು ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರು.

'ಸಾಕ್ಷಿದಾರರು ಪತ್ತೆಯಾದ ಬಳಿಕವೇ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಅಲ್ಲೂ ವಿಳಂಬವಾಗಿಲ್ಲ. ಆರೋಪಿಗಳ ಪರ ವಕೀಲರು ಜಪ್ತಿ ಮಾಡಿಕೊಳ್ಳಲಾದ ವಸ್ತುಗಳ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದರು. ತನಿಖಾಧಿಕಾರಿಗಳು ಪರಿಶೀಲನೆಯ ಬಳಿಕವೇ ಕೃತ್ಯಕ್ಕೆ ಬಳಸಿದ್ದ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ' ಎಂದು ವಾದಿಸಿದ್ದರು.

ಹೈಕೋರ್ಟ್‌ಗೆ ಮೇಲ್ಮನವಿ ಸಾಧ್ಯತೆ

37ನೇ ಸಿಸಿಎಚ್ ನ್ಯಾಯಾಲಯದಲ್ಲಿ ಅರ್ಜಿ ವಜಾಗೊಂಡ ಬೆನ್ನಲ್ಲೇ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು ದರ್ಶನ್ ಪರ ವಕೀಲರು ತಯಾರಿ ನಡೆಸಿದ್ದು, ಮಂಗಳವಾರವೇ ಸಲ್ಲಿಕೆ ಆಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ದರ್ಶನ್

ಪವಿತ್ರಾ ಗೌಡ

ನ್ಯಾಯಾಂಗ, ಪೊಲೀಸ್ ಮೇಲೆ ನಮಗಿದ್ದ ಗೌರವ ಹೆಚ್ಚಿದೆ. ನನ್ನ ಮಗನ ಸಾವಿಗೆ ನ್ಯಾಯ ಸಿಕ್ಕೇ ಸಿಗುತ್ತದೆ ಎಂಬ ನಂಬಿಕೆಯೂ ಬಲವಾಗಿದೆ

ಕಾಶಿನಾಥಯ್ಯ ಶಿವನಗೌಡರ್
ರೇಣುಕಸ್ವಾಮಿ ತಂದೆ

ಎಚ್‌ಎಂಟಿ ಭೂವಿವಾದ • ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸಂಸ್ಥೆ ಮೊರೆ

₹14,300 ಕೋಟಿ ಜಾಗಕ್ಕೆ ಜಟಾಪಟಿ

• ಮಂಜುನಾಥ ಹೆಬ್ಬಾರ್

ನವದೆಹಲಿ: ಬೆಂಗಳೂರು ಉತ್ತರ ತಾಲ್ಲೂಕಿನ ಪೀಣ್ಯ ಪ್ಲಾಂಟೇಷನ್‌ನಲ್ಲಿರುವ 443 ಎಕರೆ ಜಾಗದ ಮಾಲೀಕತ್ವದ ವಿಷಯದಲ್ಲಿ ಎಚ್‌ಎಂಟಿ ಹಾಗೂ ಕರ್ನಾಟಕ ಅರಣ್ಯ ಇಲಾಖೆ ನಡುವಿನ ಸಂಘರ್ಷ ಮತ್ತೊಂದು ಮಜಲು ತಲುಪಿದೆ. ಡಿನೋಟಿಫೈ ಮಾಡಬಹುದು ಎಂದು ನಾಲ್ಕು ವರ್ಷಗಳ ಹಿಂದಷ್ಟೇ ಮಧ್ಯಂತರ ಅರ್ಜಿ ಸಲ್ಲಿಸಿದ್ದ ಕರ್ನಾಟಕ ಸರ್ಕಾರವು ರಾಜಕೀಯ ಕಾರಣಗಳಿಂದಾಗಿ ಏಕಾಏಕಿ ನಿಲುವು ಬದಲಿಸಿದೆ ಎಂದು ಆರೋಪಿಸಿ ಎಚ್‌ಎಂಟಿ ಸಂಸ್ಥೆಯು ಸುಪ್ರೀಂ ಕೋರ್ಟ್‌ನ ಮೊರೆ ಹೋಗಿದೆ.

₹14,300 ಕೋಟಿ ಮೌಲ್ಯದ ಈ ಜಾಗದ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಭಾರಿ ಕೈಗಾರಿಕೆ ಸಚಿವಾಲಯದ ಅಧೀನದ ಎಚ್‌ಎಂಟಿ ನಡುವೆ ದಶಕಗಳಿಂದ ವಿವಾದ ಇದೆ. ಈ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಬೇಕು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಆದೇಶ ನೀಡಿದ ಬಳಿಕ ಭೂ ಸಂಘರ್ಷ ತೀವ್ರ ಸ್ವರೂಪಕ್ಕೆ ಹೋಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿರುವ ಈ ಪ್ರಕರಣದಲ್ಲಿ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಿಕೊಳ್ಳಬೇಕು ಎಂದು ಕೋರಿರುವ ಎಚ್‌ಎಂಟಿ, 'ಈ ಜಾಗವನ್ನು ರಾಜ್ಯ ಸರ್ಕಾರ ಸ್ವಾಧೀನಪಡಿಸಿಕೊಂಡರೆ ಸಂಸ್ಥೆಯ ಪುನರುಜ್ಜೀವನ ಕಾರ್ಯಕ್ಕೆ ಭಾರಿ ಹೊಡೆತ ಬೀಳಲಿದೆ ಹಾಗೂ ಸಾವಿರಾರು ನೌಕರರು ಬೀದಿಪಾಲು ಆಗಲಿದ್ದಾರೆ' ಎಂದು ಹೇಳಿದೆ.

ಎಚ್‌ಎಂಟಿ ವಾದವೇನು: ಎಚ್‌ಎಂಟಿ ಕಾರ್ಖಾನೆ ಸ್ಥಾಪಿಸುವ ಸಂಬಂಧ ಜಾರಕಬಂಡೆ ಕಾವಲ್‌ನಲ್ಲಿರುವ 649 ಎಕರೆ ಜಾಗವನ್ನು ಕರ್ನಾಟಕ ಸರ್ಕಾರ 1960-1965ರಲ್ಲಿ ನೀಡಿತ್ತು. ಇದರಲ್ಲಿ 178 ಎಕರೆಯನ್ನು ಸ್ವಾಧೀನಪಡಿಸಿಕೊಂಡಿದ್ದರೆ, 259 ಎಕರೆಯನ್ನು ಮಂಜೂರು ಮಾಡಲಾಗಿತ್ತು. 211 ಎಕರೆಯನ್ನು ಉಡುಗೊರೆ ರೂಪದಲ್ಲಿ ಕೊಡಲಾಗಿತ್ತು. ಇದರಲ್ಲಿ 443 ಎಕರೆಯನ್ನು ಎಚ್‌ಎಂಟಿ ಅಭಿವೃದ್ಧಿಪಡಿಸಿತ್ತು.ಇದರಲ್ಲಿ ಕಾರ್ಖಾನೆಗಳು, ಟೌನ್‌ಶಿಪ್‌ಗಳು, ಕಟ್ಟಡಗಳು, ರಸ್ತೆಗಳು, ಆಸ್ಪತ್ರೆಗಳು, ಶಾಲೆಗಳು, ವಸತಿ ಸಂಕೀರ್ಣಗಳು, ಸಭಾಂಗಣಗಳು ನಿರ್ಮಾಣವಾಗಿವೆ.

ಕರ್ನಾಟಕ ಅರಣ್ಯ ಕಾಯ್ದೆ 1963ರ ಉಲ್ಲಂಘನೆ ಹಾಗೂ ಅರಣ್ಯ ಜಮೀನು ಒತ್ತುವರಿ ಆರೋಪದ ಕಾರಣ ಕರ್ನಾಟಕ ಸರ್ಕಾರವು 2015ರಲ್ಲಿ ಉನ್ನತಾಧಿಕಾರ ಸಮಿತಿ ರಚಿಸಿತ್ತು. ದಾಖಲೆಗಳ ಪರಿಶೀಲನೆ ನಡೆಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿತ್ತು. ಈ ಪ್ರದೇಶವು ಅರಣ್ಯವೇ ಎಂಬುದನ್ನು ಪತ್ತೆ ಹಚ್ಚಲು ಜಂಟಿ ಸಮೀಕ್ಷೆ ನಡೆಸುವಂತೆ ಅರಣ್ಯ ಇಲಾಖೆಗೆ ಉನ್ನತಾಧಿಕಾರ ಸಮಿತಿ ನಿರ್ದೇಶನ ನೀಡಿತ್ತು. ಪ್ರಸ್ತುತ ಈ ಜಾಗವು ಅರಣ್ಯ ಸ್ವರೂಪ ಉಳಿಸಿಕೊಂಡಿಲ್ಲ ಎಂದು ಅರಣ್ಯ ಇಲಾಖೆ 2016ರಲ್ಲಿ ವರದಿ ಸಲ್ಲಿಸಿತ್ತು.

6ನೇ ಪುಟ ನೋಡಿ

159 ಎಕರೆ ಪರಭಾರೆ

ಆರ್ಥಿಕ ಸಂಕಷ್ಟ ಹಾಗೂ ಸಾಲದ ಕಾರಣ ಎಚ್‌ಎಂಟಿಯ ಮೂರು ಸಂಸ್ಥೆಗಳನ್ನು ಮುಚ್ಚಲು ಭಾರಿ ಕೈಗಾರಿಕೆ ಇಲಾಖೆ 2016ರಲ್ಲಿ ಒಪ್ಪಿಗೆ ನೀಡಿತ್ತು. ಸಂಸ್ಥೆಯ ₹3,588 ಕೋಟಿ ಮೊತ್ತ ಸ್ಥಿರ ಆಸ್ತಿ ಮಾರಲು ಅನುಮೋದನೆ ನೀಡಲಾಗಿತ್ತು.

ಮಾರುಕಟ್ಟೆ ದರದಲ್ಲಿ ಆದಾಯ ತೆರಿಗೆ ಇಲಾಖೆಗೆ 5.80 ಎಕರೆಯನ್ನು 2016ರಲ್ಲಿ ಮಾರಲಾಗಿತ್ತು. ರಾಮನ್ ಸಂಶೋಧನಾ ಸಂಸ್ಥೆಗೆ 0.74 ಎಕರೆ ಜಾಗವನ್ನು ಪರಭಾರೆ ಮಾಡಲಾಗಿತ್ತು. ₹1,191 ಕೋಟಿ ಮೊತ್ತಕ್ಕೆ 88 ಎಕರೆಯನ್ನು ಇಸ್ರೊ ಸಂಸ್ಥೆಗೆ ಮಾರಲು ಕೇಂದ್ರ ಸಂಪುಟ 2017ರಲ್ಲಿ ಒಪ್ಪಿಗೆ ನೀಡಿತ್ತು. ಗೇಲ್ ಸಂಸ್ಥೆಗೆ 1 ಎಕರೆ ನೀಡಲಾಗಿತ್ತು. ಈ ರೀತಿಯಾಗಿ ಸರ್ಕಾರಿ ಸಂಸ್ಥೆಗಳಿಗೆ 111 ಎಕರೆಯನ್ನು ಹಾಗೂ ಖಾಸಗಿ ಸಂಸ್ಥೆಗಳಿಗೆ 48 ಎಕರೆಯನ್ನು ಪರಭಾರೆ ಮಾಡಲಾಗಿದೆ.

ಹೊಸ ಪ್ರಮಾಣಪತ್ರಕ್ಕೆ ಸಿದ್ಧತೆ

2020ರಲ್ಲಿ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದ ಅರಣ್ಯ ಇಲಾಖೆ, '443 ಎಕರೆಯನ್ನು ಎಚ್‌ಎಂಟಿ ಹೆಸರಿಗೆ ಡಿನೋಟಿಫೈ ಮಾಡಬಹುದು' ಎಂದು ಉಲ್ಲೇಖಿಸಿತ್ತು. ಅರಣ್ಯ ಇಲಾಖೆಗೆ ಸೇರಿರುವ 599 ಎಕರೆಯ ಒತ್ತುವರಿ ತೆರವುಗೊಳಿಸಬೇಕು ಎಂದು ಸಚಿವ ಖಂಡ್ರೆ ಅವರು ಆಗಸ್ಟ್‌ನಲ್ಲಿ ಆದೇಶಿಸಿದ್ದರು.

2020ರಲ್ಲಿ ಸಲ್ಲಿಸಿದ್ದ ಪ್ರಮಾಣಪತ್ರವನ್ನು ವಾಪಸ್ ಪಡೆಯಬೇಕು ಹಾಗೂ ಪ್ರಮಾಣಪತ್ರ ಸಲ್ಲಿಸಿದ್ದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದ್ದರು.

2-3 ದಿನಗಳಲ್ಲಿ ಸುಪ್ರೀಂ ಕೋರ್ಟ್‌ಗೆ ಅರಣ್ಯ ಇಲಾಖೆ ಪ್ರಮಾಣಪತ್ರ ಸಲ್ಲಿಸಲಿದೆ ಎಂದು ಮೂಲಗಳು ತಿಳಿಸಿವೆ.

ಅ.17: ಆರೋಗ್ಯ ಸೇವೆ ವ್ಯತ್ಯಯ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲ್ಕತ್ತದ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದ ಹಿಂಸಾತ್ಮಕ ಘಟನೆಯನ್ನು ಖಂಡಿಸಿ ಕಿರಿಯ ವೈದ್ಯರು ನಡೆಸುತ್ತಿರುವ ಮುಷ್ಕರಕ್ಕೆ ಬೆಂಬಲ ಸೂಚಿಸಿ ಅ.17ರಂದು ಬೆಳಿಗ್ಗೆ 6ರಿಂದ ಮರುದಿನ ಬೆಳಿಗ್ಗೆ 6ರವರೆಗೆ ರಾಜ್ಯದಾದ್ಯಂತ ಆಸ್ಪತ್ರೆಗಳಲ್ಲಿ ಸೇವೆಗಳನ್ನು ಸ್ಥಗಿತಗೊಳಿಸಲು ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಘಟಕ ನಿರ್ಧರಿಸಿದೆ.

ತುರ್ತು ಸೇವೆಗಳನ್ನು ಹೊರತುಪಡಿಸಿ ಬೇರೆ ಸೇವೆಗಳು ಇರುವುದಿಲ್ಲ. ಒಪಿಡಿ, ಶಸ್ತ್ರಚಿಕಿತ್ಸೆಗಳೂ ಇರುವುದಿಲ್ಲ ಎಂದು ತಿಳಿಸಿದೆ.

ಆರ್.ಜಿ. ಕರ್ ಆಸ್ಪತ್ರೆಯಲ್ಲಿ ಮಹಿಳೆಯರಿಗೆ ಸುರಕ್ಷತೆ ಇಲ್ಲದಿರುವುದು ಮತ್ತು ಆಸ್ಪತ್ರೆಯಲ್ಲಿ ಅಗತ್ಯ ಭದ್ರತಾ ಸಿಬ್ಬಂದಿಯ ಕೊರತೆ ಇರುವುದು ಕಂಡು ಬಂದಿದೆ. ಇದರಿಂದಾಗಿಯೇ ದುಷ್ಕರ್ಮಿಗಳು ಸುಲಭವಾಗಿ ವೈದ್ಯಕೀಯ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಿದ್ದಾರೆ. ಕಾಲಮಿತಿಯಲ್ಲಿ ತನಿಖೆ ನಡೆಸಬೇಕು. ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಸಂತ್ರಸ್ತರಿಗೆ ಪರಿಹಾರ ನೀಡಬೇಕು ಎಂದು ಐಎಂಎ ಆಗ್ರಹಿಸಿದೆ.

ವೈದ್ಯರ ಮೇಲೆ ಯಾವುದೇ ಹಿಂಸೆ ನಡೆಯದಂತೆ ನೀತಿ ರೂಪಿಸಬೇಕು ಎಂದು ಒತ್ತಾಯಿಸಿದೆ.

ಒಳಪುಟಗಳಲ್ಲಿ

'ತುಷ್ಟೀಕರಣಕ್ಕಾಗಿ ಕೇಸ್ ವಾಪಸ್' 5

10ನೇ ದಿನಕ್ಕೆ ಕಿರಿಯ ವೈದ್ಯರ ಉಪವಾಸ 11

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಪಿಐಬಿ ಸಭೆಯಿಂದ ಮಾಹಿತಿ ಬಹಿರಂಗ

'ದೇವದಾರಿ' ಸಿಕ್ಕರೂ ನೀಗದು ಬೇಡಿಕೆ

• ಹರಿಶಂಕರ್ ಆರ್.

ಬಳ್ಳಾರಿ: 'ಸಂಡೂರಿನ ದೇವದಾರಿ ಕಬ್ಬಿಣದ ಅದಿರು ಗಣಿ'ಗೆ ಅನುಮತಿ ಸಿಕ್ಕರೂ ಕುದುರೆಮುಖ ಕಬ್ಬಿಣ ಅದಿರು ಕಂಪನಿಯ (ಕೆಐಒಸಿಎಲ್) ಪಣಂಬೂರು ಪೆಲೆಟ್ ಕಾರ್ಖಾನೆಗೆ ಅಗತ್ಯವಿರುವ ಅದಿರು ಪೂರ್ಣಪ್ರಮಾಣ ದಲ್ಲಿ ಸಿಗುವುದಿಲ್ಲ. ಗಣಿ ಆರಂಭ ವಾದರೂ ಸಂಡೂರು ಭಾಗದಲ್ಲಿ ಯಾರಿಗೂ ಕಾಯಂ ಉದ್ಯೋಗ ಸಿಗಲ್ಲ' ಎಂಬ ವಿಷಯವನ್ನು ಕೇಂದ್ರ ಉಕ್ಕು ಸಚಿವಾಲಯವು ಹಣಕಾಸು ಇಲಾಖೆಗೆ ತಿಳಿಸಿದೆ.

ಸಂಡೂರು ತಾಲ್ಲೂಕಿನ ಸ್ವಾಮಿಮಲೈ ಅರಣ್ಯದ 401.57 ಹೆಕ್ಟೇರ್ ಪ್ರದೇಶದಲ್ಲಿ ಕುದುರೆಮುಖ ಕಬ್ಬಿಣದ ಕಾರ್ಖಾನೆ 'ದೇವದಾರಿ ಕಬ್ಬಿಣದ ಅದಿರುವ ಗಣಿ' ನಡೆಸಲು ಉದ್ದೇಶಿಸಿದೆ. ಈ ಗಣಿ ಕುರಿತು ಜೂನ್ 6ರಂದು ಹಣಕಾಸು ಇಲಾಖೆಯ ಉನ್ನತ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಹೂಡಿಕೆ ಮಂಡಳಿ (ಪಿಐಬಿ) ಸಭೆ ನವದೆಹಲಿಯಲ್ಲಿ ನಡೆದಿತ್ತು. ಈ ಸಭೆಗೆ ಉಕ್ಕು ಸಚಿವಾಲಯ ಗಣಿ ಅನುಮೋದನೆ ಕೋರಿ ಪ್ರಸ್ತಾವ ಸಲ್ಲಿಸಿತ್ತು.

ಈ ಸಭೆಯಲ್ಲಿ ನೀತಿ ಆಯೋಗ, ಕೇಂದ್ರದ ವೆಚ್ಚ ವಿಭಾಗಗಳು ಕೇಳಿದ ಪ್ರಶ್ನೆಗಳು, ನೀಡಿದ ಸಲಹೆಗಳು, ಉಕ್ಕು ಇಲಾಖೆ ನೀಡಿದ ಉತ್ತರ ಸೇರಿ ಇಡೀ ನಡಾವಳಿ ಮತ್ತು ದಾಖಲೆಗಳು ಆರ್‌ಟಿಐ ಅಡಿಯಲ್ಲಿ 'ಪ್ರಜಾವಾಣಿ'ಗೆ ಲಭ್ಯವಾಗಿವೆ.

6ನೇ ಪುಟ ನೋಡಿ

'ಎನ್‌ಎಂಡಿಸಿ ಇರುವಾಗ ಗಣಿ ಏಕೆ?'

ಕೇಂದ್ರದ ಉಕ್ಕು ಸಚಿವಾಲಯದಡಿ ಬರುವ 'ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ' (ಎನ್‌ಎಂಡಿಸಿ) ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ಎರಡು ಗಣಿಗಳನ್ನು ಹೊಂದಿದೆ. ಎರಡರಿಂದಲೂ ವಾರ್ಷಿಕ 15.62 ದಶಲಕ್ಷ ಟನ್ ಅದಿರನ್ನು ಉತ್ಪಾದಿಸಲಾಗುತ್ತಿದೆ. ಜಿಂದಾಲ್, ಆರ್ಸೆಲರ್ ಮಿತ್ತಲ್ ಸೇರಿ ಹೊರರಾಜ್ಯದ ಖಾಸಗಿ ಕಂಪನಿಗಳಿಗೆ ಇದು ಅದಿರು ಮಾರುತ್ತಿದೆ. ಕೆಐಒಸಿಎಲ್‌ಗೂ ಅದಿರು ಪೂರೈಸುತ್ತಿದೆ.

'ಕೆಐಒಸಿಎಲ್ ಮತ್ತು ಎನ್‌ಎಂಡಿಸಿ ಎರಡೂ ಉಕ್ಕು ಸಚಿವಾಲಯದಡಿ ಬರುವ ಕಂಪನಿಗಳು. ಎನ್‌ಎಂಡಿಸಿ ಬಳಿ ಯಥೇಚ್ಛ ಅದಿರು ಇದೆ. ಕೆಐಒಸಿಎಲ್‌ಗೂ ಅದಿರು ನೀಡುತ್ತಿದೆ. ಖಾಸಗಿ ಸಂಸ್ಥೆಗಳಿಗೂ ಮಾರುತ್ತಿದೆ. ಕೆಐಒಸಿಎಲ್‌ಗೆ ಹೊಸ ಗಣಿ ಹೆಸರಲ್ಲಿ ಭಾರಿ ಪ್ರಮಾಣದ ಅರಣ್ಯ ಪ್ರದೇಶ ನೀಡುವ ಬದಲು ಪೂರ್ಣಪ್ರಮಾಣದ ಅದಿರನ್ನು ಎನ್‌ಎಂಡಿಸಿಯಿಂದಲೇ ಏಕೆ ಪೂರೈಸಬಾರದು' ಎಂದು ಜನಸಂಗ್ರಾಮ ಪರಿಷತ್‌ನ ಮುಖಂಡ, ಅಕ್ರಮ ಗಣಿಗಾರಿಕೆ ವಿರುದ್ಧದ ಹೋರಾಟಗಾರ ಶ್ರೀಶೈಲ ಆಲದಹಳ್ಳಿ ಪ್ರಶ್ನಿಸಿದ್ದಾರೆ. 'ಖಾಸಗೀಕರಣದ ಅಂಚಿನಲ್ಲಿರುವ ಕಂಪನಿಯೊಂದಕ್ಕೆ ದಟ್ಟ ಅರಣ್ಯಪ್ರದೇಶದಲ್ಲಿ ಗಣಿ ಒದಗಿಸಿಕೊಟ್ಟರೆ ಮುಂದೊಂದು ದಿನ ಕಂಪನಿಯೊಂದಿಗೆ ಅರಣ್ಯವೂ ಖಾಸಗಿಯವರ ಪಾಲಾಗಲಿದೆ' ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

'₹500 ಕೋಟಿ ಖರ್ಚು: ವಾಣಿಜ್ಯ ನಿರ್ಧಾರ'

ಯೋಜನೆಗೆ ಅನುಮೋದನೆ ಪಡೆಯಲು ಕೆಐಒಸಿಎಲ್ ಈವರೆಗೆ ₹500 ಕೋಟಿಗೂ ಹೆಚ್ಚು ಹಣ ಖರ್ಚು ಮಾಡಿರುವುದಾಗಿ ಹಣಕಾಸು ಇಲಾಖೆಗೆ ಸಲ್ಲಿಸಿದ್ದ ಪ್ರಸ್ತಾವದಲ್ಲಿ ಹೇಳಿದೆ. ಇದನ್ನು ಗಮನಿಸಿದ ಕೇಂದ್ರ ವೆಚ್ಚ ವಿಭಾಗದ ಸಲಹೆಗಾರರು 'ಸಾರ್ವಜನಿಕ ಉದ್ಯಮವೊಂದು ಭಾರಿ ಪ್ರಮಾಣದ ಹಣವನ್ನು ಖರ್ಚು ಮಾಡಿದೆ. ಇದಕ್ಕೆ ವಿವರಣೆ ಬೇಕು' ಎಂದಿತ್ತು.

ಇದಕ್ಕೆ ಪ್ರತಿಕ್ರಿಯಿಸಿದ್ದ ಉಕ್ಕು ಸಚಿವಾಲಯ, 'ನಿಗದಿತ ಅವಧಿಯಲ್ಲಿ ಗಣಿಯನ್ನು ಹೊಂದಲು ಕೆಐಒಸಿಎಲ್ ಕೆಲ 'ವಾಣಿಜ್ಯ ನಿರ್ಧಾರ'ಗಳನ್ನು ಕೈಗೊಂಡಿದೆ' ಎಂದು ಹೇಳಿದೆ. ಆದರೆ, 'ಕೆಲ ವಾಣಿಜ್ಯ ನಿರ್ಧಾರ'ಗಳು ಎಂದರೆ ಏನು ಎಂಬುದರ ಬಗ್ಗೆ ಉಕ್ಕು ಸಚಿವಾಲಯ ವಿವರಿಸಿಲ್ಲ.

ಹಣದುಬ್ಬರ ಶೇ 5.49ಕ್ಕೆ ಹೆಚ್ಚಳ

• ಜ್ಞಾನೇಂದ್ರ ಕೇಸರಿ

ನವದೆಹಲಿ: ಜುಲೈನಿಂದ ಆಗಸ್ಟ್‌ವರೆಗಿನ ಅವಧಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಮಿತಿಯಲ್ಲಿ ಇದ್ದ ಚಿಲ್ಲರೆ ಹಣದುಬ್ಬರ ಪ್ರಮಾಣವು ಸೆಪ್ಟೆಂಬರ್ ತಿಂಗಳಲ್ಲಿ ಶೇಕಡ 5.49ಕ್ಕೆ ಹೆಚ್ಚಳ ಕಂಡಿದೆ.

ಇದು ಒಂಬತ್ತು ತಿಂಗಳಲ್ಲಿಯೇ ಅತಿಹೆಚ್ಚಿನ ಪ್ರಮಾಣ. ಆಹಾರ ವಸ್ತುಗಳ ಬೆಲೆಯಲ್ಲಿ ಆಗಿರುವ ತೀವ್ರ ಹೆಚ್ಚಳವು ಹಣದುಬ್ಬರ ಪ್ರಮಾಣವು ಏರಿಕೆ ಕಂಡಿರುವುದಕ್ಕೆ ಪ್ರಮುಖ ಕಾರಣ ಎಂಬುದನ್ನು ಕೇಂದ್ರ ಸರ್ಕಾರ ಸೋಮವಾರ ಬಿಡುಗಡೆ ಮಾಡಿರುವ ಅಂಕಿ-ಅಂಶಗಳು ಹೇಳಿವೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಆಗಸ್ಟ್‌ನಲ್ಲಿ ಶೇ 3.65ರಷ್ಟು ಹಾಗೂ ಜುಲೈನಲ್ಲಿ ಶೇ 3.6ರಷ್ಟು ಇತ್ತು. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಇದು ಶೇ 5.02ರಷ್ಟು ಇತ್ತು. ಆಗಸ್ಟ್‌ನಲ್ಲಿ ಶೇ 5.66ರಷ್ಟು ಇದ್ದ ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಸೆಪ್ಟೆಂಬರ್‌ನಲ್ಲಿ ಶೇ 9.24ಕ್ಕೆ ಏರಿಕೆ ಕಂಡಿದೆ. ಕಳೆದ ವರ್ಷದ ಸೆಪ್ಟೆಂಬರ್ ತಿಂಗಳ ಮಟ್ಟಕ್ಕೆ ಹೋಲಿಸಿದರೆ, ಈ ವರ್ಷದ ಸೆಪ್ಟೆಂಬರ್‌ನಲ್ಲಿ ತರಕಾರಿಗಳ ಬೆಲೆಯು ಶೇ 36ರಷ್ಟು ಹೆಚ್ಚಳ ಆಗಿದೆ.

ಹಣ್ಣುಗಳ ಬೆಲೆ ಶೇ 7.65ರಷ್ಟು, ದ್ವಿದಳ ಧಾನ್ಯಗಳ ಬೆಲೆಯು ಶೇ 9.81ರಷ್ಟು ಹಾಗೂ ಏಕದಳ ಧಾನ್ಯಗಳ ಬೆಲೆಯು ಶೇ 6.84ರಷ್ಟು ಹೆಚ್ಚಳ ಕಂಡಿದೆ.

ಹವಾಮಾನ ಪರಿಸ್ಥಿತಿ ಕೂಡ ಹಣದುಬ್ಬರ ಏರಿಕೆಗೆ ಕಾರಣವಾಗಿರುವ ಸಾಧ್ಯತೆ ಇದೆ ಎಂದು ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯವು ಹೇಳಿದೆ. ಹಣದುಬ್ಬರದ ಪ್ರಮಾಣವು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ತೀವ್ರವಾಗಿದೆ. ಸೆಪ್ಟೆಂಬರ್ ತಿಂಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿನ ಹಣದುಬ್ಬರ ಪ್ರಮಾಣ ಶೇ 5.87ರಷ್ಟು, ನಗರ ಪ್ರದೇಶಗಳಲ್ಲಿನ ಹಣದುಬ್ಬರ ಶೇ 5.05ರಷ್ಟು ಇತ್ತು.

'ಆರ್‌ಬಿಐ ಹೆಚ್ಚು ಎಚ್ಚರಿಕೆಯಿಂದ ಇರಬೇಕು ಎಂಬುದನ್ನು ಸೆಪ್ಟೆಂಬರ್ ತಿಂಗಳ ಹಣದುಬ್ಬರದ ಪ್ರಮಾಣವು ಹೇಳುತ್ತಿದೆ' ಎಂದು ಕೋಟಕ್ ಮಹೀಂದ್ರ ಬ್ಯಾಂಕ್‌ನ ಮುಖ್ಯ ಅರ್ಥಶಾಸ್ತ್ರಜ್ಞೆ ಉಪಾಸನಾ ಭಾರದ್ವಾಜ್ ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರ (ಶೇಕಡಾವಾರು)



ಸಗಟು ಹಣದುಬ್ಬರ ಏರಿಕೆ

ಆಹಾರ ವಸ್ತುಗಳ ಬೆಲೆ ಹೆಚ್ಚಳವು ಸಗಟು ಹಣದುಬ್ಬರದಲ್ಲಿಯೂ ಏರಿಕೆಗೆ ಕಾರಣವಾಗಿದೆ. ಸಗಟು ಹಣದುಬ್ಬರ ಪ್ರಮಾಣವು ಸೆಪ್ಟೆಂಬರ್ ತಿಂಗಳಲ್ಲಿ ಶೇ 1.84ಕ್ಕೆ ಏರಿಕೆ ಆಗಿದೆ. ಆಗಸ್ಟ್‌ನಲ್ಲಿ ಅದು ಶೇ 1.31ರಷ್ಟು ಇತ್ತು. ಟೊಮೆಟೊ, ಈರುಳ್ಳಿ ಮತ್ತು ಆಲೂಗಡ್ಡೆ ಸಗಟು ಬೆಲೆಯು ಸೆಪ್ಟೆಂಬರ್‌ನಲ್ಲಿ ಕ್ರಮವಾಗಿ ಶೇ 74.5ರಷ್ಟು, ಶೇ 78.8ರಷ್ಟು ಹಾಗೂ 78.1ರಷ್ಟು ಏರಿಕೆ ಕಂಡಿವೆ. ಅಡುಗೆ ಎಣ್ಣೆಗಳ ಸಗಟು ಬೆಲೆ ಏರಿಕೆಯು ಶೇ 10.5ರಷ್ಟಾಗಿದೆ.

ವೈದ್ಯಕೀಯ ನೆರವಿಗೆ ರೋಟರಿ 'ಆಸರೆ'

ಬೆಂಗಳೂರು: ಹಿರಿಯ ನಾಗರಿಕರು, ಅಗತ್ಯ ಇರುವವರಿಗೆ ವೈದ್ಯಕೀಯ ಸೇವೆಗಳನ್ನು ಒದಗಿಸಲು ರೋಟರಿ ಜಿಲ್ಲೆ 3192 ವತಿಯಿಂದ 'ಆಸರೆ' ಯೋಜನೆಯನ್ನು ರೂಪಿಸಲಾಗಿದೆ ಎಂದು ರೋಟರಿ ಗವರ್ನರ್ ಮಹದೇವಪ್ರಸಾದ್ ಎನ್.ಎಸ್. ತಿಳಿಸಿದರು.

ವಿ-ಮಿಡೊ ವೈದ್ಯಕೀಯ ಸಂಸ್ಥೆಯ ಪಾಲುದಾರಿಕೆಯೊಂದಿಗೆ ತುರ್ತು ವೈದ್ಯಕೀಯ ಸೇವೆ ಒದಗಿಸಲಾಗುತ್ತಿದೆ. ವೈದ್ಯಕೀಯ ಸೇವೆ ಮತ್ತು ಮಾಹಿತಿಗಾಗಿ ಮೊಬೈಲ್ ನಂಬರ್: 9535534666 ಸಂಪರ್ಕಿಸಬಹುದು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಗ್ರಾಮ ಆಡಳಿತಾಧಿಕಾರಿ ಹುದ್ದೆ ಕನ್ನಡ ಪರೀಕ್ಷೆ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಆಡಳಿತಾಧಿಕಾರಿ (ವಿಎಒ), ಜಿಟಿಟಿಸಿಯ ವಿವಿಧ ಹುದ್ದೆಗಳ ನೇಮಕಾತಿಗೆ ಸೆ.29ರಂದು ನಡೆಸಿದ್ದ ಕನ್ನಡ ಕಡ್ಡಾಯ ಪರೀಕ್ಷೆಯ ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೋಮವಾರ ಪ್ರಕಟಿಸಿದೆ.

ಅಭ್ಯರ್ಥಿಗಳು ನೋಂದಣಿ ಸಂಖ್ಯೆ ಮತ್ತು ಜನ್ಮ ದಿನಾಂಕವನ್ನು ಕೆಇಎ ವೆಬ್‌ಸೈಟ್ ಲಿಂಕ್‌ನಲ್ಲಿ ನಮೂದಿಸಿ, ಫಲಿತಾಂಶವನ್ನು ಪಡೆಯಬಹುದು ಎಂದು ಪ್ರಾಧಿಕಾರ ಹೇಳಿದೆ.

150 ಅಂಕಗಳ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕ ಪಡೆದವರು ಮಾತ್ರ ಅಕ್ಟೋಬರ್ 27ರಂದು ನಡೆಯುವ ಗ್ರಾಮ ಆಡಳಿತಾಧಿಕಾರಿ ಹುದ್ದೆಯ ಮುಖ್ಯ ಪರೀಕ್ಷೆಗೆ ಅರ್ಹರಾಗುತ್ತಾರೆ.

ವಯೋಮಿತಿ ಸಡಿಲಿಕೆ ಅನುಕೂಲಕ್ಕಾಗಿ ಅರ್ಜಿ ಸಲ್ಲಿಸಿದವರಿಗೆ ಅ. 26ರಂದು ಕನ್ನಡ ಕಡ್ಡಾಯ ಪರೀಕ್ಷೆ ಇರುತ್ತದೆ ಎಂದು ಪ್ರಾಧಿಕಾರವು ತಿಳಿಸಿದೆ.

ಆರ್ಥಿಕ ಇಲಾಖೆ ಪರಿಶೀಲನೆಗೆ ಡಿಪಿಆರ್

ಹೆಬ್ಬಾಳ–ಸರ್ಜಾಪುರ ಮೆಟ್ರೊ ಮಾರ್ಗ: ಒಪ್ಪಿಗೆ ನೀಡಿದ ನಗರಾಭಿವೃದ್ಧಿ ಇಲಾಖೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: 'ನಮ್ಮ ಮೆಟ್ರೊ' ಹಂತ 3ಎ ಹೆಬ್ಬಾಳ-ಸರ್ಜಾಪುರ ಕಾರಿಡಾರ್ ನಿರ್ಮಾಣಕ್ಕಾಗಿ ಬಿಎಂಆರ್‌ಸಿಎಲ್ ಸಲ್ಲಿಸಿರುವ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ನಗರಾಭಿವೃದ್ಧಿ ಇಲಾಖೆಯು ಹಣಕಾಸು ಇಲಾಖೆಗೆ ವರ್ಗಾಯಿಸಿದೆ. ಹಣಕಾಸು ಇಲಾಖೆಯು ಪರಿಶೀಲನೆ ನಡೆಸುತ್ತಿದೆ.

'ನಮ್ಮ ಮೆಟ್ರೊ' ಹಳೆಯ ಯೋಜನೆಗಳಲ್ಲಿ ಹೆಬ್ಬಾಳ-ಸರ್ಜಾಪುರ (ಕೆಂಪು) ಮಾರ್ಗ ಕೂಡ ಒಂದಾಗಿದೆ. 17 ಎತ್ತರಿಸಿದ, 11 ನೆಲದಡಿಯ ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ. ಹೆಬ್ಬಾಳ, ಗಂಗಾನಗರ ಮತ್ತು ಪಶು ವೈದ್ಯಕೀಯ ಕಾಲೇಜು ನಿಲ್ದಾಣದವರೆಗೆ ಎತ್ತರಿಸಿದ ಮಾರ್ಗ ಇರಲಿದೆ. ಅಲ್ಲಿಂದ ಕೋರಮಂಗಲ ಮೂರನೇ ಬ್ಲಾಕ್ ವರೆಗೆ 14.5 ಕಿ.ಮೀ. ಸುರಂಗ ಮಾರ್ಗವನ್ನು ಹೊಂದಿದೆ. ಅಲ್ಲಿಂದ ಮುಂದಕ್ಕೆ ಸರ್ಜಾಪುರವರೆಗೆ ಮತ್ತೆ ಎತ್ತರಿಸಿದ ಮಾರ್ಗ ಇರಲಿದೆ. ಒಟ್ಟು 22.1 ಕಿ.ಮೀ. ಎತ್ತರಿಸಿದ ಮಾರ್ಗವು ಸೇರಿದಂತೆ ಒಟ್ಟು 36.6 ಕಿ.ಮೀ. ಉದ್ದದ ಮಾರ್ಗ ಇದಾಗಿದೆ.

₹28,405 ಕೋಟಿ ಅಂದಾಜು ಮೊತ್ತದ ಯೋಜನೆ ಆಗಿರುವುದರಿಂದ ಸಂಪುಟ ಸಭೆಯಲ್ಲಿ ಚರ್ಚಿಸುವ ಮೊದಲು ಆರ್ಥಿಕ ಪರಿಣಾಮದ ಬಗ್ಗೆ ಹಣಕಾಸು ಇಲಾಖೆ ಪರಿಶೀಲಿಸಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



ಹೆಬ್ಬಾಳ–ಸರ್ಜಾಪುರ ಮೆಟ್ರೊ ಮಾರ್ಗದ ಉದ್ದೇಶಿತ ನಕ್ಷೆ

ನಗರದ ಪ್ರಮುಖ ವಹಿವಾಟು ಪ್ರದೇಶಗಳಲ್ಲಿ ಒಂದಾಗಿರುವ ಕೋರಮಂಗಲವನ್ನು ಹಾದುಹೋಗುವ ಈ ಮಾರ್ಗದಲ್ಲಿ ನಾಲ್ಕು ಇಂಟರ್‌ಚೇಂಜ್‌ಗಳು ಇರಲಿವೆ. ಹೆಬ್ಬಾಳದಲ್ಲಿ ಕೇಸರಿ ಮತ್ತು ನೀಲಿ ಮಾರ್ಗವನ್ನು ಸಂಪರ್ಕಿಸಲಿದೆ. ಕೆ.ಆರ್. ಸರ್ಕಲ್‌ನಲ್ಲಿ ನೇರಳೆ ಮಾರ್ಗವನ್ನು, ಡೇರಿ ಸರ್ಕಲ್‌ನಲ್ಲಿ ಗುಲಾಬಿ ಮಾರ್ಗವನ್ನು ಮತ್ತು ಅಗರದಲ್ಲಿ ಮತ್ತೆ ನೀಲಿ ಮಾರ್ಗವನ್ನು ಸಂಪರ್ಕಿಸು ವುದರಿಂದ ಪ್ರಯಾಣಿಕರಿಗೆ ಮಾರ್ಗ ಬದಲಾವಣೆಗೆ ಹೆಚ್ಚಿನ ಅವಕಾಶ ಸಿಗಲಿದೆ.

ನೀಲಿ ಮಾರ್ಗದ ಸಂಪರ್ಕದಿಂದಾಗಿ 'ಟೆಕ್ ಹಬ್'ನಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೂ ಪ್ರಯಾಣಿಸುವವರಿಗೂ ಅನುಕೂಲವಾಗಲಿದೆ.

'ಜೆ.ಪಿ.ನಗರ–ಕೆಂಪಾಪುರ ಮತ್ತು ಹೊಸಹಳ್ಳಿ-ಕಡಬಗೆರೆ ಹೊರವರ್ತುಲದಲ್ಲಿ 3ನೇ ಹಂತದಲ್ಲಿ ಮೆಟ್ರೊ ಮಾರ್ಗ (ಕಿತ್ತಳೆ ಮಾರ್ಗ) ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಈಗಾಗಲೇ ಅನುಮೋದನೆ ನೀಡಿದೆ. ಹೆಬ್ಬಾಳ-ಸರ್ಜಾಪುರ ಯೋಜನೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಒಪ್ಪಿಗೆ ಇನ್ನೊಂದು ವರ್ಷದ ಒಳಗೆ ಸಿಗುವ ನಿರೀಕ್ಷೆ ಇದೆ.

2030ರ ಹೊತ್ತಿಗೆ ಈ ಮಾರ್ಗದಲ್ಲಿ ರೈಲು ಸಂಚರಿಸಲಿದೆ. ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿನ ವಾಹನದಟ್ಟಣೆಯನ್ನು ಈ ಮಾರ್ಗ ತಗ್ಗಿಸಲಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಸರ್ಕಾರ ತೀರ್ಮಾನ ಮಾಡಬೇಕು'

ಎಂ. ಮಹೇಶ್ವರ ರಾವ್

'ನಗರಾಭಿವೃದ್ಧಿ ಇಲಾಖೆಗೆ ನಾವು ಡಿಪಿಆರ್ ಕಳುಹಿಸಿದ್ದೇವೆ. ಅವರು ಪರಿಶೀಲನೆಗೆ ಹಣಕಾಸು ಇಲಾಖೆಗೆ ಕಳುಹಿಸಿದ್ದರೂ ಅಂತಿಮವಾಗಿ ನಗರಾಭಿವೃದ್ಧಿ ಇಲಾಖೆಗೇ ಬರುತ್ತದೆ. ರಾಜ್ಯ ಸರ್ಕಾರದ ಅನುಮೋದನೆ ನಂತರ ಡಿಪಿಆರ್ ಅನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುತ್ತದೆ. ಕೇಂದ್ರದ ಅನುಮೋದನೆ ಸಿಕ್ಕಿದ ಬಳಿಕ ಐದು ವರ್ಷಗಳಲ್ಲಿ ಸರ್ಜಾಪುರ–ಹೆಬ್ಬಾಳ ಮಾರ್ಗ ಪೂರ್ಣಗೊಳ್ಳಲಿದೆ' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ.ಮಹೇಶ್ವರ ರಾವ್ ತಿಳಿಸಿದರು.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ
ನಿರ್ಮಾಣ ಮತ್ತು ನಿರ್ವಹಣೆ ಸಮೂಹ
ಅಂತರಿಕ್ಷ ಭವನ, ಬೆಂಗಳೂರು–560094, ದೂರವಾಣಿ: (080) 22172614/2613

ಎನ್‌ಐಟಿ ಸಂ.: ಹೆಚ್‌ಎಸ್‌ಎಫ್‌ಸಿ/ಸಿಎಂಜಿ/ಎಂಎಂ/ಸಿ/121/2024–25 ದಿ: 14.10.2024

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗಳಿಗೆ ಇ–ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು	ತರಬೇತಿ ಕೋಣೆ, ಹೆಚ್‌ಎಸ್‌ಎಫ್‌ಸಿ, ಮಾರತ್‌ಹಳ್ಳಿ, ಬೆಂಗಳೂರು ಇಲ್ಲಿ ಬದಲಾವಣೆ ಕೊಠಡಿಯ ಲಂಬ ವಿಸ್ತರಣೆ –ಸಿವಿಲ್, ಪಿಹೆಚ್ & ಎಲೆಕ್ಟ್ರಿಕಲ್ ಕಾಮಗಾರಿಗಳು.
ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ. 14.78 ಲಕ್ಷಗಳು.
ಪೂರ್ಣಗೊಳಿಸುವ ಕಾಲಾವಧಿ	3 ತಿಂಗಳು.
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	15.10.2024 (11:00) ಗಂಟೆಯಿಂದ 27.10.2024 (23:30) ಗಂಟೆವರೆಗೆ.
ಬಿಡ್ ಸ್ಪಷ್ಟೀಕರಣಕ್ಕೆ ಅವಧಿ	15.10.2024 (11:30) ಗಂಟೆಯಿಂದ 28.10.2024 (10:30) ಗಂಟೆವರೆಗೆ.
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	29.10.2024, 11:00 ಗಂಟೆವರೆಗೆ.
ಟೆಂಡರ್ ತೆರೆಯುವ ದಿನಾಂಕ	29.10.2024, 11:30 ಗಂಟೆಗೆ.
ಮುಂಗಡ ಠೇವಣಿ ಹಣ (ಇಎಂಡಿ)	ರೂ. 29,560/–

ಟೆಂಡರ್ ವಿಜಾರ್ಡ್‌ನಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕ ಪಾವತಿಸಿ ವೆಬ್‌ಸೈಟ್: www.tenderwizard.com/ISRO ಮೂಲಕ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಮಾರಾಟಗಾರರ ನೋಂದಣಿ ಪ್ರಕ್ರಿಯೆಯನ್ನು ಮೇಲಿನ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ವೆಬ್‌ಸೈಟ್: www.isro.gov.inನಲ್ಲಿ ಟೆಂಡರ್ ಆಹ್ವಾನ ಪ್ರಕಟಣೆಯ ಸಂಪೂರ್ಣ ವಿವರಗಳನ್ನು ಪರಿವೀಕ್ಷಿಸಬಹುದು ಮತ್ತು ಟೆಂಡರ್ ಹೆಚ್ಚಿನ ವಿವರಗಳಿಗೆ ಹಾಗೂ ಟೆಂಡರ್ ದಸ್ತಾವೇಜು ಖರೀದಿಗೆ www.tenderwizard.com/ISROಗೆ ಭೇಟಿ ನೀಡಿ.

ಸಹಿ/– ಮುಖ್ಯಸ್ಥರು ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ. 46/2024, ದಿನಾಂಕ: 08.10.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್8246474	ಆರ್‌ಡಿಎಸ್‌ಒ ನಿರ್ದಿಷ್ಟತೆ ಸಂ. ಆರ್‌ಡಿಎಸ್‌ಒ/2017/ಇಎಲ್/ಎಸ್‌ಪಿಇಸಿ/0134 (ರೆವ್.3) ಅಥವಾ ಇತ್ತೀಚಿನ ಎಲ್‌ಇಡಿ ಆಧಾರಿತ ಟ್ವಿನ್ ಬೀಮ್ ಹೆಡ್ ಲೈಟ್. (ಪರಿಮಾಣ: 160 ಸಂ.)

ಬಿಡ್‌ಗಳನ್ನು ಸಲ್ಲಿಸಲು/ಟೆಂಡರು ಕೊನೆಯ ದಿನಾಂಕ: 29.10.2024, 10:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/494/AAMO/PRB/SWR/2024-25 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು
South Western Railway - SWR | SWRRLY | SWRRLY

ಭಾರತ ಸರ್ಕಾರ
ಸಸ್ಯ ಪ್ರಭೇದಗಳು ಮತ್ತು ಕೃಷಿಕರ ಹಕ್ಕುಗಳ ಸಂರಕ್ಷಣಾ ಪ್ರಾಧಿಕಾರ
ಕೃಷಿ ಮತ್ತು ಕೃಷಿಕರ ಕ್ಷೇಮಾಭಿವೃದ್ಧಿ ಇಲಾಖೆ
ಕೃಷಿ ಮತ್ತು ಕೃಷಿಕರ ಕ್ಷೇಮಾಭಿವೃದ್ಧಿ ಸಚಿವಾಲಯ
ಸತ್ಯಮೇವ ಜಯತೇ PPVFRA
ವೆಬ್‌ಸೈಟ್: "www.plantauthority.gov.in"

ಪ್ಲಾಂಟ್ ಜಿನೋಮ್ ಸೇವಿಯರ್ ಅವಾರ್ಡ್ 2023–24

ಸನ್ 2023–24ನೇ ಸಾಲಿನ ಪ್ಲಾಂಟ್ ಜಿನೋಮ್ ಸೇವಿಯರ್ ಕಮ್ಯುನಿಟಿ ಅವಾರ್ಡ್/ಫಾರ್ಮರ್ ರಿವಾರ್ಡ್ & ರಿಕಗ್ನಿಷನ್‌ಗಾಗಿ, ಕೃಷಿಕ ಸಮುದಾಯಗಳಿಂದ ಮತ್ತು ವ್ಯಕ್ತಿಗತ ಕೃಷಿಕರಿಂದ ನಿರ್ದಿಷ್ಟ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರವಾದ ಜಾಹೀರಾತು ಮತ್ತು ಅರ್ಜಿ ನಮೂನೆಯು ಪಿಪಿವಿಎಫ್‌ಆರ್ ಪ್ರಾಧಿಕಾರದ https://plantauthority.gov.in/ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಕೊನೆಯ ದಿನಾಂಕ: ಜಾಹೀರಾತು ದಿನಾಂಕದಿಂದ 3 ತಿಂಗಳು.

cbc01146/12/0001/2425

ಅ.19ಕ್ಕೆ ಜಯನಗರದಲ್ಲಿ 'ಭೂಮಿಕಾ ಕ್ಲಬ್'

ಪ್ರಜಾವಾಣಿ ವಾರ್ತೆ

Freedom Healthy Cooking Oils presents ಭೂಮಿಕಾ ಕ್ಲಬ್

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಬಳಗದ 'ಭೂಮಿಕಾ ಕ್ಲಬ್' ವೇದಿಕೆಯು ನಗರದಲ್ಲಿ ಅ.19ರಂದು (ಶನಿವಾರ) ಮಹಿಳೆಯರಿಗಾಗಿ ಕಾರ್ಯಕ್ರಮ ಹಮ್ಮಿಕೊಂಡಿದೆ.

'ಫ್ರೀಡಂ ಆಯಿಲ್' ಸಹಯೋಗದಲ್ಲಿ ಜಯನಗರದ ಆರ್.ವಿ.ಟೀಚರ್ಸ್ ಕಾಲೇಜು ಸಭಾಂಗಣದಲ್ಲಿ ಅಂದು ಮಧ್ಯಾಹ್ನ 3 ರಿಂದ ನಡೆಯುವ ಕಾರ್ಯಕ್ರಮದಲ್ಲಿ ಬಾಣಸಿಗರಾದ ಪೂಜಾ ಪಾಟೀಲ್ ಅವರು ಅಡುಗೆ ಕಾರ್ಯಕ್ರಮ ನಡೆಸಿಕೊಡುವರು.

ಅಶ್ವಿನಿ ಶೆಣೈ ಅವರು ಸೀರೆ ಉಡುವ ಕಲೆ ಮತ್ತು ಮೇಕಪ್ ಕಾರ್ಯಾಗಾರ ನಡೆಸಿಕೊಡಲಿದ್ದಾರೆ.

ಬೀಟ್ ಗುರೂಸ್ ಅವರಿಂದ ಡ್ರಮ್ ಸರ್ಕಲ್ ಕಾರ್ಯಕ್ರಮದ ಪ್ರದರ್ಶನ ಇದೆ.

ಹೊಸ ವಿಷಯಗಳನ್ನು ಕಲಿಯಲು, ಸಮಾನ ಮನಸ್ಕರೊಂದಿಗೆ ಬೆರೆಯಲು, ಸೃಜನಶೀಲತೆ ಪ್ರದರ್ಶಿಸಲು, ಆರೋಗ್ಯ ಮತ್ತು ಕ್ಷೇಮದ ಜಗತ್ತಿನ ಬಗ್ಗೆ ಮಾಹಿತಿ ಪಡೆಯಲು ಕಾರ್ಯಕ್ರಮ ದಲ್ಲಿ ಭಾಗವಹಿಸಬಹುದು.

ಅಚ್ಚರಿಯ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಉಚಿತ ಪ್ರವೇಶಕ್ಕೆ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ ಹೆಸರು ನೋಂದಾ ಯಿಸಿಕೊಳ್ಳಬಹುದು. ಮಾಹಿತಿಗೆ 7338018541 ಸಂಪರ್ಕಿಸಿ.

'ಸಾರ್ಥಕ ಬದುಕಿನ ಸುಂದರ ಪಯಣ' ಕಾರ್ಯಕ್ರಮ 17ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ 93ನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ 'ಸಾರ್ಥಕ ಬದುಕಿನ ಸುಂದರ ಪಯಣ' ಕಾರ್ಯಕ್ರಮವನ್ನು ಅ.17ರಂದು ಬೆಳಿಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ ವತಿಯಿಂದ ನಗರದ ಬಸವೇಶ್ವರನಗರದ ಅನುಭವ ಮಂಟಪದಲ್ಲಿ ದಿನಪೂರ್ತಿ ಕಾರ್ಯಕ್ರಮ ನಡೆಯಲಿದೆ ಎಂದು ಸಂಘಟಕರಾದ ಸುಶೀಲಮ್ಮ, ಪ್ರಮೀಳಾ ಗರಡಿ, ನಿರ್ಮಲಾ ಎಲಿಗಾರ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾವ್ಯ, ಕಾದಂಬರಿ, ಪ್ರಬಂಧ, ಜೀವನಚರಿತ್ರೆ, ಆತ್ಮಕಥೆ, ನಾಟಕ, ಸಂಶೋಧನಾ ಗ್ರಂಥ ಹೀಗೆ ಅನೇಕ ಪ್ರಕಾರಗಳಲ್ಲಿ ಕೃತಿಗಳನ್ನು ಲೀಲಾದೇವಿ ರಚಿಸಿದ್ದಾರೆ. ಸಂಸ್ಕೃತಿ ಚಿಂತಕರೂ ಆಗಿದ್ದಾರೆ. 1957ರಲ್ಲಿ ಬೆಂಗಳೂರು ಪಾಲಿಕೆಯ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ್ದ ಅವರು ಮುಂದೆ ಸಚಿವೆಯಾಗಿ ವಿವಿಧ ಖಾತೆಗಳನ್ನು ನಿಭಾಯಿಸಿದ್ದರು ಎಂದು ವಿವರಿಸಿದರು.

ಆಡಳಿತಾಧಿಕಾರಿ ನೇಮಕಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ಆಡಳಿತಾಧಿಕಾರಿ ನೇಮಕ ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ 'ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ' ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ, ರಾಜ್ಯ ಸರ್ಕಾರದ ಆದೇಶಕ್ಕೆ ಮಧ್ಯಂತರ ತಡೆ ನೀಡಿತು. ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಲಾಗಿದೆ.

ಕೆಎಎಸ್ ಅಧಿಕಾರಿ ಸಿ.ಎನ್. ಮಂಜುನಾಥ್ ಅವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ ಸಹಕಾರ ಇಲಾಖೆ ಇದೇ 7ರಂದು ಆದೇಶ ಹೊರಡಿಸಿತ್ತು.

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ.: 1in12_CNPA_SBGA_DSVS_SIGA ದಿನಾಂಕ: 09.10.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗ (ಎಸ್‌ಬಿಸಿ): ಚನ್ನರಾಯಪಟ್ಟಣ (ಸಿಎನ್‌ಪಿಎ), ಶ್ರವಣಬೆಳಗೊಳ (ಎಸ್‌ಬಿಜಿಎ), ಡಿ. ಸಮುದ್ರವಳ್ಳಿ (ಡಿಎಸ್‌ವಿಎಸ್), ಶಾಂತಿಗ್ರಾಮ (ಎಸ್‌ಐಜಿಎ) ನಿಲ್ದಾಣಗಳಲ್ಲಿ 12 ರಲ್ಲಿ 1 ಪಾಯಿಂಟ್‌ಗಳ ವ್ಯವಸ್ಥೆ.	ರೂ. 14,68,567.15

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.11.2024, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ /ಬೆಂಗಳೂರು
PUB/499/AAMO/PRB/SWR/2024-25
South Western Railway - SWR | SWRRLY | SWRRLY

PUBLIC NOTICE

The General Public are hereby informed that, our client intends to purchase agricultural land bearing Survey NoSy no.56/1 measuring 26 Guntas, Survey No.59/1 measuring 1 Acre 31.08 Guntas, Sy.No.59/5, measuring 1 Acre 26 guntas, Sy.No.59/6, measuring 22 guntas, Sy.No.58/1, measuring 1 Acre 05.08 guntas, Sy.No.58/5, measuring 1 Acre 9 guntas, Sy No.58/3 measuring 0.17.05 Guntas all situated at Koluvarrayanahalli, Hesarghatta Yelahanka village, Bengaluru North Taluk. Having a Total Extent of 7 Acres 16 .16 Guntas which is more fully described in the Schedule hereunder from its present Owners/Agreement holder M/S.VET REALTORS a proprietorship firm No.2346, R.K. Complex, Someshwaranagar Main Road, Yelahanka, Bangalore-560064.Represented by it Proprietrix Smt. Kavitha D.R.

Further any person / entity including an individual, a Hindu Undivided Family, a company, bank(s), financial institution(s), non-banking financial institution(s), a firm, an association of persons or a body of individuals whether incorporated or not, lenders and/or creditors, claiming any right, title or interest, claim, objection and/or demand or share of any nature whatsoever in, to, over, upon or against the Property or part thereof whether by way of sale, assignment, transfer, tenancy, sub-tenancy, lease, leave and license, gift, charge, lien, mortgage (including by way of deposit of original title deeds and/or otherwise), exchange, easement, pledge, gift, trust, inheritance, possession, arrangement /settlement, power of attorney, floor space index consumption, development rights, possession, tenancy, sub-tenancy, leave and license, lease, sub-lease, lien into or upon the aforesaid property may intimate the same in writing supported by tenable documentary evidence to the undersigned **within 10 DAYS** from the date of this publication hereof, failing which all rights and claims if any, shall be deemed to have been waived and our client shall proceed with the conveyance pertaining to the Schedule Property deeming that there are no claims or objections whatsoever.

SCHEDULE PROPERTY

Sl. No.	Survey No.	Area		Village	Boundaries
		Acre	Guntas		
1.	56/1	--	0.26	Koluvaryanahalli	E: Srinivasareddy (sy no.56/2) W: Nagaraju + Guruswamy Sy.No.58/3 N: Munishamappa (57/4) S: Srinivasareddy
2.	59/1	1	31.08	Koluvaryanahalli	E: Raghu / Umapathi W: Road N: Sathya Prasad / Bayanna (old) S: Laxmamma Sy.No.59/5
3.	59/5	1	0.26	Koluvaryanahalli	E: Parvathamma (Sy.no.57/1) W: Mathkur border N: Ramaiah (Sy.No.59/1) S: Shivamma Sy.No.59/6
4.	59/6	--	0.22	Koluvaryanahalli	E: Parvathamma (Sy.No.57/1) W: Mathkur Border N: Laxmamma (59/5) S: Shivamma Sy.No.58/1
5.	58/1	1	05.08	Koluvaryanahalli	E: Munishamappa (Sy no.57/4) W: Mathkur Border N: Shivamma Sy.no.58/1 S: Nagaraj P. (Sy.no.58/3)
6.	58/5	1	0.9	Koluvaryanahalli	E: Munishamappa (Sy.no.57/4) W: Mathkur Border N: Shivamma (Sy.no.58/1) S: Nagaraju P (Sy.no.58/3)
7.	58/3	--	17.05	Koluvaryanahalli	E: Munishamappa (Sy.no.57/4) W: Mathkur Branch N: Pillaswamy (Sy.no.58/5) S: Gurusway (Sy.no.58/3)
	Total	7	16.6		

W.M. Sundaramurthy
For SUNDARAMURTHY & SUNDARAMURTHY
Advocates & Legal Consultants,
5/1, Crescent Heights Cunningham Crescent Road,
Bangalore-560 052 Phone No: 080-41513222/41514222
e-mail: law@sundaramurthylegalconsultants.com

'ಸಾಹಿತ್ಯ ಸಮ್ಮೇಳನಕ್ಕೆ ಸಾಹಿತಿಯೇ ಅಧ್ಯಕ್ಷರಾಗಲಿ'

ಬರಗೂರು ರಾಮಚಂದ್ರಪ್ಪ

ಬೆಂಗಳೂರು: 'ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಾಹಿತ್ಯ ಕ್ಷೇತ್ರದ ಸಾಧಕರೇ ಅಧ್ಯಕ್ಷರಾಗಬೇಕು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯ ಪಟ್ಟಿದ್ದಾರೆ.

'ನನಗೆ ತಿಳಿದಂತೆ ಬೇರೆ ಕ್ಷೇತ್ರದ ಸಾಧಕರು ಯಾರೂ ತಾವಾಗಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಬೇಕೆಂದು ಆಸೆ ಪಟ್ಟಿಲ್ಲ. ಸಾಹಿತಿಗಳಲ್ಲದವರೂ ಸಮ್ಮೇಳನದ ಅಧ್ಯಕ್ಷರಾಗಲಿ ಎಂಬ ತಾರ್ಕಿಕತೆ ಮತ್ತು ತಾತ್ವಿಕತೆ ಇಲ್ಲದ ವಾದ ಹುಟ್ಟು ಹಾಕಿದ ಮೂಲ ಪುರುಷರ ಉದ್ದೇಶವೇ ಪ್ರಶ್ನಾರ್ಹವಾದುದು' ಎಂದೂ ಅವರು ಹೇಳಿದ್ದಾರೆ.

'ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ ಮತ್ತು ಸಾಹಿತ್ಯ ಸಮ್ಮೇಳನ ಆಯೋಜನೆಗಳ ಮೂಲ ಆಶಯ ಅರ್ಥ ಮಾಡಿಕೊಂಡವರು ಸಾಹಿತಿಯಲ್ಲದವರು ಸಮ್ಮೇಳನದ ಅಧ್ಯಕ್ಷರಾಗಲಿ ಎಂದು ಹೇಳುವುದಿಲ್ಲ. ಬೇರೆ ಕ್ಷೇತ್ರದ ಸಾಧಕರು ಆಯಾ ಕ್ಷೇತ್ರದ ಸಮ್ಮೇಳನಗಳಿಗೆ ಅಧ್ಯಕ್ಷರಾಗಲಿ. ವಿಶ್ವ ಕನ್ನಡ ಸಮ್ಮೇಳನದ ಮನ್ನಣೆಗೆ ಪಾತ್ರರಾಗಲಿ' ಎಂದಿದ್ದಾರೆ. 'ಸಮ್ಮೇಳನದಲ್ಲಿ ಕನ್ನಡ ನಾಡು, ನುಡಿಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಚಿಂತನೆ ಖಂಡಿತ ಆಗಲಿ' ಎಂದು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಆರುಂಧತಿ ನಾಗ್

ಮೆಂಟಲ್ ಹೆಲ್ತ್ ಸಂತೆ–3.0: ಉದ್ಘಾಟನೆ: ಆರುಂಧತಿ ನಾಗ್, ಅಧ್ಯಕ್ಷತೆ: ಪ್ರತಿಮಾ ಮೂರ್ತಿ, ಆಯೋಜನೆ: ನಿಮ್ಹಾನ್ಸ್, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 9.45

ಆಶ್ರಯ ಸೆಂಟರ್ ಉದ್ಘಾಟನೆ: ಅತಿಥಿಗಳು: ಮೊಹಮ್ಮದ್ ಮೊಹ್ಸಿನ್, ಕರುಣ ಶಂಕರ್, ಆಯೋಜನೆ: ಅಮೆಜಾನ್.ಇನ್, ಸ್ಥಳ: ಸ್ಪ್ಲೆಂಡಿಡ್ ಪ್ಲಾಝು, ವೀಲರ್ ರೋಡ್, ಕಾಕ್ಸ್ ಟೌನ್, ಬೆಳಿಗ್ಗೆ 10.15

ನಿರ್ಮಲಾನಂದನಾಥ ಸ್ವಾಮೀಜಿ

ಚುಂಚಶ್ರೀ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಪುರಸ್ಕೃತರು: ಕೆ.ಎನ್. ಪುಟ್ಟೇಗೌಡ, ಉದ್ಘಾಟನೆ: ನ್ಯಾ. ಕೃಷ್ಣ ಎಸ್. ದೀಕ್ಷಿತ್, ಅತಿಥಿಗಳು: ನ್ಯಾ. ವಿ. ಗೋಪಾಲಗೌಡ, ನ್ಯಾ. ಬಿ. ವೀರಪ್ಪ, ಅಶೋಕ ಹಾರನಹಳ್ಳಿ, ಆಯೋಜನೆ: ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಸ್ಥಳ: ಬಿಜಿಎಸ್ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜು, ಮಹಾಲಕ್ಷ್ಮೀಪುರ, ಸಂಜೆ 5.30

ವಿವಿಧ ಪ್ರಕಾರದ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ. nagaradalli_indu@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

BUSINESS

Business to Business

Business

GOLDEN OPPORTUNITY Cash or gold. Open trading account earn 120% to your bank. Contact:- 8792645301.

BUILDERS ESSENTIAL

Roofing Materials

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

JOB OPPORTUNITIES

Multiple Vacancy

CITY GROUP OF INSTITUTIONS
POUND GARDEN, KADRI, MANGALORE 575 003
Tel: 0824 2217901, 2217905
cityhospitalmangalore@hotmail.com; cityhospitalmg@gmail.com

WANTED
- ADMINISTRATIVE OFFICER: Preferably PG qualified – 10 years' experience in administration of Educational Institutions.
- SENIOR MANAGERIAL POST: Experience as a Senior Manager in Educational Institutions / Industry / Business
- ACCOUNTANT : B.Com / M.Com / MBA. Proficiency in Tally with knowledge of TDS, GST, EPF, ESI,and ROC matters. Minimum 5 years of experience in a corporate or MSME. Age below 45 years
- INSURANCE CO-ORDINATOR: Knowledge of Medi-claim processing and billing
- ASSISTANT PROFESSOR / LECTURERS : MSc. (N) Psychiatry / Medical Surgical / Community Health / Obstetrics and Gynaecology / Paediatric Nursing. MSc. (MLT), MSc. (OT&AT)
- PHARMACY IN-CHARGE: D-Pharma.
- ASSISTANT LECTURER / TUTOR / STAFF NURSE : BSc(N)
- WARDEN : For girls' hostel, preferably a graduate
- ELECTRICIAN : Preferably ITI certificate holder
- AMBULANCE DRIVER : with badge and First Aid (Resident)
- WARD BOYS & FNOs

Salary Negotiable - Commensurate with Qualification & Experience
Apply to The Managing Director within 7 days.

REAL ESTATE SELLING

Flat

Banashankari

DUPLEX THREE and Half Bedroom Luxurious Penthouse Title Clear OC 3118 sqft Rs 2.53Cr Vegetarians 9845228595 9844021380

PERSONAL

Lost

LOST DOCUMENT
I, MASILAMANI, have lost my Original Sale Deed PLOT No. 55, Sy. No 98/1, 98/2, at Nalinikrishnan Nagar, Sevvapet Tirur Village, Thiruvallur Taluk, Chengalpet Dist, Chennai. while travelling by bus. Finders please Contact: 8438526846

Change of Name

I, SWATHI Residing`at No.74,Tharalu, Bangalore-560082 have`changed my`Name to SWATHI S vide`Affidavit dtd:14-10-2024 Sworn Before Notary Ambreshappa, Bangalore

I, KIRAN R/o. 5-3-309, Udgir Road, near Bhavani Temple, Devinagar, Bhalki, Bidar, Karnataka- 585328, have changed my name to KIRAN KALE affidavit dated 14/10/2024 notary L. Gopalakrishna Bangalore.

I ANSER Age about 67 years S/o Ibrahim sab R/A No.12, 1st Main 6th cross Modi Garden, D.J Halli, Banglore-45, have changed my Name as ANSAR before Notary S.I Balaguru, Bangalore.

I VAMSHI MEDIMI SRINIVAS R/a. #790, 1st D Main Road 2nd Phase, Girinagar, Bengaluru- 560085 Have Changed my Name To VAMSHI MEDIMI SREENIVAS Vide Affidavit Dated 14/10/2024 before Notary Mamatha N.K Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
9731810277
9886213331
9845114560

ಜಾತಿನಿಂದನೆ: ಮುನಿರತ್ನ ಆಪ್ತರಿಗೆ ನಿರೀಕ್ಷಣಾ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರು ಗುತ್ತಿಗೆದಾರನಿಂದ ಲಂಚ ಕೇಳುವ ಸಂದರ್ಭದಲ್ಲಿ ನನ್ನನ್ನು ಗುರಿಯಾಗಿಸಿ ಜಾತಿನಿಂದನೆ ಮಾಡಿದ್ದಾರೆ' ಎಂದು ಆರೋಪಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮಾಜಿ ಸದಸ್ಯ ವೇಲುನಾಯ್ಕರ್ ಸಲ್ಲಿಸಿದ್ದ ದೂರಿಗೆ ಸಂಬಂಧಿಸಿದ ಪ್ರಕರಣದಲ್ಲಿ ಮೂವರು ಆರೋಪಿಗಳಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ನಿರೀಕ್ಷಣಾ ಜಾಮೀನು ನೀಡಿದೆ.

ಈ ಕುರಿತಂತೆ ಕಾಯ್ದಿರಿಸಿದ್ದ ಆದೇಶವನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಸೋಮವಾರ ಪ್ರಕಟಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಮುನಿರತ್ನ ಆಪ್ತರಾದ ಬಿ.ಎನ್. ಲೋಹಿತ್ ಅಲಿಯಾಸ್ ಲೋಹಿತ್ ಗೌಡ, ಸಿ.ಕಿರಣ್ ಕುಮಾರ್ ಅಲಿಯಾಸ್ ಕಿರಣ್ ಕುಮಾರ್ ಮತ್ತು ಎನ್. ಮಂಜುನಾಥ್ ಅಲಿಯಾಸ್ ಮಂಜುನಾಥ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಧೀಶರು ಪುರಸ್ಕರಿಸಿದ್ದಾರೆ.

ತುಮಕೂರು, ಹೆಬ್ಬಾಳ ರಸ್ತೆಗಳಲ್ಲಿ ಕಿಲೋ ಮೀಟರ್‌ವರೆಗೂ ವಾಹನಗಳ ಸಾಲು

ಸಂಚಾರ ದಟ್ಟಣೆಯಲ್ಲಿ ಸಿಲುಕಿದ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಧಪೂಜೆ ಹಾಗೂ ವಿಜಯದಶಮಿ ರಜೆ ನಿಮಿತ್ತ ಊರಿಗೆ ತೆರಳಿದ್ದ ಸಾವಿರಾರು ಮಂದಿ ಏಕಕಾಲಕ್ಕೆ ನಗರಕ್ಕೆ ವಾಪಸ್ ಆದ ಕಾರಣ ಹೆಬ್ಬಾಳ, ಮೈಸೂರು ರಸ್ತೆ ಹಾಗೂ ತುಮಕೂರು ರಸ್ತೆಗಳಲ್ಲಿ ಭಾನುವಾರ ರಾತ್ರಿಯಿಂದ ಸೋಮವಾರ ಸಂಜೆಯವರೆಗೂ ವಿಪರೀತ ವಾಹನ ದಟ್ಟಣೆ ಉಂಟಾಗಿತ್ತು.

ಗಂಟೆಗಟ್ಟಲೆ ರಸ್ತೆಯಲ್ಲೇ ಸಿಲುಕಿದ ವಾಹನಗಳ ಸವಾರರು, ಚಾಲಕರು ಅಕ್ಷರಶಃ ಪರದಾಡಿದರು. ಈ ಮಾರ್ಗದಲ್ಲಿ ಭಾನುವಾರ ಸಂಜೆಯಿಂದಲೂ ದಟ್ಟಣೆ ಇತ್ತು. ಸೋಮವಾರ ಬೆಳಿಗ್ಗೆಯೂ ವಾಹನ ದಟ್ಟಣೆಯಿಂದ ಸಮಸ್ಯೆ ಆಗಿತ್ತು. ಟೋಲ್ ಗೇಟ್‌ಗಳು ಸೇರಿದಂತೆ ಪ್ರಮುಖ ಜಂಕ್ಷನ್‌ನಲ್ಲಿ ವಾಹನಗಳು ಕಿಲೋಮೀಟರ್ ಗಟ್ಟಲೆ ಸಾಲುಗಟ್ಟಿ ನಿಂತಿದ್ದವು.

ಬೆಂಗಳೂರಿನ ತುಮಕೂರು ರಸ್ತೆ, ಮಾದಾವರದಿಂದ ಗೊರಗುಂಟೆಪಾಳ್ಯ ಮೆಟ್ರೊ ನಿಲ್ದಾಣದವರೆಗೆ ನಿರಂತರ ದಟ್ಟಣೆ ಉಂಟಾಗಿತ್ತು. ಇದು ಹೊರವರ್ತುಲ ರಸ್ತೆಯ ಎರಡೂ ಪಥಗಳ ಮೇಲೆ ಪರಿಣಾಮ ಬೀರಿತು.

ಹೆಬ್ಬಾಳ ಮೇಲ್ಸೇತುವೆಯಲ್ಲಿ ಸೋಮವಾರ ಕಂಡುಬಂದ ವಾಹನ ದಟ್ಟಣೆ ಪ್ರಜಾವಾಣಿ ಚಿತ್ರ ಬಿ.ಕೆ.ಜನಾರ್ದನ್

ನೆಲಮಂಗಲದಿಂದ ಗೊರಗುಂಟೆಪಾಳ್ಯ ತಲುಪಲು ಸುಮಾರು ನಾಲ್ಕು ತಾಸು ಹಿಡಿಯಿತು. ಹೆಬ್ಬಾಳ ಕಡೆಗೆ ಸಾಗುವ ರಸ್ತೆಯಲ್ಲಿ ಸುಮಾರು ಮೂರು ಕಿಲೋಮೀಟರ್ ದೂರದವರೆಗೂ ವಾಹನ ದಟ್ಟಣೆ ಕಂಡು ಬಂತು.

ಪೀಣ್ಯ ಮೇಲ್ಸೇತುವೆಯಲ್ಲಿ ಸರಕು ಸಾಗಣೆ ವಾಹನ ಕೆಟ್ಟು ನಿಂತ ಕಾರಣ ಸಮಸ್ಯೆ ಮತ್ತಷ್ಟು ಬಿಗಡಾಯಿಸಿತು. ಇದರಿಂದಾಗಿ ವಾಹನಗಳು ನಿಧಾನವಾಗಿ ಸಂಚರಿಸುವಂತಾಯಿತು.

ಹೆಬ್ಬಾಳ ಜಂಕ್ಷನ್‌ನ ಮೂರು ಭಾಗಗಳಲ್ಲಿ ನಿಧಾನಗತಿಯ ಚಾಲನೆಯಿಂದ ವಾಹನ ಸವಾರರು ಹೈರಾಣಾದರು. ವಿಮಾನ ನಿಲ್ದಾಣದಿಂದ ನಗರಕ್ಕೆ ಒಳಬರುವ ಮಾರ್ಗದಲ್ಲಿ ವಾಹನ ದಟ್ಟಣೆ ವಿಪರೀತವಾಗಿತ್ತು.

ಮಾರತ್ತಹಳ್ಳಿ– ಇಬ್ಲೂರು ಜಂಕ್ಷನ್‌ಗಳಲ್ಲಿ ವಾಹನಗಳು ಮಂದಗತಿಯಲ್ಲಿ ಸಾಗಿದವು. ಮೈಸೂರು ರಸ್ತೆಯ ಮೇಲ್ಸೇತುವೆ ಹಾಗೂ ನಾಯಂಡಹಳ್ಳಿ ಮೆಟ್ರೊ ನಿಲ್ದಾಣ, ಸ್ಯಾಟಲೈಟ್ ಬಸ್ ನಿಲ್ದಾಣದ ನಡುವೆ ವಾಹನ ಸಂಚಾರ ಮಂದಗತಿಯಲ್ಲಿತ್ತು.

ಊರುಗಳಿಂದ ಮರಳಿದ ಜನ

'ಊರಿಗೆ ಹಾಗೂ ಪ್ರವಾಸಿ ತಾಣಗಳಿಗೆ ತೆರಳಿದ್ದವರು ಒಮ್ಮೆಲೇ ನಗರಕ್ಕೆ ಬಂದ ಕಾರಣ ದಟ್ಟಣೆ ಸಮಸ್ಯೆ ಆಗಿತ್ತು. ಸೋಮವಾರ ಸಂಜೆ ವೇಳೆಗೆ ಸಮಸ್ಯೆ ಬಗೆಹರಿದಿತ್ತು. ತುಮಕೂರು ರಸ್ತೆಯ ಮೇಲ್ಸೇತುವೆ ಹಾಗೂ ಕೆಳ ರಸ್ತೆಯಲ್ಲಿ ವಾಹನಗಳು ಸುಗಮವಾಗಿ ಸಂಚರಿಸುತ್ತಿವೆ' ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಮದ್ಯದ ಬಾಟಲಿಯಿಂದ ಚುಚ್ಚಿ ಸ್ನೇಹಿತನ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮದ್ಯದ ಅಮಲಿನಲ್ಲಿ ಸ್ನೇಹಿತರ ಮಧ್ಯೆ ಆರಂಭವಾದ ಗಲಾಟೆ ಕೊಲೆಯಲ್ಲಿ ಅಂತ್ಯವಾಗಿದೆ. ಸ್ನೇಹಿತನ ಬಾಟಲಿಯಿಂದ ಚುಚ್ಚಿ ಕೊಲೆ ಮಾಡಿದ್ದ ಆರೋಪಿಯನ್ನು ಬ್ಯಾಟರಾಯನಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯೋಗೇಂದ್ರ ಸಿಂಗ್ (26) ಕೊಲೆಯಾದಯುವಕ.ಕೊಲೆಆರೋಪದಡಿ ಉಮೇಶ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. 'ಮೃತ ಯುವಕನ ತಂದೆ ವಿಶ್ವನಾಥ್ ಸಿಂಗ್ ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ವಿಶ್ವನಾಥ್ ಸಿಂಗ್ ಅವರು ಪತ್ನಿ ಹಾಗೂ ಮಕ್ಕಳ ಜೊತೆ ಕಸ್ತೂರಿನಗರದಲ್ಲಿ ವಾಸವಾಗಿದ್ದಾರೆ. ಮೃತ ಯೋಗೇಂದ್ರ ಆಟೊ ಚಾಲಕರಾಗಿದ್ದರು. 20 ದಿನದ ಹಿಂದಷ್ಟೇ ಕೋಲಾರದ ನರಸಾಪುರದ ಸಾಫ್ಟ್‌ವೇರ್ ಕಂಪನಿಯ ಮಿನಿ ಬಸ್ ಚಾಲಕನಾಗಿ ಕೆಲಸಕ್ಕೆ ಸೇರಿಕೊಂಡಿದ್ದು, ಅಲ್ಲಿಯೇ ವಾಸವಾಗಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ದಸರಾ ರಜೆ ನಿಮಿತ್ತ ಅಕ್ಟೋಬರ್

ಯೋಗೇಂದ್ರ

ಉಮೇಶ್

12ರಂದು ಮನೆಗೆ ಬಂದಿದ್ದರು. 13ರ ಬೆಳಿಗ್ಗೆ 10ಗಂಟೆ ಸುಮಾರಿಗೆ ಮನೆಯಿಂದ ಹೊರಗೆ ಹೋಗಿದ್ದು, ರಾತ್ರಿ 9.30ರ ಸುಮಾರಿಗೆ ಮನೆಗೆ ವಾಪಸ್ ಬಂದಿದ್ದರು.

ಆಗ ತಾಯಿ ಬುದ್ಧಿಮಾತು ಹೇಳಿ, ಕೆಲಸಕ್ಕೆ ಹೋಗುವಂತೆ ತಿಳಿಸಿದ್ದರು. ಆಗ ಯೋಗೇಂದ್ರ ಸಿಂಗ್, ಟಿಂಬರ್ ಯಾರ್ಡ್‌ನಲ್ಲಿ ಕಂಪನಿಯ ಬಸ್ ನಿಲ್ಲಿಸಿದ್ದೇನೆ. ಬಸ್‌ನಲ್ಲಿ ಮಲಗಿ, ಬೆಳಿಗ್ಗೆ ಎದ್ದು ಕೆಲಸಕ್ಕೆ ಹೋಗುತ್ತೇನೆಂದು ತಾಯಿಗೆ ಹೇಳಿದ್ದರು' ಎಂದು ಪೊಲೀಸರು ಹೇಳಿದರು.

'ಮನೆಯಿಂದ ಹೊರಟ ಯೋಗೇಂದ್ರ ಸಿಂಗ್, ಕಸ್ತೂರಿನಗರದ ಸ್ನೇಹಿತ, ಟ್ರಾವೆಲ್ಸ್‌ನಲ್ಲಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದ ಉಮೇಶ್ ಅವರೊಂದಿಗೆ ಮೈಸೂರು ರಸ್ತೆಯಲ್ಲಿರುವ ಕಲಾ ವೈನ್ಸ್‌ಗೆ ತೆರಳಿದ್ದು, ಪಾರ್ಟಿ ಮಾಡಿದ್ದರು. ಆಗ ಜಗಳ ಆರಂಭವಾಗಿದೆ. ಉಮೇಶ್, ಮದ್ಯ ಬಾಟಲಿಯನ್ನು ಒಡೆದು,

ಅದರಿಂದಲೇ ಯೋಗೇಂದ್ರ ಸಿಂಗ್‌ನ ಹೊಟ್ಟೆ ಹಾಗೂ ದೇಹದ ಇತರೆ ಭಾಗಕ್ಕೆ ಇರಿದು ಕೊಲೆ ಮಾಡಿದ್ದಾನೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಕಿರುಕುಳ ಆರೋಪ: ಆತ್ಮಹತ್ಯೆಗೆ ಉಪನ್ಯಾಸಕಿ ಯತ್ನ

ಬೆಂಗಳೂರು: ತಿಲಕ್‌ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಖಾಸಗಿ ಪಿಯು ಕಾಲೇಜೊಂದರ ತರಗತಿಯಲ್ಲೇ ಸೋಮವಾರ, ಇಂಗ್ಲಿಷ್ ಉಪನ್ಯಾಸಕಿಯೊಬ್ಬರು ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಕಾಲೇಜಿಗೆ ತಿಲಕ್‌ನಗರ ಠಾಣೆ ಪೊಲೀಸರು ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದಾರೆ. ಶಬಾನಾ (44) ಅವರು ಆತ್ಮಹತ್ಯೆ ಯತ್ನಿಸಿದ ಉಪನ್ಯಾಸಕಿ. 'ಕಾಲೇಜಿಗೆ ಬಂದಿದ್ದ ಶಬಾನಾ ಅವರು ಪ್ರಾಂಶುಪಾಲರ ಕೊಠಡಿಗೆ ತೆರಳಿ ಕೆಲಹೊತ್ತು ಚರ್ಚಿಸಿದ್ದರು. ಅದಾದ ಕೆಲವೇ ಹೊತ್ತಿನಲ್ಲಿ ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಅಸ್ವಸ್ಥಗೊಂಡು ಬಿದ್ದಿದ್ದ ಅವರನ್ನು ನೋಡಿದ ವಿದ್ಯಾರ್ಥಿಗಳು, ಕಾಲೇಜು ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಉಪನ್ಯಾಸಕಿಯನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಚಿಕಿತ್ಸೆ ಮುಂದುವರಿದಿದೆ' ಎಂದು ಮೂಲಗಳು ತಿಳಿಸಿವೆ.

'ಉಪನ್ಯಾಸಕಿಯ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಪ್ರಾಂಶುಪಾಲ ಸೇರಿದಂತೆ ಕೆಲವರ ವಿರುದ್ಧ ಕಿರುಕುಳದ ಆರೋಪ ಮಾಡಿದ್ದಾರೆ. ಪ್ರಾಂಶುಪಾಲ ಹಾಗೂ ಸಿಬ್ಬಂದಿಯಿಂದ ಮಾಹಿತಿ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಎರಡು ವರ್ಷದಿಂದ ಶಬಾನಾ ಅವರು ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದರು. ಆಡಳಿತಾತ್ಮಕ ವಿಚಾರಗಳನ್ನು ಬಹಿರಂಗ ಪಡಿಸುತ್ತಿದ್ದರು. ಇತರೆ ಉಪನ್ಯಾಸಕರ ಬಗ್ಗೆಯೂ ಕೀಳಾಗಿ ಮಾತನಾಡುತ್ತಿದ್ದರು. ಮಾಹಿತಿ ತಿಳಿದು ವಿಭಾಗ ಮುಖ್ಯಸ್ಥರ ಸ್ಥಾನದಿಂದ ವಜಾಗೊಳಿಸಿದ್ದು, ವಿಚಾರಣೆಗೆ ಸಮಿತಿ ನೇಮಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

'ಆಡಳಿತ ಮಂಡಳಿಯು ಶಿಸ್ತುಕ್ರಮಕ್ಕೆ ಮುಂದಾಗಿದ್ದರಿಂದ ನೊಂದುಕೊಂಡಿದ್ದ ಅವರು ಸೋಮವಾರ ಆತ್ಮಹತ್ಯೆಗೆ ಯತ್ನಿಸಿದ್ದರು' ಎಂದು ಪೊಲೀಸರು ತಿಳಿಸಿದರು. 'ವಿಚಾರಣೆಗೆ ನೇಮಕವಾಗಿದ್ದ ಸಮಿತಿಯ ವಿರುದ್ಧವೂ ಕಿರುಕುಳದ ಆರೋಪ ಮಾಡಿದ್ದಾರೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ವಿಜಯ್ ತಾತಾ ಆರೋಪ: ಎಫ್ಐಆರ್ ರದ್ದು ಕೋರಿ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉದ್ಯಮಿ ವಿಜಯ್ ತಾತಾಗೆ ಬೆದರಿಕೆಯೊಡ್ಡಿದ ಆರೋಪದಡಿ ನನ್ನ ವಿರುದ್ಧ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿ ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ಎಂ.ರಮೇಶ್ ಗೌಡ ಅವರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಕುರಿತ ಕ್ರಿಮಿನಲ್ ಅರ್ಜಿ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಸೋಮವಾರ ವಿಚಾರಣೆಗೆ ನಿಗದಿಯಾಗಿತ್ತು. ಅರ್ಜಿ ಪರಿಶೀಲಿಸಿದ ನ್ಯಾಯಪೀಠ, ಅರ್ಜಿಯಲ್ಲಿನ ಕಚೇರಿ ಆಕ್ಷೇಪಣೆಗಳನ್ನು ನಿವಾರಿಸುವಂತೆ ಅರ್ಜಿದಾರರ ಪರ ವಕೀಲರಿಗೆ ಸೂಚಿಸಿ ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ಅವರು, 'ಅರ್ಜಿದಾರರ ವಿರುದ್ಧದ ಆರೋಪಗಳು ಸತ್ಯಕ್ಕೆ ದೂರವಾದವು. ಈ ಪ್ರಕರಣದಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರನ್ನೂ ಹೆಸರಿಸಲಾಗಿದೆ. ಆಧಾರ ರಹಿತವಾದ ಈ ದೂರನ್ನು ರದ್ದುಗೊಳಿಸಬೇಕು' ಎಂದು ಮನವಿ ಮಾಡಿದರು.

ಮೂವರ ವಿರುದ್ಧ ಎಫ್ಐಆರ್: ಮೊಬೈಲ್, ಕಬ್ಬಿಣದ ರಾಡು ವಶ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಸ್ಮಾರ್ಟ್‌ಫೋನ್ ಬಳಸಿ ತಮ್ಮ ಸ್ನೇಹಿತರಿಗೆ ಕರೆ ಮಾಡಿದ್ದ ಆರೋಪದಲ್ಲಿ ಶಿಕ್ಷೆಗೆ ಗುರಿಯಾದ ಒಬ್ಬ ಕೈದಿ ಹಾಗೂ ಇಬ್ಬರು ವಿಚಾರಣಾಧೀನ ಕೈದಿಗಳ ವಿರುದ್ಧ ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ಸೋಮವಾರ ಪ್ರಕರಣ ದಾಖಲಾಗಿದೆ.

ವಿನೋದ್, ಸಾಗರ್ ಮತ್ತು ಸೋನು ಸ್ಮಾರ್ಟ್‌ಫೋನ್ ಬಳಸಿದ ಆರೋಪಿಗಳು. ಈ ಮೂವರು ಮೊಬೈಲ್ ಬಳಸಿ ವಿಡಿಯೊ ಕರೆ ಮಾಡಿ, ಗಾಂಜಾ ಸೇದುತ್ತಾ ಸೆಲ್ಫಿ ತೆಗೆದುಕೊಂಡಿದ್ದಾರೆ ಎನ್ನಲಾದ ವಿಡಿಯೊ, ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದವು.

ಸಂಜೆ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ, ಡಿಸಿಪಿ ಕನಿಕಾ ಸಿಕ್ರಿವಾಲ್ ನೇತೃತ್ವದಲ್ಲಿ 50ಕ್ಕೂ ಹೆಚ್ಚು ಸಿಬ್ಬಂದಿ ಜೈಲಿನ ಮೇಲೆ ದಾಳಿ ನಡೆಸಿತು. ನಾಲ್ಕು ಗಂಟೆಗೂ ಹೆಚ್ಚು ಹಲವು ಶೋಧ ಕಾರ್ಯ ನಡೆಸಲಾಯಿತು.

'ದಾಳಿಯಲ್ಲಿ ಎರಡು ಮೊಬೈಲ್ ಫೋನ್, ಎರಡು ಕಬ್ಬಿಣದ ರಾಡು, ಸಿಗರೇಟ್, ಗುಟ್ಕಾ ಪ್ಯಾಕೆಟ್‌ಗಳು ಪತ್ತೆಯಾಗಿವೆ. ಫೋನ್ ಕರೆ ಮಾಡಿದ ಮೂವರು ಕೈದಿಗಳ ವಿಚಾರಣೆ ಸಹ ಮಾಡಲಾಗಿದೆ. ವಿಡಿಯೊ ಕರೆಗೆ ಬಳಸಿದ್ದ ಮೊಬೈಲ್‌ಗಳನ್ನು ಸಹ ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಮೂವರು ಕೈದಿಗಳು ಸ್ಮಾರ್ಟ್‌ಫೋನ್ ಬಳಸಿ ಸ್ನೇಹಿತರಿಗೆ ವಿಡಿಯೊ ಕರೆ ಮಾಡಿದ್ದಾರೆ ಎನ್ನಲಾದ ದೃಶ್ಯ

'ವಿಡಿಯೊ ಕಾಲ್ ಮಾಡಿದವರ ಪೈಕಿ ಒಬ್ಬ ಸ್ಟೇಷನ್ ಬಜಾರ್ ಠಾಣೆ ವ್ಯಾಪ್ತಿಯ ಕೊಲೆ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದಾನೆ. ಉಳಿದವರು ಬೇರೆ ಬೇರೆ ಪ್ರಕರಣಗಳಲ್ಲಿ ವಿಚಾರಣಾಧೀನ ಕೈದಿಗಳಾಗಿದ್ದಾರೆ. ಸದ್ಯ ತನಿಖೆ ನಡೆಯುತ್ತಿದ್ದು, ಇನ್ನಷ್ಟು ಕೈದಿಗಳು ಭಾಗಿಯಾಗಿರುವ ಶಂಕೆ ಇದೆ' ಎಂದು ಮಾಹಿತಿ ನೀಡಿದರು.

ವಿಲಾಸಿ ಸೌಲಭ್ಯ ಶಂಕೆ: ಕಳೆದ ತಿಂಗಳು ಜೈಲಿನಲ್ಲಿ ಗಾಂಜಾ ಸಾಗಣೆಗೆ ಯತ್ನಿಸಿದ ಆರೋಪದಡಿ ಜೈಲಿನ ಕಸಗುಡಿಸುವ ಮಹಿಳಾ ಸಿಬ್ಬಂದಿಯೊಬ್ಬರನ್ನು ಪೊಲೀಸರು ಬಂಧಿಸಿದ್ದರು. ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಶೇಷ ಆತಿಥ್ಯ ಪಡೆದಿದ್ದ ನಟ ದರ್ಶನ್ ಮ್ಯಾನೇಜರ್ ನಾಗರಾಜ್ ಸದ್ಯ ಇದೇ ಜೈಲಿನಲ್ಲಿ ಇದ್ದಾರೆ.

ಸುಧಾ ಓದಿರಿ

ಪ್ಯಾಂಗಾಂಗ್ ಸರೋವರದ ಬಳಿ ಚೀನಾದಿಂದ ನಿರ್ಮಾಣ ಕಾರ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಲಡಾಖ್‌ನ ಪೂರ್ವ ಭಾಗದಲ್ಲಿನ ಬಿಕ್ಕಟ್ಟನ್ನು ಪರಿಹರಿಸಲು ಭಾರತ ಮತ್ತು ಚೀನಾ ನಡುವೆ ಮಾತುಕತೆಗಳು ನಡೆಯುತ್ತಿರುವ ಹೊತ್ತಿನಲ್ಲಿ, ಉಪಗ್ರಹಗಳ ಮೂಲಕ ಸೆರೆಹಿಡಿದಿರುವ ಕೆಲವು ಹೊಸ ಚಿತ್ರಗಳು ಸೋಮವಾರ ಬಿಡುಗಡೆ ಆಗಿದ್ದು, ಪ್ಯಾಂಗಾಂಗ್ ತ್ಸೊ ಸರೋವರದ ಉತ್ತರ ದಂಡೆಯ ಬಳಿ ಚೀನಾ ದೇಶದವರು ಭಾರಿ ಪ್ರಮಾಣದಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆಯನ್ನು ಕೈಗೊಂಡಿರುವುದು ಅದರಲ್ಲಿ ಕಾಣುತ್ತಿದೆ.

ಭಾರತ ಮತ್ತು ಚೀನಾದ ಗಡಿ ಪ್ರದೇಶದಲ್ಲಿ, ಆಯಕಟ್ಟಿನ ಸ್ಥಳದಲ್ಲಿ ಈ ಸರೋವರ ಇದೆ. ಅಮೆರಿಕ ಮೂಲದ ಮ್ಯಾಕ್ಸರ್ ಟೆಕ್ನಾಲಜೀಸ್ ಅಕ್ಟೋಬರ್ 9ರಂದು ಸೆರೆಹಿಡಿದಿರುವ ಚಿತ್ರಗಳು 70ಕ್ಕೂ ಹೆಚ್ಚು ಕಟ್ಟಡಗಳನ್ನು ನಿರ್ಮಾಣ ಮಾಡಿರುವುದನ್ನು ತೋರಿಸಿದೆ. ಈ ಕಟ್ಟಡಗಳು ವಾಸ್ತವ ನಿಯಂತ್ರಣ ರೇಖೆಯಿಂದ (ಎಲ್‌ಎಸಿ) ಸರಿಸುಮಾರು 38 ಕಿ.ಮೀ. ಪೂರ್ವಕ್ಕೆ ಇವೆ. ಈ ಪ್ರದೇಶವು ಚೀನಾಕ್ಕೆ ಸೇರಿದೆ.

ವಿವಾದಕ್ಕೆ ಒಳಗಾಗಿರುವ ಸ್ಥಳಗಳ ಸನಿಹದಲ್ಲಿ ಚೀನಾದ ಸೇನೆಯು ಹಲವು ಬಗೆಯ ಮೂಲಸೌಕರ್ಯಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದು, ಚಿತ್ರದಲ್ಲಿ ಇರುವವು ತೀರಾ ಈಚಿನ ನಿರ್ಮಾಣ ಕಾರ್ಯಗಳು. ಉಪಗ್ರಹಗಳ ಮೂಲಕ ತೆಗೆಯಲಾಗಿರುವ ಚಿತ್ರಗಳನ್ನು ಒಳಗೊಂಡು, ಎರಡು ಮಾಧ್ಯಮ ಸಂಸ್ಥೆಗಳು ಹೊಸ ನಿರ್ಮಾಣ ಕಾರ್ಯಗಳ ಬಗ್ಗೆ ವರದಿ ಮಾಡಿವೆ.

'ಪ್ಯಾಂಗಾಂಗ್ ತ್ಸೊ ಸರೋವರ ಉತ್ತರ ದಂಡೆಯಿಂದ ಕೇವಲ 8.5 ಕಿ.ಮೀ ದೂರದಲ್ಲಿ ಚೀನಾ ಭರದಿಂದ ನಿರ್ಮಾಣ ಚಟುವಟಿಕೆಗಳನ್ನು ಕೈಗೊಂಡಿದೆ. ಅಲ್ಲಿ 2024ರ ಏಪ್ರಿಲ್‌ನಲ್ಲಿ ಕೆಲಸ ಶುರುವಾದ ನಂತರದಲ್ಲಿ 100ಕ್ಕೂ ಹೆಚ್ಚು ಕಟ್ಟಡಗಳು ನಿರ್ಮಾಣ ಆಗಿವೆ' ಎಂದು ತಕ್ಷಶಿಲಾ ಇನ್‌ಸ್ಟಿಟ್ಯೂಷನ್‌ನ ಪ್ರೊಫೆಸರ್ ವೈ. ನಿತಿಯಾನಂದಂ ಅವರು ಹೇಳಿರುವುದಾಗಿ ಮಾಧ್ಯಮ ವರದಿಯೊಂದರಲ್ಲಿ ಉಲ್ಲೇಖಿಸಲಾಗಿದೆ.

ಹೊಸ ಬೆಳವಣಿಗೆಗಳ ವಿಚಾರವಾಗಿ ಭಾರತದ ಅಧಿಕಾರಿಗಳಿಂದ ಪ್ರತಿಕ್ರಿಯೆ ಬಂದಿಲ್ಲ.

ಕೂರ್ಮರಾವ್ ಸಮಗ್ರ ಶಿಕ್ಷಣ ಯೋಜನಾ ನಿರ್ದೇಶಕ

ಬೆಂಗಳೂರು: ಐಎಎಸ್ ಅಧಿಕಾರಿ ಎಂ.ಕೂರ್ಮರಾವ್ ಅವರನ್ನು ಸಮಗ್ರ ಶಿಕ್ಷಣ ಕರ್ನಾಟಕದ ಯೋಜನಾ ನಿರ್ದೇಶಕ ಹುದ್ದೆಗೆ ವರ್ಗಾಯಿಸಲಾಗಿದೆ.

ಈವರೆಗೆ ಅವರು ಕೇಂದ್ರ ಚುನಾವಣಾ ಆಯೋಗದ ಕರ್ನಾಟಕ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯಲ್ಲಿ ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿಯಾಗಿದ್ದರು.

ದುರ್ಗಾ ಮೆರವಣಿಗೆ ವೇಳೆ ಕಲ್ಲು ತೂರಾಟ: 7 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಸಂಕೇಶ್ವರ (ಬೆಳಗಾವಿ ಜಿಲ್ಲೆ): ಸೋಲಾಪುರ ಗ್ರಾಮದಲ್ಲಿ ಭಾನುವಾರ ರಾತ್ರಿ ದುರ್ಗಾಮಾತೆ ಮೂರ್ತಿ ವಿಸರ್ಜನೆ ಮಾಡಿ ಮರಳುವಾಗ, ಅನ್ಯ ಕೋಮಿನ ಯುವಕರು ನಡೆಸಿದ ಕಲ್ಲು ತೂರಾಟದಿಂದ ಏಳು ಭಕ್ತರಿಗೆ ತೀವ್ರ ಪೆಟ್ಟಾಗಿದೆ. ಒಂದು ಕಾರು ಮತ್ತು ನಾಲ್ಕು ಬೈಕು ಜಖಂಗೊಂಡಿವೆ.

ನವರಾತ್ರಿ ಪ್ರಯುಕ್ತ ಗ್ರಾಮದಲ್ಲಿ ಪ್ರತಿಷ್ಠಾಪಿಸಿದ್ದ ದುರ್ಗಾಮಾತೆ ಮೂರ್ತಿಯ ಮೆರವಣಿಗೆ ವೇಳೆ ಅನ್ಯಕೋಮಿನ ಯುವಕರ ಗುಂಪು ಏಕಾಏಕಿ ಕಲ್ಲು ತೂರಾಟ ನಡೆಸಿತು.

ವಿಷಯ ತಿಳಿದು ರಾತ್ರಿಯೇ ಗ್ರಾಮಕ್ಕೆ ಬಂದ ಪೊಲೀಸರು, ಘಟನೆ ಕುರಿತು ಮಾಹಿತಿ ಪಡೆದರು. ಗ್ರಾಮದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ. ಸೋಮವಾರ ಸಭೆ ನಡೆಸಿದ ಶಾಸಕ ನಿಖಿಲ್ ಕತ್ತಿ, ಜನರಿಗೆ ಧೈರ್ಯ ಹೇಳಿದರು.

'ಶಾಂತಿಯಿಂದ ಇದ್ದ ಊರಿನಲ್ಲಿ ಕೋಮು ಸಂಘರ್ಷ ಉಂಟಾಗಿದ್ದು ದುಃಖ ತಂದಿದೆ. ಪೊಲೀಸರು ದುಷ್ಕರ್ಮಿಗಳನ್ನು ಶೀಘ್ರ ಬಂಧಿಸಬೇಕು' ಎಂದು ಗ್ರಾಮಸ್ಥರು ಆಗ್ರಹಿಸಿದರು. ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರುತಿ, ಡಿವೈಎಸ್‌ಪಿ ಡಿ.ಎಚ್.ಮುಲ್ಲಾ, ಸಿಪಿಐ ಶಿವಶರಣ ಅವಜಿ ಮತ್ತಿತರರು ಇದ್ದರು.

ಹುಲ್ಲುಗಾವಲಿಗೆ ಸಂರಕ್ಷಿತ ಮೀಸಲು ಪ್ರದೇಶದ ರಕ್ಷಣೆ ● ಹಸಿರು ತಾಣದ ಪೋಷಣೆಗೆ ಇವೆ ಹತ್ತಾರು ದಾರಿ

‘ಹಸಿರು ಪಟ್ಟ’ ಉಳಿಸಿಕೊಂಡ ಹೆಸರಘಟ್ಟ

● ಗಾಣಧಾಳು ಶ್ರೀಕಂಠ

ಬೆಂಗಳೂರು: ರಾಜಧಾನಿಯ ಒಳಗಡೆಯೇ ಇರುವ 5,010 ಎಕರೆಯಷ್ಟು ಬೃಹತ್ ವಿಸ್ತೀರ್ಣದ ಹೆಸರಘಟ್ಟ ಹುಲ್ಲುಗಾವಲಿಗೆ ‘ಸಂರಕ್ಷಿತ ಮೀಸಲು ಪ್ರದೇಶ’ದ ಮಾನ್ಯತೆ ನೀಡುವ ಪ್ರಸ್ತಾವಕ್ಕೆ ರಾಜ್ಯ ವನ್ಯಜೀವಿ ಮಂಡಳಿ ಒಪ್ಪಿಗೆ ನೀಡಿದೆ. ಇದರಿಂದಾಗಿ ಬೆಂಗಳೂರಿನ ಮಡಿಲಲ್ಲಿ ನೂರಾರು ಪ್ರಭೇದದ ಪಕ್ಷಿ ಹಾಗೂ ಪ್ರಾಣಿ ಸಂಕುಲಕ್ಕೆ ಆಶ್ರಯ ಕಲ್ಪಿಸುವ ಹಸಿರು ತಾಣವೊಂದನ್ನು ಮಾನವ ಹಸ್ತಕ್ಷೇಪದಿಂದ ರಕ್ಷಿಸಿ, ಅಭಿವೃದ್ಧಿಪಡಿಸಬಹುದಾದ ಅವಕಾಶ ಗರಿಗೆದರಿದೆ.

ಬನ್ನೇರುಘಟ್ಟದ ನಂತರ ಬೆಂಗಳೂರು ಮಹಾನಗರದ ಎರಡನೇ ಅತಿ ದೊಡ್ಡ ಹಸಿರು ತಾಣ (ಗ್ರೀನ್‌ಸ್ಪೇಸ್) ಹೆಸರಘಟ್ಟದ ಹುಲ್ಲುಗಾವಲು. ಅರ್ಕಾವತಿ ನದಿ ಪಾತ್ರದಲ್ಲಿರುವ ಈ ಹುಲ್ಲುಗಾವಲಿನಲ್ಲಿ ದಶಕಗಳ ಹಿಂದೆ ‘ಕಾಂಕ್ರೀಟ್ ಕಾಡು’ ನಿರ್ಮಿಸುವ ಪ್ರಯತ್ನಗಳು ಆರಂಭವಾದವು. ಇದರಿಂದ ಆತಂಕಗೊಂಡ ಪರಿಸರ ಕಾರ್ಯಕರ್ತರು, ಹೆಸರಘಟ್ಟ ಉಳಿಸಿ, ಹುಲ್ಲುಗಾವಲನ್ನು ಸಂರಕ್ಷಿತ ಪ್ರದೇಶ ಎಂದು ಘೋಷಿಸುವಂತೆ ಒತ್ತಾಯಿಸಿ ಅಭಿಯಾನ ಆರಂಭಿಸಿದರು.

ದಶಕಗಳ ಹೋರಾಟಕ್ಕೆ ಸ್ಪಂದಿಸಿದ ವನ್ಯಜೀವಿ ಮಂಡಳಿ, ಇತ್ತೀಚೆಗೆ ವನ್ಯಜೀವಿ (ಸಂರಕ್ಷಣಾ) ಕಾಯ್ದೆ 1972ರ ಸೆಕ್ಷನ್ 3ಎ ಪ್ರಕಾರ ಹೆಸರಘಟ್ಟ ಹುಲ್ಲುಗಾವಲನ್ನು ‘ಗ್ರೇಟರ್ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು ಪ್ರದೇಶ’ ಎಂದು ಘೋಷಿಸಲು ಒಪ್ಪಿದೆ. ರಿಯಲ್ ಎಸ್ಟೇಟ್ ಚಟುವಟಿಕೆ ಮತ್ತು ಅಭಿವೃದ್ಧಿ ಹೆಸರಿನ ಹಸ್ತಕ್ಷೇಪದಿಂದ ಹುಲ್ಲುಗಾವಲನ್ನು ರಕ್ಷಿಸುವ ಹೋರಾಟಕ್ಕೆ ಯಶಸ್ಸು ದೊರಕಿದೆ.

ಹುಲ್ಲುಗಾವಲಿನ ವೈಶಿಷ್ಟ್ಯ: ಹೆಸರಘಟ್ಟ ಹುಲ್ಲುಗಾವಲನ್ನು ಪರಿಸರ ತಜ್ಞರು ಬೆಂಗಳೂರು ಮಹಾನಗರದ ‘ಆಮ್ಲಜನಕದ ತಾಣ’ ಎಂದು ಗುರುತಿಸುತ್ತಾರೆ. ಈ ಪ್ರದೇಶ ವಿಶಿಷ್ಟ ಜೀವಸಂಕುಲ, ಜೀವವೈವಿಧ್ಯದ ತಾಣವಾಗಿರುದೆ.

ನೋಟಕ್ಕೆ ಕೇವಲ ಹುಲ್ಲಿನ ಚಾದರದಂತೆ ಕಾಣುವ ಈ ಪ್ರದೇಶದಲ್ಲಿ, ಹುಲ್ಲಿನ ಪೊದೆಯಲ್ಲೇ ಗೂಡು ಕಟ್ಟಿ, ಮೊಟ್ಟೆ ಇಟ್ಟು ಸಂಸಾರ ಮಾಡುವ ನೆಲಗುಬ್ಬಿಯಂತಹ ಪಕ್ಷಿ ಪ್ರಭೇದಗಳಿವೆ. ದೊಡ್ಡ ಚುಕ್ಕಿ ಗಿಡುಗ (ಗ್ರೇಟರ್ ಸ್ಪಾಟೆಡ್ ಈಗಲ್), ಅಳಿವಿನಂಚಿನಲ್ಲಿರುವ ಲೆಸ್ಸರ್ ಫ್ಲೋರಿಕಾನ್‌ನಂತಹ ಪಕ್ಷಿಗಳೂ ಇವೆ. ಚಳಿಗಾಲದಲ್ಲಿ ರಷ್ಯಾ, ಮಧ್ಯ ಏಷ್ಯಾ ಭಾಗದಿಂದ ಪಕ್ಷಿಗಳು ವಲಸೆ ಬರುತ್ತವೆ ಎಂದು ಪಕ್ಷಿ ತಜ್ಞರು ಹೇಳುತ್ತಾರೆ. ಕಾಡುಪಾಪ (ಸ್ಲೆಂಡರ್ ಲೋರಿಸ್), ನೀರು ನಾಯಿ (ಸ್ಮೂತ್ ಕೋಟೆಡ್ ಒಟ್ಟೆರ್) ಅಂತಹ ವನ್ಯಜೀವಿಗಳ ಇರುವಿಕೆಯನ್ನು ತಜ್ಞರು ಗುರುತಿಸಿದ್ದಾರೆ.

ಬೆಂಗಳೂರಿನ ಮೂಲ ಪರಿಸರದಲ್ಲಿದ್ದಂತಹ ಸಸ್ಯ, ಕ್ರೀಟ ಪ್ರಭೇದಗಳು ಹೆಸರಘಟ್ಟದ ಹುಲ್ಲುಗಾವಲಿನಲ್ಲಿವೆ. ಹುಲ್ಲುಗಾವಲಿನ ಒಡಲಲ್ಲಿ, ಸುಮಾರು 1900 ಎಕರೆ ವಿಸ್ತೀರ್ಣದಲ್ಲಿ ಮೂರ್ನಾಲ್ಕು ಕೆರೆಗಳಿವೆ. ಕೆರೆಗಳ ಸುತ್ತ 356 ಎಕರೆ ವಿಸ್ತೀರ್ಣದಲ್ಲಿ ಹುಲ್ಲುಗಾವಲಿದೆ. (2750 ಎಕರೆ ಪಶುಸಂಗೋಪನಾ ಇಲಾಖೆಗೆ ಸೇರುತ್ತದೆ) ಈ ಹುಲ್ಲುಗಾವಲು ಸುತ್ತಲಿನ ಹಳ್ಳಿಗಳ ಜಾನುವಾರುಗಳಿಗೆ ಮೇವು ಒದಗಿಸುವ ಜೊತೆಗೆ, ಮಳೆ ನೀರನ್ನು ಹಿಡಿದು ಭೂಮಿಗೆ ಇಂಗಿಸಿ, ಅಂತರ್ಜಲ ಹೆಚ್ಚಿಸಲು ನೆರವಾಗುತ್ತಿದೆ. ಸುತ್ತ ಮುತ್ತಲಿರುವ ಜಲಮೂಲಗಳಿಗೂ ನೀರಿನ ಆಸರೆಯಾಗುತ್ತಿದೆ. ‘2021–22ರಲ್ಲಿ ಉತ್ತಮ ಮಳೆಯಾಗಿ ಇಲ್ಲಿನ ಕೆರೆಗಳು ತುಂಬಿದಾಗ, ಸುತ್ತಮುತ್ತಲಿನ 10 ಕಿ.ಮೀ ವ್ಯಾಪ್ತಿಯಲ್ಲಿ ಕೊಳವೆಬಾವಿಗಳಲ್ಲಿ ಜಲ ಮರುಪೂರಣಗೊಂಡಿತ್ತು. ಇದರಿಂದ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗಿತ್ತು' ಎಂದು ನೆನಪಿಸಿಕೊಳ್ಳುತ್ತಾರೆ ಪರಿಸರ ಕಾರ್ಯಕರ್ತ ಮಹೇಶ್‌ಭಟ್.

ಹೆಸರಘಟ್ಟ ಹುಲ್ಲುಗಾವಲಿನ ಒಂದು ನೋಟ (ಪ್ರಜಾವಾಣಿ ಸಂಗ್ರಹದಿಂದ)

ಹೆಸರಘಟ್ಟ ಪ್ರದೇಶದ ಪ್ರಾಮುಖ್ಯತೆ

- ಹುಲ್ಲುಗಾವಲಿರುವ ಪರಿಸರ ಸೂಕ್ಷ್ಮ ವಲಯ
- ಅಂತರ್ಜಲ ವೃದ್ಧಿಗೆ ಪೂರಕವಾದ ಪ್ರದೇಶ
- ದಕ್ಷಿಣ ಭಾರತದ ಪ್ರಮುಖ ಕನ್ನೌಲ್ ಹಕ್ಕಿ (ಲೆಸ್ಸೆರ್ ಫ್ಲೋರಿಕನ್), ಜವುಗು ಸೆಳೆವ (ಮಾರ್ಷ್ ಹ್ಯಾರಿಯರ್), ಮೊಂಟಾಗು ಹ್ಯಾರಿಯರ್, ನೆಲಗುಬ್ಬಿ (ಲಾರ್ಕ್) ಸೇರಿದಂತೆ 234ಕ್ಕೂ ಹೆಚ್ಚು ಪಕ್ಷಿ ಪ್ರಭೇದಗಳು ಇಲ್ಲಿವೆ
- ರಷ್ಯಾ, ಮಧ್ಯ ಏಷ್ಯಾದಿಂದ ಪಕ್ಷಿಗಳು ಇಲ್ಲಿಗೆ ವಲಸೆ ಬರುತ್ತವೆ
- ಕಾಡುಪಾಪ, ಗುಳ್ಳೇನರಿ, ಮುಂಗುಸಿಯಂತಹ ಹಲವು ವನ್ಯಜೀವಿಗಳ ಆವಾಸಸ್ಥಾನ
- ಅಪರೂಪದ ಲೈಲ್ಯಾಕ್ ಸಿಲ್ವರ್ ಲೈನ್ ಚಿಟ್ಟೆಗಳು ಈ ಪ್ರದೇಶದಲ್ಲಿವೆ

‘ಹೆಸರಘಟ್ಟ’ದಲ್ಲಿನ ಜೀವವೈವಿಧ್ಯ

ಜೀವವೈವಿಧ್ಯ	ಪ್ರಭೇದಗಳ ಸಂಖ್ಯೆ
ಸ್ಥಳೀಯ ಸಸ್ಯ ಪ್ರಭೇದಗಳು	39
ಸಸ್ತನಿಗಳು	10
ಸರೀಸೃಪಗಳು	7
ಪಕ್ಷಿ ಪ್ರಭೇದಗಳು	234
ಚಿಟ್ಟೆ ಪ್ರಭೇದಗಳು	101
ಉಭಯಚರಗಳು	13
ಇತರೆ ಕೀಟಗಳು	395

2022ರ ಪ್ರಕಾರ (ಮಾಹಿತಿ: ಕೆ.ಎಸ್.ಶೇಷಾದ್ರಿ)

‘ಮೀಸಲು’ ಅನುಷ್ಠಾನದ ನಂತರ: ಹುಲ್ಲುಗಾವಲು ಪ್ರದೇಶದಲ್ಲಿ ‘ಅನಗತ್ಯ ನಿರ್ಮಾಣ ಚಟುವಟಿಕೆ’ಗಳಿಗೆ ಕಡಿವಾಣ ಬೀಳುತ್ತದೆ. ಇಷ್ಟ ಬಂದ ಹಾಗೆ ಭೂಬಳಕೆ ಮಾಡುವುದಕ್ಕೆ ನಿರ್ಬಂಧ ವಿಧಿಸಬಹುದು. ಮಳೆ ನೀರು ಇಂಗುವುದರಿಂದ ಹುಲ್ಲು ಸಮೃದ್ಧವಾಗುತ್ತದೆ. ಸುತ್ತಮುತ್ತಲಿನ ಹಳ್ಳಿಗಳ ಜಾನುವಾರುಗಳಿಗೆ ಸಮೃದ್ಧ ಮೇವು ಸಿಗುತ್ತದೆ. ಅಂತರ್ಜಲದ ರೂಪದಲ್ಲಿ ಕೃಷಿ ಚಟುವಟಿಕೆಗಳಿಗೆ ನೀರು ಲಭ್ಯವಾಗುತ್ತದೆ. ಕೃಷಿಯಲ್ಲಿ ಪರಾಗಸ್ಪರ್ಶದಂತಹ ಚಟುವಟಿಕೆಗಳಿಗೆ ಪೂರಕವಾಗುವ ಸ್ಥಳೀಯ ಕೀಟ ಪ್ರಭೇದಗಳ ಸಂಖ್ಯೆ ವೃದ್ಧಿಯಾಗುತ್ತದೆ. ಕೀಟಗಳನ್ನು ತಿನ್ನಲು ಬರುವ ಪಕ್ಷಿಗಳ ಸಂಖ್ಯೆಯೂ ಹೆಚ್ಚಾಗುತ್ತದೆ. ಈ ಪಕ್ಷಿಗಳು ಬೆಳೆಗಳನ್ನು ಕಾಡುವ ಕೀಟಗಳನ್ನೂ ಹಿಡಿದು ತಿನ್ನುತ್ತವೆ. ಪರೋಕ್ಷವಾಗಿ ಕೀಟ ನಿಯಂತ್ರಕವಾಗಿ ಕೆಲಸ ಮಾಡುತ್ತವೆ ಎಂಬುದು ಪರಿಸರ ಕಾರ್ಯಕರ್ತ ಕೆ.ಎಸ್. ಶೇಷಾದ್ರಿ ಅಭಿಮತ.

ಒಟ್ಟಾರೆ ಹುಲ್ಲುಗಾವಲಿನ ಸಂರಕ್ಷಣೆಯಿಂದ ಹೆಸರಘಟ್ಟ ಸುತ್ತಮುತ್ತಲಿನ ಜನ–ಜಾನುವಾರುಗಳಿಗೆ ಮಾತ್ರವಲ್ಲ, ಹುಲ್ಲುಗಾವಲಿನ ‘ಎಲ್ಲ ಪಾಲುದಾರರಿಗೆ’ ಮತ್ತು ಉತ್ತರ ಭಾಗದ ಬೆಂಗಳೂರಿಗರಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಹಲವು ಅನುಕೂಲಗಳಾಗುತ್ತವೆ ಎಂಬುದು ಪರಿಸರ ಕಾರ್ಯಕರ್ತರ ಅಭಿಪ್ರಾಯವಾಗಿದೆ.

ಬಾಲದ ದೇವಕ್ಕಿ

ಸಣ್ಣ ಕುಟ್ರ

ಕಬ್ಬಕ್ಕಿ

ಪಕ್ಷಿ ಚಿತ್ರಗಳು: ಕೆ.ಎಸ್. ಶೇಷಾದ್ರಿ

ಅಂಕಿ ಅಂಶ

356 ಎಕರೆ ಹುಲ್ಲುಗಾವಲು | 1,904 ಎಕರೆ ಮೂರು ಕೆರೆಗಳ ವಿಸ್ತೀರ್ಣ | 1,000 ಎಕರೆ ಕುರುಚಲು ಅರಣ್ಯ

‘ಗಣಿಗಾರಿಕೆ, ನಿರ್ಮಾಣಕ್ಕೆ ನಿರ್ಬಂಧ’

‘ಹೆಸರಘಟ್ಟ ಹುಲ್ಲುಗಾವಲನ್ನು ಸಂರಕ್ಷಿತ ಮೀಸಲು ಪ್ರದೇಶ ಎಂದು ಅಧಿಸೂಚನೆ ಹೊರಡಿಸುತ್ತಿದ್ದಂತೆಯೇ ಈ ಪ್ರದೇಶವು ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಗೆ ಬರುತ್ತದೆ. ಆ ಬಳಿಕ ಅಲ್ಲಿ ಯಾವುದೇ ರೀತಿಯ ಗಣಿಗಾರಿಕೆ ಮತ್ತು ನಿರ್ಮಾಣ ಚಟುವಟಿಕೆಗಳಿಗೆ ಅವಕಾಶ ಇರುವುದಿಲ್ಲ’ ಎನ್ನುತ್ತಾರೆ ನಿವೃತ್ತ ಐಎಫ್‌ಎಸ್ ಅಧಿಕಾರಿ ಯು.ವಿ. ಸಿಂಗ್.

‘ಸಂರಕ್ಷಿತ ಪ್ರದೇಶದ ಗಡಿ ಗುರುತಿಸುವ ಜೊತೆಗೆ ಬಫರ್ ವಲಯವನ್ನೂ ಗುರುತಿಸಬೇಕಾಗುತ್ತದೆ. ಈಗಾಗಲೇ ಅಲ್ಲಿ ಮರಳು, ಕಲ್ಲು ಕ್ವಾರಿಗಳಿಗೆ ಅನುಮತಿ ನೀಡಿದ್ದರೆ ರದ್ದುಗೊಳಿಸಬೇಕಾಗುತ್ತದೆ. ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿದ್ದು, ನಿರ್ಮಾಣ ಕಾಮಗಾರಿ ಆರಂಭವಾಗದೇ ಇದ್ದಲ್ಲಿ ಅಂತಹ ಎಲ್ಲ ನಕ್ಷೆ ಅನುಮೋದನೆಗಳನ್ನೂ ರದ್ದುಮಾಡಬೇಕಾಗುತ್ತದೆ. ಈ ಪ್ರದೇಶದಲ್ಲಿ ಯಾವುದೇ ರೀತಿಯ ಭೂ ಮಂಜೂರಾತಿಗೆ ಅವಕಾಶ ಇರುವುದಿಲ್ಲ’ ಎಂದು ತಿಳಿಸಿದರು.

ಸಂರಕ್ಷಿತ ಪ್ರದೇಶದಲ್ಲಿ ಪಕ್ಷಿ ವೀಕ್ಷಣೆಗೆ ದೂರದರ್ಶಕದ ವ್ಯವಸ್ಥೆ ಮಾಡಬಹುದು. ಮಾಹಿತಿ ನೀಡಲು ಗೈಡ್‌ಗಳನ್ನೂ ನೇಮಿಸಬಹುದು. ಆದರೆ, ಈ ಚಟುವಟಿಕೆಗಳು ಸಂರಕ್ಷಿತ ಪ್ರದೇಶದ ಕೇಂದ್ರ ವಲಯದಿಂದ ದೂರವಿರಬೇಕು ಎಂದು ಅವರು ಸಲಹೆ ನೀಡಿದರು.

ಮುಂದಿನ ನಡೆ ಹೀಗಿರಲಿ..

ತಲೆತಲಾಂತರದಿಂದ ಈ ಭಾಗದಲ್ಲಿ ಪಶುಸಂಗೋಪನೆ, ಮೀನುಗಾರಿಕೆ ಮಾಡುತ್ತಿರುವವರಿಗೆ ನಿರ್ಬಂಧ ವಿಧಿಸದಂತಹ ನಿಯಮಗಳನ್ನು ರೂಪಿಸಬೇಕು. ಕಾನೂನು ಪ್ರಕಾರ, ಸ್ಥಳೀಯ ಪಂಚಾಯಿತಿ ಸದಸ್ಯರು ಸೇರಿ ಎಲ್ಲ ‘ಪಾಲುದಾರರ’ ಪ್ರತಿನಿಧಿಗಳಿರುವ ಸಮಿತಿ ರಚನೆಯಾಗಬೇಕು. ವ್ಹೀಲಿ, ಡ್ರಿಫ್ಟಿಂಗ್, ಕುಡಿತ, ಜೂಜು ಇತ್ಯಾದಿ ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು.

ಮಹೇಶ್ ಭಟ್, ಪರಿಸರ ಕಾರ್ಯಕರ್ತ

ಸ್ಥಳೀಯರ ಓಡಾಟಕ್ಕೆ ಮುಕ್ತ ಅವಕಾಶವಿರಬೇಕು. ಸ್ಥಳೀಯರನ್ನೊಳಗೊಂಡ ಸಂರಕ್ಷಣಾ ಕ್ರಮಗಳಿಗೆ ಆದ್ಯತೆ ನೀಡಬೇಕು.

ವಿಜಯ್ ನಿಶಾಂತ್, ವೃಕ್ಷ ಫೌಂಡೇಷನ್

ಹೆಸರಘಟ್ಟ ಹುಲ್ಲುಗಾವಲು ಪ್ರದೇಶದಲ್ಲಿ ಅನಗತ್ಯ ವಾಹನಗಳ ಸಂಚಾರ ಹೆಚ್ಚುತ್ತಿದ್ದು, ಅವುಗಳಿಗೆ ಕಡಿವಾಣ ಹಾಕಬೇಕು. ಜನರಿಗೆ ಹುಲ್ಲುಗಾವಲಿನ ಮಹತ್ವ ತಿಳಿಸಲು ತರಬೇತಿ ಕೇಂದ್ರ ಆರಂಭಿಸಬೇಕು. ಈ ಮೂಲಕ ಪರಿಸರ ಸಂರಕ್ಷಣೆಯಲ್ಲಿ ಜನರೂ ಒಳಗೊಳ್ಳುವಂತಾಗಬೇಕು.

ಶೇಷಾದ್ರಿ ರಾಮಸ್ವಾಮಿ, ಪರಿಸರ ಕಾರ್ಯಕರ್ತ

ಕಾಲೇಜಿಗೆ ಸಿ.ಎ ನಿವೇಶನ ಹಂಚಿಕೆ ಪತ್ರ

ಕೆಂಗೇರಿ ಕಾಲೇಜಿಗೆ ಪತ್ರ; ಮಾರುಕಟ್ಟೆ ದರದಲ್ಲಿ ₹ 21 ಕೋಟಿಗೆ ಗುತ್ತಿಗೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ದಶಕದ ಹಿಂದೆ ಕೆಂಗೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಮೀಸಲಿಟ್ಟಿದ್ದ ನಾಗರಿಕ ಸೌಲಭ್ಯ (ಸಿಎ) ನಿವೇಶನದ ಹಂಚಿಕೆ ಪತ್ರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅ.14ರಂದು ನೀಡಿದೆ.

ಸರ್ ಎಂ. ವಿಶ್ವೇಶ್ವರಯ್ಯ (ಎಸ್‌ಎಂವಿ) ಬಡಾವಣೆಯ ಒಂದನೇ ಬ್ಲಾಕ್‌ನಲ್ಲಿ ಸಂಖ್ಯೆ 3ರ ನಾಗರಿಕ ಸೌಲಭ್ಯ (ಸಿಎ) ನಿವೇಶನವನ್ನು ಸರ್ಕಾರಿ ಕಾಲೇಜಿಗಾಗಿ ಮೀಸಲಿಡಲಾಗಿತ್ತು.

ಆದರೂ, ಶಿಕ್ಷಣ ಇಲಾಖೆಗೆ ಬಿಡಿಎ ಈ ನಿವೇಶನವನ್ನು ಹಂಚಿಕೆ ಮಾಡಿಲ್ಲ ಎಂದು ‘ಪ್ರಜಾವಾಣಿ’ಯ ಅಕ್ಟೋಬರ್ 3ರ ಸಂಚಿಕೆಯಲ್ಲಿ ‘ಕಾಲೇಜಿಗೆ ನಿವೇಶನ ನೀಡಲು ನಿರ್ಲಕ್ಷ್ಯ’ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಲಾಗಿತ್ತು.

‘ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಸಹಿ ಬಾಕಿ ಇದ್ದು, ಶೀಘ್ರ ಅವರು ಸಹಿ ಹಾಕಲಿದ್ದಾರೆ’ ಎಂದು ಬಿಡಿಎ ಆಯುಕ್ತ ಎನ್. ಜಯರಾಂ ತಿಳಿಸಿದ್ದರು. ಈ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಿ, ಅಕ್ಟೋಬರ್ 8ರಂದು ಸಿದ್ಧವಾಗಿರುವ ಹಂಚಿಕೆ ಪತ್ರವನ್ನು ಕಾಲೇಜು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೋಮವಾರ ಹಸ್ತಾಂತರಿಸಲಾಗಿದೆ.

ಮಾರುಕಟ್ಟೆ ದರ: 19,109.91 ಚದರ ಮೀಟರ್ ವಿಸ್ತೀರ್ಣದ ಸಿಎ ನಿವೇಶನಕ್ಕೆ ಪ್ರತಿ ಚದರ ಮೀಟರ್‌ಗೆ ₹9,750 ದರ ವಿಧಿಸಲಾಗಿದೆ. ₹3.35 ಕೋಟಿ ಜಿಎಸ್‌ಟಿ ಸೇರಿದಂತೆ ಒಂದೇ ಕಂತಿನಲ್ಲಿ ₹21.98 ಕೋಟಿ ಪಾವತಿಸಲು ಹಂಚಿಕೆ ಪತ್ರದಲ್ಲಿ ಸೂಚಿಸಲಾಗಿದೆ.

30 ವರ್ಷಕ್ಕೆ ಗುತ್ತಿಗೆ ನೀಡಲಾಗುತ್ತಿದ್ದು, ₹60.80 ಲಕ್ಷ ಜಿಎಸ್‌ಟಿ ಸೇರಿದಂತೆ ಪ್ರತಿ ವರ್ಷ ₹3.98 ಕೋಟಿ ಗುತ್ತಿಗೆ ಹಣ ಪಾವತಿಸಬೇಕಿದೆ. ಇದಲ್ಲದೆ, ಪ್ರತಿ ವರ್ಷ ಹೆಚ್ಚುವರಿಯಾಗಿ ₹57 ಸಾವಿರ ಪಾವತಿಸಲು ಹೇಳಲಾಗಿದೆ.

‘ಬಿಡಿಎ ಬಡಾವಣೆಗಳಲ್ಲಿ ಹಂಚಿಕೆಯಾಗಿರುವ ನಿವೇಶನಗಳ ದರದ ಶೇ 20ರಷ್ಟಕ್ಕೆ ಆಸ್ಪತ್ರೆ, ಶಿಕ್ಷಣ, ಬೆಸ್ಕಾಂ ಸೇರಿದಂತೆ ಸರ್ಕಾರದ ಇಲಾಖೆಗಳಿಗೆ ಸಿಎ ನಿವೇಶನ ನೀಡಬೇಕು. ಸರ್ ಎಂ.ವಿಶ್ವೇಶ್ವರಯ್ಯ (ಎಸ್‌ಎಂವಿ) ಬಡಾವಣೆಯ ಒಂದನೇ ಬ್ಲಾಕ್‌ನಲ್ಲಿ ಸರ್ಕಾರಿ ಕಾಲೇಜಿಗಾಗಿ ಎರಡು ದಶಕಗಳ ಹಿಂದೆ ಮೀಸಲಿಟ್ಟಿರುವ ಈ ಸಿಎ ನಿವೇಶನಕ್ಕೆ ಈಗಿನ ಮಾರುಕಟ್ಟೆ ದರದಲ್ಲಿ ಶಿಕ್ಷಣ ಇಲಾಖೆಗೆ ಹಂಚಿಕೆ ಪತ್ರ ನೀಡಿರುವುದು ಸರಿಯಲ್ಲ’ ಎಂದು ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆಯ ಅಧ್ಯಕ್ಷ ಶಿವಕುಮಾರ್ ದೂರಿದರು.



ಕೆಂಗೇರಿ ಪ್ರಥಮ ದರ್ಜೆ ಕಾಲೇಜಿಗೆ ಬಿಡಿಎ ನೀಡಿರುವ ಹಂಚಿಕೆ ಪತ್ರ

ಚನ್ನಪಟ್ಟಣ: ಎನ್‌ಡಿಎ ಅಭ್ಯರ್ಥಿ ವಾರದಲ್ಲಿ ಅಂತಿಮ

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ (ಹಾಸನ ಜಿಲ್ಲೆ): ‘ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಎನ್‌ಡಿಎ ಅಭ್ಯರ್ಥಿಯನ್ನು ಕಣಕ್ಕಿಳಿಸಲಾಗುವುದು. ದೆಹಲಿಯಲ್ಲಿ ಬಿಜೆಪಿ ನಾಯಕರ ಜೊತೆಗೆ ಚರ್ಚಿಸಿ ವಾರದಲ್ಲಿ ಹೆಸರು ಅಂತಿಮಗೊಳಿಸಲಾಗುವುದು’ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಸೋಮವಾರ ಇಲ್ಲಿ ತಿಳಿಸಿದರು.

ತಾಲ್ಲೂಕಿನ ಬೀದರಕ್ಕ ಗ್ರಾಮದಲ್ಲಿ ಕೊಳಲು ಗೋಪಾಲಕೃಷ್ಣ ದೇವಾಲಯ ಉದ್ಘಾಟಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಚನ್ನಪಟ್ಟಣದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅಭ್ಯರ್ಥಿಯಾದರೆ ನಾನೂ ಅಭ್ಯರ್ಥಿ ಆಗಲೇಬೇಕಲ್ಲ? ಇನ್ನೂ ಹಲವರ ಹೆಸರುಗಳಿವೆ’ ಎಂದರು.

ನವೆಂಬರ್‌ನಲ್ಲಿ 7 ಫೆಲೊಗಳಿಂದ ಸಮಸ್ಯೆಗೆ ಪರಿಹಾರ

ಹವಾಮಾನ ಕ್ರಿಯಾ ಕೋಶಕ್ಕೆ 500 ಸ್ನೇಹಿತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹವಾಮಾನ ಕ್ರಿಯಾಯೋಜನೆಯನ್ನು ಕಾರ್ಯಗತಗೊಳಿಸಲು ಹವಾಮಾನ ಕ್ರಿಯಾ ಕೋಶಕ್ಕೆ (ಸಿಎಸಿ) 500 ‘ಸ್ನೇಹಿತರು’ ಕೈಜೋಡಿಸಿದ್ದಾರೆ.

ಹವಾಮಾನಕ್ಕೆ ಸಂಬಂಧಿಸಿದಂತೆ ನಗರದಲ್ಲಿ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದ್ದು, ನಾಗರಿಕರು, ನಿವಾಸಿ ಕಲ್ಯಾಣ ಸಂಘಗಳು, ಸಾಮಾಜಿಕ, ಪರಿಸರ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳೂ ಭಾಗವಹಿಸಬಹುದು. bit.ly/friendsofcac ಲಿಂಕ್ ಮೂಲಕ ನೋಂದಣಿ ಮಾಡಿಕೊಳ್ಳಬಹುದು.

‘ಇದುವರೆಗೂ 500 ‘ಸಿಎಸಿ ಸ್ನೇಹಿತರು’ ಕೈಜೋಡಿಸಿದ್ದಾರೆ ಎಂದು ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ತಿಳಿಸಿದ್ದಾರೆ.

ಬೆಂಗಳೂರು ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದ್ದು, ಹಲವು ಬದಲಾವಣೆ ತರಲು ಒತ್ತು ನೀಡಲಾಗಿದೆ. ಹಸಿರು ಮನೆ ಅನಿಲ ಹೊರಸೂಸುವಿಕೆ ತಗ್ಗಿಸಲು ಮತ್ತು ಹವಾಮಾನ ವೈಪರೀತ್ಯದಿಂದ ಉಂಟಾಗುವ ಅಪಾಯಗಳಿಗೆ ನಗರದ ಸ್ಥಿತಿಸ್ಥಾಪಕತ್ವ ನಿರ್ಮಿಸಲು ಬೆಂಗಳೂರು ಹವಾಮಾನ ಕ್ರಿಯೆ ಮತ್ತು ಸ್ಥಿತಿಸ್ಥಾಪಕತ್ವ ಯೋಜನೆಯಿಂದ (ಬಿಸಿಎಪಿ) ಸಮಗ್ರ ವಿಧಾನವನ್ನು ಪ್ರಾರಂಭಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಏಳು ಫೆಲೊಗಳು: ಹೊಸ ಆಲೋಚನೆ, ಕೌಶಲ ಹಾಗೂ ನಾವೀನ್ಯಗಳಿಂದ ಹವಾಮಾನ ಬದಲಾವಣೆ ಹಾಗೂ ನಾಗರಿಕರ ಸಮಸ್ಯೆಗಳನ್ನು ಪರಿಹರಿಸಲು ಹವಾಮಾನ ಕ್ರಿಯಾ ಕೋಶಕ್ಕೆ ಸಹಾಯ ಮಾಡಲು ಏಳು ಫೆಲೊಗಳನ್ನು ಆಯ್ಕೆ ಮಾಡಲಾಗಿದೆ. ಲಿಖಿತ ಪರೀಕ್ಷೆ, ಗುಂಪು ಚರ್ಚೆ ಮತ್ತು ಸಂದರ್ಶನ ಸೇರಿದಂತೆ ಸ್ಪರ್ಧಾತ್ಮಕ ಮತ್ತು ಪಾರದರ್ಶಕ ಪ್ರಕ್ರಿಯೆಯಲ್ಲಿ ಇವರನ್ನು ಆಯ್ಕೆ ಮಾಡಲಾಗಿದ್ದು, ನವೆಂಬರ್‌ನಿಂದ ಕಾರ್ಯ ನಿರ್ವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಹವಾಮಾನ ಕ್ರಿಯಾ ಕೋಶಕ್ಕೆ ಪ್ರತ್ಯೇಕ ವೆಬ್‌ಸೈಟ್ (https://apps.bbmpgov.in/bcap/) ರೂಪಿಸಿದ್ದು, ಸಂಪನ್ಮೂಲ, ಸಭೆ ವಿವರ, ಚಟುವಟಿಕೆಗಳು ಸೇರಿದಂತೆ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತದೆ ಎಂದಿದ್ದಾರೆ.

ಮಾದಿಗ ಮತ ಸೆಳೆಯಲು ಪಕ್ಷಗಳ ಪ್ರಯತ್ನ

ಒಳ ಮೀಸಲಾತಿ ಜಾರಿಗೆ ವಿಳಂಬ ಬೇಡ: ಕೆಪಿಸಿಸಿ ಉಪಾಧ್ಯಕ್ಷ ಎಚ್‌.ಆಂಜನೇಯ ಒತ್ತಾಯ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಒಳ ಮೀಸಲಾತಿ ಜಾರಿಗೆ ಕೆಲವು ಶಕ್ತಿಗಳು ಅಡ್ಡಿಯುಂಟು ಮಾಡುತ್ತಿವೆ. ಇದರಿಂದ ಸಾಂಪ್ರದಾಯಿಕ ಮಾದಿಗ ಮತ ಸೆಳೆಯಲು ಕೆಲ ರಾಜಕೀಯ ಪಕ್ಷಗಳು ಯತ್ನಿಸುತ್ತಿವೆ. ಮುಖ್ಯಮಂತ್ರಿ ಇದಕ್ಕೆ ಅವಕಾಶ ನೀಡದೇ ಆದಷ್ಟು ಬೇಗ ಒಳ ಮೀಸಲಾತಿ ಜಾರಿಗೊಳಿಸಲಿ’ ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್‌.ಆಂಜನೇಯ ಕೋರಿದರು.

‘ತೆಲಂಗಾಣ ಮುಖ್ಯಮಂತ್ರಿ ರೇವಂತರೆಡ್ಡಿ ಅವರು 2 ತಿಂಗಳೊಳಗೆ ಒಳ ಮೀಸಲಾತಿ ಜಾರಿಗೊಳಿಸುವ ನಿರ್ಧಾರ ಕೈಗೊಂಡಿದ್ದಾರೆ. ಅಲ್ಲಿಯವರೆಗೆ ಎಲ್ಲ ನೇಮಕಾತಿ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಕ್ರಮಕೈಗೊಳ್ಳಬೇಕು. ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿಗೊಳಿಸಲು ಬದ್ಧವಾಗಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಔದಾರ್ಯ ಪ್ರದರ್ಶಿಸುತ್ತಾರೆ ಎಂಬ ವಿಶ್ವಾಸವಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಹೇಳಿದರು.

‘ಒಳ ಮೀಸಲಾತಿ ಸಂಬಂಧ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಮಾದಿಗ ಸಮುದಾಯದ ಭಾಗ್ಯದ ಬಾಗಿಲು ತೆರೆಸಿದೆ. 30 ವರ್ಷಗಳ ನಿರಂತರ ಹೋರಾಟಕ್ಕೆ ಫಲ ಸಿಕ್ಕಿದೆ. ಅಸ್ಪೃಶ್ಯರಲ್ಲೇ ಅಸ್ಪೃಶ್ಯರಾಗಿರುವ ಮಾದಿಗ ಸಮುದಾಯಕ್ಕೆ ನ್ಯಾಯ ಒದಗಿಸುವುದು ಕಾಂಗ್ರೆಸ್ ಸರ್ಕಾರದ ಕರ್ತವ್ಯ. ಒಳ ಮೀಸಲಾತಿ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯೂ ಆಗಿದ್ದು, ಆದಷ್ಟು ಬೇಗ ಜಾರಿಯಾಗಲಿದೆ’ ಎಂದರು.

‘ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷಾ ವರದಿಯನ್ನೂ ರಾಜ್ಯ ಸರ್ಕಾರ ಜಾರಿಗೊಳಿಸಬೇಕು. ಈ ಎರಡು ವಿಷಯ ಮುಂದಿನ ಸಚಿವ ಸಂಪುಟ ಸಭೆಯ ಮುಂದೆ ಬರುತ್ತಿದ್ದು, ಜಾರಿಗೊಳಿಸುವ ನಿರ್ಧಾರ ಕೈಗೊಳ್ಳುವ ಭರವಸೆ ಇದೆ. ನಾನು ಸಚಿವನಾಗಿದ್ದಾಗ ಆಯೋಗ ಸಮೀಕ್ಷಾ ವರದಿಯನ್ನು ಪೂರ್ಣವಾಗಿ ಸಿದ್ಧಗೊಳಿಸಿರಲಿಲ್ಲ’ ಎಂದರು.

‘ಒಳಮೀಸಲಾತಿ ಜಾರಿಗೆ ಹೋರಾಟ ನಡೆಸುತ್ತಿರುವವರು ನಿರ್ಧಾರ ಕೈಗೊಳ್ಳುವಾಗ ಅವಸರ ಮಾಡಬಾರದು. ರಾಜಕೀಯ ಪಕ್ಷಗಳು, ಮುಖಂಡರ ಕುರಿತು ಅವಹೇಳನಕಾರಿಯಾಗಿ ಮಾತನಾಡಬಾರದು. ಸಿ.ಎಂಗೆ ಘೇರಾವ್ ಹಾಕುವುದನ್ನೂ ಮಾಡಬಾರದು. ಪಕ್ಷಭೇದವಿಲ್ಲದೇ ಎಲ್ಲ ಶಾಸಕರಿಂದ ಶಿಫಾರಸು ಪತ್ರ ಪಡೆಯಬೇಕು. ಎಲ್ಲವನ್ನೂ ಒಂದುಗೂಡಿಸಿ ಸಿ.ಎಂಗೆ ಸಲ್ಲಿಸಿ ಒಳಮೀಸಲಾತಿ ಜಾರಿಗೆ ಒತ್ತಾಯಿಸಬೇಕು’ ಎಂದರು.

‘ಶೀಘ್ರ ಒಳಮೀಸಲಾತಿ ಜಾರಿಯಾಗದಿದ್ದರೆ ನಾವೂ ಬೀದಿಗಿಳಿದು ಹೋರಾಟ ನಡೆಸುತ್ತೇವೆ. ಕಾಂಗ್ರೆಸ್ ಸರ್ಕಾರ ಸ್ಪಂದಿಸುತ್ತಿದೆ. ಸಮುದಾಯಕ್ಕೆ ನ್ಯಾಯ ಒದಗಿಸಲಿದೆ. ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ ಹಿಂದುಳಿದ ವರ್ಗಗಳಿಗೆ ನ್ಯಾಯ ನೀಡುವ ಸಂದರ್ಭದಲ್ಲಿ ಹಲವು ಅಡೆತಡೆಗಳು ಎದುರಾಗಿದ್ದವು. ಈಗಲೂ ಅಂತಹುದ್ದೇ ಅಡೆತಡೆಗಳಿದ್ದು, ಮುಖ್ಯಮಂತ್ರಿ ಅವೆಲ್ಲವನ್ನೂ ಬಗೆಹರಿಸುತ್ತಾರೆ’ ಎಂದು ಆಶಿಸಿದರು.

ರಾಹುಲ್ ಗಾಂಧಿ ಅವರು ಸಾಮಾಜಿಕ ನ್ಯಾಯದ ಪರ ಕೆಲಸ ಮಾಡುತ್ತಿದ್ದಾರೆ. ಒಳ ಮೀಸಲಾತಿ ಜಾರಿ ವಿಚಾರದಲ್ಲೂ ರಾಹುಲ್ ಅವರನ್ನು ಭೇಟಿಯಾಗಿ ಮನವಿ ಮಾಡುತ್ತೇವೆ

ಎಚ್‌.ಆಂಜನೇಯ ಕೆಪಿಸಿಸಿ ಉಪಾಧ್ಯಕ್ಷ

ನಗರದ 77 ವಾರ್ಡ್‌ಗಳಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೂರ್ನಾಲ್ಕು ದಿನಗಳಿಂದ ಆಗಾಗ್ಗೆ ಮಳೆ ಸುರಿಯುತ್ತಿದ್ದು, ಭಾನುವಾರ ಹಲವು ಭಾಗಗಳಲ್ಲಿ ಹೆಚ್ಚು ಮಳೆಯಾಗಿದೆ.

ಸೋಮವಾರ ಬೆಳಿಗ್ಗೆಯಿಂದ ರಾತ್ರಿಯವರಿಗೆ ಬಿಡುವು ನೀಡಿ, 77 ವಾರ್ಡ್‌ಗಳಲ್ಲಿ ಆಗಾಗ್ಗೆ ಸಾಧಾರಣ ಮಳೆಯಾಗಿದೆ. ಭಾನುವಾರ ಬೆಳಿಗ್ಗೆ 8.30ರಿಂದ ಸೋಮವಾರ ಬೆಳಿಗ್ಗೆ 8.30ರವರೆಗೆ 197 ವಾರ್ಡ್‌ಗಳಲ್ಲಿ ಮಳೆಯಾಗಿದೆ.

ದೊರೆಸಾನಿಪಾಳ್ಯ, ಸಾರಕ್ಕಿ, ಬಿಳೇಕಹಳ್ಳಿಲಿಯಲ್ಲಿ ತಲಾ 3 ಸೆಂ.ಮೀ, ಅರಕೆರೆ, ಬೇಗೂರು, ಜ್ಞಾನಭಾರತಿ, ನಾಯಂಡಹಳ್ಳಿ, ಬಿಟಿಎಂ ಲೇಔಟ್, ಗೊಟ್ಟಿಗೆರೆ, ಅಗ್ರಹಾರ ದಾಸರಹಳ್ಳಿ, ಬಸವೇಶ್ವರನಗರ, ನಾಗಪುರಗಳಲ್ಲಿ ತಲಾ 2 ಸೆಂ.ಮೀ ಮಳೆಯಾಗಿದೆ.

ಕೆಂಗೇರಿ, ಮಾರುತಿ ಮಂದಿರ, ಬೊಮ್ಮನಹಳ್ಳಿ, ಕೋಣನಕುಂಟೆ, ನಾಗರಬಾವಿ, ಕುಮಾರಸ್ವಾಮಿ ಲೇಔಟ್, ಹೇರೋಹಳ್ಳಿ, ರಾಜರಾಜೇಶ್ವರಿನಗರ, ಅಂಜನಾಪುರ, ಗಾಳಿ ಆಂಜನೇಯ ದೇವಸ್ಥಾನ, ನಂದಿನಿ ಲೇಔಟ್, ಹಂಪಿ ನಗರ, ಲಕ್ಕಸಂದ್ರ, ಬಸವನಗುಡಿ, ಪಟ್ಟಾಭಿರಾಮಗರ, ವಿದ್ಯಾಪೀಠ, ಸಿಂಗಸಂದ್ರ, ಬೊಮ್ಮನಹಳ್ಳಿ ಸುತ್ತಮುತ್ತ ಉತ್ತಮ ಮಳೆಯಾಯಿತು.

ಗೊರಗುಂಟೆಪಾಳ್ಯದಲ್ಲಿ ಸೋಮವಾರ ತುಂತುರು ಮಳೆಯಲ್ಲಿ ಜನರು ಕೊಡೆ ಹಿಡಿದುಕೊಂಡು ಬಸ್‌ಗಾಗಿ ಕಾಯುತ್ತಿದ್ದರು – ಪ್ರಜಾವಾಣಿ ಚಿತ್ರ

‘ಹಣ ಪಡೆದು ಕಡತಕ್ಕೆ ಸಹಿ: ಸಾಬೀತು ಪಡಿಸಲು ಸಿದ್ಧ’

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): ‘ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ ಹಣ ಪಡೆದು ಕಡತಕ್ಕೆ ಸಹಿ ಹಾಕಿದ್ದಾರೆ ಎಂದು ರಾಮನಗರದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕರ್ಪೂರ ಹಚ್ಚಿ, ಆಣೆ ಮಾಡಲು ನಾನು ಸಿದ್ಧ’ ಎಂದು ಶಾಸಕ ಎಚ್‌.ಸಿ. ಬಾಲಕೃಷ್ಣ ಸವಾಲು ಹಾಕಿದ್ದಾರೆ.

‘ಕುಮಾರಸ್ವಾಮಿ ಅವರು ಕಡತಕ್ಕೆ ಸಹಿ ಹಾಕಲು ಹಣ ಪಡೆದಿಲ್ಲ ಎಂದು ಅವರ ಪರವಾಗಿ ಯಾರಾದರೂ ಬಂದು ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಆಣೆ ಮಾಡಲು ಸಿದ್ಧರಿದ್ದಾರೆಯೇ’ ಎಂದು ಸೋಮವರ ಪ್ರಶ್ನಿಸಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬಂದು ನಾನು ಕರ್ಪೂರ ಹಚ್ಚುತ್ತೇನೆ. ಕುಮಾರಸ್ವಾಮಿ ಅವರೇ ಖುದ್ದಾಗಿ ಬರಬೇಕು ಎಂದೇನಿಲ್ಲ. ಅವರ ಪರವಾಗಿ ಯಾರಾದರೂ ಬರಲಿ’ ಎಂದರು.

‘ಕುಮಾರ ಸ್ವಾಮಿ ಅವರ ರೀತಿ ನಾನು ಉಡಾಫೆಯಾಗಿ ಮಾತನಾಡಲ್ಲ. ಅವರಂತೆ ಬೇರೆಯವರ ವಿರುದ್ಧ ಸುಮ್ಮನೇ ಆರೋಪ ಮಾಡಲ್ಲ. ತಾಜ್ ವೆಸ್ಟೆಂಡ್ ಹೋಟೆಲ್ ರೂಂನಲ್ಲಿ ಕುಳಿತು ಕಡತಗಳಿಗೆ ಸಹಿ ಹಾಕಿ ಲಂಚ ಪಡೆದದ್ದನ್ನು ಸಾಕ್ಷಿ ಸಮೇತ ಸಾಬೀತು ಪಡಿಸಲು ಸಿದ್ಧ. ಅದಕ್ಕೆ ಪೂರಕವಾದ ದಾಖಲೆ ನೀಡಲೂ ತಯಾರಿದ್ದೇನೆ’ ಎಂದರು.

ಬಾಲಕೃಷ್ಣ

ದಸರಾ ಜಂಬೂ ಸವಾರಿ ಸ್ತಬ್ಧಚಿತ್ರ: ಧಾರವಾಡ ಜಿಲ್ಲೆ ದ್ವಿತೀಯ

ಮಂಡ್ಯಕ್ಕೆ ಪ್ರಥಮ ಬಹುಮಾನ

ಪ್ರಜಾವಾಣಿ ವಾರ್ತೆ

ಮೈಸೂರು: ದಸರಾ ಮಹೋತ್ಸವದ ಅಂಗವಾಗಿ ವಿಜಯದಶಮಿ ದಿನದಂದು ಇಲ್ಲಿ ನಡೆದ ಜಂಬೂಸವಾರಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಸ್ತಬ್ಧಚಿತ್ರಗಳಿಗೆ ಬಹುಮಾನ ಪ್ರಕಟಿಸಲಾಗಿದೆ.

ಜಿಲ್ಲೆಗಳ ವಿಭಾಗದಲ್ಲಿ ಮಂಡ್ಯ (ರಂಗನತಿಟ್ಟು ಪಕ್ಷಿಧಾಮ ಹಾಗೂ ಕೆಆರ್‌ಎಸ್ ಅಣೆಕಟ್ಟು) ಪ್ರಥಮ ಸ್ಥಾನ ಗಳಿಸಿದೆ. ಧಾರವಾಡ (ಇಸ್ರೊ ಗಗನಯಾನದಲ್ಲಿ ಹಣ್ಣಿನ ನೊಣಗಳು) ದ್ವಿತೀಯ, ಚಾಮರಾಜನಗರ (ಸೋಲಿಗರ ಸೊಗಡು ಒಮ್ಮೆ ನೀ ಬಂದು ನೋಡು) ತೃತೀಯ ಬಹುಮಾನ ಪಡೆದಿದೆ.

ಉಡುಪಿ (ಸಾಂಸ್ಕೃತಿಕ ವೈಭವ ಹಾಗೂ ಕರಾವಳಿಯ ಸೊಬಗು), ಗದಗ (ಗ್ರಾಮಸಭೆ-ಹಳ್ಳಿಯ ವಿಧಾನಸಭೆ), ಮೈಸೂರು (ಮಾನವ ಕುಲದ ಸಮಾನತೆ-ಧಾರ್ಮಿಕ ಬೆಳಕಿನಿಂದ ಸಾಂವಿಧಾನಿಕ ನ್ಯಾಯದವರೆಗೆ) ಹಾಗೂ ಚಿಕ್ಕಮಗಳೂರು (ತೇಜಸ್ವಿ ವಿಸ್ಮಯ ಲೋಕ) ಸಮಾಧಾನಕರ ಬಹುಮಾನ ಗಳಿಸಿವೆ.

ಇಲಾಖೆ, ನಿಗಮ ಹಾಗೂ ಮಂಡಳಿಗಳ ವಿಭಾಗದಲ್ಲಿ ವಾರ್ತಾ ಇಲಾಖೆ (ಪ್ರಥಮ), ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ (ದ್ವಿತೀಯ), ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ತೃತೀಯ) ಹಾಗೂ ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಕಾರ್ಮಿಕ ಇಲಾಖೆ ಹಾಗೂ ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಸಮಾಧಾನಕರ) ಬಹುಮಾನ ಪಡೆದಿವೆ ಎಂದು ಸ್ತಬ್ಧಚಿತ್ರ ಉಪಸಮಿತಿ ಪ್ರಕಟಣೆ ತಿಳಿಸಿದೆ.

ಮೈಸೂರಿನಲ್ಲಿ ಶನಿವಾರ ನಡೆದ ವಿಜಯದಶಮಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಮಂಡ್ಯದ ಸ್ತಬ್ಧಚಿತ್ರ

‘ಆದಿತ್ಯನಾಥ ಮೇಲಿತ್ತು 21 ಪ್ರಕರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಮೇಲೆ ಗಂಭೀರವಾದ 21 ಪ್ರಕರಣಗಳು ಇದ್ದವು. ಸಿ.ಎಂ ಆದ ಬಳಿಕ ಏಕೆ ವಾಪಸ್ ಪಡೆದರು’ ಎಂದು ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ಬಿಲ್ಕಿಸ್‌ಬಾನು ಪ್ರಕರಣ ವಾಪಸ್ ಪಡೆದದ್ದು ಏಕೆ? ಗೌರಿ ಲಂಕೇಶ್ ಹತ್ಯೆ ಮಾಡಿದ ಆರೋಪಿಗಳನ್ನೂ ಸನ್ಮಾನ ಮಾಡಿದ್ದು ಯಾರು? ಇಂತಹ ನಕಲಿ ದೇಶಭಕ್ತರು ಮಹಾತ್ಮ ಗಾಂಧಿ ಬಗ್ಗೆಯೂ ಮೊಸಳೆ ಕಣ್ಣೀರು ಸುರಿಸುತ್ತಾರೆ ಎಂದು ಟೀಕಿಸಿದರು.

‘ಪ್ರಲ್ಹಾದ ಜೋಶಿ ಇಂಡಿಯಾ ಗೇಟ್‌ಗೆ ಹೋಗಿ ನೋಡಲಿ. 57 ಸಾವಿರ ಹುತಾತ್ಮರ ಹೆಸರಿನಲ್ಲಿ 37 ಸಾವಿರ ಮಂದಿ ಅಲ್ಪಸಂಖ್ಯಾತರು, 17 ಸಾವಿರ ಹಿಂದೂಗಳ ಹೆಸರಿದೆ. ನಕಲಿ ದೇಶ ಭಕ್ತರು ಬೇರೆಯವರ ಬಗ್ಗೆ ಮಾತಾಡುವ ಬದಲು ಮಹದಾಯಿ ಸಮಸ್ಯೆ ಬಗೆಹರಿಸಲಿ, ಹುಬ್ಬಳ್ಳಿಯ ಅಭಿವೃದ್ಧಿಗೆ ಶ್ರಮಿಸಲಿ’ ಎಂದು ಸಲಹೆ ನೀಡಿದರು.

‘ಪ್ರಲ್ಹಾದ ಜೋಶಿ ಕೇಂದ್ರ ಸಚಿವರಾಗಿರುವುದು ದೇಶದ ದುರದೃಷ್ಟ, ಹಂತಕರಿಂದ ಸನ್ಮಾನ ಮಾಡಿಸಿಕೊಂಡಿರುವ ಅವರ ಮೇಲೆ ಯುಎಪಿಎ ಪ್ರಕರಣ ದಾಖಲಿಸಬೇಕು. ಕಾಂಗ್ರೆಸ್ ನಾಯಕರನ್ನು ನಕಲಿ ಗಾಂಧಿಗಳು ಎಂದು ಟೀಕಿಸುವ ಬಿಜೆಪಿಗರು ಮೊದಲು ನಾಥೂರಾಮ್ ಗೋಡ್ಸೆಯನ್ನು ಭಯೋತ್ಪಾದಕ ಎಂದು ಘೋಷಿಸಲಿ’ ಎಂದು ಅವರು ಸವಾಲೆಸೆದರು.

ಬಿ.ಕೆ. ಹರಿಪ್ರಸಾದ್

ಮಗುವಿನ ಶ್ವಾನ ಪ್ರೀತಿ

ತಾಯಿ ನಾಯಿ ಮರಿಗೆ ಪ್ರೀತಿ ತೋರುವ ದೃಶ್ಯ ಒಂದು ಕಡೆ, ಇನ್ನೆರಡು ಮರಿಗಳೊಂದಿಗೆ ಮಗು ಮಮತೆಯಿಂದ ಆಡುತ್ತಿರುವ ದೃಶ್ಯ ಕೆ.ಆರ್. ಮಾರುಕಟ್ಟೆ ಮೆಟ್ರೊ ನಿಲ್ದಾಣದ ಬಳಿ ಕಂಡು ಬಂತು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬಿಡಿಎಯಿಂದ ವಿನ್ಯಾಸ ನಕ್ಷೆ ಅನುಮೋದನೆ ಇಲ್ಲದಿದ್ದರೆ ಬಿಬಿಎಂಪಿಯಿಂದ ಕಟ್ಟಡ ನಕ್ಷೆ ಇಲ್ಲ

ನಗರದಲ್ಲಿ ಅಡ್ಡಾದಿಡ್ಡಿ ಅಭಿವೃದ್ಧಿಗೆ ನಿರ್ಬಂಧ

• ಆರ್. ಮಂಜುನಾಥ್

ಬೆಂಗಳೂರು: ನಗರದ ಹೊರವಲಯದಲ್ಲಿ ಅಭಿವೃದ್ಧಿ ಚಟುವಟಿಕೆಗಳು ಅಡ್ಡಾದಿಡ್ಡಿಯಾಗಿ ನಡೆಯದಂತೆ ನಿರ್ಬಂಧಿಸಲು ಬಿಬಿಎಂಪಿ ನಿರ್ಧರಿಸಿದೆ. ಬಿಡಿಎಯಿಂದ 'ವಿನ್ಯಾಸ ನಕ್ಷೆ' ಅನುಮೋದನೆ ಪಡೆಯದ ನಿವೇಶನಗಳಿಗೆ ಖಾತೆ, ಕಟ್ಟಡ ನಕ್ಷೆ ಮಂಜೂರು ಮಾಡುವುದನ್ನು ನಿಷೇಧಿಸಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ (ಕೆಟಿಸಿಪಿ) ಕಾಯ್ದೆ 1961ರ ಕಲಂ 17ರಂತೆ ಭೂಪರಿವರ್ತನೆಯಾದ ಜಮೀನುಗಳಿಗೆ ಸ್ಥಳೀಯ ಯೋಜನಾ ಪ್ರಾಧಿಕಾರದಿಂದ 'ವಿನ್ಯಾಸ ನಕ್ಷೆ' ಅನುಮೋದನೆ ಪಡೆದಿರಬೇಕು. ಅಂತಹ ಏಕ ನಿವೇಶನ ಹಾಗೂ ಬಡಾವಣೆಗಳಿಗೆ ಮಾತ್ರ ಬಿಬಿಎಂಪಿ ಖಾತೆ ನೀಡಿ, ಕಟ್ಟಡ ನಕ್ಷೆ ಮಂಜೂರು ಮಾಡಬಹುದು.

ಈ ಕಾಯ್ದೆಯನ್ನು ಉಲ್ಲಂಘಿಸಿ ಬಿಬಿಎಂಪಿಯಿಂದ 20 ಸಾವಿರ ಚದರ ಮೀಟರ್‌ಗಿಂತ ಕಡಿಮೆ ವಿಸ್ತೀರ್ಣದ ಪ್ರದೇಶಗಳಿಗೆ ನೇರವಾಗಿ ಖಾತೆ ಮಾಡಿ, ನಕ್ಷೆ ಅನುಮೋದನೆ ನೀಡಲಾಗುತ್ತಿತ್ತು. ಇದಕ್ಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ತಕರಾರು ತೆಗೆದಿದೆ. 'ಈ ಅನುಮೋದನೆ ಕೆಟಿಸಿಪಿ ಕಾಯ್ದೆಗೆ ವ್ಯತಿರಿಕ್ತವಾದದ್ದು' ಎಂದು 2024ರ ಸೆಪ್ಟೆಂಬರ್ 4ರಂದು ಪತ್ರ ಬರೆದು ಬಿಬಿಎಂಪಿಯ ಗಮನ ಸೆಳೆದಿತ್ತು.

ಬಿಬಿಎಂಪಿ ಸುದ್ದಿ

ಬಿಬಿಎಂಪಿ ಈ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ನಡೆಸಿ, ಕಾನೂನು ತಜ್ಞರ ಸಲಹೆ ಪಡೆದಿದೆ. ಅದರಂತೆ ಆರು ವರ್ಗೀಕರಣದಲ್ಲಿ ಏಕ ನಿವೇಶನ, ಬಹು ನಿವೇಶನ ಅಥವಾ ಬಡಾವಣೆಯಲ್ಲಿ ಮಾತ್ರ ಕಟ್ಟಡ ನಿರ್ಮಾಣ ನಕ್ಷೆ ಮಂಜೂರು ಮಾಡಲು ಮುಖ್ಯ ಆಯುಕ್ತರು ಅಕ್ಟೋಬರ್ 3ರಂದು ಆದೇಶ ಹೊರಡಿಸಿದ್ದಾರೆ.

'ಕೆಟಿಸಿಪಿ ಕಾಯ್ದೆಯಂತೆ ಬಿಡಿಎ 'ವಿನ್ಯಾಸ ನಕ್ಷೆ' ಅನುಮೋದಿಸದಿದ್ದರೆ ಆ ಪ್ರದೇಶಗಳಲ್ಲಿ ಅಡ್ಡಾದಿಡ್ಡಿ ಬೆಳ-ವಣಿಗೆಯಾಗುವ ಸಂಭವವಿರುತ್ತದೆ. ಮಾಸ್ಟರ್ ಪ್ಲಾನ್‌ನಂತೆ ಯೋಜಿತ ಬೆಳವಣಿಗೆಯನ್ನು ಆಧರಿಸಿ ವಿನ್ಯಾಸ ನಕ್ಷೆಯನ್ನು ಅನುಮೋದಿ ಸಲಾಗುತ್ತದೆ. ಇದರಿಂದ ಕೆರೆ, ಕಾಲುವೆ ಸೇರಿದಂತೆ ಸರ್ಕಾರಿ ಜಮೀನುಗಳ ಒತ್ತುವರಿಗಳನ್ನು ಈ ಸಂದರ್ಭದಲ್ಲೇ ತಡೆಯಬಹುದು. ಅಲ್ಲದೆ, ಮಾಸ್ಟರ್ ಪ್ಲಾನ್‌ನಂತೆ ವಾಣಿಜ್ಯ, ವಸತಿ ಪ್ರದೇಶಗಳ ವರ್ಗೀಕರಣ ಸೇರಿದಂತೆ ರಸ್ತೆ, ಚರಂಡಿಯಂತಹ ಮೂಲಸೌಕರ್ಯ-ಗಳು ಹೇಗಿರಬೇಕು ಎಂಬುದೂ 'ವಿನ್ಯಾಸ ನಕ್ಷೆ'ಯಲ್ಲಿ ನಮೂದಾಗಿರು-ತ್ತದೆ. ಇದರಿಂದ ಯೋಜಿತ ಪ್ರದೇಶ ನಿರ್ಮಾಣವಾಗಲು ಸಾಧ್ಯವಾಗುತ್ತದೆ' ಎಂದು ಬಿಬಿಎಂಪಿ ನಗರ ಯೋಜನೆ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದರು.

ಅರ್ಕಾವತಿ ಬಡಾವಣೆಯಲ್ಲಿ ನಿರ್ಬಂಧ

ಬಿಡಿಎ ಅರ್ಕಾವತಿ ಬಡಾವಣೆಯಲ್ಲಿ ನ್ಯಾಯಮೂರ್ತಿ ಕೇಶವ ನಾರಾಯಣ ಸಮಿತಿ ವ್ಯಾಪ್ತಿಯಲ್ಲಿರುವ ಜಮೀನುಗಳಲ್ಲಿ ಏಕ ನಿವೇಶನ ಅಥವಾ ಬಹು ನಿವೇಶನಗಳಿಗೆ ಕಟ್ಟಡ ನಕ್ಷೆ ಮಂಜೂರು ಮಾಡುವುದನ್ನೂ ಬಿಬಿಎಂಪಿ ನಿರ್ಬಂಧಿಸಿದೆ.

ಅರ್ಕಾವತಿ ಬಡಾವಣೆಗೆ ಪ್ರಾಥಮಿಕವಾಗಿ 3,329 ಎಕರೆ ಜಮೀನು ಸ್ವಾಧೀನಕ್ಕೆ ಅಧಿಸೂಚಿಸಲಾಗಿತ್ತು. ಅಂತಿಮ ಪರಿಷ್ಕೃತ ಅಧಿಸೂಚನೆಯಲ್ಲಿ 1,766 ಎಕರೆ ಮಾತ್ರ ಇದೆ. ಅಧಿಸೂಚಿಸಿರುವ ಜಮೀನುಗಳು ಸಮಿತಿಯ ಪರಿಶೀಲನೆಗೆ ಒಳಪಟ್ಟಿವೆ. ಹೀಗಾಗಿ ಜಮೀನುಗಳಿಗೆ ಖಾತೆ ನೀಡಲು, ಅಭಿವೃದ್ಧಿಗೆ ಅನುಮತಿಸಲು ಅವಕಾಶ ಇರುವುದಿಲ್ಲ ಎಂದು ಬಿಡಿಎ ತಿಳಿಸಿತ್ತು. ನಾಡಪ್ರಭು ಕೆಂಪೇಗೌಡ ಬಡಾವಣೆ, ಡಾ.ಶಿವರಾಮಕಾರಂತ ಬಡಾವಣೆ, ಪೆರಿಫೆರಲ್ ವರ್ತುಲ ರಸ್ತೆ ಹಾಗೂ ಇತರೆ ಬಡಾವಣೆಗಳಿಗೆ ಬಿಡಿಎ ಭೂಸ್ವಾಧೀನ ಅಧಿಸೂಚನೆ ಹೊರಡಿಸಿದೆ. ಈ ಜಮೀನುಗಳು ಬಿಡಿಎ ಕಾಯ್ದೆ 1976ರ ಕಲಂ–20ರಲ್ಲಿ ಪುರೋಭಿವೃದ್ಧಿ ತೆರಿಗೆ ವ್ಯಾಪ್ತಿಯಲ್ಲಿ ಇವೆ. ಇಂತಹ ಜಮೀನುಗಳಲ್ಲಿ ಬಿಡಿಎ ಏಕ ನಿವೇಶನ ಅಥವಾ ಬಹುನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡಿರುವುದಿಲ್ಲ. ಅಂತಹ ನಿವೇಶನಗಳಿಗೆ ಬಿಬಿಎಂಪಿ ಖಾತೆ ನೀಡಿ, ಕಟ್ಟಡ ನಕ್ಷೆ ನೀಡಿದರೆ, ಆರ್ಥಿಕ ನಷ್ಟ ಉಂಟಾಗುತ್ತದೆ ಎಂದು ಬಿಡಿಎ ಪತ್ರ ಮೂಲಕ ತಿಳಿಸಿತ್ತು. ಇದನ್ನೆಲ್ಲ ಪರಿಗಣಿಸಿ, ಬಿಬಿಎಂಪಿ ಆಯುಕ್ತರು ಅ.3ರಂದು ನಿರ್ಬಂಧದ ಆದೇಶ ಹೊರಡಿಸಿದ್ದಾರೆ.

ಯಾವ ವರ್ಗೀಕರಣದ ನಿವೇಶನಗಳಿಗೆ ಕಟ್ಟಡ ನಕ್ಷೆ?

- ನಗರ ಟ್ರೈಟಲ್ ಸರ್ವೆ (ಸಿಟಿಎಸ್) ಸಂಖ್ಯೆ ಹೊಂದಿರುವ ನಿವೇಶನಗಳು
- ನಗರಸಭೆ, ಪುರಸಭೆ, ಗ್ರಾಮ ಪಂಚಾಯಿತಿಗಳಿಂದ ಬಿಬಿಎಂಪಿ ವ್ಯಾಪ್ತಿಗೆ ಬಂದಾಗ 'ಎ' ರಿಜಿಸ್ಟರ್‌ನಲ್ಲಿ ನಮೂದಾಗಿರುವ ಖಾತಾ ಹೊಂದಿರುವ ನಿವೇಶನಗಳು
- ಬಿಡಿಎಯಿಂದ ನಿರ್ಮಾಣವಾದ, ಅನುಮೋದನೆಯಾದ ನಿವೇಶನಗಳು, ಅಭಿವೃದ್ಧಿ ಯೋಜನಾ ನಕ್ಷೆ ಮಂಜೂರು ಪಡೆದ ನಿವೇಶನಗಳು.
- ಬಿಬಿಎಂಪಿಯಿಂದ ಈಗಾಗಲೇ ಕಟ್ಟಡ ನಕ್ಷೆ ಪಡೆದಿದ್ದು, ಪರಿಷ್ಕೃತ ಅಥವಾ ಹೆಚ್ಚುವರಿ ಕಟ್ಟಡ ನಿರ್ಮಾಣದ ಪ್ರಸ್ತಾವಗಳು
- ಸರ್ಕಾರ ಹಾಗೂ ಎಚ್‌ಎಚ್‌ಬಿ, ಕೆಐಎಡಿಬಿ, ಕೆಎಸ್‌ಎಸ್‌ಐಡಿಸಿ, ಕೆಎಸ್‌ಡಿಬಿಗಳಿಂದ ಫಲಾನುಭವಿಗಳಿಗೆ ಮಂಜೂರಾದ ನಿವೇಶನಗಳು
- ಬಿಡಿಎ, ಬಿಎಂಐಸಿಎಪಿ ಸೇರಿದಂತೆ ಕೆಟಿಸಿಪಿ ತಿದ್ದುಪಡಿ ಕಾಯ್ದೆ ಕಲಂ 17ರಡಿ ಅನುಮೋದನೆಯಾದ ಏಕ ನಿವೇಶನಗಳು

ನಗರದಲ್ಲಿ 3 ದಿನದಲ್ಲಿ 17 ಸಾವಿರ ಟನ್ ತ್ಯಾಜ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಸರಾ ಹಬ್ಬದ ಸಂದರ್ಭದ ಮೂರು ದಿನದಲ್ಲಿ ನಗರದಲ್ಲಿ 17 ಸಾವಿರ ಟನ್ ತ್ಯಾಜ್ಯ ಉತ್ಪಾದನೆಯಾಗಿದೆ.

ನಗರದಲ್ಲಿ ನಿತ್ಯ ಸುಮಾರು 4,900 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತದೆ. ಅ.12ರಂದು 6,306 ಟನ್, 13ರಂದು 5,561 ಟನ್ ಹಾಗೂ ಅ.14ರಂದು 5,866 ಟನ್ ತ್ಯಾಜ್ಯ ಉತ್ಪತ್ತಿಯಾಗಿದೆ.

ಹಸಿ ತ್ಯಾಜ್ಯವನ್ನು ಸಂಸ್ಕರಣಾ ಘಟಕಗಳು ಹಾಗೂ ಮಿಶ್ರ ತ್ಯಾಜ್ಯವನ್ನು ಲ್ಯಾಂಡ್ ಫಿಲ್‌ನಲ್ಲಿ ವಿಲೇವಾರಿ ಮಾಡಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಆಯುಧ ಪೂಜೆಗಾಗಿ ತಂದಿದ್ದ ಬಾಳೆ ಕಂದು, ಬೂದು ಕುಂಬಳಕಾಯಿ, ಎಲೆಗಳು ಹಾಗೂ ಹೂವು ತ್ಯಾಜ್ಯವನ್ನು ಸ್ಥಳದಲ್ಲೇ ಬಿಟ್ಟಿದ್ದು, ಅದನ್ನು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಸಂಸ್ಥೆ ತೆರವು ಮಾಡುತ್ತಿದೆ.

ಕೆ.ಆರ್ ಮಾರುಕಟ್ಟೆ, ಗಾಂಧಿ ಬಜಾರ್, ದೇವಸಂದ್ರ ಮಾರುಕಟ್ಟೆ, ಕೆ.ಆರ್. ಪುರ ಮಾರುಕಟ್ಟೆ, ಮಲ್ಲೇಶ್ವರ ಮಾರುಕಟ್ಟೆ, ಮಡಿವಾಳ ಮಾರುಕಟ್ಟೆ, ರಸೆಲ್ ಮಾರುಕಟ್ಟೆ, ಪಾಲಿಕೆ ಬಜಾರ್ ಸೇರಿದಂತೆ 12 ಮಾರುಕಟ್ಟೆಗಳಲ್ಲಿ ಎರಡು ದಿನಗಳಲ್ಲಿ 414 ಟನ್ ತ್ಯಾಜ್ಯವನ್ನು ವಿಲೇವಾರಿ ಮಾಡಲಾಗಿದೆ ಎಂದು ಬಿಬಿಎಂಪಿ ಮಾಹಿತಿ ನೀಡಿದೆ.

ಮಾರುಕಟ್ಟೆ ಹಾಗೂ ರಸ್ತೆ ಬದಿಗಳಲ್ಲಿ ಹೆಚ್ಚುವರಿಯಾಗಿ ತ್ಯಾಜ್ಯ ಉತ್ಪಾದನೆಯಾಗಿದ್ದರಿಂದ ಆಯಾ ವಲಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಭಾಗದ ಅಧಿಕಾರಿಗಳು ಹಾಗೂ ಮಾರ್ಷಲ್‌ಗಳ ನೇತೃತ್ವದಲ್ಲಿ ಹೆಚ್ಚುವರಿಯಾಗಿ ಯಂತ್ರೋಪಕರಣ ಮತ್ತು ವಾಹನಗಳನ್ನು ಬಳಸಿ ತ್ಯಾಜ್ಯ ತೆರವು ಮಾಡಲಾಗಿದೆ.

ರಜೆ ಹಬ್ಬದಿಂದ ಉತ್ಪತ್ತಿಯಾದ ತ್ಯಾಜ್ಯವನ್ನು ಒಂದೆರಡು ದಿನಗಳಲ್ಲಿ ಪೂರ್ಣ ತೆರವುಗೊಳಿಸಲಾಗುತ್ತದೆ ಎಂದು ಪಾಲಿಕೆ ತಿಳಿಸಿದೆ.

ಹೆಸರಘಟ್ಟದ ಕೆರೆಯಲ್ಲಿ ವಿಜೃಂಭಣೆಯ ತೆಪ್ಪೋತ್ಸವ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಇಲ್ಲಿನ ಕೆರೆಯಲ್ಲಿ ದುಗ್ಗಲಮ್ಮ ದೇವಿಯ ತೆಪ್ಪೋತ್ಸವ ಭಾನುವಾರ ವಿಜೃಂಭಣೆಯಿಂದ ನಡೆಯಿತು. ತೆಪ್ಪೋತ್ಸವ ನಿಮಿತ್ತ ಮಂಟಪವನ್ನು ಹೂಗಳಿಂದ ಅಲಂಕರಿಸಿ, ದೇವಿ ಮೂರ್ತಿ ಇಟ್ಟು ವಿಶೇಷ ಪೂಜೆ ಸಲ್ಲಿಸಲಾಯಿತು.

ಆ ನಂತರ ಹೆಸರಘಟ್ಟ ಕೆರೆಯಲ್ಲಿ ತೆಪ್ಪೋತ್ಸವ ಸಾಗಿತು. ಕೆರೆಯಲ್ಲಿ ನೀರು ಇದ್ದಾಗ ಮಾತ್ರ ವಿಜಯದಶಮಿ ಹಬ್ಬದಂದು ತೆಪ್ಪೋತ್ಸವವನ್ನು ನೆರವೇರಿಸಲಾಗುತ್ತದೆ.

ಕಾರ್ಯಕ್ರಮದ ಪ್ರಯುಕ್ತ ದುಗ್ಗಲಮ್ಮ ದೇವಿ ದೇವಾಲಯವನ್ನು ಹೂ ಮತ್ತು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಸುತ್ತಮುತ್ತಲಿನ ಗ್ರಾಮಸ್ಥರು ಪೂಜಾ ಕಾರ್ಯ-ಕ್ರಮದಲ್ಲಿ ಭಾಗಿಯಾಗಿ ತೆಪ್ಪೋತ್ಸವವನ್ನು ಕಣ್ತುಂಬಿಕೊಂಡರು.

ತಲಕಾವೇರಿ: ಪ್ಲಾಸ್ಟಿಕ್ ಸಂಪೂರ್ಣ ನಿಷೇಧ

ಪ್ರಜಾವಾಣಿ ವಾರ್ತೆ

ಮಡಿಕೇರಿ: ತಾಲ್ಲೂಕಿನ ತಲಕಾವೇರಿಯಲ್ಲಿ ಅ.17ರಂದು ಬೆಳಿಗ್ಗೆ 7.40ಕ್ಕೆ ನಡೆಯಲಿರುವ 'ಶ್ರೀಕಾವೇರಿ ತುಲಾಸಂಕ್ರಮಣ ಪವಿತ್ರ ತೀರ್ಥೋದ್ಭವ'ದಲ್ಲಿ ಕಲ್ಯಾಣಿ ಮತ್ತು ಪವಿತ್ರ ಬ್ರಹ್ಮಕುಂಡಿಕೆ ಬಳಿ ಪ್ಲಾಸ್ಟಿಕ್ ಬಾಟಲಿ, ಬಿಂದಿಗೆ ಮತ್ತು ಕ್ಯಾನ್‌ಗಳ ಬಳಕೆಯನ್ನು ಸಂಪೂರ್ಣ ನಿಷೇಧಿಸಲಾಗಿದೆ.

'ತೀರ್ಥೋದ್ಭವವಾಯಿತು' ಎಂದು ಅರ್ಚಕರು ಘೋಷಿಸುತ್ತಿದ್ದಂತೆ ಸಾಮಾನ್ಯವಾಗಿ ಕಲ್ಯಾಣಿಗೆ ಪ್ಲಾಸ್ಟಿಕ್ ಬಿಂದಿಗೆ, ಕ್ಯಾನ್, ಬಾಟಲಿಗಳನ್ನು ಹಿಡಿದು ಧುಮುಕುವ ಭಕ್ತರು ಬ್ರಹ್ಮಕುಂಡಿಕೆ ಬಳಿ ತೀರ್ಥವನ್ನು ಅದರಲ್ಲೇ ತುಂಬಿಸಿಕೊಳ್ಳುತ್ತಾರೆ. ಹಾಗಾಗಿ, ತೀರ್ಥ ತುಂಬಿಸಿಕೊಳ್ಳಲು ಪ್ಲಾಸ್ಟಿಕ್ ಪರಿಕರಗಳನ್ನು ನಿಷೇಧಿಸಲಾಗಿದೆ ಎಂದು ಭಗಂಡೇಶ್ವರ–ತಲಕಾವೇರಿ ಮತ್ತು ಸಮೂಹ ದೇವಾಲಯಗಳ ಪ್ರಕಟಣೆ ತಿಳಿಸಿದೆ.

ತಜ್ಞರ ತಂಡ ರಚನೆ: ಪ್ರಸ್ತಾವನೆ ಸಲ್ಲಿಕೆಗೆ ಮುಖ್ಯಮಂತ್ರಿ ಸೂಚನೆ

ಬೆಂಗಳೂರು: ಗ್ರಾಮ ಪಂಚಾಯತ್ ಸದಸ್ಯರು, ಅಧಿಕಾರಿಗಳು ಮತ್ತು ನೌಕರರ ನ್ಯಾಯಯುತ ಬೇಡಿಕೆಗಳನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಲು ತಜ್ಞರ ತಂಡ ರಚಿಸುವ ಸಂಬಂಧ ಪ್ರಸ್ತಾವನೆಯೊಂದನ್ನು ಮಂಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಈ ಕುರಿತು ವಿಧಾನಪರಿಷತ್‌ನ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಪತ್ರ ಬರೆದು, ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ತಜ್ಞರ ಸಮಿತಿ ರಚಿಸುವಂತೆ ಒತ್ತಾಯಿಸಿದ್ದರು.

ಈ ಸಂಬಂಧ ಪಂಚಾಯಿತಿ ಒಕ್ಕೂಟಗಳ ಪದಾಧಿಕಾರಿಗಳ ಸಭೆ ನಡೆಸಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರು, ಸಮಸ್ಯೆಗಳ ಅಧ್ಯಯನ ಹಾಗೂ ಇತ್ಯರ್ಥಕ್ಕೆ ತಜ್ಞರ ತಂಡ ರಚನೆ ಮಾಡುವುದಾಗಿ ಭರವಸೆ ನೀಡಿದ್ದಾರೆ.

'48 ಸಾವಿರ ಮನೆಗಳಿಗೆ 16ರಿಂದ ಕಾವೇರಿ ನೀರು'

ಉಲ್ಲಾಳು ಬಳಿಯ ಎ.ಜಿ.ಎಸ್ ಬಡಾವಣೆಯಲ್ಲಿ ಕಾವೇರಿ ನೀರಿನ ಪೈಪ್ ಅಳವಡಿಕೆ ಕಾಮಗಾರಿಗೆ ಶಾಸಕ ಎಸ್‌.ಟಿ. ಸೋಮಶೇಖರ್ ಚಾಲನೆ ನೀಡಿದರು

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಕಾವೇರಿ 5ನೇ ಹಂತದ ಕುಡಿಯುವ ನೀರಿನ ಯೋಜನೆಯಿಂದ ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 48 ಸಾವಿರ ಮನೆಗಳಿಗೆ ಕಾವೇರಿ ನೀರಿನ ಸಂಪರ್ಕ ಕಲ್ಪಿಸಲಾಗಿದ್ದು, ಇದೇ 16ರಿಂದ ಪ್ರತಿ ಮನೆಗೂ ಕಾವೇರಿ ನೀರು ಹರಿಯಲಿದೆ' ಎಂದು ಶಾಸಕ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಉಲ್ಲಾಳು ವಾರ್ಡ್‌ನ ಎ.ಜಿ. ಎಸ್ ಬಡಾವಣೆಯಲ್ಲಿ ಕಾವೇರಿ ನೀರಿನ ಸಂಪರ್ಕ ಕಲ್ಪಿಸುವ ಕೊಳವೆ ಅಳವಡಿಸುವ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ವರ್ಷದ ಹಿಂದೆಯೇ ಕಾವೇರಿ ನೀರು ಸಿಗಬೇಕಾಗಿತ್ತು. ಅರಣ್ಯ, ಮುಖ್ಯರಸ್ತೆ, ಖಾಸಗಿ ಜಮೀನು ಮಾಲೀಕರಿಂದ ತೊಂದರೆ ಕಾರಣ ವಿಳಂಬವಾಗಿತ್ತು. ಈಗ ಸಮಸ್ಯೆ ಬಗೆಹರಿದಿದ್ದು, 110 ಹಳ್ಳಿಗಳಿಗೂ ನೀರು ಸಿಗಲಿದೆ' ಎಂದರು.

ಬೆಂಗಳೂರು ಜಲಮಂಡಳಿ ಯೋಜನೆ ವಿಭಾಗದ ಕಾರ್ಯ ಪಾಲಕ ಎಂಜಿನಿಯರ್ ಮಂಜುನಾಥ್ ಮಾತನಾಡಿ, 'ಕೆಲವು ಖಾಸಗಿ ಬಡಾವಣೆಯವರು (ಲೇಔಟ್ ಮಾಡಿದವರು) ಸರ್ಕಾರಕ್ಕೆ ಪಾವತಿಸಬೇಕಾದ ಹಣವನ್ನು ನೀಡದ ಕಾರಣ ಚಕ್ಕೆ ಗೌಡನಪಾಳ್ಯ, ಎ.ಜಿ.ಎಸ್. ಬಡಾವಣೆ, ಭರತ್ ನಗರ, ಆರ್.ಆರ್. ಲೇಔಟ್, ಉಲ್ಲಾಳು ವ್ಯಾಪ್ತಿಯಲ್ಲಿ ನೀರಿನ ಕೊಳವೆ ಅಳವಡಿಕೆ ವಿಳಂಬವಾಗಿದೆ. ಒಪ್ಪಿಗೆ ಪತ್ರ ಸಿಕ್ಕರೆ ಎಲ್ಲೆಡೆ ಕಾಮಗಾರಿ ಪ್ರಾರಂಭವಾಗಲಿದೆ. ಸರ್ಕಾರ 10 ಕಿ.ಮೀ ಕಾಮಗಾರಿಗೆ ಅನುಮತಿ ನೀಡಿದ್ದು ಕಾಮಗಾರಿ ಪ್ರಗತಿಯಲ್ಲಿದೆ' ಎಂದರು.

ನಿವೃತ್ತ ಕೆಎಎಸ್ ಅಧಿಕಾರಿ ಬಿ.ಕೃಷ್ಣಪ್ಪ, ಹೇರೋಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್. ಶ್ರೀಧರ್, ತಾ.ಪಂ. ಮಾಜಿ ಅಧ್ಯಕ್ಷ ಅನಿಲ್ ಕುಮಾರ್, ರಮೇಶ್ ಗೌಡ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಂಗಪ್ಪ ಇದ್ದರು.

'ಬೇಟಿ ಬಚಾವೊ' ಪಾದಯಾತ್ರೆ 17ರಿಂದ

ಬೆಂಗಳೂರು: ಹೆಣ್ಣುಮಕ್ಕಳ ರಕ್ಷಣೆಗಾಗಿ ಹಾಗೂ ಅತ್ಯಾಚಾರಿಗಳಿಗೆ ಮರಣದಂಡನೆ ವಿಧಿಸಬೇಕು ಎಂದು ಆಗ್ರಹಿಸಿ ಮಂಗಳೂರಿನಿಂದ ದೆಹಲಿವರೆಗೆ 'ಬೇಟಿ ಬಚಾವೊ' ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.

ಅತ್ತಿಬೆಲೆ ಪ್ರವೀಣ್ ಮತ್ತು ಶರೀಫ್ ನೇತೃತ್ವದಲ್ಲಿ ಪಾದಯಾತ್ರೆ ನಡೆಯಲಿದ್ದು, ಅ.17ರಂದು ಮಂಗಳೂರು ಟೌನ್‌ಹಾಲ್ ಸಮೀಪ ಇರುವ ಗಾಂಧಿ ಪ್ರತಿಮೆಯ ಬಳಿಯಿಂದ ಆರಂಭಗೊಳ್ಳಲಿದೆ ಎಂದು ಪ್ರವೀಣ್ ಮತ್ತು ಶರೀಫ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ದೊರೆಯಬೇಕು. ಆಗ ಮಹಿಳೆ ಘನತೆಯಿಂದ ಸ್ವತಂತ್ರವಾಗಿ ಬದುಕಲು ಸಾಧ್ಯ. ಈ ಬಗ್ಗೆ ಜಾಗೃತಿ ಮೂಡಿಸುವುದೇ ಪಾದಯಾತ್ರೆ ಉದ್ದೇಶ. ಎಲ್ಲರೂ ಪಾದಯಾತ್ರೆ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಕ್ಷೇಮ ಕುಶಲ

ಮಧುಮೇಹಿಗಳ ಆಹಾರಕ್ರಮದ ಬಗ್ಗೆ ಹಲವು ಮಿಥ್ಯೆಗಳಿವೆ. ಅವುಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದು ಮುಖ್ಯ.

ಮಧುಮೇಹಿಗಳು ಏನು ತಿನ್ನಬೇಕು?

ಅಮೂಲ್ಯ ಬಿ. ಕೆ.

ಸಾಮಾನ್ಯವಾಗಿ ಜನ ಮಾತನಾಡುವಾಗ ಮಧುಮೇಹವಿದೆ ಅಂದಾಕ್ಷಣ ಅನ್ನ ಬಿಟ್ಟು ಬಿಡಿ. ಮುದ್ದೆ ತಿನ್ನಿ ಮಧುಮೇಹ ನಿಯಂತ್ರಣಕ್ಕೆ ಬರುತ್ತೆ ಅಂತ ಹೇಳುವುದನ್ನು ಕೇಳಿರುತ್ತೀರಿ.

ಮಧುಮೇಹ ಇರುವವರಿಗೆ ಅಕ್ಕಿ ಒಳ್ಳೇಯದಾ, ಗೋಧಿ ಒಳ್ಳೇಯದಾ, ರಾಗಿ ಸರಿನಾ? ಯಾಕಂದ್ರೆ ಮಧುಮೇಹ ಬಂದ ಬಹುತೇಕ ಮಂದಿ ಅನ್ನ ಬಿಟ್ಟು, ಚಪಾತಿ ಅಥವಾ ರಾಗಿ ಮುದ್ದೆ ತಿನ್ನಲು ಆರಂಭಿಸುತ್ತಾರೆ.

ಅಕ್ಕಿ, ರಾಗಿ, ಗೋಧಿ, ಜೋಳ, ಸಿರಿಧಾನ್ಯಗಳು ಎಲ್ಲವೂ ಕಾರ್ಬೋಹೈಡ್ರೇಟ್‌ಗಳೇ. ಅಂದರೆ ಇವುಗಳನ್ನು ಅತಿಯಾಗಿ ಸೇವಿಸಿದರೆ ಮಧುಮೇಹ ಹೆಚ್ಚಳವಾಗುವುದರಲ್ಲಿ ಎರಡು ಮಾತಿಲ್ಲ.

ಮಧುಮೇಹದಿಂದ ಬಳಲುತ್ತಿರುವವರು ಮಂಡ್ಯದವರಾಗಿದ್ದರೆ, ಮುದ್ದೆ ತಿನ್ನುವುದನ್ನು ಬಿಡಿ ಎಂದರೆ ಕಷ್ಟ ಆಗಬಹುದು. ಉತ್ತರ ಕರ್ನಾಟಕದ ಮಂದಿಗೆ ಜೋಳದ ರೊಟ್ಟಿ ತಿನ್ನಬೇಡಿ ಎಂದರೆ ತಿನ್ನದೇ ಇರಲು ಆಗದು. ಕಾರ್ಬೋಹೈಡ್ರೇಟ್ ಹೇರಳವಾಗಿರುವ ತಿನಿಸುಗಳನ್ನು ಬಿಟ್ಟು ಬಿಡಿ ಎಂದು ಹೇಳಿದರೆ, 'ತಿನ್ನುವುದು ಏನನ್ನು?' ಎನ್ನುವ ಪ್ರಶ್ನೆ ಕೇಳುವವರಿದ್ದಾರೆ.

ಇವತ್ತಿನ ಆಹಾರಕ್ರಮದಲ್ಲಿ ಕಾರ್ಬೋಹೈಡ್ರೇಟ್‌ಭರಿತ ಆಹಾರಪದಾರ್ಥಗಳೆ ಪ್ರಮುಖ ಸ್ಥಾನ ಪಡೆದುಕೊಂಡಿವೆ. ಅಕ್ಕಿ, ರಾಗಿ, ಗೋಧಿ, ಜೋಳ ಸೇರಿದಂತೆ ಎಲ್ಲ ಸಿರಿಧಾನ್ಯಗಳಲ್ಲೂ ಕಾರ್ಬೋಹೈಡ್ರೇಟ್ ಹೆಚ್ಚಾಗಿರುತ್ತದೆ ಮತ್ತು ಪ್ರೊಟೀನ್ ಕಡಿಮೆ ಇರುತ್ತದೆ. ಇವನ್ನು 'ಕಾರ್ಬೋಹೈಡ್ರೇಟ್ ರಿಚ್ ಫುಡ್ಸ್' ಎಂತಲೂ ಕರೆಯುತ್ತಾರೆ. ಇವುಗಳಲ್ಲಿ ಗ್ಲೈಸಿಮಿಕ್ ಇಂಡೆಕ್ಸ್ ಹೆಚ್ಚಿರುತ್ತದೆ. (ಜಿಐ ಎಂದರೆ ನಿರ್ದಿಷ್ಟ ಆಹಾರ ಸೇವನೆಯಿಂದ ರಕ್ತದಲ್ಲಿ ಹೆಚ್ಚಳಗೊಳ್ಳುವ ಸಕ್ಕರೆಯಮಟ್ಟವನ್ನು ಅಳೆಯುವ ಸೂಚ್ಯಂಕ) ಇವುಗಳನ್ನು ಎಷ್ಟು ಸಾಧ್ಯವೊ ಅಷ್ಟು ಕಡಿಮೆ ತಿನ್ನುವುದು ಒಳ್ಳೆಯದು.

ಇದೇ ರೀತಿ ಸಕ್ಕರೆ, ಬೆಲ್ಲದ ಬಗ್ಗೆಯೂ ತಪ್ಪು ತಿಳಿವಳಿಕೆ ಇದೆ. ಬಹಳಷ್ಟು ರೋಗಿಗಳು ಕೇಳುವ ಪ್ರಶ್ನೆ ಸಕ್ಕರೆ ಬದಲು ಬೆಲ್ಲ, ಜೇನುತುಪ್ಪ ಬಳಸಬಹುದೇ? ಎಂದು. ನೆನಪಿರಲಿ; ಸಕ್ಕರೆ, ಬೆಲ್ಲ, ಜೇನುತುಪ್ಪ ಇವುಗಳಲ್ಲಿ ಬಹಳ ವ್ಯತ್ಯಾಸಗಳೇನೂ ಇಲ್ಲ. ಎಲ್ಲವೂ ಹೆಚ್ಚು ಕ್ಯಾಲೋರಿಗಳನ್ನು ಹೊಂದಿರುವ ಆಹಾರಗಳೆ. ಕ್ಯಾಲೊರಿಗಳು ಒಂದೇ ರೀತಿಯಲ್ಲಿ ಜೀರ್ಣಗೊಳ್ಳುತ್ತದೆ. ಬಹಳಷ್ಟು ಸಕ್ಕರೆ ಪದಾರ್ಥಗಳು ಗ್ಲುಕೋಸ್ ಮತ್ತು ಫ್ರಕ್ಟೋಸ್‌ನ ಅನುಪಾತದ ಆಧಾರದ ಮೇಲೆ ಸಂಯೋಜಿತಗೊಂಡಿರುತ್ತದೆ. ಉದಾಹರಣೆಗೆ ನಿತ್ಯ ಬಳಸುವ ಸಕ್ಕರೆಯಲ್ಲಿ ಶೇ 50ರಷ್ಟು ಪ್ರಮಾಣದಲ್ಲಿ ಸುಕ್ರೋಸ್ ಇದ್ದರೆ, ಫ್ರಕ್ಟೋಸ್ ಶೇ 50ರಷ್ಟು ಪ್ರಮಾಣದಲ್ಲಿರುತ್ತದೆ. ಬೆಲ್ಲದಲ್ಲಿ ಶೇ 65ರಿಂದ 85ರಷ್ಟು ಸುಕ್ರೋಸ್ ಇದ್ದರೆ, ಶೇ 10ರಿಂದ 15ರಷ್ಟು ಗ್ಲುಕೋಸ್ ಮತ್ತು ಫ್ರಕ್ಟೋಸ್ ಇರುತ್ತದೆ. ಬೆಲ್ಲದಿಂದ ಕಬ್ಬಿಣದಂಥ ಪೋಷಕಾಂಶಗಳು ಸಿಗಬಹುದು. ಇನ್ನು ಕೃತಕ ಸಿಹಿಯಲ್ಲಿ ಸಕ್ಕರೆಗಿಂತ 300ರಷ್ಟು ಹೆಚ್ಚಿನ ಸಿಹಿ ಇರುತ್ತದೆ ಮತ್ತು ಯಾವುದೇ ರೀತಿಯ ಪೌಷ್ಟಿಕಾಂಶ ಇರುವುದಿಲ್ಲ. ಇದರ ಬಳಕೆಯಿಂದ ನೇರವಾಗಿ ಮಧುಮೇಹ ಹೆಚ್ಚಳವಾಗದೇ ಇದ್ದರೂ ಸಿಹಿ ತಿನ್ನುವ ಬಯಕೆಯಂತೂ ಹೆಚ್ಚುತ್ತದೆ.

ಊಟದ ತಟ್ಟೆಯಲ್ಲಿ ಏನಿರಬೇಕು?

ಮಧುಮೇಹಿಗಳ ಊಟದ ತಟ್ಟೆಯಲ್ಲಿ ಹೆಚ್ಚಾಗಿ ಇರಬೇಕಾದದ್ದು ಕಾಳುಗಳು, ತರಕಾರಿಗಳು. ಮಾಂಸಾಹಾರಿಗಳಾಗಿದ್ದರೆ ಮೊಟ್ಟೆ, ಮೀನು, ಮಾಂಸ. ಕಾಳುಗಳಲ್ಲಿ ಹೆಚ್ಚಾಗಿ ನಾರಿನಂಶ ಇರುತ್ತದೆ. ಜತೆಗೆ ಪ್ರೋಟಿನ್, ಕಬ್ಬಿಣ, ಫೋಲೆಟ್ ಪೊಟ್ಯಾಸಿಯಂ ಹೇರಳವಾಗಿರುತ್ತದೆ. ಕೊಬ್ಬು, ಕೊಲೆಸ್ಟ್ರಾಲ್ ಸೋಡಿಯಂ, ಗ್ಲೈಸೆಮಿಕ್ ಇಂಡೆಕ್ಸ್‌ನ ಪ್ರಮಾಣ ಕಡಿಮೆ ಇದ್ದು, ಗ್ಲುಟೆನ್ ಮುಕ್ತವಾಗಿರುತ್ತದೆ. ಜತೆಗೆ ಅಗತ್ಯವಿರುವಷ್ಟು ಕಾರ್ಬೋಹೈಡ್ರೇಟ್ ಸಿಗುತ್ತದೆ. ಮಾಂಸಾಹಾರಗಳಲ್ಲಿ ಕಾರ್ಬೋಹೈಡ್ರೇಟ್ ಇರುವುದಿಲ್ಲ. ಹೆಚ್ಚು ಪ್ರೋಟಿನ್ ಸಿಗುತ್ತದೆ. ಖನಿಜಾಂಶ, ಪೋಷಕಾಂಶಗಳು ಹೆಚ್ಚಾಗಿದ್ದು, ಕೊಬ್ಬಿನಂಶ ಹಾಗೂ ಪ್ರೋಟಿನ್ ಕಾರಣದಿಂದ ಮಧುಮೇಹವನ್ನು ನಿಯಂತ್ರಣದಲ್ಲಿ ಇಡಬಹುದು. ❖

ಮಸಾಜ್ ಮಾಡಿಸಿಕೊಳ್ಳುವ ಮುನ್ನ

ಡಾ.ಅಮಿತ್ ಕುಲಕರ್ಣಿ

ಒತ್ತಡದ ಬದುಕಿನಲ್ಲಿ ಮೈಮನಸ್ಸು ನಿರಾಳವಾಗಬೇಕು ಎಂದು ಪದೇ ಪದೇ ಬ್ಯೂಟಿಪಾರ್ಲರ್, ಮಸಾಜ್ ಕೇಂದ್ರಗಳಿಗೆ ಭೇಟಿ ನೀಡುತ್ತಿದ್ದರೆ, ಅಲ್ಲಿ ಯದ್ವಾತದ್ವಾ ಮಸಾಜ್ ಮಾಡಿಸಿಕೊಳ್ಳುತ್ತಿದ್ದರೆ ಮತ್ತೊಮ್ಮೆ ಯೋಚಿಸಿ.

ಧಾವಂತದ ಬದುಕಿನಲ್ಲಿ ಮಾನಸಿಕ ಒತ್ತಡ, ಕ್ಲೇಶಗಳು ಹೆಚ್ಚುತ್ತಿವೆ. ಇದರಿಂದ ಮುಕ್ತರಾಗಲು ಸರಳ ಉಪಾಯವಾಗಿ ಮಸಾಜ್ ಮಾಡಿಸಿಕೊಳ್ಳುವ ಟ್ರೆಂಡ್ ಕೂಡ ಹೆಚ್ಚುತ್ತಿದೆ. ಆದರೆ, ಪರಿಣತರಲ್ಲದವರು ಮಾಡುವ ಮಸಾಜ್‌ನಿಂದ ಆಗುವ ಅನಾಹುತಗಳೇ ಹೆಚ್ಚು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿ.

ಸಲೂನ್‌ನಲ್ಲಿ, ಮಸಾಜ್ ಕೇಂದ್ರಗಳಲ್ಲಿ ಕೇಶವಿನ್ಯಾಸಕರು, ಮಸಾಜ್ ಮಾಡುವವರು ಮಸಾಜ್‌ನ ನೆಪದಲ್ಲಿ ಕುತ್ತಿಗೆಯನ್ನು ಹಠಾತ್ತನೆ ತಿರುಗಿಸುವುದರಿಂದ ಪಾರ್ಶ್ವವಾಯುವಿನಂಥ ಗಂಭೀರ ಆರೋಗ್ಯ ಸಮಸ್ಯೆಯನ್ನು ಎದುರಿಸಬೇಕಾಗಬಹುದು.

ಪಾರ್ಲರ್‌ಗಳಲ್ಲಿ ಕೂದಲು ತೊಳೆಯುವಾಗ ಕುತ್ತಿಗೆ ಹಾಗೂ ಬೆನ್ನನ್ನು ಅತಿಯಾಗಿ ಹಿಂದಕ್ಕೆ ಬಾಗಿಸಿದಾಗಲೂ ಕುತ್ತಿಗೆಯ ನರಗಳಿಗೆ ಹಾನಿಯಾಗಬಹುದು. ಇದರಿಂದ ರಕ್ತ ಹೆಪ್ಪುಗಟ್ಟುವಿಕೆಯ ಸಮಸ್ಯೆ ಉಂಟಾಗಬಹುದು. ಹೀಗೆ ರಕ್ತ ಹೆಪ್ಪುಗಟ್ಟಿದರೆ ಮಿದುಳಿಗೆ ಸಮರ್ಪಕವಾಗಿ ರಕ್ತ ಪೂರೈಕೆಯಾಗದೇ ಪಾರ್ಶ್ವವಾಯುವಿನಂಥ ಸಮಸ್ಯೆ ಉಂಟಾಗಬಹುದು. ಅತಿಯಾದ ರಕ್ತದೊತ್ತಡ, ಮಧುಮೇಹ, ಅತಿ ಬೊಜ್ಜು, ಸಂಧಿವಾತ, ಅಸಹಜ ರಕ್ತನಾಳ ಹೊಂದಿರುವವರು, ನರದೌರ್ಬಲ್ಯದಂಥ ಸಮಸ್ಯೆಯಿಂದ ಬಳುತ್ತಿರುವವರು ಹೆಚ್ಚು ಜಾಗ್ರತೆ ವಹಿಸುವುದು ಮುಖ್ಯ.

ಏನು ಮಾಡಬೇಕು?

ಸಲೂನ್‌ನಲ್ಲಿ ಕೂದಲು ತೊಳೆಯುವ ಸಮಯದಲ್ಲಿ ಕುತ್ತಿಗೆಯನ್ನು ಹಿಂದಕ್ಕೆ ಬಾಗಿಸಿದಾಗ ತಲೆ ತಿರುಗುವಿಕೆ ಅಥವಾ ತಲೆಸುತ್ತು ಕಾಣಿಸಿಕೊಂಡರೆ ಕೂಡಲೇ ಮಲಗಿ ವಿಶ್ರಾಂತಿ ಪಡೆಯಿರಿ. ಕಡಿಮೆಯಾಗದೇ ಇದ್ದರೆ ವೈದ್ಯರನ್ನು ನೋಡಿ. ನಿರ್ದಿಷ್ಟ ಸೌಂದರ್ಯ ಚಿಕಿತ್ಸೆ, ಮಸಾಜ್ ಹಾಗೂ ಇತರೆ ಚಿರೋಪ್ರಾಕ್ಟಿಕ್ ಚಿಕಿತ್ಸೆಯ ಸಮಯದಲ್ಲಿ ಕುತ್ತಿಗೆ, ಬೆನ್ನುಹುರಿ ಸೇರಿದಂತೆ ಯಾವುದೇ ಅಂಗಾಂಗಗಳ ಮೇಲೆ ಅತಿಯಾದ ಒತ್ತಡ ಬೀಳುತ್ತಿದೆ ಅನಿಸಿದರೆ, ಕೂಡಲೇ ಸೌಂದರ್ಯತಜ್ಞರಿಗೆ ನಿಲ್ಲಿಸಲು ಹೇಳಿ. ಕುತ್ತಿಗೆ ಹಾಗೂ ತಲೆಯ ಮೇಲೆ ಹಠಾತ್ ತಣ್ಣೀರು ಸುರಿಯುವುದರಿಂದಲೂ ಪಾರ್ಶ್ವವಾಯು ಸಂಭವಿಸುವ ಸಾಧ್ಯತೆ ಇರುತ್ತದೆ ಸೌಂದರ್ಯಚಿಕಿತ್ಸೆಯ ಸಮಯದಲ್ಲಿ ಮಿದುಳಿನ ಮೇಲೆ ಒತ್ತಡ ಬಿದ್ದು, ಪಾರ್ಶ್ವವಾಯು ಸಂಭವಿಸಿದರೆ ಹಠಾತ್ ದೌರ್ಬಲ್ಯ, ಮಾತು ಹಾಗೂ ಗ್ರಹಿಕೆಯಲ್ಲಿ ಸಮಸ್ಯೆಗಳು, ತೀವ್ರ ತಲೆನೋವು, ತಲೆತಿರುಗುವಿಕೆ, ದೇಹ ಸಮತೋಲನದಲ್ಲಿ ಇಲ್ಲದೇ ಇರುವುದು, ದೃಷ್ಟಿಯಲ್ಲಿ ಬದಲಾವಣೆ ಕಾಣಿಸಿಕೊಳ್ಳಬಹುದು. ❖

ನೆನಪಿರಲಿ

- ಬಹುತೇಕ ಎಲ್ಲ ಪ್ರಮುಖ ರಕ್ತನಾಳಗಳು ಮತ್ತು ನರಗಳು ಕುತ್ತಿಗೆಯ ಮೂಲಕ ಹಾದುಹೋಗುವುದರಿಂದ ಕುತ್ತಿಗೆ ದೇಹದ ನಿರ್ಣಾಯಕ ಭಾಗವಾಗಿದೆ. ಹಾಗಾಗಿ ಯಾರಿಗಾದರೂ ಕುತ್ತಿಗೆ ಕೊಡುವ ಮುಂಚೆ ಎರಡು ಬಾರಿ ಯೋಚಿಸಿ.
- ಅಂಗರಚನಾವಿಜ್ಞಾನವನ್ನು ಸರಿಯಾಗಿ ಅರ್ಥ ಮಾಡಿಕೊಂಡು, ತರಬೇತಿ ಪಡೆದ ಸೌಂದರ್ಯತಜ್ಞರಿಂದ ಮಾತ್ರ ಮಸಾಜ್ ಮಾಡಿಸಿಕೊಳ್ಳುವುದು ಒಳ್ಳೆಯದು
- ಕ್ಷಣಿಕ ನಿರಾಳತೆಯನ್ನು ಅನುಭವಿಸುವ ಸಲುವಾಗಿ ಕಳಪೆ ಮಟ್ಟದ, ವೃತ್ತಿಪರರಲ್ಲದವರಿಂದ ಮಸಾಜ್ ಮಾಡಿಸಿಕೊಳ್ಳಬೇಡಿ.
- ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ.
- ತಲೆ ಮತ್ತು ಕುತ್ತಿಗೆಗೆ ನೀರು ಹಾಕುವಾಗ ಸಾಧ್ಯವಾದಷ್ಟು ತಣ್ಣೀರಿನ ಬದಲು ಬೆಚ್ಚಗಿನ ನೀರನ್ನು ಬಳಸಿ.
- ಸೌಂದರ್ಯತಜ್ಞರು ಯಾವುದೇ ಚಿಕಿತ್ಸೆ ನೀಡುವ ಮೊದಲು ಗ್ರಾಹಕರ ಕುತ್ತಿಗೆಯನ್ನು ಆರಾಮದಾಯಕ ಭಂಗಿಯಲ್ಲಿ ಇರಿಸಲಾಗಿದೆಯೇ ಎಂಬುದನ್ನು ಪರೀಕ್ಷಿಸಿಕೊಳ್ಳಬೇಕು. ಕುತ್ತಿಗೆ ಹಾಗೂ ಬೆನ್ನುಹುರಿಯ ಮೇಲೆ ಪದೇ ಪದೇ ಒತ್ತಡ ಹಾಕದಂತೆ ನೋಡಿಕೊಳ್ಳಿ.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಅಧ್ಯಾಯ–6 ತ್ರಿಭುಜ

ಅಭ್ಯಾಸ– 6.3

10) CD ಮತ್ತು GHಗಳು ಕ್ರಮವಾಗಿ ∠ACB ಮತ್ತು ∠EGFಗಳ ಕೋನಾರ್ಧಕ ರೇಖೆಗಳಾಗಿರುವಂತೆ D ಮತ್ತು H ಬಿಂದುಗಳು ಕ್ರಮವಾಗಿ ΔABC ಮತ್ತು ΔEFGಯ ಬಾಹುಗಳಾದ AB ಮತ್ತು FE ಮೇಲೆ ಇವೆ. ΔABC ~ ΔEFG ಆದರೆ

(i) CD/GH = AC/FG
(ii) ΔDCB ~ ΔHGE (iii) ΔDCA ~ ΔHGF

ಪರಿಹಾರ: (...............ಹಿಂದಿನ ಸಂಚಿಕೆಯಿಂದ)

ΔACD ಮತ್ತು ΔFGH ದಲ್ಲಿ

$\angle A = \angle F$

$\angle ACD = \angle FGH$

∴ ΔACD ~ ΔFGH (AA similarity criterion)

$$\frac{CD}{GH} = \frac{AC}{FG}$$

(ii) ΔDCB ಮತ್ತು ΔHGE ದಲ್ಲಿ

$\angle DCB = \angle HGE$ (ಈಗಾಗಲೇ ಸಾಧಿಸಿದೆ)

$\angle B = \angle E$ (ಈಗಾಗಲೇ ಸಾಧಿಸಿದೆ)

∴ ΔDCB ~ ΔHGE (AA similarity criterion)

(iii) ΔDCA ಮತ್ತು ΔHGF ದಲ್ಲಿ

$\angle ACD = \angle FGH$ (ಈಗಾಗಲೇ ಸಾಧಿಸಿದೆ)

$\angle A = \angle F$ (ಈಗಾಗಲೇ ಸಾಧಿಸಿದೆ)

∴ ΔDCA ~ ΔHGF (AA similarity criterion)

11) ಚಿತ್ರ 6.40 ಯಲ್ಲಿ ಸಮದ್ವಿಬಾಹು ತ್ರಿಭುಜ ABCಯಲ್ಲಿ AB = AC, E ಯು CB ಯನ್ನು ವೃದ್ಧಿಸಿದ ರೇಖೆಯ ಮೇಲಿನ ಒಂದು ಬಿಂದು AD ⊥ BC, EF ⊥ AC ಆದರೆ ΔABD ~ ΔECF ಎಂದು ಸಾಧಿಸಿ.



ಪರಿಹಾರ: ಸಮದ್ವಿಬಾಹು ತ್ರಿಭುಜ ABCದಲ್ಲಿ

AB = AC (ದತ್ತ)

⇒ $\angle ABD = \angle ECF$

ΔABD ಮತ್ತು ΔECFದಲ್ಲಿ

$\angle ADB = \angle EFC$ (ಪ್ರತಿಯೊಂದು 90°)

$\angle BAD = \angle CEF$

∴ ΔABD ~ ΔECF (using AA similarity criterion)

12) ಚಿತ್ರ 6.41ರಲ್ಲಿ ΔABC ಯ ಬಾಹುಗಳಾದ AB ಮತ್ತು BC ಹಾಗೂ ಮಧ್ಯರೇಖೆ ADಗಳು ಕ್ರಮವಾಗಿ ΔPQRನ ಬಾಹುಗಳಾದ PQಮತ್ತು QR ಹಾಗೂ ಮಧ್ಯರೇಖೆ PMನೊಂದಿಗೆ ಸಮಾನುಪಾತ ದಲ್ಲಿದ್ದರೆ ΔABC ~ ΔPQR ಎಂದು ಸಾಧಿಸಿ.



ಪರಿಹಾರ: ΔABC ಯ ಬಾಹುಗಳಾದ AB ಮತ್ತು BC ಹಾಗೂ ಮಧ್ಯರೇಖೆ AD ಗಳು ಕ್ರಮವಾಗಿ ΔPQRನ ಬಾಹುಗಳಾದ PQ ಮತ್ತು QR ಹಾಗೂ ಮಧ್ಯರೇಖೆ PM ನೊಂದಿಗೆ ಸಮಾನುಪಾತ ದಲ್ಲಿದೆ (ದತ್ತ)

$$\frac{AB}{PQ} = \frac{BC}{QR} = \frac{AD}{PM}$$

ಸಾಧಿಸಿ:– ΔABC ~ ΔPQR

ಸಾಧಿನೆ:–

$$\frac{AB}{PQ} = \frac{BC}{QR} = \frac{AD}{PM}$$

$$\frac{AB}{PQ} = \frac{\frac{1}{2}BC}{\frac{1}{2}QR} = \frac{AD}{PM}$$

$$\Rightarrow \frac{AB}{PQ} = \frac{BC}{QR} = \frac{AD}{PM}$$

(D ಯು BC ಮೇಲೆ ಮಧ್ಯಬಿಂದುವಾಗಿದೆ. Mಯು QR ಮೇಲೆ ಮಧ್ಯಬಿಂದುವಾಗಿದೆ)

⇒ ΔABD ~ ΔPQM [SSS similarity criterion]

∴ $\angle ABD = \angle PQM$ [ಸಮರೂಪ ತ್ರಿಭುಜದ ಅನುರೂಪ ಕೋನಗಳು)

⇒ $\angle ABC = \angle PQR$

ΔABC ಮತ್ತು ΔPQR ದಲ್ಲಿ

$$\frac{AB}{PQ} = \frac{BC}{QR} \quad \text{..........................(1)}$$

$\angle ABC = \angle PQR$ ....(ii)

ಸಮೀಕರಣ (i) ಮತ್ತು (ii) ರಿಂದ

ΔABC ~ ΔPQR [SAS similarity criterion]

13) ΔABCಯಲ್ಲಿ ∠ADC=∠BAC ಆಗುವಂತೆ Dಯು BC ಬಾಹುವಿನ ಮೇಲಿನ ಒಂದು ಬಿಂದುವಾಗಿದೆ. ಆದರೆ $CA^2 = CB.CD$ ಎಂದು ಸಾಧಿಸಿ

ಪರಿಹಾರ:– ΔABCದಲ್ಲಿ Dಯು BC ಬಾಹುವಿನ ಮೇಲಿನ ಒಂದು ಬಿಂದುವಾಗಿದೆ (ದತ್ತ)

$\angle ADC = \angle BAC$.



ΔADC ಮತ್ತು ΔBAC,

$\angle ADC = \angle BAC$

$\angle ACD = \angle BCA$ (ಸಾಮಾನ್ಯ ಕೋನ)

∴ ΔADC ~ ΔBAC (AA similarity criterion)

$$\therefore \frac{CA}{CB} = \frac{CD}{CA}$$

⇒ $CA^2 = CB.CD$. ಸಾಧಿಸಿದೆ

14) ΔABC ಯು ಬಾಹುಗಳಾದ AB ಮತ್ತು AC ಗಳು ಹಾಗೂ ಮಧ್ಯರೇಖೆ AD ಯು ಕ್ರಮವಾಗಿ ΔPQRನ ಬಾಹುಗಳಾದ PQ ಮತ್ತು PR ಹಾಗೂ ಮಧ್ಯರೇಖೆ PM ನೊಂದಿಗೆ ಸಮಾನುಪಾತ ಹೊಂದಿದ್ದರೆ ΔABC ~ ΔPQR ಎಂದು ಸಾಧಿಸಿ



(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

CURRENT ELECTRICITY

8. What is the function of high resistance R connected in series with the galvanometer? Does this high resistance R affect the balance point?

Ans:- The high resistance R is connected in series with the galvanometer to avoid large current through it. Large current through the galvanometer damages it. The high resistance R does not affect the balance point in any manner.

9. Give reasons why sometimes the balance point in the potentiometer is not obtained.

Ans:- Sometimes the balance point in the potentiometer is not obtained because –

a) e.m.f of the driver cell may be greater than the potential difference across the whole wire of the potentiometer.

b) The connections may be wrong.

10. (a) Can Kirchoff's laws be applied both to direct current and alternating current circuits?

(b) Why is the Wheatstone bridge method for measuring resistance more accurate than the other methods?

Ans:- (a) Yes, Kirchoff's laws can be applied to both direct current and alternating current circuits.

(b) Wheatstone bridge method is a null position method. Therefore, accuracy of recording the reading of the instrument and internal resistance of source do not matter. The Wheatstone bridge method is preferred for its simplicity also.

11. A potentiometer of longer wire is more sensitive. Explain.

Ans:- If the length of the wire of the potentiometer is longer, the fall of potential per unit length of the wire is small.

Eg:- Consider a source of 1.5 V and wire of length 100 cm. Then, potential per unit length is

$$\frac{1.5}{100}\,\text{V cm}^{-1} = 0.0015\,\text{V cm}^{-1}$$

Thus the potentiometer of longer wire can measure very small potential difference even and hence is more sensitive/accurate.

12. A slider or a jockey is scraped (rubbed) over the potentiometer's wire while finding the balance point by a student. Is there any harmful effect of the same?

Ans:- The scraping of a slider or a jockey over the wire of the potentiometer will harm the uniformity of the wire. Thus the resistance of the wire will change and the potential drop will not be proportional to the length of the segment of the wire (which is the basic principle of the potentiometer).

13. Voltmeter reads less value of e.m.f. than the potentiometer. Is it true?

Ans:- E.M.F of a cell is equal to the terminal p.d of a cell when no current is drawn from the cell. Potentiometer uses a null method i.e., it draws no current from the cell. Hence, the terminal p.d measured by it is exactly equal to the e.m.f. of the cell. On the other hand, voltmeter draws some current, however, small it may be. Thus, there is a definite potential drop across the voltmeter. Hence, the p.d measured by the voltmeter is less than the e.m.f of the cell.

14. **(a) Why should the e.m.f of the driver cell in the potentiometer experiment should be greater than the e.m.f of the cell to be measured?**

(b) No error is introduced by the internal resistance of the cells when the potentiometer is used to compare the e.m.fs of the cells. Explain why?

Ans:- (a) If the e.m.f of the driver cell is less than the e.m.f of the cell to be measured, than the balance point will not be obtained.

(b) This is because no current flows through the cells at the balance points and hence there is no potential drop across the internal resistance.

15. Name 2 practical forms of Wheatstone bridge.

Ans:- Meter Bridge, Post office box, Carey Foster Bridge.

16. Why is the meter bridge given this name?

Ans:- Because it consists of 1 m long wire.

17. What is the principle of potentiometer?

Ans:- The potential difference across any part of the uniform wire carrying steady current is directly proportional to the length of that part of the wire.

18. Of what material is normally potentiometer wire made and why?

Ans:- Alloys Manganin/Eureka or Constantan. They have high resistivity and low temperature coefficient.

19. What is the use of a potentiometer?

Ans:- Potentiometer can be mainly used to -

i) compare the e.m.f's of two cells and

ii) determine the internal resistance of the cell.

20. How can you increase the sensitivity of a given potentiometer with resistance box?

Ans:- Resistance box when added in series to the circuit of potentiometer decreases the current in the wire, thus fall of potential per unit length will decrease making it more sensitive (because of less least count).

(Contd………)

‘ಮುಖ್ಯಮಂತ್ರಿ ಸ್ಥಾನದಲ್ಲಿದ್ದೇ ಪ್ರಕರಣ ವಾಪಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೋಗಿ ಆದಿತ್ಯನಾಥ ಅವರು ಉತ್ತರಪ್ರದೇಶ ಮುಖ್ಯಮಂತ್ರಿ ಸ್ಥಾನದಲ್ಲಿದ್ದು ಕೊಂಡೇ ತಮ್ಮ ವಿರುದ್ಧದ ಹಲವು ಪ್ರಕರಣಗಳನ್ನು ವಾಪಸ್ ಪಡೆದಿದ್ದಾರೆ. ಹೀಗಿರುವಾಗ, ಕಾಂಗ್ರೆಸ್‌ಸರ್ಕಾರದ ನಿರ್ಧಾರ ಪ್ರಶ್ನಿಸಲು ಬಿಜೆಪಿಗೆ ನೈತಿಕತೆ ಇದೆಯೇ ಎಂದು ಗೃಹ ಸಚಿವ ಜಿ.ಪರಮೇಶ್ವರ ಪ್ರಶ್ನಿಸಿದರು.

ಜಿ. ಪರಮೇಶ್ವರ

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ಬಿಜೆಪಿ ಆಡಳಿತ ಇರುವ ರಾಜ್ಯಗಳಲ್ಲೂ ಹಲವು ಪ್ರಕರಣ ಗಳನ್ನು ವಾಪಸ್ ಪಡೆಯಲಾಗಿದೆ. ಬಿಜೆಪಿಯದು ಕಾಮಾಲೆ ಕಣ್ಣು, ಕಾಂಗ್ರೆಸ್ ಹಾಗೂ ಬಿಜೆಪಿಯೇತರ ಸರ್ಕಾರಗಳು ಮಾಡುವ ಎಲ್ಲ ಕೆಲಸಗಳೂ ಅವರಿಗೆ ಹಳದಿಯಾಗೇ ಕಾಣುತ್ತವೆ ಎಂದು ಟೀಕಿಸಿದರು.

ಹುಬ್ಬಳ್ಳಿ ಪ್ರಕರಣ ಅಷ್ಟೇ ಅಲ್ಲ, ರೈತರು, ವಿದ್ಯಾರ್ಥಿಗಳು, ಸಾಮಾನ್ಯ ಜನರು ಕೈಗೊಂಡಿದ್ದ ಪ್ರತಿಭಟನೆಯ ಪ್ರಕರಣಗಳನ್ನೂ ಹಿಂಪಡೆಯಲು ಸಂಪುಟ ಸಭೆ ಸಮ್ಮತಿ ನೀಡಿದೆ. 56 ಪ್ರಕರಣಗಳಲ್ಲಿ 43 ಪ್ರಕರಣ ವಾಪಸ್ ಪಡೆಯಲು ಒಪ್ಪಿಗೆ ನೀಡಲಾಗಿದೆ. ಆದರೆ, ಹುಬ್ಬಳ್ಳಿ ಪ್ರಕರಣವನ್ನು ಮಾತ್ರ ಹಿಂಪಡೆಯಲಾಗಿದೆ ಅಥವಾ 43 ಪ್ರಕರಣಗಳೂ ಅಲ್ಪಸಂಖ್ಯಾತರಿಗೆ ಸೇರಿವೆ ಎನ್ನುವಂತೆ ಬಿಜೆಪಿ ಅಪಪ್ರಚಾರ ನಡೆಸಿದೆ ಎಂದು ದೂರಿದರು.

ಹುಬ್ಬಳ್ಳಿ ಗಲಭೆ ಪ್ರಕರಣ: ಸರ್ಕಾರದ ನಿರ್ಧಾರದ ವಿರುದ್ಧ ಬಿಜೆಪಿಯಿಂದ ಪ್ರತಿಭಟನೆ

‘ತುಷ್ಟೀಕರಣಕ್ಕಾಗಿ ಕೇಸ್ ವಾಪಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳ್ಳಿಯಲ್ಲಿ 2022ರಲ್ಲಿ ನಡೆದ ಗಲಭೆ ವೇಳೆ ಪೊಲೀಸ್ ಠಾಣೆ ಮೇಲೆ ದಾಳಿ ನಡೆಸಿದ ಆರೋಪಿಗಳ ವಿರುದ್ಧ ದಾಖಲಿಸಿದ್ದ ಪ್ರಕರಣಗಳನ್ನು ಹಿಂದಕ್ಕೆ ಪಡೆದ ಸರ್ಕಾರದ ಕ್ರಮವನ್ನು ವಿರೋಧಿಸಿ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು. ಬಳಿಕ ರಾಜ್ಯಪಾಲರನ್ನು ಭೇಟಿ ಮಾಡಿ ಸರ್ಕಾರದ ವಿರುದ್ಧ ದೂರು ಸಲ್ಲಿಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ. ವೈ. ವಿಜಯೇಂದ್ರ ಮಾತನಾಡಿ, ‘ರಾಜ್ಯದಲ್ಲಿ ಹಿಂದೂ ವಿರೋಧಿ ಸರ್ಕಾರವಿದೆ. ಅಲ್ಪಸಂಖ್ಯಾತರ ತುಷ್ಟೀಕರಣಕ್ಕಾಗಿ ದೇಶದ್ರೋಹಿಗಳನ್ನು ರಕ್ಷಿಸುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ’ ಎಂದರು.

‘ಹುಬ್ಬಳ್ಳಿಯಲ್ಲಿ ಗಲಭೆ ವೇಳೆ ಪೊಲೀಸ್ ಠಾಣೆ ಮೇಲೆ ಕಲ್ಲೆಸೆದು, ದಾಳಿ ನಡೆಸಿ, ಗಲಭೆ ಸೃಷ್ಟಿಸಿದ್ದ ದೇಶ ದ್ರೋಹಿಗಳ ಮೇಲಿನ ಪ್ರಕರಣಗಳನ್ನು ಸರ್ಕಾರ ಹಿಂದಕ್ಕೆ ಪಡೆದಿದೆ. ಈ ಘಟನೆಗೆ ಸಂಬಂಧಿಸಿದಂತೆ ಎನ್‌ಐಎ ತನಿಖೆಯೂ ನಡೆಯುತ್ತಿದೆ. ಮುಖ್ಯಮಂತ್ರಿಗಳ ಕುರ್ಚಿ ಅಲ್ಲಾಡುತ್ತಿದ್ದು, ಅದನ್ನು ಉಳಿಸಿ ಕೊಳ್ಳಲು ನಡೆಸುತ್ತಿರುವ ಕಸರತ್ತುಗಳ ಪೈಕಿ ಇದೂ ಒಂದು’ ಎಂದು ಅವರು ದೂರಿದರು. ‘ಕಾಂಗ್ರೆಸ್ ಶಾಸಕ ರಾಜೂ ಕಾಗೆ ಅವರು ಇಂತಹ ಸರ್ಕಾರದಲ್ಲಿ ಶಾಸಕರಾಗಿ ಇರುವುದಕ್ಕಿಂತ ಆತ್ಮಹತ್ಯೆ ಮಾಡಿಕೊಳ್ಳುವುದೇ ಲೇಸು ಎಂದಿದ್ದಾರೆ. ಕಾಂಗ್ರೆಸ್ ಶಾಸಕರೇ ಭ್ರಮನಿರಸನ ಗೊಂಡಿದ್ದಾರೆ. ಭ್ರಷ್ಟಾಚಾರ ತಾರಕ ಕ್ಕೇರಿದ್ದು, ಸಿದ್ದರಾಮಯ್ಯ ರಾಜೀನಾಮೆ ನೀಡುವ ಕಾಲ ಸನ್ನಿಹಿತವಾಗಿದೆ’ ಎಂದರು. ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಅವರು ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲ. ಸಿದ್ದರಾಮಯ್ಯ ಐದು ವರ್ಷ ಮುಖ್ಯಮಂತ್ರಿ ಆಗಿಯೇ ಇರುತ್ತಾರೆ ಎನ್ನುವುದನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಂದ ಹೇಳಿಸಲಿ ನೋಡೋಣ ಎಂದು ಸವಾಲೆಸೆದರು. ‘ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯ ರಾಜಕಾರಣದ ಕುರಿತು ಮಾತನಾಡದೇ ತಪ್ಪಿಸಿಕೊಂಡು ಓಡಾಡುತ್ತಿದ್ದಾರೆ. ನಮ್ಮ ಪಕ್ಷದ ಹೋರಾಟದ ಬಳಿಕ ಸಿದ್ದರಾಮಯ್ಯ ಮುಡಾ ಹಗರಣದಲ್ಲಿ ‘ಕದ್ದ ಮಾಲು’ ವಾಪಸ್ ಮಾಡಿದ್ದಾರೆ. ಆದರೆ, ಕಾನೂನಿನಿಂದ ತಪ್ಪಿಸಿಕೊಳ್ಳಲು ಸಾಧ್ಯವೇ? ಅವರ ಪಾಪದ ಕೊಡ ತುಂಬಿದೆ. ಅವರು ರಾಜೀನಾಮೆ ಕೊಡುವುದು ಸೂರ್ಯಚಂದ್ರರು ಇರುವಷ್ಟೇ ಸತ್ಯ’ ಎಂದು ವಿಜಯೇಂದ್ರ ಹೇಳಿದರು. ಪ್ರತಿಭಟನೆಯಲ್ಲಿ ಸಂಸದ ಗೋವಿಂದ ಕಾರಜೋಳ, ಡಾ. ಸಿ.ಎನ್. ಅಶ್ವತ್ಥ-ನಾರಾಯಣ, ಎಸ್. ಆರ್. ವಿಶ್ವನಾಥ್, ವಿಧಾನಪರಿಷತ್ ಸದಸ್ಯರಾದ ಎನ್.ರವಿಕುಮಾರ್, ಸಿ.ಟಿ.ರವಿ ಪಾಲ್ಗೊಂಡಿದ್ದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು. ವಿಧಾನಸಭೆ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

> **ಆರೋಪಿಗಳ ವಿರುದ್ಧದ ಪ್ರಕರಣ ವಾಪಸ್ ತೆಗೆದುಕೊಳ್ಳುವ ನಿರ್ಧಾರ ಖಂಡಿಸಿ, ಕಾನೂನು ಸಚಿವ ಎಚ್.ಕೆ.ಪಾಟೀಲ ರಾಜೀನಾಮೆ ನೀಡಬೇಕಿತ್ತು**
> **ವಿ.ಸುನಿಲ್ ಕುಮಾರ್**
> ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ, ಬಿಜೆಪಿ

ದೂರು ಸಲ್ಲಿಕೆ

‘ಮತ ಬ್ಯಾಂಕ್ ರಾಜಕಾರಣ ಮತ್ತು ಹಗರಣಗಳನ್ನು ಮರೆ ಮಾಚಲು ಕ್ರಿಮಿನಲ್ ಪ್ರಕರಣ ಗಳನ್ನು ಹಿಂದಕ್ಕೆ ಪಡೆಯಲು ಕಾಂಗ್ರೆಸ್ ಸರ್ಕಾರ ಮುಂದಾಗಿದೆ. ಇದಕ್ಕೆ ಕಡಿವಾಣ ಹಾಕಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ನೇತೃತ್ವದ ನಿಯೋಗ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿತು.

ಆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅಶೋಕ ಅವರು, ‘ಕುರ್ಚಿ ಅಲುಗಾಡುತ್ತಿರುವ ಸಮಯದಲ್ಲಿ ಮುಸ್ಲಿಮರು ನನ್ನ ಪರವಾಗಿದ್ದಾರೆ ಎಂದು ತೋರಿಸಿಕೊಳ್ಳಲು ಸಿದ್ದರಾಮಯ್ಯ ಅವರು ಇಂತಹ ನಿರ್ಧಾರ ಮಾಡಿದ್ದಾರೆ’ ಎಂದರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯ ಣಸ್ವಾಮಿ, ‘ಹಿಂದೂ ಗಳು ತಾವು ಹಿಂದೂ ಎಂದ ತಕ್ಷಣ ನಿಮಗ್ಯಾಕೆ ಹೊಟ್ಟೆಯಲ್ಲಿ ಬೆಂಕಿ ಬೀಳುತ್ತದೆ. ಕಾಂಗ್ರೆಸ್ ಇದಕ್ಕೆ ಉತ್ತರ ಕೊಡಲು ಸಾಧ್ಯವೇ? ಪೊಲೀಸರ ಮೇಲೆ ಕಲ್ಲು ತೂರಿ ಆಸ್ಪತ್ರೆ ಸೇರುವಂತೆ ಮಾಡಿದವರ ಮೇಲಿನ ಕೇಸುಗಳನ್ನು ಹಿಂದಕ್ಕೆ ಪಡೆಯುತ್ತಿರುವುದು ಅಕ್ಷಮ್ಯ’ ಎಂದರು.

‘ಪ್ರೇರಣಾ ಟ್ರಸ್ಟ್‌ಗೆ ಹಣ ಎಲ್ಲಿಂದ ಬಂತು ತಿಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಧವಳಗಿರಿ, ಪ್ರೇರಣಾ ಟ್ರಸ್ಟ್‌ಗೆ ಹಣ ಹಾಗೂ ಜಮೀನು ಎಲ್ಲಿಂದ ಬಂತು ಎನ್ನುವ ಕುರಿತು ಮಾಹಿತಿ ಬಹಿರಂಗಪಡಿಸಬೇಕು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಆಗ್ರಹಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ಯಡಿಯೂರಪ್ಪ ಜೈಲಿಗೆ ಹೋಗಿದ್ದು ಏಕೆ? ಅವರ ಹೆಸರಿನಲ್ಲಿ ‘ಛೋಟಾ’ ಸಹಿ ಮಾಡಿದ್ದು ಯಾರು? ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಈಗಲೂ ಜಾಮೀನಿನ ಮೇಲೆ ಇರುವುದು ಏಕೆ? ಅಫಿಡವಿಟ್‌ನಲ್ಲಿ ಬರೆದುಕೊಂಡ ವಿವರಗಳು ಏನು? ಸಿದ್ದರಾಮಯ್ಯ ರಾಜೀನಾಮೆ ಕೇಳುವ ಮೊದಲು ಈ ಪ್ರಶ್ನೆಗಳಿಗೆ ಉತ್ತರ ಕೊಡಬೇಕು ಎಂದು ಒತ್ತಾಯಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಂದ ಬಹುಮತ ಪಡೆದು ಆಯ್ಕೆಯಾದ ಸರ್ಕಾರ ಕೆಡವಲು ಬಿಜೆಪಿ ನಿರಂತರ ಪ್ರಯತ್ನ ಮಾಡುತ್ತಿದೆ. ತಮ್ಮ ಸೋಲಿಗೆ ವಿಮರ್ಶೆ ಮಾಡಿಕೊಂಡು ವಿರೋಧ ಪಕ್ಷವಾಗಿ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಜನರ ಸರ್ಕಾರಕ್ಕೆ ಅಡ್ಡಗಾಲು ಹಾಕುವ ಕೆಲಸ ಮಾಡಬಾರದು. ಬಿಜೆಪಿ ಸದ್ಯದಲ್ಲೇ ಧವಳಗಿರಿ, ಪ್ರೇರಣಾ ಟ್ರಸ್ಟ್ ವಿರುದ್ಧವೇ ಹೋರಾಟ ಮಾಡಲಿದೆ. ಬಿಜೆಪಿ ಮೇಲುನೋಟಕ್ಕೆ ಕಾಂಗ್ರೆಸ್, ಸಿದ್ದರಾಮಯ್ಯ ವಿರುದ್ಧ ಇದೆ ಎನಿಸುತ್ತಿದೆ. ಆದರೆ, ಅವರ ಗುರಿ ವಿಜಯೇಂದ್ರ ಅವರನ್ನು ಕೆಳಗೆ ಇಳಿಸುವುದು ಎಂದರು.

ಮಧು ಬಂಗಾರಪ್ಪ

‘ತೀರ್ಥಹಳ್ಳಿ ಶಾಸಕ ಆರಗ ಜ್ಞಾನೇಂದ್ರ ವಿರುದ್ಧವು ದೂರು ಬಂದಿದೆ. ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಅಕ್ರಮ ಮಾಡಿದ, ನಿಯಮ ಉಲ್ಲಂಘಿಸಿ ಪಡೆದ ಎಲ್ಲ ಜಮೀನು, ನಿವೇಶನವನ್ನು ಸರ್ಕಾರ ವಾಪಸ್ ಪಡೆಯಲು ಒತ್ತಾಯಿಸುತ್ತೇವೆ’ ಎಂದು ತಿಳಿಸಿದರು.

‘ಕಡಲೆ ಬೆಳೆವವರಿಗಿರುವ ಜ್ಞಾನ ಅಶೋಕಗೆ ಇಲ್ಲ’

ಬೆಂಗಳೂರು: ‘ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು, ಜಿಎಸ್‌ಟಿ ಸಭೆಗೆ ಹೋಗುವ ಪ್ರತಿನಿಧಿ ಕಡಲೆಕಾಯಿ ತಿನ್ನುತ್ತಾರಾ ಎಂದಿರುವುದು ಕೀಳುಮಟ್ಟದ ಹೇಳಿಕೆ’ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

‘ಅಶೋಕ ಅವರ ಹೇಳಿಕೆ ಓದಿ ನಿಜಕ್ಕೂ ಆಘಾತವಾಯಿತು. ಜವಾಬ್ದಾರಿಯುತ ಸ್ಥಾನದಲ್ಲಿರುವವರು ಮತ್ತು ಈ ಹಿಂದೆ ಕಂದಾಯ ಇಲಾಖೆ ಸಚಿವರಾಗಿದ್ದವರಿಗೆ ಜಿಎಸ್‌ಟಿ ಸಮಿತಿ ಮತ್ತು ಹಣಕಾಸು ಆಯೋಗದ ನಡುವಿನ ವ್ಯತ್ಯಾಸವೂ ಗೊತ್ತಿಲ್ಲದಿರುವುದು ಅಚ್ಚರಿಯ ಸಂಗತಿ’ ಎಂದರು. ‘ಸಿದ್ದರಾಮಯ್ಯ ಅವರನ್ನು ಟೀಕಿಸುವ ಭರದಲ್ಲಿ ನನ್ನ ವಿರುದ್ಧವೂ ಕೀಳುಮಟ್ಟದ ಹೇಳಿಕೆ ನೀಡಿದ್ದಾರೆ. ಜಿಎಸ್‌ಟಿ ಸಮಿತಿ, ಹಣಕಾಸು ಆಯೋಗ ಬೇರೆ ಬೇರೆ ಎಂಬ ಕುರಿತು ಕಡಲೆಕಾಯಿ ಬೆಳೆವ ರೈತನಿಗೆ ಇರುವಷ್ಟು ಕನಿಷ್ಠ ಜ್ಞಾನ ಅಶೋಕ ಅವರಿಗೆ ಇಲ್ಲದಿರುವುದು ಈ ನಾಡಿನ ದೌರ್ಭಾಗ್ಯ’ ಎಂದರು.

‘ಬಿಜೆಪಿ, ಆರ್‌ಎಸ್‌ಎಸ್ ಪಡೆದ ಭೂಮಿ ಹಿಂದಿರುಗಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಹುಲ್ ಖರ್ಗೆ ಅವರ ಮಾದರಿಯಲ್ಲೇ ಬಿಜೆಪಿ ಹಾಗೂ ಆರ್‌ಎಸ್‌ಎಸ್ ತಮಗೆ ಹಂಚಿಕೆಯಾಗಿದ್ದ ಜಮೀನು, ನಿವೇಶನ-ಗಳನ್ನು ಹಿಂದಿರುಗಿಸಿ ರಾಜ್ಯದ ಜನರಿಗೆ ಆದರ್ಶವಾಗಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ ಒತ್ತಾಯಿಸಿದ್ದಾರೆ.

ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ನಿಯಮಾನುಸಾರ ಹಂಚಿಕೆಯಾಗಿದ್ದ ಐದು ಎಕರೆ ಜಮೀನನ್ನು ಸರ್ಕಾರಕ್ಕೆ ಹಿಂದಿರುಗಿಸುವ ಮೂಲಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ರಾಹುಲ್ ಅನುಸರಿಸಿದ ನಡೆಯನ್ನೇ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನುಸರಿಸಬೇಕು ಎನ್ನುವುದು ಎಲ್ಲರ ಆಶಯ ಎಂದಿದ್ದಾರೆ.

ಐದು ದಶಕಗಳಿಂದಲೂ ಪರಿಶುದ್ಧ ರಾಜಕೀಯ ಜೀವನ ನಡೆಸಿಕೊಂಡು ಬಂದಿರುವ ಖರ್ಗೆ ಅವರ ಕುಟುಂಬದ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಲಾಗಿದೆ. ನಿರುದ್ಯೋಗಿಗಳಿಗೆ ತರಬೇತಿ ಮತ್ತು ಸಂಶೋಧನಾ ತರಬೇತಿ ನೀಡಲು ಬಹುಕೌಶಲ ಅಭಿವೃದ್ಧಿ ಕೇಂದ್ರ ಸ್ಥಾಪಿಸಲು ನಿವೇಶನ ಪಡೆಯಲಾಗಿತ್ತು. ಕಾನೂನು ಬದ್ಧವಾಗಿ ಪೂರ್ತಿ ಹಣ ಪಾವತಿಸಲಾಗಿತ್ತು. ಸುಳ್ಳು ಹಾಗೂ ಅಪಪ್ರಚಾರಕ್ಕೆ ಸಿಲುಕಬಾರದು ಎಂಬ ಕಾರಣಕ್ಕೆ ನ್ಯಾಯಬದ್ಧವಾಗಿ ಲಭ್ಯವಾಗಿದ್ದ ಜಮೀನನ್ನು ಹಿಂದಿರುಗಿಸಿ ಮೇಲ್ಪಂಕ್ತಿ ಹಾಕಿದ್ದಾರೆ. ಸದಾ ‘ಮೊಸರಲ್ಲಿ ಕಲ್ಲು ಹುಡುಕುವ’ ಪ್ರತಿಪಕ್ಷಗಳು ತಾವು ಅದೇ ಮಾದರಿಯಲ್ಲಿ ನಡೆಯಬೇಕು ಎಂದು ಸಲಹೆ ನೀಡಿದ್ದಾರೆ.

ಮಂಜುನಾಥ ಭಂಡಾರಿ

ಬಿರಿಯಾನಿ ಹೋಟೆಲ್‌ಗೆ ಜಾಗ: ವಿಧಾನಪರಿಷತ್ ವಿರೋಧ ಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಅವರು ಶಿಕ್ಷಣ ಸಂಸ್ಥೆ ಸ್ಥಾಪಿಸುವುದಾಗಿ ಕರ್ನಾಟಕ ಗೃಹ ಮಂಡಳಿಯಿಂದ ನಿವೇಶನ ಪಡೆದು ಈಗ ಆ ಜಾಗದಲ್ಲಿ ಬಿರಿಯಾನಿ ಹೋಟೆಲ್ ನಡೆಸುತ್ತಿದ್ದಾರೆ. ಅವರೂ ನಿವೇಶನ ಹಿಂದಿರುಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಬಿಜೆಪಿ ಸರ್ಕಾರ ದೇವನಹಳ್ಳಿ ಸಮೀಪದ ಕೈಗಾರಿಕಾ ಪ್ರದೇಶದಲ್ಲಿ 116 ಎಕರೆ ಭೂಮಿಯನ್ನು ಕೇವಲ ₹50 ಕೋಟಿಗೆ ಚಾಣಕ್ಯ ವಿಶ್ವವಿ-ದ್ಯಾಲಯಕ್ಕೆ ಹಂಚಿಕೆ ಮಾಡಿತ್ತು. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು ₹137 ಕೋಟಿ ನಷ್ಟವಾಗಿದೆ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದಾಗ ಬಳ್ಳಾರಿಯ ಕುವೆಂಪು ನಗರದ ಬಡಾವಣೆಯಲ್ಲಿ ನಾಗರಿಕ ಸೌಲಭ್ಯಕ್ಕೆ ಮೀಸಲಿಟ್ಟ ಬೆಲೆಬಾಳುವ ನಿವೇಶನವನ್ನು ರಾಷ್ಟ್ರೋತ್ಥಾನ ಪರಿಷತ್‌ಗೆ ಶೇ 25ರ ದರದಲ್ಲಿ 30 ವರ್ಷಗಳಿಗೆ ಗುತ್ತಿಗೆ ನೀಡಲಾಗಿತ್ತು. ಇದರಿಂದ ಸರ್ಕಾರಕ್ಕೆ ₹7.50 ಕೋಟಿ ನಷ್ಟವಾಗಿದೆ. ಬಿಜೆಪಿ ಮತ್ತು ಸಂಘ ಪರಿವಾರದವರು ರಾಜ್ಯದ ವಿವಿಧೆಡೆ ಗೋಮಾಳ ಜಾಗವನ್ನು ಮಾರುಕಟ್ಟೆ ದರಕ್ಕಿಂತ ಚಿಲ್ಲರೆ ದರಕ್ಕೆ ಮಂಜೂರು ಮಾಡಿಸಿಕೊಂಡಿದ್ದಾರೆ. ಈ ಎಲ್ಲ ಜಮೀನು, ನಿವೇಶನಗಳನ್ನೂ ಆರ್‌ಎಸ್‌ಎಸ್ ವಾಪಸ್ ಮಾಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಕಾಮೆಡ್–ಕೆ: 33 ಕಾಲೇಜಿಗೆ ಶೂನ್ಯ ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ವೈದ್ಯಕೀಯ ಎಂಜಿನಿಯರಿಂಗ್ ಮತ್ತು ದಂತ ಕಾಲೇಜುಗಳ ಒಕ್ಕೂಟದ (ಕಾಮೆಡ್‌-ಕೆ) ನಡೆಸಿದ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಅರ್ಹತಾ ಪಟ್ಟಿಯಲ್ಲಿ ಸ್ಥಾನ ಪಡೆದ ಒಬ್ಬ ವಿದ್ಯಾರ್ಥಿಯೂ 33 ಕಾಲೇಜುಗಳಿಗೆ ಪ್ರವೇಶ ಪಡೆದಿಲ್ಲ.

ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಈ ರೀತಿ ಶೂನ್ಯ ಪ್ರವೇಶ ಹೊಂದಿದ ಕಾಲೇಜುಗಳ ಸಂಖ್ಯೆ 29 ಇತ್ತು. ಈ ಬಾರಿ ಆ ಪಟ್ಟಿಗೆ ಮತ್ತೆ ನಾಲ್ಕು ಕಾಲೇಜುಗಳು ಸೇರ್ಪಡೆಯಾಗಿವೆ. ಶೇ 25ಕ್ಕಿಂತ ಕಡಿಮೆ ಪ್ರವೇಶ ಪಡೆಯುತ್ತಿರುವ ಕಾಲೇಜುಗಳ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ. 2023–24ನೇ ಸಾಲಿನಲ್ಲಿ 20 ಕಾಲೇಜುಗಳು ಮಾತ್ರ ಶೇ 80ಕ್ಕಿಂತ ಹೆಚ್ಚಿನ ವಿದ್ಯಾರ್ಥಿ-ಗಳಿಗೆ ಪ್ರವೇಶ ನೀಡಲು ಸಾಧ್ಯವಾಗಿತ್ತು.

‘ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಿಇಟಿ ಸೀಟುಗಳ ಹಂಚಿಕೆ ವಿಳಂಬ ಮಾಡುತ್ತಿರುವ ಕಾರಣ ಕಾಮೆಡ್‌–ಕೆ ಮೇಲೂ ಪರಿಣಾಮ ಬೀರುತ್ತಿದೆ. ಇದರಿಂದ ಹೊರ ರಾಜ್ಯದ ವಿದ್ಯಾರ್ಥಿಗಳು ಕರ್ನಾಟಕದ ಕಾಲೇಜುಗಳಲ್ಲಿ ಪ್ರವೇಶ ಪಡೆಯುತ್ತಿಲ್ಲ’ ಎಂದು ಖಾಸಗಿ ಕಾಲೇಜುಗಳು ದೂರಿವೆ.

ಕೆಇಎ ನೀಡುವ ಪ್ರವೇಶದಲ್ಲಿ ಯಾವುದೇ ಕಾಲೇಜಿನಲ್ಲಿ ಶೂನ್ಯ ಪ್ರವೇಶ ಇಲ್ಲದಿದ್ದರೂ, ಸಿವಿಲ್, ಮೆಕ್ಯಾನಿಕಲ್ ಸೇರಿದಂತೆ ಕೆಲವು ಕೋರ್ಸ್‌ಗಳಿಗೆ ಬೇಡಿಕೆ ಕುಸಿದಿದೆ. ಈ ವರ್ಷ ಸರ್ಕಾರಿ ಕೋಟಾದಲ್ಲಿರುವ 79,907 ಸೀಟುಗಳಲ್ಲಿ 13,653 ಸೀಟು ಖಾಲಿ ಉಳಿದಿವೆ.

‘ಶಿವಮೂರ್ತಿ ಶರಣರ ವಿರುದ್ಧ ಬಲವಂತದ ಕ್ರಮ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಠಾಧಿಪತಿ ಶಿವಮೂರ್ತಿ ಶರಣರು ನನ್ನ ಇಬ್ಬರು ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಸಂತ್ರಸ್ತ ಬಾಲಕಿಯರಿಬ್ಬರ ತಾಯಿ ನೀಡಿರುವ ದೂರಿಗೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲಾ ಪೊಲೀಸರು ಶರಣರ ವಿರುದ್ಧ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು’ ಎಂದು ಹೈಕೋರ್ಟ್ ಆದೇಶಿಸಿದೆ.

‘ನನ್ನ ವಿರುದ್ಧ ಚಿತ್ರದುರ್ಗ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸಬೇಕು ಮತ್ತು ಚಿತ್ರದುರ್ಗ ಜಿಲ್ಲಾ ಮತ್ತು ಸೆಷನ್ಸ್‌ನ ಎರಡನೇ ಹೆಚ್ಚುವರಿ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗೆ ಮಧ್ಯಂತರ ತಡೆ ನೀಡಬೇಕು’ ಎಂದು ಕೋರಿ ಶಿವಮೂರ್ತಿ ಶರಣರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯ ಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಸಿ.ವಿ.ನಾಗೇಶ್, ‘ಶರಣರ ವಿರುದ್ಧ ದಾಖಲಾಗಿರುವ ಈ ಮೊದಲಿನ ಪೋಕ್ಸೊ ಕಾಯ್ದೆ ಆರೋಪಗಳ ದೂರಿಗೂ ಎರಡನೇ ದೂರಿಗೂ ಏನೇನೂ ವ್ಯತ್ಯಾಸವಿಲ್ಲ. ಮಠದ ಅಡುಗೆ ಕೆಲಸದ ಮಹಿಳೆ ನೀಡಿದ ಹೇಳಿಕೆ ಆಧರಿಸಿ ಎರಡನೇ ಪೋಕ್ಸೊ ಪ್ರಕರಣ ದಾಖಲಿಸಲಾಗಿದೆ. ದೂರಿನ ಅಂಶಗಳ ಮೇಲೆ ಅರ್ಜಿದಾರ-ರನ್ನು ಬಂಧಿಸಿ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಫಿರ್ಯಾದುದಾರರು ಮನವಿ ಮಾಡಿದ್ದಾರೆ. ಈ ಮೊದಲಿನ ಪ್ರಕರಣದಲ್ಲಿ ಈಗಾಗಲೇ 13 ಸಾಕ್ಷಿಗಳ ವಿಚಾರಣೆ ಮುಗಿದಿರುವ ಕಾರಣ ಅರ್ಜಿದಾರರು ನ್ಯಾಯಾಂಗ ಬಂಧನದಿಂದ ಬಿಡುಗಡೆಯಾಗಿದ್ದಾರೆ. ವಾಸ್ತವದಲ್ಲಿ ಈ ಪ್ರಕರಣದಲ್ಲಿ ಗಲೀಜು ರಾಜಕೀಯ ಅಡಗಿದ್ದು ಎಫ್‌ಐಆರ್‌ಗೆ ತಡೆ ನೀಡಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಯಾಗಿ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್, ‘ಪ್ರಕರಣಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಕೆಗೆ ಸಮಯಾವಕಾಶ ಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ‘ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಬೇಡ’ ಎಂದು ಪ್ರಾಸಿಕ್ಯೂಷನ್‌ಗೆ ಆದೇಶಿಸಿ ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿತು.

ನಿಧನ ವಾರ್ತೆ

ನಿರ್ದೇಶಕ ಚಿ. ದತ್ತರಾಜ್

ಬೆಂಗಳೂರು: ವರನಟ ರಾಜ್‌ಕುಮಾರ್ ನಟನೆಯ ‘ಕಾಮನಬಿಲ್ಲು’ ಸೇರಿದಂತೆ ಹಲವು ಹಿಟ್ ಸಿನಿಮಾಗಳನ್ನು ನಿರ್ದೇಶಿಸಿದ್ದ ಚಿ.ದತ್ತರಾಜ್ (87) ಸೋಮವಾರ ನಿಧನರಾದರು. ಮಧ್ಯಾಹ್ನ ನಗರದ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನಡೆಯಿತು.

ಚಿ.ದತ್ತರಾಜ್, ಖ್ಯಾತ ಗೀತ ಸಾಹಿತಿ ದಿವಂಗತ ಚಿ.ಉದಯಶಂಕರ್ ಅವರ ಸಹೋದರ.ಚೆನ್ನೈನಲ್ಲಿದ್ದ ದತ್ತರಾಜ್ ಬೆಂಗಳೂರಿಗೆ ಬಂದ ಬಳಿಕ ನಿರ್ದೇಶಕ ಚಿ.ಗುರುದತ್ ಅವರ ಮನೆಯಲ್ಲಿ ವಾಸವಾಗಿದ್ದರು.

ರಾಜ್‌ಕುಮಾರ್ ಅಭಿನಯದ ‘ಕೆರಳಿದ ಸಿಂಹ’, ‘ಅದೇ ಕಣ್ಣು’, ಶ್ರುತಿ ಸೇರಿದಾಗ’ ಹಾಗೂ ಶಿವರಾಜಕುಮಾರ್ ಅಭಿನಯದ ‘ಮೃತ್ಯುಂಜಯ’, ‘ಆನಂದ ಜ್ಯೋತಿ’, ಮಂಜುಳಾ ನಟಿಸಿದ್ದ ‘ರುದ್ರಿ’ ಚಿತ್ರಗಳನ್ನು ದತ್ತರಾಜ್ ನಿರ್ದೇಶಿಸಿದ್ದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

KPTCL

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಕವಿಪ್ರನಿನಿ/ಬಿ16/44953/2023–24 ದಿನಾಂಕ:14.10.2024

ಉದ್ಯೋಗ ಪ್ರಕಟಣೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ **ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು** ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ‘ಆನ್–ಲೈನ್’ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ NKK Regular	NKK Backlog	KK Regular	KK Backlog	ಒಟ್ಟು
1.	ಕಿರಿಯ ಸ್ಟೇಷನ್ ಪರಿಚಾರಕ	380	31	20	2	433
2.	ಕಿರಿಯ ಪವರ್‌ಮ್ಯಾನ್	1893	456	107	86	2542
	ಒಟ್ಟು	2273	487	127	88	2975

ಕವಿಪ್ರನಿನಿ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ಈ ಕೆಳಗಿನ ಯಾವುದಾದರೂ ಒಂದು ಅಧಿಕೃತ ವೆಬ್‌ಸೈಟ್ ಮುಖಾಂತರ ನಿಗದಿತ ನಮೂನೆಯಲ್ಲಿ ‘ಆನ್ ಲೈನ್’ ಮೂಲಕ ಮಾತ್ರ ಅಭ್ಯರ್ಥಿಗಳು **ದಿನಾಂಕ: 21.10.2024 ರಿಂದ 20.11.2024 ರವರೆಗೆ** ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

https://kptcl.karnataka.gov.in	https://bescom.karnataka.gov.in
https://cescmysore.karnataka.gov.in	https://mescom.karnataka.gov.in
https://hescom.karnataka.gov.in	https://gescom.karnataka.gov.in

ಹುದ್ದೆಗಳ ವರ್ಗೀಕರಣ, ಮೀಸಲಾತಿ ವಿವರ, ಕಲ್ಯಾಣ ಕರ್ನಾಟಕ ಪ್ರದೇಶ ಮೀಸಲಾತಿ, ವಯೋಮಿತಿ, ಅರ್ಹತೆ, ನೇಮಕಾತಿ ವಿಧಾನ, ಪರೀಕ್ಷಾ ವಿಧಾನ, ಅರ್ಜಿಯ ನಮೂನೆ ಮತ್ತು ಇತರೆ ವಿವರಗಳನ್ನು ಒಳಗೊಂಡ ವಿಸ್ತೃತ ಉದ್ಯೋಗ ಪ್ರಕಟಣೆಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಲಾಗಿದೆ.

ಸಹಿ/– ನಿರ್ದೇಶಕರು, (ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ನಗರಾಭಿವೃದ್ಧಿ ಕೋಶ,

ತುಮಕೂರು ಜಿಲ್ಲೆ, ತುಮಕೂರು. ಟೆಲಿಫೋನ್ ನಂ. 0816–2955247
ಇ–ಮೇಲ್: ka.tumakuru.dudc@gmail.com dudc_tkr@yahoo.co.in

ನಂ:ಡಿ.ಯು.ಡಿ.ಸಿ/ನಗರೋತ್ಥಾನ (ಮುನ್ಸಿಪಾಲಿಟಿ) ಹಂತ–4/ಸಿಆರ್/01/2022–23 ದಿನಾಂಕ: 05–10–2024

ಟೆಂಡರ್ ಪ್ರಕಟಣೆ.

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು ರವರಿಂದ ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ಬಿಡ್‌ದಾರರಿಂದ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನ್ಸಿಪಾಲಿಟಿ) ಯೋಜನೆ (ಹಂತ–04)ಯಡಿ ತುಮಕೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಕೆಳಗಿನಂತೆ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಇಂಡೆಂಟ್ ನಂ	ಟೆಂಡರ್‌ಗಿಟ್ಟ ಮೊತ್ತ	ಇ.ಎಂ.ಡಿ	ಗುತ್ತಿಗೆದಾರರ ದರ್ಜೆ
1	ಮಧುಗಿರಿ ಪುರಸಭೆಯ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ. ಇಂಡೆಂಟ್ ಸಂ:DMA/2024-25/RD/WORK_INDENT 22827	84.70	1.70	3ನೇ ದರ್ಜೆ ಮೇಲ್ಪಟ್ಟು
2	ಮಧುಗಿರಿ ಪುರಸಭೆಯ ಕಟ್ಟಡ ಅಭಿವೃದ್ಧಿ ಕಾಮಗಾರಿ. ಇಂಡೆಂಟ್ ಸಂ:DMA/2024-25/BD/WORK_INDENT 30867	43.25	0.87	
3	ಕುಣಿಗಲ್ ಪುರಸಭೆಯ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ. ಇಂಡೆಂಟ್ ಸಂ:DMA/2024-25/RD/WORK_INDENT 29543	105.05	2.00	

ಬಿಡ್‌ದಾರರು ಎಲ್ಲಾ ದಾಖಲಾತಿಗಳ ಮತ್ತು ಇತರೆ ವಿವರಗಳ ಮಾಹಿತಿಗಾಗಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

1	ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ ಮತ್ತು ಅವಧಿ	:	08–10–2024 ರಿಂದ 23–10–2024 ರವರೆಗೆ ಸಮಯ: 17:00 ಗಂಟೆ
2	ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:	:	23–10–2024 ರವರೆಗೆ ಸಮಯ: 17:00 ಗಂಟೆ
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:	:	24–10–2024 17:01 ಗಂಟೆಗೆ ಡಿ.ಯು.ಡಿ.ಸಿ, ತುಮಕೂರು,

ಮೇಲ್ಕಂಡ ದಿನಾಂಕಗಳು ಹಾಗೂ ಟೆಂಡರ್ ದಸ್ತಾವೇಜಿನ ಯಾವುದೇ ತಿದ್ದುಪಡಿ ಇದ್ದಲ್ಲಿ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಸಾರಪಡಿಸಲಾಗುವುದು, ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಜಿಲ್ಲೆ.

DIPR/TUM/RO-38/24-25/Oysters

K.I.M.S HOSPITAL & RESEARCH CENTRE

K.R.ROAD, V.V.PURAM, BANGALORE - 560 004.

Invitation For Fresh Tender For Supply, Installation & Commissioning Of Medical Equipments To Kims Hospital

Ref.: -EC meeting dated 08/08/2024

1. Purchase Committee of Rajya Vokkaligara Sangha invites tender from eligible tenderers for Supply, installation & Commissioning of equipments to KIMS Hospital, K.R.Road, V.V. Puram, Bangalore-560004 for various departments in Two cover bid system from Manufactures / authorized agencies.
2. The tenderers may submit their tender for various equipments as per the list in tender document. Tenderers are advised to note all the eligibility criteria , terms and conditions as specified in tender Document.
3. The tender application will be issued from 18.10.2024 to 26.10.2024 between 10.00am and 5.00pm @ Tender section, KIMS Hospital & Research Centre on payment of non-refundable tender form fee of Rs.2500/- plus 18% GST through DD favouring "AMO, KIMS Hospital & Research Centre", Payable at Bangalore.
4. Last date for submitting the Filled Bid document is on or before 11.11.2024 by 5.00pm.
5. Earnest money deposit amount should be paid through Demand Draft in favour of "AMO, KIMS Hospital & Research Centre" payable at Bangalore. Tenderer should submit Technical Bid and EMD amount separately for each equipment if the bidder is quoting for multiple equipments. Financial Bids shall be submitted in separate covers for each equipment.
6. The tender document is non-transferable.
7. Terms and conditions & other details applicable as per the tender document.

Sd/- President RVS | Sd/- Hon. President RVS | Sd/- Vice president 1 & 2, RVS | Sd/- Gen. Secretary RVS | Sd/- Jt. Secretary RVS | Sd/- Treasurer RVS | Sd/- Chairman Purchase Committee | Sd/- Vice Chairman HDC | Sd/- Chairman HDC

K.I.M.S HOSPITAL & RESEARCH CENTRE

K.R.ROAD, V.V.PURAM, BANGALORE - 560 004.

Invitation For Re-tender (2) For Supply, Installation & Commissioning Of Medical Equipments & Instruments To Kims Hospital

Ref.: - EC meeting dated 21.11.2023 & 08.08.2024

1. Purchase Committee of Rajya Vokkaligara Sangha invites tender from eligible tenderers for Supply, installation & Commissioning of equipments to KIMS Hospital, K.R.Road, V.V. Puram, Bangalore-560004 for various departments in Two cover bid system from Manufactures / authorized agencies.
2. The tenderers may submit their tender for various equipments as per the list in tender document. Tenderers are advised to note all the eligibility criteria , terms and conditions as specified in tender Document.
3. The tender application will be issued from 18.10.2024 to 26.10.2024 between 10.00am and 5.00pm @ Tender section, KIMS Hospital & Research Centre on payment of non-refundable tender form fee of Rs.2500/- plus 18% GST through DD favouring "AMO, KIMS Hospital & Research Centre", Payable at Bangalore.
4. Last date for submitting the Filled Bid document is on or before 11.11.2024 by 5.00pm.
5. Earnest money deposit amount should be paid through Demand Draft in favour of "AMO, KIMS Hospital & Research Centre" payable at Bangalore. Tenderer should submit Technical Bid and EMD amount separately for each equipment if the bidder is quoting for multiple equipments. Financial Bids shall be submitted in separate covers for each equipment.
6. The tender document is non-transferable.
7. Terms and conditions & other details applicable as per the tender document.

Sd/- President RVS | Sd/- Hon. President RVS | Sd/- Vice president 1 & 2, RVS | Sd/- Gen. Secretary RVS | Sd/- Jt. Secretary RVS | Sd/- Treasurer RVS | Sd/- Chairman Purchase Committee | Sd/- Vice Chairman HDC | Sd/- Chairman HDC

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ

ಟೆಂಡರ್ ಪ್ರಕಟಣೆ ಸಂ.: 08/2024–25 ದಿನಾಂಕ: 14–10–2024

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆಪಿಪಿ) ಯ ಮೂಲಕ)

ಆಸಕ್ತ ಬಿಡ್ಡುದಾರರಿಂದ ವಾಕರಸಾಸಂ ಯ ವಿಭಾಗಗಳಿಗೆ ಈ ಕೆಳಗಿನಂತೆ ಕಾಣಿಸಿರುವ ಸಾಮಗ್ರಿಗಳ ಸರಬರಾಜಿಗಾಗಿ ಮತ್ತು ಸೇವೆಗಾಗಿ ಟೆಂಡರ್ ಮೂಲಕ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ಟೆಂಡರ್ ವಿವರಣೆ	ಅಂದಾಜು ಮೌಲ್ಯ
1	NWKRTC/2023-24/SE0872/CALL-2	ಜಿಸಿಸಿ ಆಧಾರದ ಮೇಲೆ 350 ಎಲೆಕ್ಟ್ರಿಕ್ ವಾಹನಗಳನ್ನು ಒದಗಿಸಿ, ನಿರ್ವಹಣೆ ಮಾಡಿ, ಕಾರ್ಯಾಚರಣೆ ಮಾಡುವ ಸೇವೆದಾರರನ್ನು ಆಯ್ಕೆ ಮಾಡುವಿಕೆ.	ರೂ. 1750.00 ಕೋಟಿ
2	NWKRTC/2024-25/IND0060	ಫ್ಯಾನ್ ಬೆಲ್ಟ್‌ಗಳು.	ರೂ. 65.00 ಲಕ್ಷ
3	NWKRTC/2024-25/IND0063	ಪಿಸ್ಟನ್ ರಿಂಗ್ ಸೆಟ್ ಮತ್ತು ಸಿಲಿಂಡರ್ ಲೈನರ್‌ಗಳು.	ರೂ. 185.00 ಲಕ್ಷ
4	NWKRTC/2024-25/IND0064	ವಾಟರ್ ಪಂಪುಗಳು ಮತ್ತು ಅವುಗಳ ಬಿಡಿಭಾಗಗಳು.	ರೂ. 155.00 ಲಕ್ಷ
5	NWKRTC/2024-25/IND0090	ಕ್ಯೂರಿಂಗ್ ಎನ್ವಲೋಪ್‌ಗಳು.	ರೂ. 73.00 ಲಕ್ಷ
6	NWKRTC/2024-25/IND0091	ಟ್ರೆಡ್ ರಬ್ಬರ್ ಮತ್ತು ಸಂಯೋಜಿತ ಸಾಮಗ್ರಿಗಳು.	ರೂ. 811.00 ಲಕ್ಷ
7	NWKRTC/2024-25/IND0092	ಪ್ರಿಂಟರ್‌ಗಳು.	ರೂ. 19.50 ಲಕ್ಷ

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಕ್ರ.ಸಂ.1 ರಲ್ಲಿರುವ ಟೆಂಡರ್‌ಗೆ **11–11–2024 ಮತ್ತು ಉಳಿದ ಟೆಂಡರ್‌ಗಳಿಗೆ ದಿನಾಂಕ: 05–11–2024. ಸಮಯ: 17:30 ಗಂಟೆಯವರೆಗೆ.**

ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: **http://kppp.karnataka.gov.in** ಅಥವಾ ಮೊಬೈಲ್ ಫೋನ್ ಸಂ. **7022009113/7760988557** ಗಳಿಗೆ ಸಂಪರ್ಕಿಸಬಹುದಾಗಿದೆ.

ಸಹಿ/–
ಉಗ್ರಾಣ ಮತ್ತು ಖರೀದಿ ನಿಯಂತ್ರಕರು,
(ಟೆಂಡರ್ ಕರೆಯುವ ಪ್ರಾಧಿಕಾರ)

ಡಿಐಪಿಆರ್/ಧಾರವಾಡ/504/ಅಡ್ವಟೋರ್/2024–25

ಕರ್ನಾಟಕ ಸರಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಇಲಾಖೆ ವಿಭಾಗ ಕಲಬುರಗಿ

www.midnglb@rediffmail.com. ದೂರವಾಣಿ : 08472 –220196

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–2/ಕೆ.ಡಬ್ಲ್ಯೂ–6/2024–25/2262 ದಿನಾಂಕ: 10–10–2024

–: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–6) :–

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2024–25ನೇ ಸಾಲಿನ 4702 ಏತ ನೀರಾವರಿ ಯೋಜನೆ ಹಾಗೂ 4702 ಆಣೆಕಟ್ಟು ಪಿಕಪ್ ಯೋಜನೆ ಅಡಿ ಕಾಮಗಾರಿಗಾಗಿ ಕೆ.ಪಿ.ಪಿ.ಪಿ.–ಟೆಂಡರ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: **ಗರಿಷ್ಟ ರೂ. 110,77,92,346.21, ಕನಿಷ್ಟ ರೂ. 104,23,66,422.53,** 3) ಗುತ್ತಿಗೆದಾರರ ಅರ್ಹತೆ ವಿವರ: 1ನೇ ದರ್ಜೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಕೆ.ಪಿ.ಪಿ.ಪಿ. ಪ್ರೊಕ್ಯೂರಮೆಂಟನಂತೆ, ಇ.ಎಂ.ಡಿ.: ಗರಿಷ್ಟ: **ರೂ. 110,78,000.00** ಕನಿಷ್ಟ: **ರೂ. 104,23,700.00,** 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: **23–10–2024 ಬೆಳಿಗ್ಗೆ 11.00 ಗಂಟೆಯ ವರೆಗೆ,** 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **25–10–2024 ಸಾಯಂಕಾಲ 17–30 ಗಂಟೆಯವರೆಗೆ,** 7) ಟೆಂಡರ ಪೂರ್ವಾರ್ಹತೆ ತೆರೆಯುವ ದಿನಾಂಕ: **28–10–2024 ಬೆಳಿಗ್ಗೆ 11–30 ಗಂಟೆಯ ವರೆಗೆ,** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : ಪೂರ್ವಾರ್ಹತೆಯಲ್ಲಿ ಅರ್ಹಗೊಂಡ ಗುತ್ತಿಗೆದಾರರಿಗೆ ಕೆಪಿಪಿಪಿ ಪೋರ್ಟಲ್ ಮೂಲಕ ಸೂಚಿಸಲಾಗುವುದು, 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ: **www.kppp.karnataka.gov.in**

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/518/ಕೆಎಸ್‌ಎಂಸಿಎ/2024–25

ಸಂಕ್ಷಿಪ್ತ ಸುದ್ದಿ

ಮಂಡ್ಯ ರಮೇಶ್‌ಗೆ ಪಂಚಮಿ ಪುರಸ್ಕಾರ



ಉಡುಪಿ: ಪಂಚಮಿ ಟ್ರಸ್ಟ್ ಪ್ರಾಯೋಜಿತ ಸಂಸ್ಕೃತಿ ವಿಶ್ವ ಪ್ರತಿಷ್ಠಾನ ಕೊಡಮಾಡುವ 2025ನೇ ಸಾಲಿನ ಪಂಚಮಿ ಪುರಸ್ಕಾರಕ್ಕೆ ಚಿತ್ರನಟ ಮಂಡ್ಯ ರಮೇಶ್ ಆಯ್ಕೆಯಾಗಿದ್ದಾರೆ.

ಪುರಸ್ಕಾರವು ₹ 1 ಲಕ್ಷ ನಗದು, ಪ್ರಶಸ್ತಿ ಪತ್ರ ಹಾಗೂ ಪದಕವನ್ನು ಒಳಗೊಂಡಿದೆ. ಜನವರಿ ತಿಂಗಳ ಮೊದಲ ವಾರದಲ್ಲಿ ಉಡುಪಿಯ ಎಂಜಿಎಂ ಕಾಲೇಜಿನ ಮುದ್ದಣ ಮಂಟಪದಲ್ಲಿ ನಡೆಯಲಿರುವ ಸಂಸ್ಕೃತಿ ಉತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಸ್ಕೃತಿ ವಿಶ್ವ ಪ್ರತಿಷ್ಠಾನದ ಸಂಚಾಲಕ ರವಿರಾಜ್ ಎಚ್. ಪಿ. ಅವರು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

ಬಸವಕಲ್ಯಾಣ: 18ರಿಂದ 20ರವರೆಗೆ ಕಲ್ಯಾಣ ಪರ್ವ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 'ಬಸವ ಧರ್ಮ ಪೀಠದಿಂದ ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಅಕ್ಟೋಬರ್ 18 ರಿಂದ 20ರವರೆಗೆ 23ನೇ ಕಲ್ಯಾಣ ಪರ್ವ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ.

'18ರಂದು ಧರ್ಮ ಚಿಂತನ ಗೋಷ್ಠಿ ಮತ್ತು ಮಹಿಳಾ ಗೋಷ್ಠಿ, 19ರಂದು 23ನೇ ಕಲ್ಯಾಣ ಪರ್ವ ಉದ್ಘಾಟನೆ, ಪೀಠಾರೋಹಣ ಸಮಾರಂಭ ನಡೆಯಲಿದೆ. 20ರಂದು ಬಸವಣ್ಣನ ಭಾವಚಿತ್ರ ಮತ್ತು ವಚನ ಸಾಹಿತ್ಯದ ಮೆರವಣಿಗೆ ನಡೆಯಲಿದೆ. ಸಮಾರಂಭದಲ್ಲಿ ಸಚಿವರು, ಶಾಸಕರು, ಚಿಂತಕರು, ಸಂಶೋಧಕರು, ಸ್ವಾಮೀಜಿ ಪಾಲ್ಗೊಳ್ಳುವರು' ಎಂದು ಬಸವ ಧರ್ಮ ಪೀಠದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ತಿಳಿಸಿದ್ದಾರೆ.

'ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳಿಂದ 1 ಲಕ್ಷಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ ಇದೆ. ಕಾರ್ಯಕ್ರಮದ ಎಲ್ಲ ಸಿದ್ಧತೆ ಪೂರ್ಣಗೊಂಡಿವೆ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ 18ರಂದು ಸಿ.ಎಂ ಸಭೆ: ಸ್ವಾಮೀಜಿ

ಧಾರವಾಡ: 'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ವಿಷಯ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರಿನಲ್ಲಿ ಅಕ್ಟೋಬರ್ 18ರಂದು ಮಧ್ಯಾಹ್ನ 12 ಗಂಟೆಗೆ ಸಭೆ ಕರೆದಿದ್ದಾರೆ' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

'ಮುಖ್ಯಮಂತ್ರಿ ಭೇಟಿಗೆ ಲಿಂಗಾಯತ ಪಂಚಮಸಾಲಿ ವಕೀಲರ ಒಕ್ಕೂಟದ 11 ವಕೀಲರ ನಿಯೋಗ ರಚಿಸಲಾಗಿದೆ. ಬೇಡಿಕೆಗೆ ಮುಖ್ಯಮಂತ್ರಿಯವರು ಸಕಾರಾತ್ಮಕವಾಗಿ ಸ್ಪಂದಿಸುವರು ಎಂಬ ವಿಶ್ವಾಸವಿದೆ. ಸಮಾಜದ ವಕೀಲರ ಒಕ್ಕೂಟ, ಯುವ, ಮಹಿಳಾ ಘಟಕ ಸೇರಿ ಎಲ್ಲ ಘಟಕಗಳವರು, ಜನಪ್ರತಿನಿಧಿಗಳು ಬೆಂಗಳೂರಿಗೆ ಬರಬೇಕು' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಸಂವಿಧಾನದ 15 ಮತ್ತು 16ನೇ ಪರಿಚ್ಛೇದದಡಿ ಪಂಚಮಸಾಲಿ ಸಮುದಾಯಕ್ಕೆ ಮುಖ್ಯಮಂತ್ರಿಯವರು ನ್ಯಾಯ ಒದಗಿಸಬೇಕು. ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಆಧರಿಸಿ ನೀಡಿರುವ ಮಧ್ಯಂತರ ವರದಿಯನ್ನು ಪರಿಗಣಿಸಿ ಕ್ರಮ ವಹಿಸಬೇಕು' ಎಂದು ಕೋರಿದರು.

ವಿಟಿಯು ವ್ಯಾಪ್ತಿಯ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಗೆ ಅನ್ವಯ: ಆಕ್ರೋಶ

ಪೇಮೆಂಟ್ ಕೋಟಾ: 2 ಪಟ್ಟು ಶುಲ್ಕ

• ಸಿದ್ದಯ್ಯ ಹಿರೇಮಠ

ದಾವಣಗೆರೆ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಪ್ರಸಕ್ತ ಸಾಲಿನಿಂದ ತನ್ನ ವ್ಯಾಪ್ತಿಯ ಸರ್ಕಾರಿ ಎಂಜಿನಿಯರಿಂಗ್ ಘಟಕ ಕಾಲೇಜುಗಳಲ್ಲಿ ಪೇಮೆಂಟ್ ಕೋಟಾದ ಅಡಿ ಸೀಟು ಹಂಚಿಕೆ ಮಾಡುವ ಪದ್ಧತಿಗೆ ಚಾಲನೆ ನೀಡಿರುವುದು ವಿದ್ಯಾರ್ಥಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ದಾವಣಗೆರೆಯ ಯುಬಿಡಿಟಿ ಹಾಗೂ ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಈ ವರ್ಷದಿಂದ ಪದವಿ ವಿಭಾಗ ಆರಂಭಿಸಿರುವ ವಿ.ವಿ, ಶೇ 50ರಷ್ಟು ಸೀಟುಗಳನ್ನು ಪೇಮೆಂಟ್ ಕೋಟಾದ ಅಡಿ ನೀಡಲು ನಿರ್ಧರಿಸಿದೆ.

ಸರ್ಕಾರ ಅಗತ್ಯ ಅನುದಾನ ನೀಡದ್ದರಿಂದ ಮುಂದಿನ ವರ್ಷದಿಂದ ಕಲಬುರಗಿ ಹಾಗೂ ಬೆಳಗಾವಿಯಲ್ಲಿ ರುವ ಸರ್ಕಾರಿ ಎಂಜಿನಿಯರಿಂಗ್ ಘಟಕ ಕಾಲೇಜುಗಳಲ್ಲೂ ಈ ಪದ್ಧತಿ ಅಳವಡಿಸುವ ಚಿಂತನೆ ನಡೆದಿದೆ ಎಂದು ವಿ.ವಿ.ಯ ಮೂಲಗಳು ತಿಳಿಸಿವೆ.

ಬಡ ವಿದ್ಯಾರ್ಥಿಗಳ ತಾಂತ್ರಿಕ ಶಿಕ್ಷಣದ ಆಶಾಕಿರಣವಾಗಿ 73 ವರ್ಷ ಗಳ ಹಿಂದೆ ಆರಂಭವಾದ ದಾವಣಗೆರೆಯ ಕಾಲೇಜಿನಲ್ಲಿ ವಾರ್ಷಿಕ 504 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಇದೆ. ಈ ವರ್ಷದಿಂದ ಮೆರಿಟ್ ಆಧಾರದ 250 ಸೀಟುಗಳಿಗೆ ವಾರ್ಷಿಕ ₹43,000 ಶುಲ್ಕ, ಇನ್ನುಳಿದ 254 ಸೀಟುಗಳಿಗೆ ಪೇಮೆಂಟ್ ಕೋಟಾ ಅಡಿ ವಾರ್ಷಿಕ ₹97,000 ಶುಲ್ಕ ಆಕರಿಸಲಾಗುತ್ತಿದೆ.

'ಕಳೆದ ವರ್ಷದವರೆಗೂ ಕಾಲೇಜಿನ ವಿವಿಧ ಬ್ರ್ಯಾಂಚ್‌ಗಳಲ್ಲಿ ಒಟ್ಟು 360 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಇತ್ತು. ಈ ಬಾರಿ ಹೊಸದಾಗಿ, 60 ಸೀಟುಗಳ ಕೃತಕ ಬುದ್ಧಿಮತ್ತೆ (ಎಐ) ವಿಭಾಗ ಆರಂಭಿಸಲಾಗಿದೆ. ಕಂಪ್ಯೂಟರ್ ಸೈನ್ಸ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ತಲಾ 60 ಸೀಟುಗಳನ್ನು ಹೆಚ್ಚಿಸಲಾಗಿದೆ. ಪೇಮೆಂಟ್ ಕೋಟಾ ಅಡಿ 254 ಸೀಟುಗಳನ್ನು ಹಂಚಿಕೆ ಮಾಡಲಾಗುತ್ತಿದೆ' ಎಂದು ಕಾಲೇಜಿನ ಪ್ರಾಚಾರ್ಯ ಡಿ.ಪಿ. ನಾಗರಾಜಪ್ಪ ತಿಳಿಸಿದರು.

'ದಾವಣಗೆರೆಯ ಯುಬಿಡಿಟಿ ಹಾಗೂ ಚಿಂತಾಮಣಿಯ ಕಾಲೇಜುಗಳಲ್ಲಿ ಪೇಮೆಂಟ್ ಕೋಟಾ ಆರಂಭಿಸಲಾಗಿಲ್ಲ. ಬದಲಿಗೆ, ಸಿಇಟಿ ರ‍್ಯಾಂಕ್ ಆಧರಿಸಿ ₹97,000ಕ್ಕೆ ಇಂತಿಷ್ಟು ಸೀಟು ಹಂಚಲು ನಿರ್ಧರಿಸಲಾಗಿದೆ' ಎಂದು ವಿವಿಯ ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್ ಸ್ಪಷ್ಟಪಡಿಸಿದರು.



ಸರ್ಕಾರವು ವಿ.ವಿ.ಗೆ ಅಗತ್ಯ ಅನುದಾನ ನೀಡುತ್ತಿಲ್ಲ. ದಾವಣಗೆರೆಯ ಕಾಲೇಜೊಂದಕ್ಕೇ ವಾರ್ಷಿಕ ₹ 75 ಕೋಟಿ ಅನುದಾನದ ಅಗತ್ಯವಿದೆ. ಆದರೆ, ಸರ್ಕಾರ ಕ್ರಮ ಕೈಗೊಂಡಿಲ್ಲ

ಪ್ರೊ.ಎಸ್.ವಿದ್ಯಾಶಂಕರ್, ಕುಲಪತಿ, ವಿಟಿಯು

ಶುಲ್ಕ ಹೆಚ್ಚಳ ನಿರ್ಧಾರ ಕೈಬಿಟ್ಟ ಕಾಲೇಜು: ಪ್ರಸಕ್ತ ವರ್ಷದಿಂದ 3 ಮತ್ತು 4ನೇ ವರ್ಷದ ವಿದ್ಯಾರ್ಥಿಗಳ ವಾರ್ಷಿಕ ಶುಲ್ಕವನ್ನೂ ಕ್ರಮವಾಗಿ ₹4,000 ಹಾಗೂ ₹6,000ದಷ್ಟು ಹೆಚ್ಚಿಸಲಾಗಿತ್ತು. ಶುಲ್ಕ ಹೆಚ್ಚಳ ಮತ್ತು ಪೇಮೆಂಟ್ ಕೋಟಾವನ್ನು ವಿರೋಧಿಸಿ ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಒ) ಯು ಪ್ರತಿಭಟನೆ ನಡೆಸಿದ್ದರಿಂದ ಶುಲ್ಕ ಹೆಚ್ಚಳ ನಿರ್ಧಾರ ಕೈಬಿಡಲಾಗಿದೆ. ಆದರೆ, ಪೇಮೆಂಟ್ ಕೋಟಾದಡಿ ಸೀಟು ಹಂಚಿಕೆ ಮಾಡುವ ನಿರ್ಧಾರವನ್ನು ಹಿಂದೆ ಪಡೆಯಲಾಗಿಲ್ಲ.

ಇದನ್ನು ವಿರೋಧಿಸಿ ಹೋರಾಟ ತೀವ್ರಗೊಳಿಸಲು ನಿರ್ಧರಿಸಿರುವ ಎಐಡಿಎಸ್‌ಒ, ಸಾರ್ವಜನಿಕರ ಸಹಿ ಸಂಗ್ರಹ ಮಾಡಿದ್ದು, ಇದೇ 16ರಂದು ದಾವಣಗೆರೆ ಬಂದ್‌ಗೆ ಕರೆ ನೀಡಿದೆ.

ಸಿಬ್ಬಂದಿಯಿಂದಲೂ ಧರಣಿ: ಸೇವಹಿರಿತನದ ಆಧಾರದಲ್ಲಿ ವೇತನ ಹೆಚ್ಚಿಸಬೇಕು, ಸಕಾಲಕ್ಕೆ ವೇತನ ಪಾವತಿ ಮಾಡಬೇಕು, ನೇರ ನೇಮಕಾತಿ ವ್ಯವಸ್ಥೆ ಜಾರಿಗೊಳಿಸಬೇಕು, ಹೊರ ಗುತ್ತಿಗೆ ಪದ್ಧತಿ ರದ್ದುಪಡಿಸಬೇಕು ಎಂದು ಆಗ್ರಹಿಸಿ ಯುಬಿಡಿಟಿ ಕಾಲೇಜಿನ 'ಸಿ' ಮತ್ತು 'ಡಿ' ಗ್ರೂಪ್‌ನ ಹೊರಗುತ್ತಿಗೆ ನೌಕರರು ಸೆ. 23ರಂದು ಧರಣಿ ಆರಂಭಿಸಿದ್ದರು.

ಸದ್ದಿಲ್ಲದೇ ಹೆಚ್ಚುತ್ತಿರುವ ಶುಲ್ಕ

'5 ವರ್ಷಗಳ ಹಿಂದೆ ವಾರ್ಷಿಕ ₹ 18,000 ಇದ್ದ ಶುಲ್ಕವನ್ನು ಪ್ರತಿ ವರ್ಷವೂ ಹೆಚ್ಚಿಸುತ್ತಲೇ ಬರಲಾಗಿದ್ದು, ಇದೀಗ ₹ 43,000ಕ್ಕೆ ತಲುಪಿದೆ. ಮೊದಲಿದ್ದ ಶುಲ್ಕ ಭರಿಸುವುದೇ ಅಸಾಧ್ಯ ಎಂಬ ಸ್ಥಿತಿಯಲ್ಲಿದ್ದ ಬಡ ವಿದ್ಯಾರ್ಥಿಗಳಿಗೆ, ಪೇಮೆಂಟ್ ಕೋಟಾ ಆರಂಭಿಸಿರುವುದರಿಂದ ಗಾಯದ ಮೇಲೆ ಬರೆ ಎಳೆದಂತಾಗಿದೆ' ಎಂದು ಎಐಡಿಎಸ್‌ಒ ಜಿಲ್ಲಾ ಘಟಕದ ಕಾರ್ಯದರ್ಶಿ ಟಿ.ಎಸ್. ಸುಮನ್ 'ಪ್ರಜಾವಾಣಿ' ಎದುರು ಅಳಲು ತೋಡಿಕೊಂಡರು.

'ಕಾಲೇಜಿನಲ್ಲಿದ್ದ ಇಂಡಸ್ಟ್ರಿಯಲ್ ಆ್ಯಂಡ್ ಪ್ರೊಡಕ್ಷನ್ ಎಂಜಿನಿಯರಿಂಗ್ ವಿಭಾಗವನ್ನು ಈ ವರ್ಷ ಬಂದ್ ಮಾಡಲಾಗಿದ್ದು, ಅದರ ಬದಲಿಗೆ ಎ.ಐ ವಿಭಾಗ ಆರಂಭಿಸಲಾಗಿದೆ. ಕಾಲೇಜಿಗಿದ್ದ ಜಿಬಿಡಿಟಿ (ಸರ್ಕಾರಿ ಬ್ರಹ್ಮಪ್ಪ ದೇವೇಂದ್ರಪ್ಪ ತವನಪ್ಪನವರ್) ಎಂಬ ಹೆಸರನ್ನು ತೆಗೆದು, ಯುಬಿಡಿಟಿ ಎಂದು ಮರು ನಾಮಕರಣ ಮಾಡಲಾಗಿದೆ. ಶಿಕ್ಷಣ ಅತ್ಯಂತ ದುಬಾರಿ ಆಗಿರುವ ಕಾಲದಲ್ಲಿ ಬಡ ವಿದ್ಯಾರ್ಥಿಗಳ ನೆರವಿಗಿದ್ದ ಈ ಕಾಲೇಜಿಗೆ 2011ರಿಂದ ಸರ್ಕಾರ ಅಗತ್ಯ ಅನುದಾನ ನೀಡುವುದನ್ನು ಸ್ಥಗಿತಗೊಳಿಸಿದೆ. ಈ ಸಂಬಂಧ ಸಂಘಟನೆಯ ನಿಯೋಗ 3 ದಿನಗಳ ಹಿಂದಷ್ಟೇ ಉನ್ನತ ಶಿಕ್ಷಣ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರೆ, ಅವರಿಂದ ಸೂಕ್ತ ಸ್ಪಂದನೆಯೇ ವ್ಯಕ್ತವಾಗಲಿಲ್ಲ' ಎಂದು ದೂರಿದರು.

'ಅನುದಾನ ಸಿಗುತ್ತಿಲ್ಲ'

ಅಭಿವೃದ್ಧಿ, ವಿನೂತನ ತಂತ್ರಜ್ಞಾನ ಅಳವಡಿಕೆ, ಸಂಶೋಧನೆ, ಸಂಬಳ ಮತ್ತು ನಿರ್ವಹಣೆಗಾಗಿ ಸರ್ಕಾರವು ವಿ.ವಿ.ಗೆ ಅಗತ್ಯ ಅನುದಾನ ನೀಡುತ್ತಿಲ್ಲ. ದಾವಣಗೆರೆಯ ಕಾಲೇಜೊಂದಕ್ಕೇ ವಾರ್ಷಿಕ ₹75 ಕೋಟಿ ಅನುದಾನದ ಅಗತ್ಯವಿದೆ. ಆದರೆ, ಸರ್ಕಾರ ಈ ಕುರಿತು ಕ್ರಮ ಕೈಗೊಂಡಿಲ್ಲ ಎಂದು ವಿಟಿಯು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ತಿಳಿಸಿದರು.

ಸರ್ಕಾರಿ ಸೀಟಿಗೆ ಖಾಸಗಿ, ಡೀಮ್ಡ್ ವಿವಿ ಶುಲ್ಕ

ಎಂಜಿನಿಯರಿಂಗ್ ಸೇರಿ ವಿವಿಧ ವೃತ್ತಿಪರ ಕೋರ್ಸ್‌ಗಳ ಶುಲ್ಕವನ್ನು ಇದೇ ಜುಲೈನಲ್ಲಿ ಶೇ 10ರಷ್ಟು ಹೆಚ್ಚಳ ಮಾಡಲು ರಾಜ್ಯ ಸರ್ಕಾರ ಸಮ್ಮತಿಸಿತ್ತು.

2023-24ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಹಾಗೂ ಅನುದಾನಿತ ಎಂಜಿನಿಯರಿಂಗ್ ಕಾಲೇಜುಗಳ ಶುಲ್ಕ ₹38,200, ಅಲ್ಪಸಂಖ್ಯಾತ ಕಾಲೇಜುಗಳು ಸೇರಿದಂತೆ ಖಾಸಗಿ ಕಾಲೇಜುಗಳಲ್ಲಿ ₹98,984, ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ₹91,796 ಇತ್ತು.

ದಾವಣಗೆರೆಯ ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮೆರಿಟ್ ಆಧಾರದ ಸೀಟುಗಳಿಗೆ ಸರ್ಕಾರಿ ಕಾಲೇಜುಗಳ ಶುಲ್ಕ ಹಾಗೂ ಉಳಿದ ಸೀಟುಗಳಿಗೆ ಖಾಸಗಿ ಕಾಲೇಜು ಹಾಗೂ ಡೀಮ್ಡ್ ವಿಶ್ವ ವಿದ್ಯಾಲಯಗಳಿಗೆ ನಿಗದಿ ಮಾಡಿದ ಶುಲ್ಕ ಪಡೆಯಲಾಗುತ್ತಿದೆ.

ಸುದ್ದಿ 2 ನಿಮಿಷ

5 ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್'

ಬೆಂಗಳೂರು: ರಾಜ್ಯದ ಬಳ್ಳಾರಿ, ಕೊಡಗು, ಮೈಸೂರು, ಚಾಮರಾಜನಗರ, ಮಂಡ್ಯದಲ್ಲಿ ಮಂಗಳವಾರ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಈ ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದೆ.

ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು ಜಿಲ್ಲೆಗಳಲ್ಲೂ ಗುಡುಗು ಸಹಿತ ಜೋರು ಮಳೆಯಾಗುವ ಸಂಭವ ಇದೆ ಎಂದು ಇಲಾಖೆ ಮಾಹಿತಿ ನೀಡಿದ್ದು, ಈ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಉತ್ತರ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳ ಹಲವು ಕಡೆಗಳಲ್ಲಿ ಸಾಧಾರಣ ಮಳೆಯಾಗುವ ಸಂಭವ ಇದೆ.

ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಗರಿಷ್ಠ ಉಷ್ಣಾಂಶ 25 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಇಲಾಖೆ ತಿಳಿಸಿದೆ.

ಪುರಂದರ ಮಂಟಪ ಮುಳುಗಡೆ



ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯಿಂದ 80 ಸಾವಿರ ಕ್ಯುಸೆಕ್‌ಗೂ ಅಧಿಕ ನೀರನ್ನು 20 ಕ್ರಸ್ಟ್‌ಗೇಟ್‌ಗಳ ಮೂಲಕ ನದಿಗೆ ಹರಿಸುತ್ತಿರುವ ಕಾರಣ ಹಂಪಿಯ ಪುರಂದರ ಮಂಟಪ ಸೋಮವಾರ ಸಂಪೂರ್ಣ ಮುಳುಗಡೆಯಾಗಿದೆ. ಈ ವರ್ಷ ಮೂರನೇ ಬಾರಿಗೆ ಈ ಮಂಟಪ ಮುಳುಗಡೆಯಾಗಿದೆ.

ಹಿಂಗಾರು ಮಳೆಯಿಂದ ಕೂಡ್ಲಿಗಿ,ಕೊಟ್ಟೂರು, ಹರಪನಹಳ್ಳಿ ಭಾಗದಲ್ಲಿ ಹಲವು ಕೆರೆಗಳು ತುಂಬಿವೆ. ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಾಲವಿ ಜಲಾಶಯ 20 ಅಡಿ ಎತ್ತರವಿದ್ದು, ಸದ್ಯ 14 ಅಡಿ ನೀರು ತುಂಬಿದೆ. ಈ ಜಲಾಶಯ ಭರ್ತಿಯಾದರೆ 2 ಟಿಎಂಸಿ ಅಡಿ ನೀರು ಸಂಗ್ರಹವಾಗಲಿದೆ.

ಗದಗದಲ್ಲಿ ಸೋಮವಾರ ನಡೆದ ತೋಂಟದ ಸಿದ್ಧಲಿಂಗ ಶ್ರೀಗಳ ಆರನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಸಚಿವ ಎಚ್.ಕೆ.ಪಾಟೀಲ ಅವರು ಶರಣ ಸಾಹಿತಿ ಗೊ.ರು.ಚನ್ನಬಸಪ್ಪ ಅವರಿಗೆ 'ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಮಾಡಿದರು. (ಎಡದಿಂದ ಬಲಕ್ಕೆ) ಕೋರಣೇಶ್ವರ ಸ್ವಾಮೀಜಿ, ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಬಿ.ಡಿ.ಕುಂಬಾರ, ತೋಂಟದಾರ್ಯ ಮಠದ ಸಿದ್ಧರಾಮ ಸ್ವಾಮೀಜಿ, ಮುದೇನಗುಡಿ ನಿರುಪಾಧೀಶ್ವರ ಸ್ವಾಮೀಜಿ, ಮಾಜಿ ಸಚಿವ ಎಸ್.ಎಸ್.ಪಾಟೀಲ, ಮಠದ ಆಡಳಿತಾಧಿಕಾರಿ ಎಸ್.ಎಸ್.ಪಟ್ಟಣಶೆಟ್ಟಿ ಉಪಸ್ಥಿತರಿದ್ದರು

'ಪಟಾಕಿ ಸದ್ದಿನಿಂದ ಶ್ರವಣಶಕ್ತಿ ಕಳೆದುಕೊಂಡೆ'

ಪ್ರಜಾವಾಣಿ ವಾರ್ತೆ

ಗದಗ: 'ನಟ ದರ್ಶನ್ ಜನ್ಮದಿನಾಚರಣೆ ಸಂದರ್ಭದಲ್ಲಿ ಅವರ ಅಭಿಮಾನಿಗಳು ಸಿಡಿಸಿದ ಪಟಾಕಿ ಸದ್ದಿನಿಂದ ನನ್ನ ಶ್ರವಣಶಕ್ತಿ ಹೋಯಿತು' ಎಂದು ಸಾಹಿತಿ ಗೊ.ರು.ಚನ್ನಬಸಪ್ಪ ತಿಳಿಸಿದರು.

ನಗರದ ತೋಂಟದಾರ್ಯ ಮಠದಲ್ಲಿ ಸೋಮವಾರ ನಡೆದ ಸಿದ್ಧಲಿಂಗ ಶ್ರೀಗಳ ಆರನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ 'ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ನಮ್ಮ ಮನೆಯ ಪಕ್ಕದಲ್ಲಿ ನಟ ದರ್ಶನ್ ಅವರ ಮನೆ ಇದೆ' ಎಂದರು.

'ದರ್ಶನ್ ಅವರ ಜನ್ಮದಿನಾಚರಣೆ ಸಂದರ್ಭದಲ್ಲಿ ಅವರ ಮನೆ ಎದುರು ಸಾವಿರಾರು ಅಭಿಮಾನಿಗಳು ಸೇರಿ, ಸಿಡಿಮದ್ದು ಸಿಡಿಸುತ್ತಾರೆ. ಅದರ ಸದ್ದಿನಿಂದ ನನ್ನ ಶ್ರವಣಶಕ್ತಿ ಹೋಯಿತು. ಇದರಿಂದ ಕೇಳಿಸಿಕೊಳ್ಳುವ ಭಾಗ್ಯವನ್ನೇ ಕಳೆದುಕೊಂಡಿರುವೆ' ಎಂದರು.

₹14,300 ಕೋಟಿ ಜಾಗಕ್ಕೆ ಜಟಾಪಟಿ

ಒಂದನೇ ಪುಟದಿಂದ...

ಈ ನಡುವೆ, ಪೀಣ್ಯ ಪ್ಲಾಂಟೇಷನ್‌ನಲ್ಲಿ ಎಚ್‌ಎಂಟಿ ಹಾಗೂ ಪ್ರೆಸ್ಟೀಜ್ ಎಸ್ಟೇಟ್ ಪ್ರಾಜೆಕ್ಟ್ ಒತ್ತುವರಿ (ಒಟ್ಟು 599 ಎಕರೆ) ಮಾಡಿಕೊಂಡಿದೆ ಎಂದು ಆರೋಪಿಸಿ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವಿಚಕ್ಷಣಾ) ಅವರು 2015ರಲ್ಲಿ ನೋಟಿಸ್ ನೀಡಿ ಈ ಜಾಗವನ್ನು ವಶಪಡಿಸಿಕೊಳ್ಳಬೇಕು ಎಂದು ಆದೇಶ ಹೊರಡಿಸಿದ್ದರು.

ಒತ್ತುವರಿ ತೆರವು ಆದೇಶ ಪ್ರಶ್ನಿಸಿ ಪ್ರೆಸ್ಟೀಜ್ ಸಂಸ್ಥೆಯು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನ್ಯಾಯಾಲಯದ ಮೊರೆ ಹೋಗಿತ್ತು. ಎಚ್‌ಎಂಟಿ ಅನಧಿಕೃತವಾಗಿ ಜಾಗ ಪಡೆದಿಲ್ಲ ಎಂಬ ಕಾರಣ ನೀಡಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಎಪಿಸಿಸಿಎಫ್ ಆದೇಶಕ್ಕೆ ತಡೆ ನೀಡಿದ್ದರು. ಬಳಿಕ ಈ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಸರ್ಚ್ ವಾರಂಟ್ ನೀಡಲು ಉದ್ದೇಶಪೂರ್ವಕ ವಿಳಂಬ: ಆರೋಪ

ಲೋಕಾಯುಕ್ತದ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಡಾ ಹಗರಣಕ್ಕೆ ಸಂಬಂಧಿಸಿ 1 ಸಾವಿರ ಪುಟಗಳ ಸಾಕ್ಷ್ಯ ಸಂಗ್ರಹಿಸಿದ್ದಾಗ್ಯೂ ದಾಳಿ ನಡೆಸದೇ, ಸರ್ಕಾರದ ಜೊತೆ ಶಾಮೀಲಾಗಿ ನಿರ್ಲಕ್ಷ್ಯ ತೋರಿದ ಲೋಕಾಯುಕ್ತ ಹಾಗೂ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಇಲ್ಲಿನ ಆರ್‌ಟಿಐ ಕಾರ್ಯಕರ್ತ ಗಂಗರಾಜು ರಾಜ್ಯಪಾಲರಿಗೆ ಸೋಮವಾರ ಇ-ಮೇಲ್ ಹಾಗೂ ಅಂಚೆ ಮೂಲಕ ದೂರು ಸಲ್ಲಿಸಿದ್ದಾರೆ.

'ಲೋಕಾಯುಕ್ತದ ಮೈಸೂರು ಕಚೇರಿಯ ಇನ್‌ಸ್ಪೆಕ್ಟರ್ ರವಿಕುಮಾರ್ ನೇತೃತ್ವದ ತಂಡವು ಮುಡಾದಲ್ಲಿನ ಅಕ್ರಮಗಳ ಕುರಿತು ಸಾಕ್ಷ್ಯ ಕಲೆಹಾಕಿ ಸರ್ಚ್ ವಾರಂಟ್ ಕೋರಿ ಅಂದಿನ ಲೋಕಾಯುಕ್ತ ಎಸ್.ಪಿ. ವಿ.ಜೆ. ಸುಜಿತ್ ಮೂಲಕ ಲೋಕಾಯುಕ್ತ ಬೆಂಗಳೂರು ಕಚೇರಿಗೆ ಮನವಿ ಸಲ್ಲಿಸಿತ್ತು. ಆದರೆ, ಉದ್ದೇಶಪೂರ್ವಕವಾಗಿ 28 ದಿನ ವಿಳಂಬ ಮಾಡಿ ಲೋಕಾಯುಕ್ತವು ಸರ್ಚ್‌ವಾರಂಟ್ ನೀಡಿತು. ಅಷ್ಟರೊಳಗೆ, ಲೋಕಾಯುಕ್ತದ ಕೆಲವು ಅಧಿಕಾರಿಗಳಿಂದಲೇ ಈ ಮಾಹಿತಿ ಸರ್ಕಾರಕ್ಕೆ ಸೋರಿಕೆ ಆಗಿದ್ದು, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಐಎಎಸ್ ಅಧಿಕಾರಿಗಳ ತಂಡವೊಂದನ್ನು ಕಳುಹಿಸಿ 140ಕ್ಕೂ ಹೆಚ್ಚು ಕಡತಗಳನ್ನು ಮುಡಾ ಕಚೇರಿಯಿಂದ ಬೆಂಗಳೂರಿಗೆ ತರಿಸಿಕೊಂಡಿದ್ದರು. ಜುಲೈ 4ರಂದು ಎಸ್.ಪಿ. ಸುಜಿತ್ ಇಲ್ಲಿಂದ ವರ್ಗವಾಗಿದ್ದು, 5ರಂದು ಲೋಕಾಯುಕ್ತ ತನ್ನ ಸರ್ಚ್ ವಾರಂಟ್ ಹಿಂಪಡೆದಿದೆ' ಎಂದು ಅವರು ದೂರಿನಲ್ಲಿ ಆರೋಪಿಸಿದ್ದಾರೆ.

'ಲೋಕಾಯುಕ್ತಕ್ಕೆ ಸಾಕಷ್ಟು ಮುಂಚೆಯೇ ಮಾಹಿತಿ ಇದ್ದರೂ ಸರ್ಚ್ ವಾರಂಟ್ ನೀಡಲು ವಿಳಂಬ ಮಾಡಿದ್ದೇಕೆ ಎಂಬುದರ ಬಗ್ಗೆ ಸಿಬಿಐನಂತಹ ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಬೇಕು. ಪ್ರಕರಣದಲ್ಲಿ ಶಾಮೀಲಾಗಿರುವ ಕರ್ನಾಟಕ ಲೋಕಾಯುಕ್ತದ ಹಿರಿಯ ಅಧಿಕಾರಿಗಳು, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಸಚಿವರ ವಿಶೇಷ ಕರ್ತವ್ಯಾಧಿಕಾರಿ ಮಾರುತಿ ಬಗಲಿ, ಮುಡಾದ ಹಿಂದಿನ ಆಯುಕ್ತರಾದ ಡಿ.ಬಿ. ನಟೇಶ್, ಜಿ.ಟಿ. ದಿನೇಶ್‌ಕುಮಾರ್ ವಿರುದ್ಧ ತನಿಖೆ ನಡೆಸಬೇಕು' ಎಂದು ಕೋರಿದ್ದಾರೆ.

ಸಿ.ಎಂ ವಿಚಾರಣೆಗೆ ಒತ್ತಾಯಿಸಿ ಮನವಿ

ಮೈಸೂರು: ಮುಡಾ ಪ್ರಕರಣದಲ್ಲಿ ಮೊದಲ ಆರೋಪಿ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿಚಾರಣೆಗೆ ಒಳಪಡಿಸುವಂತೆ ಕೋರಿ ದೂರುದಾರ ಸ್ನೇಹಮಯಿ ಕೃಷ್ಣ ಸೋಮವಾರ ಇಲ್ಲಿನ ಲೋಕಾಯುಕ್ತ ಪೊಲೀಸರಿಗೆ ಮನವಿ ಸಲ್ಲಿಸಿದರು.

25 ಪುಟಗಳ ವಿವರವಾದ ಪತ್ರವನ್ನು ಲೋಕಾಯುಕ್ತ ಎಸ್.ಪಿ. ಟಿ.ಜೆ. ಉದೇಶ್ ಅವರಿಗೆ ಸಲ್ಲಿಸಿರುವ ಕೃಷ್ಣ, ಪ್ರಕರಣಕ್ಕೆ ಸಂಬಂಧಿಸಿದ ಪೂರಕ ಸಾಕ್ಷ್ಯಗಳ ಮಾಹಿತಿಯನ್ನೂ ನೀಡಿದರು. ಪ್ರಕರಣಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೈಕೋರ್ಟ್‌ಗೆ ಸಲ್ಲಿಸಿರುವ ರಿಟ್ ಅರ್ಜಿಯೊಂದಿಗೆ ನೀಡಿರುವ ದಾಖಲೆಗಳಲ್ಲಿನ ಲೋಪಗಳ ಕುರಿತು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಆರೋಪಿಗಳು ಸಾಕ್ಷ್ಯಗಳನ್ನು ನಾಶ ಮಾಡುತ್ತಿದ್ದು, ಅದನ್ನೇ ಆಧರಿಸಿ ವಿಚಾರಣೆಗೆ ಒಳಪಡಿಸಬೇಕು ಎಂದು ಕೋರಿದ್ದಾರೆ.

ಬಿಜೆಪಿ ಬೆದರಿಕೆಗೆ ಹೆದರಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ



ಸಂಡೂರು (ಬಳ್ಳಾರಿ): 'ಬಿಜೆಪಿಯವರು ನನ್ನ ಮೇಲೆ ಸುಳ್ಳು ಆರೋಪಗಳನ್ನು ಮಾಡಿ, ರಾಜೀನಾಮೆ ಕೇಳುತ್ತಾರೆ. ನಾನು ಯಾವ ತಪ್ಪೂ ಮಾಡಿಲ್ಲ. ರಾಜ್ಯದ ಜನರ ಆಶೀರ್ವಾದ ಇರುವವರೆಗೆ ಬಿಜೆಪಿಯ ಬೆದರಿಕೆಗಳಿಗೆ ಹೆದರಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಂಡೂರಿನಲ್ಲಿ ಸೋಮವಾರ ನಡೆದ ಸಾಧನಾ ಸಮಾವೇಶದಲ್ಲಿ ಮಾತನಾಡಿದರು.

ನಾರಿಹಳ್ಳಕ್ಕೆ ಬಾಗಿನ ಸಲ್ಲಿಸಿದ ಮೊದಲ ಸಿಎಂ: ನಾರಿಹಳ್ಳ ಕಿರು ಜಲಾಶಯಕ್ಕೆ ಸಿದ್ದರಾಮಯ್ಯ ಬಾಗಿನ ಅರ್ಪಿಸಿದರು. ಈ ಜಲಾಶಯವನ್ನು 1979ರಲ್ಲಿ ದೇವರಾಜ ಅರಸರು ಉದ್ಘಾಟಿಸಿದ್ದರು. ಅಂದಿನಿಂದ ಈವರೆಗೆ ಯಾವ ಮುಖ್ಯಮಂತ್ರಿಯೂ ಬಾಗಿನ ಅರ್ಪಿಸಿರಲಿಲ್ಲ.

ಕಲಬುರಗಿಯ ತಾಂಡಾದ ಕುಟುಂಬ: ದಂಪತಿ ಮಧ್ಯೆ ಕೌಟುಂಬಿಕ ಮನಸ್ತಾಪ

ಇಬ್ಬರು ಮಕ್ಕಳನ್ನು ಕೊಂದು ದಂಪತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ತಾಲ್ಲೂಕಿನ ಸಿಂಗನಾಯಕನಹಳ್ಳಿ ಸಮೀಪದ ಯಡಿಯೂರಪ್ಪ ನಗರದ ಮನೆ ಯೊಂದರಲ್ಲಿ ಇಬ್ಬರು ಪುಟ್ಟ ಮಕ್ಕಳು ಹಾಗೂ ಮಕ್ಕಳ ತಂದೆ–ತಾಯಿ ಸೇರಿ ನಾಲ್ವರ ಶವಗಳು ಸೋಮವಾರ ಪತ್ತೆಯಾಗಿವೆ.

ಪತಿ ಅವಿನಾಶ್ (33), ಪತ್ನಿ ಮಮತಾ(30), ಮಕ್ಕಳಾದ ಅಧೀಯ(5) ಮತ್ತು ಅನಯಾ (3) ಮೃತರು.

'ಕಲಬುರಗಿಯ ಕಮಲಾಪುರದ ತಾಂಡಾದ ದಂಪತಿ ಆರು ವರ್ಷಗಳಿಂದ ಯಡಿಯೂರಪ್ಪ ನಗರದಲ್ಲಿ ವಾಸವಾಗಿದ್ದರು. ಅವಿನಾಶ್ ಅವರು ಕ್ಯಾಬ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಮಮತಾ ಅವರು ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ



ಆತ್ಮಹತ್ಯೆ ಮಾಡಿಕೊಂಡ ಕುಟುಂಬ

ಮಾಡುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಅವಿನಾಶ್ ಅವರ ಸಹೋದರ ಸೋಮವಾರ ಬೆಳಿಗ್ಗೆ ಮನೆಗೆ ಬಂದಾಗ ಯಾರೂ ಮನೆಯ ಬಾಗಿಲು ತೆರೆಯಲಿಲ್ಲ. ಬಾಗಿಲು ಒಡೆದು ಪರಿಶೀಲಿಸಿದಾಗ ನಾಲ್ವರ ಶವ ಪತ್ತೆಯಾಗಿವೆ. ಅವಿನಾಶ್ ಅವರ ಶವ ನೇಣು ಬಿಗಿದ ಸ್ಥಿತಿಯಲ್ಲಿ ಸಿಕ್ಕಿದೆ. ಉಳಿದವರು ಸಾವು ಹೇಗಾಯಿತು ಎಂಬುದು ಇನ್ನೂ ಗೊತ್ತಾಗಿಲ್ಲ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸ್‌ಪಿ ಸಿ.ಕೆ.ಬಾಬಾ ಮಾಹಿತಿ ನೀಡಿದರು.

'ಎರಡು ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಅವಿನಾಶ್ ಅವರ ಸಹೋದರ ರಿಂದ ಮಾಹಿತಿ ಪಡೆದುಕೊಳ್ಳಲಾಗಿದೆ. ಅವಿನಾಶ್ ಅವರು ಭಾನುವಾರ ಕ್ಯಾಬ್ ಚಾಲನೆಗೆ ತೆರಳಿದ್ದರು. ವಾಪಸ್ ಬಂದ ಬಳಿಕ ಈ ಘಟನೆ ನಡೆದಿದೆ ಎನ್ನಲಾಗಿದೆ' ಎಂದೂ ತಿಳಿಸಿದರು.

ಮಕ್ಕಳ ಕತ್ತು ಹಿಸುಕಿ ಕೊಲೆ?: 'ತಾಯಿಯೇ ಇಬ್ಬರು ಮಕ್ಕಳ ಕತ್ತು ಹಿಸುಕಿ ಕೊಂದು ನಂತರ ಆಕೆಯೂ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಪೊಲೀಸರ ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

ಹಲವು ಬಾರಿ ಕರೆ ಮಾಡಿದ್ದ ಪತಿ: 'ಭಾನುವಾರ ಕ್ಯಾಬ್ ಚಾಲನೆಗೆ ತೆರಳಿದ್ದ ಅವಿನಾಶ್ ಅವರು ಪತ್ನಿಗೆ ಹಲವು ಬಾರಿ ಮಾಡಿದ್ದರು. ಎಷ್ಟು ಬಾರಿ ಕರೆ ಮಾಡಿದರೂ ಆಕೆ ಕರೆಯನ್ನು ಸ್ವೀಕರಿಸಿರಲಿಲ್ಲ. ಇದರಿಂದ ಅನುಮಾನಗೊಂಡ ಅವಿನಾಶ್ ಅವರು ಪಕ್ಕದ ಮನೆಯವರಿಗೆ ಕರೆ ಮಾಡಿ ಪರಿಶೀಲಿಸುವಂತೆ ತಿಳಿಸಿದ್ದರು. ಅವರು ಮನೆ ಬಳಿಗೆ ತೆರಳಿ ಬಾಗಿಲು ಬಡಿದರೂ ಬಾಗಿಲು ತೆರೆಯಲಿಲ್ಲ. ನಂತರ, ಅವಿನಾಶ್‌ಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ತಕ್ಷಣವೇ ಮನೆಗೆ ಬಂದ ಅವಿನಾಶ್ ಅವರು ಪತ್ನಿ ಹಾಗೂ ಮಕ್ಕಳ ಸ್ಥಿತಿಕಂಡು, ಪತ್ನಿಯ ಮೃತದೇಹವನ್ನು ಕೆಳಕ್ಕಿಳಿಸಿ ಅದೇ ಹಗ್ಗದಿಂದ ತಾವೂ ನೇಣಿಗೆ ಶರಣಾಗಿದ್ದಾರೆ' ಎಂದು ಪೊಲೀಸರು ಹೇಳಿದರು.

ದಂಪತಿ ಮಧ್ಯೆ ಕೌಟುಂಬಿಕ ಕಲಹ ಇತ್ತು. ಅದೇ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಶಂಕಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಆರ್ಥಿಕ ಸಂಕಷ್ಟವೇ ಆತ್ಮಹತ್ಯೆಗೆ ಕಾರಣ?

'ಅವಿನಾಶ್ ಅವರು ತನ್ನ ಮಾವನಿಗೆ ಕಳೆದ ವಾರ ಕರೆ ಮಾಡಿದ್ದರು. ಕ್ರೆಡಿಟ್ ಕಾರ್ಡ್‌ಗೆ ಹಣ ತುಂಬಬೇಕು ಎಂದು ಹೇಳಿದ್ದರು. ಅದಕ್ಕೆ ಅವರು ಸದ್ಯ ನನ್ನ ಬಳಿ ಹಣ ಇಲ್ಲ, ಮುಂದೆ ನೋಡುತ್ತೇನೆ ಎಂದು ಹೇಳಿದ್ದರು. ಪತಿಯ ಆರ್ಥಿಕ ಸ್ಥಿತಿಕಂಡು ಮಮತಾ ಅವರು ಮಕ್ಕಳನ್ನೂ ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡಿರಬಹುದು' ಎಂದು ಶಂಕಿಸಲಾಗಿದೆ.

ನಕಲಿ ವಿಡಿಯೊ ಬೆದರಿಕೆ: ಪ್ರಕರಣ ದಾಖಲು

ಹುಬ್ಬಳ್ಳಿ: ಗುತ್ತಿಗೆದಾರ ಅರ್ಜುನ ಗುಡ್ಡದ ಅವರ ನಕಲಿ ವಿಡಿಯೊ ಸೃಷ್ಟಿಸುವುದಾಗಿ ಬೆದರಿಕೆ ಹಾಕಿ ಹಣ ವಸೂಲಿ ಮಾಡಿದ ಆರೋಪದ ಮೇಲೆ ಐವರ ವಿರುದ್ಧ ಇಲ್ಲಿನ ಗೋಕುಲ ರೋಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಸಕ ವಿನಯ ಕುಲಕರ್ಣಿ ಅವರ ವಿರುದ್ಧ ಬೆಂಗಳೂರಿನಲ್ಲಿ ಅತ್ಯಾಚಾರ ಪ್ರಕರಣ ದಾಖಲಿಸಿರುವ ಸಾಮಾಜಿಕ ಕಾರ್ಯಕರ್ತೆ, ಧಾರವಾಡದ ಜಗದೀಶ ಸಣ್ಣಕ್ಕಿ, ಹನುಮಂತಪ್ಪ ಬಂಡಿವಡ್ಡರ, ಸಿದ್ದಪ್ಪ ಹೊಸಮನಿ ಮತ್ತು ಇನ್ನೊಬ್ಬ ವ್ಯಕ್ತಿ ವಿರುದ್ಧ ಅರ್ಜುನ ದೂರು ನೀಡಿದ್ದಾರೆ. 'ಸಾಮಾಜಿಕ ಕಾರ್ಯಕರ್ತೆಯು ಅರ್ಜುನ ಅವರನ್ನು ಸಂಪರ್ಕಿಸಿ ಹತ್ತಿ ಬೀಜ ಕಂಪನಿಯ ರಾಯಭಾರಿ ಎಂದು ಪರಿಚಯಿಸಿಕೊಂಡಿದ್ದರು. ಆತ್ಮೀಯವಾಗಿ ವರ್ತಿಸುತ್ತಿದ್ದರು. ಬಳಿಕ ಹಣ ನೀಡದಿದ್ದರೆ ನಕಲಿ ಫೋಟೊ, ವಿಡಿಯೊ ಮಾಡುವುದಾಗಿ ಬೆದರಿಸಿ, ₹20 ಲಕ್ಷ ವಸೂಲಿ ಮಾಡಿ, ಜೀವ ಬೆದರಿಕೆ ಹಾಕಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಆಕಾಂಕ್ಷಿಗಳ ಪ್ರತಿಭಟನೆ

'ಪಿಎಸ್‌ಐ ಆಯ್ಕೆ ಪಟ್ಟಿ ಪ್ರಕಟಿಸಿ, ಆದೇಶ ಪ್ರತಿ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗಳ ಭರ್ತಿಗೆ ನಡೆಸಿದ ನೇಮಕಾತಿ ಪರೀಕ್ಷೆಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿ, ಆದೇಶ ಪ್ರತಿ ನೀಡಬೇಕು ಎಂದು ಆಗ್ರಹಿಸಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಅಸೋಸಿಯೇಷನ್ ವತಿಯಿಂದ ಸೋಮವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಯಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ನೂರಾರು ಆಕಾಂಕ್ಷಿಗಳು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಗೃಹ ಸಚಿವ, ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ರಕ್ತದಲ್ಲಿ ಬರೆದಿರುವ ಪತ್ರವನ್ನು ಪ್ರದರ್ಶಿಸಿ, ನ್ಯಾಯ ದೊರಕಿಸಿಕೊಡುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ ಪಿಎಸ್‌ಐ ಹುದ್ದೆ ಆಕಾಂಕ್ಷಿಗಳು, ಗೃಹ ಸಚಿವ ಜಿ.ಪರಮೇಶ್ವರ ಅವರಿಗೆ ರಕ್ತದಲ್ಲಿ ಬರೆದಿರುವ ಪತ್ರವನ್ನು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

'2020-21ರಲ್ಲಿ 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗಳ ಭರ್ತಿಗೆ ನಡೆಸಿದ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮಗಳು ಪತ್ತೆಯಾದ ಕಾರಣ ಆಯ್ಕೆ ಪಟ್ಟಿ ರದ್ದು ಮಾಡಲಾಗಿತ್ತು. ಹೈಕೋರ್ಟ್ ಸೂಚನೆಯಂತೆ 2024ರಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮೂಲಕ ಮರುಪರೀಕ್ಷೆ ನಡೆಸಿ, ಫಲಿತಾಂಶವನ್ನು ಪ್ರಕಟಿಸಿತ್ತು. ಮುಂದಿನ ಕ್ರಮಕ್ಕಾಗಿ ರಾಜ್ಯ ಪೊಲೀಸ್ ನೇಮಕಾತಿ ಮತ್ತು ತರಬೇತಿ ವಿಭಾಗಕ್ಕೆ ನೀಡಲಾಗಿತ್ತು. ಆದರೆ, ಇದುವರೆಗೂ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿಲ್ಲ' ಎಂದು ಅಸೋಸಿಯೇಷನ್ ಅಧ್ಯಕ್ಷ ಕಾಂತಕುಮಾರ್ ಅವರು ತಿಳಿಸಿದರು.



545 ಪಿಎಸ್‌ಐ ಹುದ್ದೆಗಳ ಮರು ಪರೀಕ್ಷೆಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸದೇ ಇರುವುದು ಸರ್ಕಾರದ ಬೇಜವಾಬ್ದಾರಿತನವೋ ಅಥವಾ ಯೋಜಿತ ಧೋರಣೆಯೋ

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'545 ಪಿಎಸ್‌ಐ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸುವುದರ ಜೊತೆಗೆ 2024ರ ಅಕ್ಟೋಬರ್‌ನಲ್ಲಿ ನಡೆದಿದ್ದ 402 ಪಿಎಸ್‌ಐ ನೇಮಕಾತಿ ಪರೀಕ್ಷೆಯ ಫಲಿತಾಂಶವನ್ನೂ ಪ್ರಕಟಿಸಬೇಕು. ಎಂಟು ತಿಂಗಳಿನಿಂದ ಮುಖ್ಯಮಂತ್ರಿ, ಗೃಹ ಸಚಿವರ ಮನೆಗೆ ಅಲೆದಾಡಿದರೂ ಸಮಸ್ಯೆ ಮಾತ್ರ ಬಗೆಹರಿದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಅಸೋಸಿಯೇಷನ್ ಉಪಾಧ್ಯಕ್ಷ ಎಂ.ಎಸ್.ಶ್ರೇಯಸ್, ಪ್ರಧಾನ ಕಾರ್ಯದರ್ಶಿ ಜೆ.ಸಂಜಯ್ ಕುಮಾರ್, ಸಹಾಯಕ ಕಾರ್ಯದರ್ಶಿ ಅಭಿಲಾಶ ಪಾಲ್ಗೊಂಡಿದ್ದರು.

'ದೇವದಾರಿ' ಸಿಕ್ಕರೂ ನೀಗದು ಬೇಡಿಕೆ

ಒಂದನೇ ಪುಟದಿಂದ...

ನೀಗದು ಬೇಡಿಕೆ: ದೇವದಾರಿ ಗಣಿ ಆರಂಭವಾದರೂ ಅಲ್ಲಿ ಸಿಗುವ ಅದಿರಿನ ಪ್ರಮಾಣ ವರ್ಷಕ್ಕೆ 1.6 ದಶಲಕ್ಷ ಟನ್ ಮಾತ್ರ. ಆದರೆ, ಮಂಗಳೂರಿನ ಕೆಐಒಸಿಎಲ್ ಪೆಲೆಟ್ (ಕಬ್ಬಿಣದ ಸಣ್ಣ ಗುಂಡುಗಳ) ಕಾರ್ಖಾನೆ ನಡೆಯಲು ವಾರ್ಷಿಕ 3.5 ದಶಲಕ್ಷ ಟನ್ ಬೇಕು. ಹೀಗಿದ್ದ ಮೇಲೆ ಗಣಿಯು ಕಾರ್ಖಾನೆಯ ಬೇಡಿಕೆಯನ್ನೂ ಪೂರೈಸಬಲ್ಲದೇ? ಅಧಿಕ ಪ್ರಮಾಣದ ರಾಯಧನ ನೀಡಿ ಗಣಿ ಪಡೆಯುವುದಕ್ಕಿಂತಲೂ, ಕಡಿಮೆ ದರದಲ್ಲಿ ಅದಿರು ಕೊಂಡು ಲಾಭ ಮಾಡಬಾರದು ಏಕೆ ಎಂದು ನೀತಿ ಆಯೋಗವು ಉಕ್ಕು ಸಚಿವಾಲಯವನ್ನು ಪ್ರಶ್ನಿಸಿದೆ.

ಇದಕ್ಕೆ ಉತ್ತರಿಸಿದ ಸಚಿವಾಲಯ, 'ಮಂಗಳೂರಿನ ಕಾರ್ಖಾನೆಗೆ ಈ ಗಣಿಯು ಭಾಗಶಃ ಕಚ್ಚಾವಸ್ತು ಮಾತ್ರ ಪೂರೈಸಲಿದೆ. ಇನ್ನುಳಿದ ಕಚ್ಚಾವಸ್ತುವನ್ನು ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮದಿಂದ (ಎನ್‌ಎಂಡಿಸಿ) ಪಡೆಯು ವುದಾಗಿಯೂ, ಎನ್‌ಎಂಡಿಸಿ ಜತೆಗಿನ ದೀರ್ಘಕಾಲಿನ ಒಪ್ಪಂದವು ಕಂಪನಿಗೆ ನೆರವಾಗುವುದು' ಎಂದು ಹೇಳಿದೆ.

ಗುತ್ತಿಗೆ ಆಧಾರದ 300 ನೌಕರರಿಗೆ ಪರ್ಯಾಯ ವ್ಯವಸ್ಥೆ ಮಾಡಬಹುದು. ಆದರೆ 99,330 ಮರಗಳ ಕಾಡು ಬೆಳೆಸಲು ಕೇಂದ್ರ ಅಥವಾ ಕುಮಾರಸ್ವಾಮಿ ಅವರಿಗೆ ಸಾಧ್ಯವೇ?

ಕರೂರು ಮಾಧವ ರೆಡ್ಡಿ, ಅಧ್ಯಕ್ಷ ರಾಜ್ಯ ರೈತ ಸಂಘ, ಬಳ್ಳಾರಿ

ಗುತ್ತಿಗೆ ನೌಕರಿ: 'ಯೋಜನೆಯಿಂದ ಪ್ರತ್ಯಕ್ಷ ಮತ್ತು ಪರೋಕ್ಷ ಉದ್ಯೋಗವಕಾಶಗಳು ಸೃಷ್ಟಿಯಾಗಲಿವೆ. ಸುತ್ತಲ ಪ್ರದೇಶದಲ್ಲಿ ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಸಾಧ್ಯವಾಗಲಿದೆ. ಯೋಜನೆಯು ಸಂಡೂರು ಭಾಗದ 1,200 ಮಂದಿಗೆ 'ಪರೋಕ್ಷ ಉದ್ಯೋಗ' ನೀಡುವ ಸಾಧ್ಯತೆಗಳಿವೆ. ಗಣನೀಯ ಪ್ರಮಾಣದ ಜನರಿಗೆ 'ಗುತ್ತಿಗೆ ಆಧಾರ'ದಲ್ಲಿ ನೌಕರಿ ನೀಡಲಾಗುವುದು' ಎಂದು ಹೇಳಿದೆ. ಆದರೆ, ಕಾಯಂ ನೌಕರಿ ನೀಡುವ ಬಗ್ಗೆ ತನ್ನ ಪ್ರಸ್ತಾವನೆಯಲ್ಲಿ ಉಕ್ಕು ಸಚಿವಾಲಯ ಯಾವುದೇ ಉಲ್ಲೇಖ ಮಾಡಿಲ್ಲ.

ಬಂಡವಾಳ ಹಿಂತೆಗೆತದ ಪ್ರಶ್ನೆ?: ಕೆಐಒಸಿಎಲ್‌ನಲ್ಲಿನ ಬಂಡಾವಳ ಹಿಂತೆಗೆತಕ್ಕೆ ಕೇಂದ್ರ ಸರ್ಕಾರ ಪ್ರಯತ್ನ ನಡೆಸಿರುವ ಬಗ್ಗೆ ನೀತಿ ಆಯೋಗ ಪ್ರಶ್ನೆ ಮಾಡಿತ್ತು. ಇದಕ್ಕೆ ಉತ್ತರಿಸಿದ್ದ ಕೇಂದ್ರ ಉಕ್ಕು ಸಚಿವಾಲಯದ ಅಧಿಕಾರಿಗಳು, 'ಕೆಐಒಸಿಎಲ್ ಸದ್ಯ ಕಾರ್ಯಸಾಧುವಲ್ಲದ ಸಾರ್ವಜನಿಕ ವಲಯದ ಉದ್ದಿಮೆಗಳ ವಲಯದಲ್ಲಿದೆ. ಭವಿಷ್ಯದಲ್ಲಿ ಸರ್ಕಾರ ಕಂಪನಿಯ ಬಂಡವಾಳ ಹಿಂಪಡೆದರೆ ಮುಂದಿನ ಪ್ರಕ್ರಿಯೆಗಳಿಗೆ ನಾವು ಬದ್ಧವಾಗಿರುತ್ತೇವೆ' ಎಂದು ಹೇಳಿದೆ.

ಸಾರ್ವಜನಿಕ ಉದ್ದಿಮೆ ಕೆಐಒಸಿಎಲ್ ಅನ್ನು ಮಾರಾಟ ಮಾಡಿದರೆ, ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ ಪ್ರಕಾರ ಸಂಸ್ಥೆ ಜತೆಗೆ ಗಣಿ ಗುತ್ತಿಗೆಯೂ ವರ್ಗಾವಣೆಯಾಗುತ್ತದೆ.

ಈ ಕುರಿತ ಪ್ರತಿಕ್ರಿಯೆಗಾಗಿ ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕಾ ಸಚಿವ ಎಚ್.ಡಿ ಕುಮಾರಸ್ವಾಮಿ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತಾದರೂ ಅವರ ಸಂಪರ್ಕ ಸಾಧ್ಯವಾಗಲಿಲ್ಲ.

ದಕ್ಷಿಣ ಲೆಬನಾನ್: ಇಸ್ರೇಲ್‌ನ ಮನವಿ ತಿರಸ್ಕರಿಸಿದ ಫ್ರಾನ್ಸ್, ಸ್ಪೇನ್

ಶಾಂತಿಪಾಲನಾ ಪಡೆ ವಾಪಸ್ ಇಲ್ಲ

ನ್ಯೂಯಾರ್ಕ್/ ಪ್ಯಾರಿಸ್ (ರಾಯಿಟರ್ಸ್/ ಎಪಿ): ಲೆಬನಾನ್‌ನಲ್ಲಿರುವ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯನ್ನು ವಾಪಸ್ ಕರೆಸಿಕೊಳ್ಳಬೇಕೆಂಬ ಇಸ್ರೇಲ್‌ನ ಮನವಿಯನ್ನು ಸ್ಪೇನ್ ಹಾಗೂ ಫ್ರಾನ್ಸ್ ತಳ್ಳಿಹಾಕಿವೆ.

'ದಕ್ಷಿಣ ಲೆಬನಾನ್‌ನಲ್ಲಿರುವ ಶಾಂತಿಪಾಲನಾ ಪಡೆಗಳನ್ನು (ಯುಎನ್‌ಐಎಫ್‌ಐಎಲ್) ವಾಪಸ್ ಕರೆಸಿಕೊಳ್ಳುವುದಿಲ್ಲ' ಎಂದು ಸ್ಪೇನ್ ಅಧ್ಯಕ್ಷ ಪೆಡ್ರೊ ಸ್ಯಾಂಚೆಸ್ ಸೋಮವಾರ ಹೇಳಿದ್ದಾರೆ. 'ಶಾಂತಿಪಾಲನಾ ಪಡೆಗಳ ರಕ್ಷಣೆಯ ಸಂಬಂಧವಿದ್ದ ಎಲ್ಲರ ಕರ್ತವ್ಯವಾಗಿದೆ' ಎಂದು ಫ್ರಾನ್ಸ್ ವಿದೇಶಾಂಗ ಸಚಿವಾಲಯವು ಪ್ರಕಟಣೆ ತಿಳಿಸಿದೆ.

'ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಲೆಬನಾನ್‌ನಲ್ಲಿರುವ ಶಾಂತಿಪಾಲನಾ ಪಡೆಯನ್ನು ವಾಪಸ್ ಕರೆಸುವಂತೆ ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಅವರನ್ನು ಕೇಳಿಕೊಂಡಿದ್ದರು.

'ಹಿಜ್ಬುಲ್ಲಾ ಬಂಡುಕೋರರ ನಿಯಂತ್ರಣದಲ್ಲಿರುವ ಪ್ರದೇಶಗಳು ಮತ್ತು ನಮ್ಮ ಸೇನೆಯು ದಾಳಿ ನಡೆಸುವ ಪ್ರದೇಶಗಳಿಂದ ಯುಎನ್‌ಐಎಫ್‌ಐಎಲ್ ಪಡೆಗಳನ್ನು ವಾಪಸ್ ಕರೆಸಿಕೊಳ್ಳುವ ಕಾಲ ಕೂಡಿ ಬಂದಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದರು.

ಟ್ಯಾಂಕ್ ನುಗ್ಗಿಸಿದ ಸೇನೆ–ಆರೋಪ: ದಕ್ಷಿಣ ಲೆಬನಾನ್‌ನಲ್ಲಿರುವ ತನ್ನ ಶಾಂತಿಪಾಲನಾ ಪಡೆಗಳ ನೆಲೆಯ ಮೇಲೆ ಇಸ್ರೇಲ್ ಸೇನೆಯು ಟ್ಯಾಂಕ್‌ಗಳನ್ನು ನುಗ್ಗಿಸಿದೆ ಎಂದು ವಿಶ್ವಸಂಸ್ಥೆ ಸೋಮವಾರ ಆರೋಪಿಸಿದೆ.

ದಕ್ಷಿಣ ಲೆಬನಾನ್‌ನ ದೇರ್ ಖನೂನ್ ಪಟ್ಟಣದ ಮೇಲೆ ಇಸ್ರೇಲ್ ಸೇನೆ ನಡೆಸಿದ ದಾಳಿಯ ದೃಶ್ಯ — ಎಎಫ್‌ಪಿ ಚಿತ್ರ

ಯುಎನ್‌ಐಎಫ್‌ಐಎಲ್ ತಂಡದ ನೆಲೆಯ ಮುಖ್ಯ ಗೇಟ್ ಅನ್ನು ಇಸ್ರೇಲ್‌ನ ಎರಡು ಟ್ಯಾಂಕ್‌ಗಳು ಭಾನುವಾರ ನಾಶಮಾಡಿವೆ. ಟ್ಯಾಂಕ್‌ಗಳು ಅಲ್ಲಿಂದ ತೆರಳಿದ ಬಳಿಕ, ಕಟ್ಟಡದಿಂದ ಸುಮಾರು 100 ಮೀ. ದೂರದಲ್ಲಿ ಷೆಲ್‌ಗಳು ಸ್ಫೋಟಗೊಂಡಿವೆ. ಈ ವೇಳೆ ಆವರಿಸಿದ ಹೊಗೆಯಿಂದ ಯುಎನ್‌ಐಎಫ್‌ಐಎಲ್‌ನ ಕೆಲವು ಸಿಬ್ಬಂದಿ ಅಸ್ವಸ್ಥಗೊಂಡಿದ್ದಾರೆ ಎಂದು ಪ್ರಕಟಣೆ ಹೇಳಿದೆ.

ಆದರೆ ಇಸ್ರೇಲ್ ಸೇನೆ ಈ ಆರೋಪಗಳನ್ನು ಅಲ್ಲಗಳೆದಿದೆ. ಹಿಜ್ಬುಲ್ಲಾ ಬಂಡುಕೋರರು ಟ್ಯಾಂಕ್‌ಗಳನ್ನು ಗುರಿಯಾಗಿಸಿ ಕ್ಷಿಪಣಿ ದಾಳಿ ನಡೆಸಿದ್ದು, 25 ಸೈನಿಕರು ಗಾಯಗೊಂಡಿದ್ದಾರೆ. ಯುಎನ್‌ಐಎಫ್‌ಐಎಲ್ ನೆಲೆ ತೀರಾ ಸನಿಹ ಈ ದಾಳಿ ನಡೆದಿದೆ. ದಾಳಿಯಿಂದ ಪಾರಾಗಲು ಟ್ಯಾಂಕ್‌ವೊಂದು ಶಾಂತಿಪಾಲನಾ ಪಡೆಯ ನೆಲೆಯತ್ತ ಧಾವಿಸಿದೆ ಎಂದು ತಿಳಿಸಿದೆ.

'ಶಾಂತಿಪಾಲನಾ ಪಡೆಯ ನೆಲೆಗೆ ಟ್ಯಾಂಕ್ ಅನ್ನು ನುಗ್ಗಿಸಿಲ್ಲ. ಭಾರಿ ಕ್ಷಿಪಣಿ ದಾಳಿಯಿಂದ ಪಾರಾಗಲು ಟ್ಯಾಂಕ್‌ವೊಂದು ನೆಲೆಯತ್ತ ಹೋಗಿದೆ' ಎಂದು ಸೇನೆಯ ಅಂತರರಾಷ್ಟ್ರೀಯ ವಕ್ತಾರ ನದಾವ್ ಶೋಶನಿ ಹೇಳಿದ್ದಾರೆ.

ಗಾಯಗೊಂಡ ಸೈನಿಕರನ್ನು ಸ್ಥಳಾಂತರಿಸುವಾಗ ಅವರಿಗೆ ರಕ್ಷಣೆ ಒದಗಿಸಲು ಹೊಗೆಯನ್ನು ಪರದೆಯಾಗಿ ಬಳಸಲಾಗಿದೆ. ಅದರಿಂದ ಶಾಂತಿಪಾಲನಾ ಪಡೆಗೆ ಯಾವುದೇ ಅಪಾಯ ಉಂಟಾಗಿಲ್ಲ ಎಂದಿದ್ದಾರೆ.

18 ಸಾವು: ಉತ್ತರ ಲೆಬನಾನ್‌ನ ಅಪಾರ್ಟ್‌ಮೆಂಟ್ ಕಟ್ಟಡದ ಮೇಲೆ ಇಸ್ರೇಲ್ ಸೇನೆ ಸೋಮವಾರ ನಡೆಸಿದ ದಾಳಿಗೆ 18 ಮಂದಿ ಮೃತಪಟ್ಟಿದ್ದಾರೆ ಎಂದು ಲೆಬನಾನ್‌ನ ರೆಡ್‌ಕ್ರಾಸ್ ತಿಳಿಸಿದೆ.

ಗಾಜಾದ ಶಾಲೆಯ ಮೇಲೆ ದಾಳಿ: 20 ಬಲಿ

ಗಾಜಾದಲ್ಲಿ ನಿರಾಶ್ರಿತರು ತಂಗಿದ್ದ ಶಾಲೆಯ ಮೇಲೆ ಭಾನುವಾರ ರಾತ್ರಿ ಇಸ್ರೇಲ್ ನಡೆಸಿದ ಬಾಂಬ್ ದಾಳಿಯಲ್ಲಿ ಮಕ್ಕಳು ಮತ್ತು ಮಹಿಳೆಯರು ಸೇರಿದಂತೆ 20 ಮಂದಿ ಮೃತಪಟ್ಟಿದ್ದಾರೆ. ಯುದ್ಧದಿಂದಾಗಿ ನಿರ್ವಸಿತರಾದವರು ನುಸೈರತ್ ನಲ್ಲಿರುವ ಶಾಲೆಯಲ್ಲಿ ಆಶ್ರಯ ಪಡೆದಿದ್ದರು.

ದೇರ್ ಅಲ್ ಬಲಾಹ್‌ನ ಅಲ್ ಅಕ್ಸಾ ಹುತಾತ್ಮರ ಆಸ್ಪತ್ರೆಯ ಮೇಲೆ ಸೋಮವಾರ ನಡೆದ ದಾಳಿಯಲ್ಲಿ ನಾಲ್ವರು ಮೃತಪಟ್ಟು, ಸುಮಾರು 50 ಮಂದಿ ಗಾಯಗೊಂಡಿದ್ದಾರೆ. ಆಸ್ಪತ್ರೆಯ ಬಳಿ ಹಾಕಿದ್ದ ತಾತ್ಕಾಲಿಕ ಟೆಂಟ್‌ಗಳು ಬೆಂಕಿಗೆ ಆಹುತಿಯಾಗಿದ್ದು, ಹಲವರು ಸುಟ್ಟ ಗಾಯಗಳಿಂದ ಬಳಲಿದ್ದಾರೆ ಎಂದು ಆಸ್ಪತ್ರೆಯ ಮೂಲಗಳು ಹೇಳಿವೆ.

ಇಸ್ರೇಲ್‌ನ ನಾಲ್ವರು ಯೋಧರ ಸಾವು

ಜೆರುಸಲೇಂ: ಹಿಜ್ಬುಲ್ಲಾ ಬಂಡುಕೋರರು ನಡೆಸಿದ ಡ್ರೋನ್ ದಾಳಿಗೆ ಇಸ್ರೇಲ್‌ನ ನಾಲ್ವರು ಯೋಧರು ಬಲಿಯಾಗಿದ್ದು, ಏಳು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಮಧ್ಯ ಇಸ್ರೇಲ್‌ನ ಬಿನ್ಯಾಮಿನ ನಗರದ ಸೇನಾ ನೆಲೆಯನ್ನು ಗುರಿಯಾಗಿಸಿ ಭಾನುವಾರ ಡ್ರೋನ್ ದಾಳಿ ನಡೆಸಿದೆ. ಇಸ್ರೇಲ್ ಸೇನೆ ಬೈರೂತ್ ಮೇಲೆ ಗುರುವಾರ ನಡೆಸಿದ ದಾಳಿಗೆ ಪ್ರತಿಯಾಗಿ ಈ ದಾಳಿ ನಡೆಸಿದ್ದೇವೆ ಎಂದು ಹಿಜ್ಬುಲ್ಲಾ ಪ್ರಕಟಣೆ ತಿಳಿಸಿದೆ.

ಡ್ರೋನ್ ದಾಳಿಯಲ್ಲಿ ಒಟ್ಟು 61 ಮಂದಿ ಗಾಯಗೊಂಡಿದ್ದಾರೆ ಎಂದು ಇಸ್ರೇಲ್ ಸೇನೆಯ ಮೂಲಗಳು ಹೇಳಿವೆ.

ಸಮರಾಭ್ಯಾಸ ನಡೆಸಿದ ಚೀನಾ

ತೈವಾನ್ ಜಲಸಂಧಿ ಪ್ರದೇಶ: ಪ್ರತ್ಯೇಕತಾವಾದಕ್ಕೆ ಎಚ್ಚರಿಕೆ

ತೈಪೆ (ಎಪಿ/ಎಎಫ್‌ಪಿ): ಚೀನಾ ಹಾಗೂ ತೈವಾನ್ ನಡುವಿನ ತೈವಾನ್ ಜಲಸಂಧಿ ಪ್ರದೇಶದಲ್ಲಿ ಸೋಮವಾರ ಚೀನಾ ಅತಿ ದೊಡ್ಡ ಸಮರಾಭ್ಯಾಸ ನಡೆಸಿತು. 'ತೈವಾನ್‌ನ 'ಪ್ರತ್ಯೇಕತಾವಾದ'ಕ್ಕೆ ತೀವ್ರ ಎಚ್ಚರಿಕೆ ನೀಡುವ ಉದ್ದೇಶದಿಂದ ಸಮರಾಭ್ಯಾಸ ನಡೆಸಲಾಯಿತು' ಎಂದು ಚೀನಾ ಹೇಳಿದೆ.

ಯುದ್ಧವಿಮಾನ ವಾಹಕ ನೌಕೆ, ಯುದ್ಧ ವಿಮಾನಗಳ ಮೂಲಕ ಚೀನಾವು ತೈವಾನ್ ಅನ್ನು ಸುತ್ತುವರಿದಿತ್ತು. ಈ ಮೂಲಕ ತೈವಾನ್‌ನ ಮುಖ್ಯ ಬಂದರುಗಳನ್ನು ಚೀನಾ ಮುಚ್ಚಿತ್ತು.

'ತೈವಾನ್, ಚೀನಾದ ಭಾಗ ಎಂದು ಒಪ್ಪಿಕೊಳ್ಳಲು ಆ ದೇಶದ ಅಧ್ಯಕ್ಷ ಲಾಯ್ ಚಿಂಗ್-ಟೆ ಅವರು ನಿರಾಕರಿಸಿದ್ದಾರೆ. ಆದ್ದರಿಂದಲೇ ನಾವು ಸಮರಾಭ್ಯಾಸ ನಡೆಸುತ್ತಿದ್ದೇವೆ' ಎಂದು ಚೀನಾದ ರಕ್ಷಣಾ ಸಚಿವಾಲಯ ಈ ಮೊದಲು ಹೇಳಿತ್ತು.

'ತೈವಾನ್ ಅನ್ನು ಪ್ರತಿನಿಧಿಸುವ ಹಕ್ಕು ಚೀನಾಕ್ಕೆ ಇಲ್ಲ. ನಮ್ಮ ದೇಶವನ್ನು ಕಬಳಿಸುವುದನ್ನು ಅಥವಾ ನಮ್ಮ ದೇಶಕ್ಕೆ ನಮ್ಮನ್ನು ಸೇರಿಸಿಕೊಳ್ಳುವುದನ್ನು ನಾವು ವಿರೋಧಿಸುತ್ತೇವೆ' ಎಂದು ನಾಲ್ಕು ದಿನಗಳ ಹಿಂದಷ್ಟೆ ಲಾಯ್ ಚಿಂಗ್-ಟೆ ಹೇಳಿದ್ದರು.

ತೈವಾನ್ ಜಲಸಂಧಿ ಪ್ರದೇಶದಲ್ಲಿ ಸೋಮವಾರ ಸಮರಾಭ್ಯಾಸ ನಡೆಸಿದ ಚೀನಾದ ಯುದ್ಧನೌಕೆ — ಎಎಫ್‌ಪಿ ಚಿತ್ರ

ಸೇನೆಯ ಮೂಲಕ ಪ್ರಚೋದಿಸುವುದನ್ನು ನಿಲ್ಲಿಸಿ. ಇದು ಪ್ರಾದೇಶಿಕ ಶಾಂತಿಗೆ ಭಂಗ ತರುತ್ತದೆ. ತೈವಾನ್‌ನ ಸ್ವಾತಂತ್ರ್ಯಕ್ಕೆ ಬೆದರಿಕೆವೊಡ್ಡುವುದನ್ನು ಕೈಬಿಡಿ

ತೈವಾನ್ ಅಧ್ಯಕ್ಷರ ಕಚೇರಿ

ಚೀನಾದ ಸಮರಾಭ್ಯಾಸದ ಕುರಿತು ಪ್ರತಿಕ್ರಿಯಿಸಿದ್ದ ತೈವಾನ್‌ನ ಭದ್ರತಾ ಮಂಡಳಿಯ ಪ್ರಧಾನ ಕಾರ್ಯದರ್ಶಿ ಜೋಸೆಫ್ ವು, 'ಚೀನಾ ಬೆದರಿಕೆಗೆ ನಮ್ಮ ಸೇನೆಯು ತಕ್ಕ ಉತ್ತರ ನೀಡಲಿದೆ' ಎಂದಿದ್ದರು. 'ಇದೊಂದು ಅನಗತ್ಯ ಹಾಗೂ ಭಯದ ವಾತಾವರಣವನ್ನು ಸೃಷ್ಟಿಸುವ ಪ್ರಕ್ರಿಯೆ' ಎಂದು ಅಮೆರಿಕವು ಚೀನಾದ ಸಮರಾಭ್ಯಾಸದ ಕುರಿತು ಪ್ರತಿಕ್ರಿಯಿಸಿದೆ.

125 ಯುದ್ಧವಿಮಾನ, 7 ಯುದ್ಧನೌಕೆ, 4 ಹಡಗುಗಳ ಮೂಲಕ ಚೀನಾ ಸಮರಾಭ್ಯಾಸ ನಡೆಸಿತ್ತು ಎಂದು ತೈವಾನ್ ಹೇಳಿದೆ.

ಪಾಕ್‌ಗೆ ಜೈಶಂಕರ್ ಭೇಟಿ ಇಂದು

ಲಾಹೋರ್ (ಪಿಟಿಐ): ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಸಭೆಯಲ್ಲಿ ಭಾಗಿಯಾಗಲು ವಿದೇಶಾಂಗ ಸಚಿವ ಎಸ್. ಜೈಶಂಕರ್ ಮಂಗಳವಾರ ಪಾಕಿಸ್ತಾನಕ್ಕೆ ಭೇಟಿ ನೀಡಲಿದ್ದಾರೆ.

ಭಯೋತ್ಪಾದಕ ಕೃತ್ಯಗಳಿಗೆ ಕುಮ್ಮಕ್ಕು ನೀಡುತ್ತಿರುವುದು ಹಾಗೂ ಕಾಶ್ಮೀರ ವಿಷಯವಾಗಿ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ಹದಗೆಟ್ಟಿದೆ. ಇದರ ನಡುವೆಯೇ ಒಂಬತ್ತು ವರ್ಷಗಳ ಬಳಿಕ ಭಾರತದ ವಿದೇಶಾಂಗ ಸಚಿವರು ನೆರೆಯ ಪಾಕಿಸ್ತಾನಕ್ಕೆ ಭೇಟಿ ನೀಡುತ್ತಿದ್ದಾರೆ.

ಎಸ್‌ಸಿಒ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳಿಗೆ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಆಯೋಜಿಸಿರುವ ಔತಣಕೂಟದಲ್ಲಿ ಜೈಶಂಕರ್ ಭಾಗವಹಿಸುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಎಸ್‌ಸಿಒ ಸಭೆ ಇದೇ 15, 16ರಂದು ನಡೆಯಲಿದ್ದು, ಈ ಸಂದರ್ಭದಲ್ಲಿ ಭಾರತ–ಪಾಕಿಸ್ತಾನದ ವಿದೇಶಾಂಗ ಸಚಿವರ ನಡುವೆ ದ್ವಿಪಕ್ಷೀಯ ಮಾತುಕತೆ ನಡೆಯುವುದನ್ನು ಉಭಯ ದೇಶಗಳು ಈಗಾಗಲೇ ತಳ್ಳಿಹಾಕಿವೆ.

2015ರಲ್ಲಿ ನಡೆದಿದ್ದ ಅಫ್ಗಾನಿಸ್ತಾನ ಕುರಿತ ಸಭೆಯಲ್ಲಿ ಆಗಿನ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಪಾಲ್ಗೊಂಡಿದ್ದರು. ಆ ಬಳಿಕ ಭಾರತದ ವಿದೇಶಾಂಗ ಸಚಿವರು ಪಾಕಿಸ್ತಾನಕ್ಕೆ ಭೇಟಿ ನೀಡಿರಲಿಲ್ಲ. 2023ರಲ್ಲಿ ಗೋವಾದಲ್ಲಿ ನಡೆದಿದ್ದ ಎಸ್‌ಸಿಒ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಗೆ ಪಾಕಿಸ್ತಾನದ ಆಗಿನ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಜರ್ದಾರಿ ಬಂದಿದ್ದರು.

ಮೂವರು ಅರ್ಥಶಾಸ್ತ್ರಜ್ಞರಿಗೆ ನೊಬೆಲ್

ಸ್ಟಾಕ್‌ಹೋಮ್ (ಎಪಿ/ಎಎಫ್‌ಪಿ): ಅರ್ಥಶಾಸ್ತ್ರ ವಿಭಾಗದಲ್ಲಿ ನೀಡುವ ಈ ಬಾರಿಯ ನೊಬೆಲ್ ಪುರಸ್ಕಾರಕ್ಕೆ ಡೆರಾನ್ ಆಶಿಮೊಗ್ಲೊ (57), ಸೈಮನ್ಸ್ ಜಾನ್ಸನ್ (61) ಹಾಗೂ ಜೇಮ್ಸ್ ಎ. ರಾಬಿನ್ಸನ್ (64) ಅವರನ್ನು ಆಯ್ಕೆ ಮಾಡಲಾಗಿದೆ.

ಕೆಲವು ದೇಶಗಳು ಶ್ರೀಮಂತವಾಗಿಯೇ ಇರುವುದು ಮತ್ತು ಕೆಲವು ದೇಶಗಳು ಬಡವಾಗಿಯೇ ಉಳಿಯುತ್ತಿರುವ ಕುರಿತು ಈ ಮೂವರು ಪ್ರಶಸ್ತಿ ಪುರಸ್ಕೃತರು ಸಂಶೋಧನೆ ನಡೆಸಿದ್ದಾರೆ.

ದೇಶಗಳ ನಡುವಿನ ಶ್ರೀಮಂತಿಕೆಯ ವ್ಯತ್ಯಾಸಕ್ಕೆ ಆಯಾ ದೇಶಗಳಲ್ಲಿನ ಸಾಮಾಜಿಕ ವ್ಯವಸ್ಥೆಗಳು (ಶಿಕ್ಷಣ, ಪೊಲೀಸ್, ಕುಟುಂಬ, ಕಾನೂನು, ಆರ್ಥಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆ ಮುಂತಾದವು) ಕಾರಣವಾಗುತ್ತವೆ' ಎನ್ನುವುದನ್ನು ತಮ್ಮ ಸಂಶೋಧನೆಗಳ ಮೂಲಕ ಈ ಮೂವರು ಅರ್ಥಶಾಸ್ತ್ರಜ್ಞರು ವಿವರಿಸಿದ್ದಾರೆ.

ಡೆರಾನ್ ಆಶಿಮೊಗ್ಲೊ



ಸೈಮನ್ಸ್ ಜಾನ್ಸನ್

ಜೇಮ್ಸ್ ಎ. ರಾಬಿನ್ಸನ್

'ಸಾಮಾಜಿಕ ಸಂಸ್ಥೆಗಳು ಹೇಗೆ ದೇಶಗಳ ಸಮೃದ್ಧಿಯಲ್ಲಿ ಮುಖ್ಯಭೂಮಿಕೆ ವಹಿಸುತ್ತವೆ ಎನ್ನುವ ಕುರಿತ ಈ ಸಂಶೋಧನೆಯು ಈ ಕಾಲಘಟ್ಟದ ಜರೂರು' ಎಂದು ರಾಯಲ್ ಸ್ವೀಡಿಶ್ ಅಕಾಡೆಮಿ ತನ್ನ ಪತ್ರಿಕಾ ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿದೆ.

'ಯಾವುದೇ ಒಂದು ದೇಶದಲ್ಲಿ ಅರಾಜಕತೆ ಇದ್ದರೆ ಅಥವಾ ಒಂದು ದೇಶದ ಸಾಮಾಜಿಕ ವ್ಯವಸ್ಥೆಯು ಜನರನ್ನು ದೌರ್ಜನ್ಯಕ್ಕೆ ಒಳಪಡಿಸುತ್ತಿದ್ದರೆ ಅಂಥ ದೇಶಗಳು ಅಭಿವೃದ್ಧಿಯಿಂದ ಹಿಂದುಳಿಯುತ್ತವೆ' ಎಂದು ಸಂಶೋಧಕರು ವಿವರಿಸುತ್ತಾರೆ.

ಆಶಿಮೊಗ್ಲೊ ಹಾಗೂ ಸೈಮನ್ ಜಾನ್ಸ್‌ನ್ ಅವರು ಅಮೆರಿಕದ ಕೇಂಬ್ರಿಜ್ ವಿಶ್ವವಿದ್ಯಾಲಯದ ಮೆಸಾಚ್ಯುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಜೇಮ್ಸ್ ಅವರು ಷಿಕಾಗೊ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

ಬ್ರಿಕ್ಸ್ ಸದಸ್ಯತ್ವಕ್ಕೆ ಶ್ರೀಲಂಕಾ ಅರ್ಜಿ

ಕೊಲಂಬೊ (ಪಿಟಿಐ): 'ಬ್ರಿಕ್ಸ್' ರಾಷ್ಟ್ರಗಳ ಒಕ್ಕೂಟದ (ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ) ಸದಸ್ಯತ್ವ ಪಡೆಯಲು ಶ್ರೀಲಂಕಾ ಅರ್ಜಿ ಸಲ್ಲಿಸಲಿದೆ ಎಂದು ವಿದೇಶಾಂಗ ಸಚಿವ ವಿಜಿತಾ ಹೆರಾತ್ ಸೋಮವಾರ ತಿಳಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ರ‍್ಯಾಲಿ ಶಸ್ತ್ರಧಾರಿಯ ಬಂಧನ

ಲಾಸ್ ಏಂಜಲೀಸ್ (ಎಪಿ): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಚುನಾವಣಾ ರ‍್ಯಾಲಿ ಆಯೋಜನೆಗೊಂಡಿದ್ದ ಸ್ಥಳದಲ್ಲಿ, ಶಸ್ತ್ರಾಸ್ತ್ರ ಮತ್ತು ನಕಲಿ ಪಾಸ್‌ಪೋರ್ಟ್ ಇಟ್ಟುಕೊಂಡಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸಿ, ಬಳಿಕ ಬಿಡುಗಡೆ ಮಾಡಲಾಗಿದೆ.

ಶನಿವಾರ ರಾತ್ರಿ ಕ್ಯಾಲಿಫೋರ್ನಿಯಾದಲ್ಲಿ ಟ್ರಂಪ್ ಅವರ ಚುನಾವಣಾ ರ‍್ಯಾಲಿ ಆಯೋಜನೆಗೊಂಡಿತ್ತು. ಈ ವೇಳೆ ನೋಂದಣಿಯಾಗದೆ ಇರುವ ವಾಹನವೊಂದನ್ನು ಭದ್ರತಾ ಸಿಬ್ಬಂದಿ ಪರಿಶೀಲಿಸಿದಾಗ ಶಸ್ತ್ರಾಸ್ತ್ರಗಳು, ನಕಲಿ ಪಾಸ್‌ಪೋರ್ಟ್‌ಗಳು ಮತ್ತು ಬೇರೆ ಬೇರೆ ಹೆಸರಿನಲ್ಲಿ ಇರುವ ವಾಹನ ಪರವಾನಗಿಗಳು ಪತ್ತೆಯಾಗಿವೆ.

'ಶಂಕಿತನು ಲಾಸ್ ವೇಗಾಸ್ ನಿವಾಸಿಯಾಗಿದ್ದು, ಪತ್ರಕರ್ತ ಎಂದು ಹೇಳಿಕೊಂಡಿದ್ದ. ಆದರೆ ಆತನ ಬಳಿ ಸೂಕ್ತ ದಾಖಲೆಗಳು ಇರಲಿಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಟ್ರಂಪ್ ಕಾರ್ಯಕ್ರಮದ ಸ್ಥಳಕ್ಕೆ ಆಗಮಿಸುವ ಮೊದಲೇ ಶಂಕಿತನನ್ನು ಬಂಧಿಸಲಾಗಿತ್ತು. ಟ್ರಂಪ್ ಮತ್ತು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದವರಿಗೆ ಯಾವುದೇ ತೊಂದರೆಯಾಗಿಲ್ಲ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಗಿದೆ. ಆತನನ್ನು 2025ರ ಜನವರಿ 2ರಂದು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುತ್ತದೆ.

'ಘಟನೆಯ ಬಗ್ಗೆ ತನಿಖೆ ಮುಂದುವರಿದಿದ್ದು, ಬೇರೆ ಯಾರನ್ನೂ ಬಂಧಿಸಿಲ್ಲ' ಎಂದು ಅಮೆರಿಕದ ಅಟಾರ್ನಿ ಕಚೇರಿ ತಿಳಿಸಿದೆ.

ಅದಾನಿ ಸಮೂಹಕ್ಕೆ ಗುತ್ತಿಗೆ: ಹಿಂದಿನ ಸರ್ಕಾರದ ನಿರ್ಧಾರ ಪರಿಶೀಲನೆ

ಕೊಲಂಬೊ (ಪಿಟಿಐ): ಪವನ ವಿದ್ಯುತ್ ಯೋಜನೆಯ ಗುತ್ತಿಗೆಯನ್ನು ಭಾರತದ ಅದಾನಿ ಸಮೂಹಕ್ಕೆ ನೀಡಿರುವ ಶ್ರೀಲಂಕಾದ ಹಿಂದಿನ ಸರ್ಕಾರದ ನಿರ್ಧಾರವನ್ನು ಪರಿಶೀಲಿಸುವುದಾಗಿ ನೂತನ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ನೇತೃತ್ವದ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಸೋಮವಾರ ತಿಳಿಸಿದೆ.

ಅ.7ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಐವರು ಸದಸ್ಯರನ್ನು ಒಳಗೊಂಡ ನ್ಯಾಯಪೀಠಕ್ಕೆ ತಿಳಿಸಿದೆ.

ಯೋಜನೆಯು ಶ್ರೀಲಂಕಾದ ಇಂಧನ ವಲಯದ ಸಾರ್ವಭೌಮತೆಗೆ ಬೆದರಿಕೆ ಒಡ್ಡುತ್ತದೆ. ಅಧಿಕಾರಕ್ಕೆ ಬಂದಲ್ಲಿ ಈ ಯೋಜನೆಯನ್ನು ರದ್ದು ಮಾಡುತ್ತೇವೆ ಎಂದು ಚುನಾವಣೆಗೂ ಮೊದಲೇ ನ್ಯಾಷನಲ್ ಪೀಪಲ್ಸ್ ಪಾರ್ಟಿ ನೇತೃತ್ವದ ಮೈತ್ರಿಕೂಟ ಹೇಳಿತ್ತು.

ಮ್ಯಾನ್ಮಾರ್ ಮತ್ತು ಪೂನೇರಿನ್‌ನಲ್ಲಿ 484 ಮೆಗಾವಾಟ್ ಪವನ ವಿದ್ಯುತ್ ಉತ್ಪಾದನೆಗೆ 20 ವರ್ಷದ ಒಪ್ಪಂದ ಮಾಡಿಕೊಂಡು ₹3,648 ಲಕ್ಷ ಕೋಟಿ ಹೂಡಿಕೆ ಮಾಡಲು ಅದಾನಿ ಸಮೂಹ ಸಿದ್ಧವಾಗಿದೆ. ಈ ಮಧ್ಯೆ ಯೋಜನೆಯಿಂದ ಪರಿಸರಕ್ಕೆ ಹಾನಿಯಾಗುತ್ತದೆ ಮತ್ತು ಹರಾಜು ಪ್ರಕ್ರಿಯೆ ಪಾರದರ್ಶಕವಾಗಿ ಇರಲಿಲ್ಲ ಎಂದು ಶ್ರೀಲಂಕಾದ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ಶ್ರೀಲಂಕಾ: ಪ್ರವಾಹದಿಂದ 1.34 ಲಕ್ಷ ಜನರಿಗೆ ಸಂಕಷ್ಟ

ಕೊಲಂಬೊ (ಎಪಿ): ಭಾರಿ ಮಳೆಯಿಂದಾಗಿ ಶ್ರೀಲಂಕಾದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು ಮೂವರು ಮೃತಪಟ್ಟಿದ್ದಾರೆ.

12 ಜಿಲ್ಲೆಗಳಲ್ಲಿ ಪ್ರವಾಹ ತೀವ್ರವಾಗಿದ್ದು ರಾಜಧಾನಿ ಕೊಲಂಬೊ ಮತ್ತಿತರ ಪ್ರದೇಶಗಳಲ್ಲಿ ಸೋಮವಾರ ಶಾಲೆಗಳಿಗೆ ರಜೆ ನೀಡಲಾಗಿತ್ತು.

ವಾರಾಂತ್ಯದಲ್ಲಿ ಸುರಿದ ಭಾರಿ ಮಳೆಯಿಂದಾಗಿ ದೇಶದ ಹಲವೆಡೆ ಮನೆಗಳು, ಕೃಷಿಭೂಮಿ ಹಾಗೂ ರಸ್ತೆಗಳು ಜಲಾವೃತಗೊಂಡಿವೆ. ಒಟ್ಟು 1,34,000 ಜನರು ಪ್ರವಾಹದಿಂದ ಬಾಧಿತರಾಗಿದ್ದಾರೆ. ಮೂವರು ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ ಎಂದು ವಿಪತ್ತು ನಿರ್ವಹಣಾ ವಿಭಾಗವು ಮಾಹಿತಿ ನೀಡಿದೆ.

ಪ್ರವಾಹದಿಂದ ಒಟ್ಟು 240 ಮನೆಗಳಿಗೆ ಹಾನಿಯಾಗಿದೆ. ಈವರೆಗೆ ಒಟ್ಟು 7,000 ಜನರನ್ನು ಸ್ಥಳಾಂತರಿಸಲಾಗಿದ್ದು 80ಕ್ಕೂ ಹೆಚ್ಚು ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ.

ಮುಂಜಾಗ್ರತಾ ಕ್ರಮವಾಗಿ ಹಲವೆಡೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ಸಂತ್ರಸ್ತರ ರಕ್ಷಣೆಗೆ ಹಾಗೂ ಆಹಾರ ಸೇರಿದಂತೆ ಅಗತ್ಯ ವಸ್ತುಗಳ ಪೂರೈಕೆಗೆ ಸೇನೆ ಹಾಗೂ ನೌಕಾಪಡೆಯ ರಕ್ಷಣಾ ತಂಡಗಳನ್ನು ನಿಯೋಜಿಸಲಾಗಿದೆ. ಪ್ರವಾಹ ಸಂತ್ರಸ್ತರಿಗಾಗಿ ಹೆಚ್ಚುವರಿಯಾಗಿ ₹5 ಕೋಟಿಯನ್ನು ಬಿಡುಗಡೆ ಮಾಡಿದೆ.

ಅಕ್ಟೋಬರ್ 8ರಿಂದ ಶ್ರೀಲಂಕಾದಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಹಲವು ಜಿಲ್ಲೆಗಳಲ್ಲಿ ಕಳೆದ ಎರಡು ದಿನಗಳಲ್ಲಿ 100 ಮಿ.ಮೀ ಮಳೆ ಸುರಿದಿದೆ. ಮಳೆಯಿಂದಾಗಿ ಮೇ ತಿಂಗಳಿನಿಂದಲೂ ದೇಶವು ಪ್ರವಾಹ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಜೂನ್‌ನಲ್ಲಿ ಪ್ರವಾಹದಿಂದ ಉಂಟಾದ ಮಣ್ಣು ಕುಸಿತದಲ್ಲಿ 16 ಜನ ಸಾವಿಗೀಡಾಗಿದ್ದರು.

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ : 080–22273511–16
ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಇ-ಲಾಟರಿ/2024–25 ದಿನಾಂಕ : 14.10.2024
"ಸಾರ್ವಜನಿಕ ಪ್ರಕಟಣೆ"
ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಿರುವ ಧಾರವಾಡ ಜಿಲ್ಲೆ ಹಿರೇಮಲ್ಲಿಗೆವಾಡ ಬಡಾವಣೆಯಲ್ಲಿ ಲಭ್ಯವಿರುವ ನಿವೇಶನಗಳನ್ನು ಅರ್ಹ ಅರ್ಜಿದಾರರಿಗೆ ಹಂಚಿಕೆ ಮಾಡಲು ದಿನಾಂಕ : 09–10–2024 ರಂದು ಇ–ಲಾಟರಿಯನ್ನು ನಿಗಧಿಪಡಿಸಿ ದಿನಾಂಕ : 21–09–2024ರ ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ಆದರೆ ಕಾರಣಾಂತರದಿಂದ ಸದರಿ ದಿನದಂದು ನಡೆಯಬೇಕಿದ್ದ ಇ–ಲಾಟರಿಯನ್ನು ಮುಂದೂಡಲಾಗಿತ್ತು. ಈಗ ಸದರಿ ಹಿರೇಮಲ್ಲಿಗೆವಾಡ ಬಡಾವಣೆಯ ನಿವೇಶನಗಳ ಇ–ಲಾಟರಿಯನ್ನು ದಿನಾಂಕ : 23–10–2024 ರಂದು ಬೆಳಿಗ್ಗೆ 11.00 ಘಂಟೆಗೆ ಮಂಡಳಿಯ ಸಭಾಂಗಣ, ಕೇಂದ್ರ ಕಛೇರಿ, ಕೆ.ಜಿ ರೋಡ್, ಕಾವೇರಿ ಭವನ, ಬೆಂಗಳೂರು–9 ಇಲ್ಲಿ ನಡೆಸಲಾಗುವುದು. ಆಸಕ್ತ ಅರ್ಜಿದಾರರು ಇ–ಲಾಟರಿ ಕಾರ್ಯಕ್ರಮದಲ್ಲಿ ಭಾಗವಹಿಸುವುದು.
ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
DIPR/CP/2518/Zen/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
ಸಂ:ಕಾಅ:ಪಂರಾಇಂವಿ:ಮಂಡ್ಯ:ಟೆಂಪ್ರಸಇಂ–2:2024–25/1450 ದಿ: 10.10.2024
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 20/2024–25
ಕರ್ನಾಟಕ ರಾಜ್ಯದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯರವರಿಂದ, ಮಾನ್ಯ ಮುಖ್ಯ ಮಂತ್ರಿಗಳ ವಿಶೇಷ ಮಂಜೂರಾತಿ 5054 ಯೋಜನೆ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾಗಿರುವ ಟೆಂಡರಿಗಿಟ್ಟ ಮೊತ್ತ ಗರಿಷ್ಠ ರೂ.303.00ಲಕ್ಷ & ಕನಿಷ್ಟ ರೂ.32.85ಲಕ್ಷ ಮೊತ್ತದ ಒಟ್ಟು 4 ಕಾಮಗಾರಿ/ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಟೆಂಡರ್‌ಗಳನ್ನು https://kppp.karnataka.gov.in, KPP Portal ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿ: 28.10.2024ರ ಸಂಜೆ 4.00 ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು
DIPR/ADMDY-368/2024-25

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ
ದೂರವಾಣಿ ಸಂ: 08338/ 273859 ಇ–ಮೇಲ್: eepwdckd@gmail.com
ಕ್ರ.ಸಂ. ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2024–25/3387 ದಿನಾಂಕ:14/10/2024
ಅವಧಿ ವಿಸ್ತರಣೆ–1/ತಿದ್ದುಪಡಿ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ
ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2024–25/3108 ದಿನಾಂಕ:30/09/2024 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿನ ಎಲ್ಲ ಕಾಮಗಾರಿಗಳಿಗೆ ಹೆಚ್ಚಿನ ಬಿಡ್‌ಗಳನ್ನು ಆಕರ್ಷಿಸುವ ಸಲುವಾಗಿ ಈ ಕೆಳಗಿನಂತೆ ಅವಧಿ ವಿಸ್ತರಣೆ–1/ತಿದ್ದುಪಡಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ.
ಗುತ್ತಿಗೆ ಪ್ರಕ್ರಿಯೆಯ ಮಾರ್ಪಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.
1.ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:21–10–2024 (ಸಾಯಂಕಾಲ 5.00 ಗಂಟೆಯವರೆಗೆ), 2.ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):23–10–2024 (ಸಾಯಂಕಾಲ 4.30 ಗಂಟೆಗೆ), 3.ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 4.ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-977/KSMCA/2024-25

ಪೊಲೀಸ್ ಅಧೀಕ್ಷಕರು, ವೈರಲೆಸ್‌ರವರ ಕಛೇರಿ
ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು, 560001
ದೂರವಾಣಿ : +91–80–22864626, ಇ–ಮೇಲ್: spwireless@ksp.gov.in
ಟೆಂಡರ್ ಸಂಖ್ಯೆ : KSP/2024-25/IND0201 ದಿನಾಂಕ: 10.10.2024
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು ರವರಿಂದ **ಯಾದಗಿರಿ ಜಿಲ್ಲೆಯ** ಡಿಜಿಟಲ್ ವಿ.ಎಚ್.ಎಫ್ ರೇಡಿಯೋ ಕಮ್ಯೂನಿಕೇಷನ್ ನೆಟ್‌ವರ್ಕ್‌ನ ವಿನ್ಯಾಸ, ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ **ರೂ. 249.97 ಲಕ್ಷಗಳು,** ಟೆಂಡರ್ ಪೂರ್ವಭಾವಿ ಸಭೆಯ **ದಿನಾಂಕ: 24/10/2024 ಸಮಯ ಸಂಜೆ 11.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 12/11/2024 ಸಮಯ ಸಂಜೆ 17.00 ಗಂಟೆಗಳು.** ಇತರೆ ಮಾಹಿತಿಯನ್ನು https://eproc.karnataka.gov.in ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/–
ಪೊಲೀಸ್ ಅಧೀಕ್ಷಕರು,
ವೈರ್‌ಲೆಸ್, ಬೆಂಗಳೂರು
ವಾಸಾಸಂಇ/ವಾ.ಪ್ರ./2510/2024–25

ಬೆಂಗಳೂರು ವಿಶ್ವವಿದ್ಯಾಲಯ
NAAC Accredited with A++ GRADE
Accredited by NAAC with A++
ಜ್ಞಾನಭಾರತಿ, ಬೆಂಗಳೂರು – 560056.
ಸಂಖ್ಯೆ:ಎಸಿಎ-4/ಪಿ.ಜಿ/ಪ್ರವೇಶ/2024-25 ದಿನಾಂಕ: 10 10.2024
ಪ್ರವೇಶಾತಿ ಅಧಿಸೂಚನೆ
ವಿಷಯ: 2024–25ನೇ ಶೈಕ್ಷಣಿಕ ಸಾಲಿಗೆ ಪ್ರವೇಶಕ್ಕಾಗಿ ಖಾಲಿ ಉಳಿದಿರುವ ಸ್ನಾತಕೋತ್ತರ ಪ್ರವೇಶಾತಿಗಾಗಿ ಅರ್ಜಿಯನ್ನು ಆಹ್ವಾನಿಸುವ ಬಗ್ಗೆ.
ಜ್ಞಾನಭಾರತಿ ಆವರಣದಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗ, ಸ್ನಾತಕೋತ್ತರ ಕೇಂದ್ರ, ರಾಮನಗರ, ಸರ್ಕಾರಿ ಕಾಲೇಜುಗಳು ಹಾಗೂ ಸಂಯೋಜಿತ ಕಾಲೇಜುಗಳಲ್ಲಿ 2024-25ನೇ ಶೈಕ್ಷಣಿಕ ಸಾಲಿಗೆ ಖಾಲಿ ಉಳಿದಿರುವ ಸ್ನಾತಕೋತ್ತರ ಪದವಿ ಕೋರ್ಸುಗಳ ಸೀಟುಗಳ ಪ್ರವೇಶಾತಿಗಾಗಿ ಅರ್ಜಿಗಳನ್ನು UUCMS ಆನ್‌ಲೈನ್ ಪೋರ್ಟಲ್ https://uucms.karnataka. gov.in/Login/Index ಮುಖಾಂತರ **ದಿನಾಂಕ 17.10.2024 ರೊಳಗೆ** ಸಲ್ಲಿಸ ಬಹುದಾಗಿರುತ್ತದೆ.
• ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಅರ್ಜಿಗಳನ್ನು ಸಲ್ಲಿಸ ಬಯಸುವ ಅಭ್ಯರ್ಥಿಗಳು UUCMS ಆನ್‌ಲೈನ್ ಪೋರ್ಟಲ್ https://uucms.karnataka.gov.in /Login/ Index ಮೂಲಕವೇ ಅರ್ಜಿಗಳನ್ನು ಸಲ್ಲಿಸುವುದು.
• ಅರ್ಜಿ ಶುಲ್ಕ **ರೂ.300/– (ಕರ್ನಾಟಕ ನಿವಾಸಿಯಾದ ಪ.ಜಾತಿ/ಪ ಪಂಗಡ/ ಪ್ರವರ್ಗ–1 ಮತ್ತು ತೃತೀಯ ಲಿಂಗಿಗಳಿಗೆ ರೂ.150/–ಮಾತ್ರ)** ಗಳನ್ನು online ನಲ್ಲಿ ತಿಳಿಸಿರುವ ಲಿಂಕ್‌ನ್ನು ಬಳಸಿ ಪಾವತಿಸುವುದು.
• ಕೋರ್ಸುಗಳವಾರು ಖಾಲಿ ಉಳಿದಿರುವ ಸೀಟುಗಳ ವಿವರ (ಸೀಟ್ ಮ್ಯಾಟ್ರಿಕ್ಸ್) ಅರ್ಹತೆ, ಕೋರ್ಸಿನ ಶುಲ್ಕ, ಇತ್ಯಾದಿ ವಿವರಗಳ ಬಗ್ಗೆ ಬೆಂಗಳೂರು ವಿಶ್ವವಿದ್ಯಾಲಯ ಅಂತರ್‌ಜಾಲ https://bangaloreuniversity.karnataka.gov.in ನಲ್ಲಿ ನೋಡಬಹುದು.
ಸಹಿ/–,
ಕುಲಸಚಿವರು
DIPR/CP/RO2512/AAPL/2024-25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಮೈಸೂರು ನಗರ ವಿಭಾಗ, ಮೈಸೂರು
ಸಂಖ್ಯೆ:ಕರಾಸ/ಮೈನವಿ/ಸಂ/ವಾ/2010/2024–25 ದಿನಾಂಕ: 09–10–2024
ಇ–ಟೆಂಡರ್ ಪ್ರಕಟಣೆ ಸಂಖ್ಯೆ : 05/2024
(ಇ–ಪ್ರೊಕ್ಯೂರ್‌ಮೆಂಟ್ ಮತ್ತು ನೇರವಾಗಿ)
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮೈಸೂರು ನಗರ ವಿಭಾಗದ ವ್ಯಾಪ್ತಿಯ **ಮೈಸೂರು ನಗರ ಬಸ್ ನಿಲ್ದಾಣ, ಆರ್.ಎಸ್.ನಾಯ್ಡುನಗರ, ಇಲವಾಲ, ನಂಜನಗೂಡು, ಟಿ.ನರಸೀಪುರ, ಸುತ್ತೂರು ಮತ್ತು ಹುಲ್ಲಹಳ್ಳಿ ಬಸ್ ನಿಲ್ದಾಣದಲ್ಲಿ ಖಾಲಿ ಇರುವ/ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ, ಕೊಠಡಿ ಮತ್ತು ತೆರೆದ ಸ್ಥಳಗಳಲ್ಲಿ "ಉಪಹಾರ ಗೃಹ, ಚಾಟ್ಸ್ ಸೆಂಟರ್, ಮಿಲ್ಕ್ ಪಾರ್ಲರ್ ಫಂಕ್ಷನ್ ಹಾಲ್ ಜನರಲ್ ಸ್ಟಾಲ್ (ವ್ಯಾಪಾರ/ಕಛೇರಿ) ದ್ವಿಚಕ್ರ ವಾಹನ ನಿಲ್ದಾಣ ನಡೆಸಲು** ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಇ–ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಶಾಶ್ವತ ಮಳಿಗೆ, ಕೊಠಡಿಗಳನ್ನು **ಐದು (05)** ವರ್ಷಗಳ ಅವಧಿಗೆ ಮತ್ತು ತೆರೆದ ಸ್ಥಳಗಳನ್ನು **ಮೂರು (03)** ವರ್ಷಗಳ ಅವಧಿಗೆ ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಆಧಾರದ ಮೇಲೆ ಪರವಾನಗಿಯನ್ನು ಇ–ಟೆಂಡರ್, ಮ್ಯಾನ್ಯುಲ್ ಹಾಗೂ ಸಂಧಾನದ ಮುಖಾಂತರ ನೀಡಲಾಗುವುದು.
ಇ–ಟೆಂಡರ್ ಪ್ರಕಟಣೆ ವಿವರ: 1) ಇ–ಟೆಂಡರ್ ಕುರಿತು ವಿಚಾರಣೆಗೆ ಕಡೆಯ ದಿನಾಂಕ: **29/10/2024 ಸಮಯ: 17.00 ಗಂಟೆ.** 2) ಇ–ಟೆಂಡರ್/ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: **30/10/2024 ಸಮಯ: 15.00 ಗಂಟೆ.** 3) ಇ–ಟೆಂಡರ್ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **04/11/2024 ಸಮಯ: 15.00 ಗಂಟೆ.** 4) ಇ–ಟೆಂಡರ್ ತೆರೆಯುವ ದಿನಾಂಕ: **06/11/2024 ಸಮಯ: 16.00 ಗಂಟೆ.** 5) ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸಲು ಕಡೆಯ ದಿನಾಂಕ: **30/10/2024 ಸಮಯ: 17.00 ಗಂಟೆ.**
ಮ್ಯಾನ್ಯುಲ್ ಪ್ರಕಟಣೆ ವಿವರ: 1) ಮ್ಯಾನ್ಯುಲ್ ಟೆಂಡರ್ ಕುರಿತು ವಿಚಾರಣೆಗೆ ಕಡೆಯ ದಿನಾಂಕ: **29/10/2024 ಸಮಯ: 17.00 ಗಂಟೆ.** 2) ಮ್ಯಾನ್ಯುಲ್ ಟೆಂಡರ್/ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: **04/11/2024 ಸಮಯ: 12.00 ಗಂಟೆ.** 3) ಮ್ಯಾನ್ಯುಲ್ ಟೆಂಡರ್ ಅರ್ಜಿ & ದಾಖಲಾತಿಗಳೊಂದಿಗೆ ಮ್ಯಾನ್ಯುಯಲ್ ಟೆಂಡರ್ ಪೆಟ್ಟಿಗೆಗೆ ಹಾಕುವ ದಿನಾಂಕ: **05/11/2024 ಸಮಯ: 12.00 ಗಂಟೆ.** 4) ಮ್ಯಾನ್ಯುಲ್ ಟೆಂಡರ್ ತೆರೆಯುವ ದಿನಾಂಕ: **05/11/2024 ಸಮಯ: 15.00 ಗಂಟೆ.**
ಸಂಧಾನ ಟೆಂಡರ್ ಪ್ರಕಟಣೆ ವಿವರ: 1) ಸಂಧಾನ ಟೆಂಡರ್ ಕುರಿತು ವಿಚಾರಣೆಗೆ ಕಡೆಯ ದಿನಾಂಕ: **29/10/2024 ಸಮಯ: 17.00 ಗಂಟೆ.** 2) ಸಂಧಾನ ಟೆಂಡರ್/ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: **30/10/2024 ಸಮಯ: 13.00 ಗಂಟೆ.** 3) ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸಲು ಕಡೆಯ ದಿನಾಂಕ: **30/10/2024 ಸಮಯ: 17.00 ಗಂಟೆ.** 4) ಸಂಧಾನ ಸಭೆಗೆ ಹಾಜರಾಗಲು ಕಡೆಯ ದಿನಾಂಕ: **04/11/2024 ಸಮಯ: 12.00 ಗಂಟೆ.**
ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಮೈಸೂರು ನಗರ ವಿಭಾಗ(ಸಂಚಾರ ಶಾಖೆ), ನೆಲ್ಸನ್‌ಮಂಡೇಲಾ ರಸ್ತೆ, ಬನ್ನಿಮಂಟಪ, ಮೈಸೂರು ರವರನ್ನು ಸಂಪರ್ಕಿಸಲು ಕೋರಲಾಗಿದೆ. **(ದೂ:– 9480665919, 7019026615, 9606978102)**
ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿಗಳು
ಮೈಸೂರು ನಗರ ವಿಭಾಗ
ವಾಸಾಸಂಇ/ವಾ.ಪ್ರ/2508/ಎಂಎಎ/2024–25

मौलाना आज़ाद नेशनल उर्दू यूनिवर्सिटी مولانا آزاد نیشنل اردو یونیورسٹی
MAULANA AZAD NATIONAL URDU UNIVERSITY
A Central University under Ministry of Education
Government of India
ದೂರ ಮತ್ತು ಆನ್‌ಲೈನ್ ಶಿಕ್ಷಣ ಕೇಂದ್ರ (ಸಿಡಿಒಇ)
(ಹಿಂದಿನ ದೂರಶಿಕ್ಷಣ ನಿರ್ದೇಶನಾಲಯ–ಡಿಡಿಇ)
ಶೈಕ್ಷಣಿಕ ವರ್ಷ 2024–25ನೇ ಸಾಲಿನ ಬಿ.ಇಡಿ. (ಒಡಿಎಲ್) ಪ್ರವೇಶಾತಿ ಅಧಿಸೂಚನೆ
ಶೈಕ್ಷಣಿಕ ವರ್ಷ 2024–2025ನೇ ಸಾಲಿನ ಬಿ.ಇಡಿ. (ಒಡಿಎಲ್) ಕಾರ್ಯಕ್ರಮಕ್ಕೆ ಪ್ರವೇಶಾತಿಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ, ಅಕಾಡೆಮಿಕ್ ಅವಧಿ ಅಕ್ಟೋಬರ್, 2024.
ಇ–ಪ್ರಾಸ್ಪೆಕ್ಟಸ್ ಮತ್ತು ಆನ್‌ಲೈನ್ ಅರ್ಜಿ ನಮೂನೆಯು manuu.edu.in/dde ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ (ಅಡ್ಮಿಷನ್ ಪೋರ್ಟಲ್: manuuadmission.samarth.edu.in/24). 11.10.2024 ರಿಂದ ನೋಂದಣಿ ಶುಲ್ಕದ ಜೊತೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಪ್ರವೇಶ ಪರೀಕ್ಷೆ (ಇಟಿ) ಆಧಾರದ ಮೇರೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಹೆಚ್ಚಿನ ವಿವರಗಳಿಗಾಗಿ, ಅಭ್ಯರ್ಥಿಗಳು ಸ್ಟೂಡೆಂಟ್ ಸಪೋರ್ಟ್ ಯೂನಿಟ್ (ಎಸ್‌ಎಸ್‌ಯು) ಸಹಾಯವಾಣಿ 040–23008463 ಅಥವಾ 040–23120600 (ಎಕ್ಸ್‌ಟೆನ್ಷನ್. 2207 & 2208) ಇವರನ್ನು ಬೆಳಗ್ಗೆ 9:30 ರಿಂದ ಸಂಜೆ 5:30 ಗಂಟೆವರೆಗೆ ಸಂಪರ್ಕಿಸಬಹುದು ಅಥವಾ manuu.edu.in/dde ವೆಬ್‌ಸೈಟ್‌ಗೆ ಭೇಟಿ ನೀಡಬಹುದು.
ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **30ನೇ ಅಕ್ಟೋಬರ್ 2024** ಆಗಿರುತ್ತದೆ. ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಭರ್ತಿ ಮಾಡುವುದಕ್ಕೂ ಮುನ್ನ, ಎಚ್ಚರಿಕೆಯಿಂದ ಇ–ಪ್ರಾಸ್ಪೆಕ್ಟಸ್ ಪರಿಶೀಲಿಸಬೇಕೆಂದು ಸೂಚಿಸಲಾಗಿದೆ.
ನಿರ್ದೇಶಕರು, ಸಿಡಿಒಇ ರಿಜಿಸ್ಟ್ರಾರ್

ಬೆವಿಕಂ BESCOM
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)
ಇ–ಟೆಂಡರ್‌ಪ್ರಕಟಣೆ (KPP ಪೋರ್ಟಲ್ ಮೂಲಕ)
ಟೆಂಡರ್ ಸಂಖ್ಯೆ: BESCOM/2024-25/SE0205
ಬೆವಿಕಂಯು "ಸೌರ ವಿದ್ಯುತ್ ಉತ್ಪಾದಕರ (SPGs) ಆಯ್ಕೆಗಾಗಿ ಬಿಲ್ಡ್–ಓನ್–ಆಪರೇಟ್ (BOO) ಆಧಾರದ ಮೇಲೆ ಬೆವಿಕಂ ವ್ಯಾಪ್ತಿಯ ಸಬ್ ಸ್ಟೇಷನ್ (SS) ಮಟ್ಟದಲ್ಲಿ 10,180 ಕೃಷಿ ಪಂಪ್‌ಸೆಟ್‌ಗಳನ್ನೊಳಗೊಂಡ ಆಯ್ದ ಕೃಷಿ ಫೀಡರ್‌ಗಳ ಸೌರೀಕರಣಕ್ಕಾಗಿ, ವಿಕೇಂದ್ರೀಕೃತ ಸೌರ ಘಟಕಗಳ ವಿನ್ಯಾಸ, ಸಮೀಕ್ಷೆ, ಸರಬರಾಜು, ಸ್ಥಾಪನೆ, ಪರೀಕ್ಷೆ, ಅನುಷ್ಠಾನ, ಕಾರ್ಯಾಚರಣೆ & ನಿರ್ವಹಣೆ, 11ಕೆ.ವಿ. ಮಾರ್ಗದ ಮೂಲಕ ಸೌರ ಘಟಕವನ್ನು ಸಂಬಂಧಿತ ಸಬ್ ಸ್ಟೇಷನ್‌ಗೆ ಸಂಪರ್ಕ ಹಾಗೂ ಸೌರ ವಿದ್ಯುತ್ ಸ್ಥಾವರಗಳ ರಿಮೋಟ್ ಮಾನಿಟರಿಂಗ್ ಸಿಸ್ಟಮ್ (RMS) ನೊಂದಿಗೆ ಸ್ಥಾವರವನ್ನು ರೆಸ್ಕೋ ಮಾದರಿ ಮೂಲಕ 25 ವರ್ಷ ಪಿಪಿಎ ಅವಧಿಯವರೆಗೆ ಸಂಪರ್ಕಿಸಲು ಪಿಎಂ–ಕುಸುಮ್ ಕಾಂಪೋನೆಂಟ್–ಸಿ ಯೋಜನೆಯ ಕೃಷಿ ಫೀಡರ್‌ಗಳ ಸೌರೀಕರಣ" ಯೋಜನೆಯ ಪ್ರಸ್ತಾವನೆಯ ವಿನಂತಿ (RFP) ಯನ್ನು ಆಹ್ವಾನಿಸಿದೆ. ಬಿಡ್ ದಾಖಲೆಗಳು **18.10.2024** ರ ನಂತರ https://kppp.karnataka.gov.in ಇಲ್ಲಿ ಲಭ್ಯವಿರುತ್ತದೆ. ಆಸಕ್ತ ಬಿಡ್ದುದಾರರು ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಪೋರ್ಟಲ್ ಕುರಿತು ಯಾವುದೇ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 080-46010000, 080-68948777 ಅಥವಾ ಇಮೇಲ್: support@eprochelpdesk.com ಗೆ ಸಂಪರ್ಕಿಸಿ.
ಸಹಿ/–ಪ್ರಧಾನ ವ್ಯವಸ್ಥಾಪಕರು(ವಿ) ಡಿ.ಎಸ್.ಎಂ, ಬೆವಿಕಂ, ಬೆಂಗಳೂರು
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಪೋಲೀಸ್ ಇಲಾಖೆ
ಪೊಲೀಸ್ ಮಹಾನಿರ್ದೇಶಕರು ರವರ ಕಛೇರಿ ಪೊಲೀಸ್ ಗಣಕ ವಿಭಾಗ,
7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು–560001, ಇ–ಮೇಲ್ :dgppcw@ksp.gov.in ದೂರವಾಣಿ : 22353871
ಸಂಖ್ಯೆ: 36/ಸಂಗ್ರಹ/ಡಿಜಿಪಿ/ಪಿಸಿಡಬ್ಲ್ಯೂ/2024–25 ದಿನಾಂಕ : 10.10.2024
ಇ–ಟೆಂಡರ್ ಪ್ರಕಟಣೆ
ಪೊಲೀಸ್ ಗಣಕ ವಿಭಾಗದ ವತಿಯಿಂದ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಿಗೆ ಅವಶ್ಯಕತೆ ಇರುವ ಈ ಕೆಳಕಂಡ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಕುರಿತು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ ಇ–ಟೆಂಡರ್ ಪ್ರಕ್ರಿಯೆ ಮೂಲಕ ಅರ್ಜಿಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ ಸಂ	ಟೆಂಡರ್ ಸಂಖ್ಯೆ	ಟೆಂಡರ್ ಸಂಕ್ಷಿಪ್ತ ವಿವರ	ಸಂಖ್ಯೆ	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ
1	KSP/2024-25/ IND0195	Purchase of 160 KVA DG Set	01	06/11/2024 by 17:30 hrs

ಈ ನಿಟ್ಟಿನಲ್ಲಿ ಕುಶಲತೆ ಪಡೆದಿರುವ ಸಂಸ್ಥೆಗಳು ವಿವರವಾದ ಷರತ್ತು ಮತ್ತು ನಿಬಂಧನೆ ಹಾಗೂ ತಾಂತ್ರಿಕ ವಿವರ ಒಳಗೊಂಡಿರುವ ಟೆಂಡರ್ ದಾಖಲಾತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಮೇಲ್ಕಂಡ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸಲು ಇಚ್ಛಿಸುವವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು. ಇ–ಖರೀದಿಯ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಇ–ಆಡಳಿತ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇಲ್ಲಿ ವ್ಯವಸ್ಥೆಗೊಳಿಸುತ್ತಿದ್ದು, ಎಲ್ಲಾ ಸರಬರಾಜುದಾರರರು ದೂರವಾಣಿ ಸಂಖ್ಯೆ 91–8046010000 + 91–8068948777 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ–ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ–ಖರೀದಿ ವ್ಯವಸ್ಥೆಯಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಹೆಲ್ಪ್‌ಲೈನ್ 91–8046010000 +91–8068948777ಗಳನ್ನು ಸಂಪರ್ಕಿಸತಕ್ಕದ್ದು. ದಿನಾಂಕ : 15.10.2024 ರಿಂದ ದಾಖಲಾತಿಯು https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.
1) ವಿವರಗಳು : ಟೆಂಡರ್ ಫಾರಂ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : (15/10/2024 ರಿಂದ 06/11/2024 ರ 17:30 ಗಂಟೆಯವರೆಗೆ) (2) ಇಎಂಡಿ ಮೊತ್ತ : ರೂ. 40,000/–(ನಲವತ್ತು ಸಾವಿರ ಮಾತ್ರ) ಗಳನ್ನು ಈ ಕೆಳಕಂಡ ವಿಧಾನಗಳ ಮೂಲಕ ಪಾವತಿ ಮಾಡಬಹುದು. (ಎ) ಕ್ರೆಡಿಟ್ ಕಾರ್ಡ್, (ಬಿ) ಡೆಬಿಟ್ ಕಾರ್ಡ್, (ಸಿ) ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್, (ಡಿ) ಪಾವತಿ ವಿವರ ಬಿಡ್ ಡಾಕ್ಯುಮೆಂಟ್‌ನಲ್ಲಿ ತಿಳಿಸಿರುವಂತೆ (ಇ–ಪಾವತಿ ವಿವರ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ) (3) ಪ್ರಿ ಬಿಡ್ ಸಭೆ : 22–10–2024 ರ 12.00 ಗಂಟೆಗೆ (4) ತಾಂತ್ರಿಕ ಬಿಡ್ : 08–11–2024 ರ 11.00 ಗಂಟೆಗೆ (5) ವಾಣಿಜ್ಯ ಬಿಡ್ : 14–11–2024 ರ ಬೆಳಿಗ್ಗೆ 11.30 ಗಂಟೆಗೆ.
ಸಹಿ/–
ಪೊಲೀಸ್ ಮಹಾ ನಿರ್ದೇಶಕರು,
ಪೊಲೀಸ್ ಗಣಕ ವಿಭಾಗ, ಬೆಂಗಳೂರು
DIPR/CP/2506/Zen/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಮನುಷ್ಯ ನಿನ್ನೆ ಹೇಗೆ ಇದ್ದ ಎನ್ನುವುದು ಮುಖ್ಯವಲ್ಲ. ಇಂದು ಹೇಗೆ ಇದ್ದಾನೆ ಎನ್ನುವುದು ಮುಖ್ಯ.

–ಅಬ್ರಹಾಂ ಲಿಂಕನ್

ಹಣಕಾಸು ನಿಲುವಿನಲ್ಲಿ ಬದಲಾವಣೆ ಆರ್‌ಬಿಐ ವಿಶ್ವಾಸವೃದ್ಧಿಯ ಸೂಚಕ

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ಅಕ್ಟೋಬರ್ ತಿಂಗಳ ಸಭೆಯಲ್ಲಿ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲಿದೆ ಎಂಬ ನಿರೀಕ್ಷೆಯು ಮೊದಲೇ ಇತ್ತು. ರೆಪೊ ದರವನ್ನು ಶೇಕಡ 6.5ರಲ್ಲಿ ಕಾಯ್ದುಕೊಳ್ಳುವ ತೀರ್ಮಾನವನ್ನು ಹೊಸದಾಗಿ ರಚನೆ ಆಗಿರುವ ಎಂಪಿಸಿ ತೆಗೆದುಕೊಂಡಿದೆ. ಆದರೆ, ಸಮಿತಿಯ ತೀರ್ಮಾನಗಳಲ್ಲಿ ಮುಖ್ಯವಾದುದು ಹಣಕಾಸಿಗೆ ಸಂಬಂಧಿಸಿದ ನಿಲುವಿನಲ್ಲಿ ಬದಲಾವಣೆ ತರುವ ತೀರ್ಮಾನ. ಹಣಕಾಸಿನ ನೀತಿಯ ವಿಚಾರವಾಗಿ ‘ಹೊಂದಾಣಿಕೆಯ ನಿಲುವಿನಿಂದ ಹಿಂದೆ ಸರಿಯುವುದು’ ಎಂಬುದರ ಬದಲು, ‘ತಟಸ್ಥ’ ನಿಲುವು ತಾಳಲು ಎಂಪಿಸಿ ತೀರ್ಮಾನಿಸಿತು. ರೆಪೊ ದರದಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವ ತೀರ್ಮಾನವು ಬಹುಮತದ ಆಧಾರದಲ್ಲಿ ಕೈಗೊಂಡಿದ್ದಾಗಿತ್ತು. ಆದರೆ, ಹಣಕಾಸಿಗೆ ಸಂಬಂಧಿಸಿದ ನಿಲುವಿನಲ್ಲಿ ಬದಲಾವಣೆ ತರುವ ತೀರ್ಮಾನವನ್ನು ಸರ್ವಾನುಮತದಿಂದ ಕೈಗೊಳ್ಳಲಾಯಿತು. ಅಂದರೆ, ಭವಿಷ್ಯದಲ್ಲಿ ರೆಪೊ ದರವನ್ನು ಕಡಿತ ಮಾಡುವ ಸಾಧ್ಯತೆಯನ್ನು ಪರಿಶೀಲಿಸಲು ಸಮಿತಿಯು ಸಿದ್ಧವಿದೆ ಎಂದು ಅರ್ಥ. ರೆಪೊ ದರದಲ್ಲಿ ಇಳಿಕೆಯು ಬಹುಶಃ ಡಿಸೆಂಬರ್‌ನಲ್ಲಿ ಆಗಬಹುದು. ಯುರೋಪಿನ ಕೇಂದ್ರೀಯ ಬ್ಯಾಂಕ್, ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಅಮೆರಿಕದ ಫೆಡರಲ್ ರಿಸರ್ವ್ ದರ ಇಳಿಕೆಯನ್ನು ಆರಂಭಿಸಿವೆ. ಆದರೆ, ಎಂಪಿಸಿಯು ನಿರ್ಧಾರವನ್ನು ಕೈಗೊಳ್ಳುವ ಸಂದರ್ಭದಲ್ಲಿ ದೇಶದ ಆಂತರಿಕ ಪರಿಸ್ಥಿತಿಯು ಹೆಚ್ಚಿನ ಪ್ರಭಾವ ಬೀರಿರಬಹುದು.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಕಚ್ಚಾ ತೈಲ ಪೂರೈಕೆಯ ಮೇಲೆ ಪರಿಣಾಮ ಬೀರಿ, ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗುವ ಸಾಧ್ಯತೆ ಇಲ್ಲದಿಲ್ಲ

ಹಣದುಬ್ಬರ ಪ್ರಮಾಣವನ್ನು ಪೂರ್ಣವಾಗಿ ನಿಯಂತ್ರಣಕ್ಕೆ ತರುವ ವಿಚಾರದಲ್ಲಿ ಆರ್‌ಬಿಐಗೆ ಈಗ ಹೆಚ್ಚಿನ ವಿಶ್ವಾಸ ಬಂದಿರುವಂತಿದೆ. ಈ ಕಾರಣದಿಂದಾಗಿಯೇ ಅದು ಈಗ ಹಣಕಾಸಿಗೆ ಸಂಬಂಧಿಸಿದ ತನ್ನ ನಿಲುವಿನಲ್ಲಿ ಬದಲಾವಣೆಯನ್ನು ತಂದಿರಬಹುದು. ಚಿಲ್ಲರೆ ಹಣದುಬ್ಬರ ದರವನ್ನು ಶೇಕಡ 4ಕ್ಕೆ ತರುವ ಗುರಿಯನ್ನು ಆರ್‌ಬಿಐ ಹೊಂದಿದೆ. ಈ ಗುರಿ ತಲುಪಲು ಅದು ಹಣಕಾಸು ನೀತಿಯನ್ನು ಅಸ್ತ್ರವನ್ನಾಗಿ ಬಳಕೆ ಮಾಡಿಕೊಂಡಿದೆ. ಈ ವರ್ಷದಲ್ಲಿ ಹಣದುಬ್ಬರ ಪ್ರಮಾಣವು ಶೇ 4.5ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜು ಮಾಡಿದೆ. ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಕಡಿಮೆ ಆಗುವ ಸೂಚನೆ ಇರುವ ಕಾರಣ, ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸುವ ಆಶಾಭಾವನೆಯಲ್ಲಿ ಆರ್‌ಬಿಐ ಇದೆ. ಫೆಬ್ರುವರಿಯಲ್ಲಿ ಶೇ 8.6ರಷ್ಟು ಇದ್ದ ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಆಗಸ್ಟ್‌ನಲ್ಲಿ ಶೇ 5.66ಕ್ಕೆ ಇಳಿಕೆ ಆಗಿದೆ. ಮುಂದಿನ ದಿನಗಳಲ್ಲಿ ಇದು ಇನ್ನಷ್ಟು ಕಡಿಮೆ ಆಗಲಿದೆ ಎಂಬ ನಿರೀಕ್ಷೆಯಲ್ಲಿ ಆರ್‌ಬಿಐ ಇದೆ. ಏಕೆಂದರೆ, ಮುಂಗಾರು ಮಳೆಯು ದೇಶದ ಬಹುತೇಕ ಕಡೆಗಳಲ್ಲಿ ಚೆನ್ನಾಗಿ ಆಗಿರುವ ಕಾರಣ, ಆಹಾರ ವಸ್ತುಗಳ ಉತ್ಪಾದನೆಯು ಹೆಚ್ಚಾಗಿರಲಿದೆ ಎಂಬ ಭರವಸೆ ಇದೆ. ಹಾಗೆಯೇ, ಹಿಂಗಾರು ಹಂಗಾಮಿನಲ್ಲಿ ಕೂಡ ಬೆಳೆ ಉತ್ತಮವಾಗಿ ಇರಲಿದೆ ಎಂಬ ಅಂದಾಜು ಇದೆ. ಮುಂದಿನ ಹಣಕಾಸು ವರ್ಷದ ಮೊದಲ ತ್ರೈಮಾಸಿಕದ ಅವಧಿಯಲ್ಲಿ ಹಣದುಬ್ಬರ ಪ್ರಮಾಣವು ಶೇ 4.3ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜು ಮಾಡಿದೆ. ಹಣದುಬ್ಬರವನ್ನು ನಿಯಂತ್ರಣಕ್ಕೆ ತರುವ ಕಾರ್ಯತಂತ್ರವು ಫಲ ನೀಡುತ್ತಿದೆ, ಹಣದುಬ್ಬರ ನಿಯಂತ್ರಣ ಸಾಧ್ಯವಿದೆ ಎಂದು ಆರ್‌ಬಿಐ ಭಾವಿಸಿದೆ.

ಆದರೆ ಇಲ್ಲಿ ಒಂದಿಷ್ಟು ಎಚ್ಚರಿಕೆಯ ಮಾತುಗಳೂ ಇವೆ. ಹವಾಮಾನ ಪರಿಸ್ಥಿತಿಯು ನಿರೀಕ್ಷೆಯಂತೆ ಇಲ್ಲದೇ ಇದ್ದರೆ ಹಾಗೂ ಜಾಗತಿಕ ಸಂಘರ್ಷಗಳು ಇನ್ನಷ್ಟು ವಿಷಮಗೊಂಡರೆ ಹಣದುಬ್ಬರದ ಮೇಲೆ ಪರಿಣಾಮ ಉಂಟಾಗುತ್ತದೆ ಎಂಬ ಎಚ್ಚರಿಕೆಯನ್ನು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ನೀಡಿದ್ದಾರೆ. ಹವಾಮಾನ ಪರಿಸ್ಥಿತಿಯನ್ನು ಊಹಿಸುವುದು ಬಹಳ ಕಷ್ಟ. ಹವಾಮಾನ ಪರಿಸ್ಥಿತಿ ಅನುಕೂಲಕರ ಆಗಿಲ್ಲದಿದ್ದರೆ ಕೃಷಿ ಉತ್ಪಾದನೆಯ ಮೇಲೆ ಹಾಗೂ ಆರ್ಥಿಕತೆಯ ಮೇಲೆ ಅನಿರೀಕ್ಷಿತ ಪರಿಣಾಮಗಳು ಉಂಟಾಗುತ್ತವೆ. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಯಾವ ರೂಪ ತಾಳುತ್ತದೆ ಎಂಬುದನ್ನು ಅಂದಾಜಿಸುವುದು ಕಷ್ಟ. ಅಲ್ಲಿನ ಸಂಘರ್ಷವು ಕಚ್ಚಾ ತೈಲ ಪೂರೈಕೆಯ ಮೇಲೆ ಪರಿಣಾಮ ಉಂಟುಮಾಡಿ, ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗುವ ಸಾಧ್ಯತೆ ಇಲ್ಲದಿಲ್ಲ. ಈಗಿರುವ ಪರಿಸ್ಥಿತಿ ಮುಂದುವರಿದಲ್ಲಿ ಮಾತ್ರವೇ ತನ್ನ ನೀತಿಯನ್ನು ಸಡಿಲಗೊಳಿಸುವ ಸೂಚನೆಯನ್ನು ಎಂಪಿಸಿ ನೀಡಿದೆ. ದೇಶದ ಆರ್ಥಿಕ ಬೆಳವಣಿಗೆ ದರದ ವಿಚಾರದಲ್ಲಿ ಆರ್‌ಬಿಐ ಭರವಸೆ ವ್ಯಕ್ತಪಡಿಸಿದೆ. ಹೂಡಿಕೆ ಮತ್ತು ಮಾರುಕಟ್ಟೆಯಲ್ಲಿ ಬೇಡಿಕೆ ವೇಗ ಪಡೆದುಕೊಳ್ಳುತ್ತಿದೆ ಎಂದು ಅದು ಹೇಳಿದೆ. ಕೆಲವು ತಿಂಗಳ ಹಿಂದೆ ಮಂದಗತಿಯಲ್ಲಿ ಇದ್ದ ಗ್ರಾಮಾಂತರ ಪ್ರದೇಶಗಳಲ್ಲಿನ ಬೇಡಿಕೆಯ ಪ್ರಮಾಣವು ಈಗ ವೇಗ ಪಡೆದುಕೊಳ್ಳುತ್ತಿದೆ. ನಗರ ಪ್ರದೇಶಗಳಲ್ಲಿನ ಬೇಡಿಕೆಯು ಸ್ಥಿರವಾಗಿದೆ. ದೇಶದ ಅರ್ಥ ವ್ಯವಸ್ಥೆಯು ಈ ವರ್ಷದಲ್ಲಿ ಶೇಕಡ 7.2ರಷ್ಟು ಬೆಳವಣಿಗೆ ಕಾಣಲಿದೆ ಎಂದು ಆರ್‌ಬಿಐ ಅಂದಾಜು ಮಾಡಿದೆ. ಅರ್ಥ ವ್ಯವಸ್ಥೆಯ ಬೆಳವಣಿಗೆಯು ಶುಭಸೂಚಕ.

ಈ ಪಿಡುಗಿನ ಸುತ್ತ ಇರುವ ಆಧುನಿಕ ಜಾಲವನ್ನು ಭೇದಿಸಲು ನಾವು ಸಜ್ಜಾಗಬೇಕಿದೆ

ಮಾದಕವಸ್ತು ಜಾಲಕ್ಕೆ ಕಾರ್ಯತಂತ್ರದ ಬಲೆ

ವಿಶ್ಲೇಷಣೆ

ಎಂ.ಎ.ಸಲೀಂ

ಮಾದಕವಸ್ತುಗಳ ಸೇವನೆ ಹಾಗೂ ಕಳ್ಳಸಾಗಣೆ ಎಂಬುದು ಅಂತರರಾಷ್ಟ್ರೀಯ ಸಮಸ್ಯೆಯಾಗಿದ್ದು, ಭಾರತವೂ ಇದಕ್ಕೆ ಹೊರತಾಗಿಲ್ಲ. ಮಾದಕವಸ್ತುಗಳ ಉತ್ಪಾದನೆಯ ಮೂಲವಾಗಿ, ಕಳ್ಳಸಾಗಣೆಯ ಕೇಂದ್ರವಾಗಿ ಹಾಗೂ ದೊಡ್ಡ ಮಾರುಕಟ್ಟೆಯಾಗಿ ಭಾರತವು ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ.

ಮಾದಕವಸ್ತುಗಳ ವ್ಯಸನಕ್ಕೆ ಭಾರತದ ಯುವಕರು ಬಲಿಯಾಗುತ್ತಿದ್ದಾರೆ. ಹಾನಿಕಾರಕ ಪರಿಣಾಮಗಳನ್ನೂ ಎದುರಿಸುತ್ತಿದ್ದಾರೆ. ಸಮಾಜದಲ್ಲಿ ಅಧಿಕಗೊಂಡಿರುವ ಹಿಂಸಾಪ್ರವೃತ್ತಿ ಹಾಗೂ ಅಪರಾಧ ಪ್ರಕರಣಗಳೇ ಇದಕ್ಕೆ ನಿದರ್ಶನ. ದುಡಿಯುವ ವಯಸ್ಸಿನ, ಅಂದರೆ ಸುಮಾರು 18-35 ವಯೋಮಾನದ ಯುವಕರೇ ಹೆಚ್ಚಾಗಿ ಮಾದಕವಸ್ತು ವ್ಯಸನಕ್ಕೆ ಒಳಗಾಗುತ್ತಿದ್ದಾರೆ. ಇದರಿಂದ ದೇಶದ ಮಾನವ ಸಂಪನ್ಮೂಲವೂ ವ್ಯರ್ಥವಾಗುತ್ತಿದೆ. ಈ ವ್ಯಸನವು ಯುವಜನಾಂಗದ ದೈಹಿಕ, ಮಾನಸಿಕ, ನೈತಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತಿದೆ. ಮಾದಕವಸ್ತು ಸೇವನೆ ಎಂಬ ಈ ವಿಪತ್ತನ್ನು ತಡೆಯಲು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಬಹಳಷ್ಟು ಕ್ರಮಗಳನ್ನು ಕೈಗೊಂಡಿವೆ.

ಮಾದಕವಸ್ತು ಹಾಗೂ ನಿದ್ರಾಜನಕ ವಸ್ತುಗಳ ಬಗೆಗಿನ ಭಾರತದ ನೀತಿಯು ನಮ್ಮ ಸಂವಿಧಾನದ 47ನೇ ವಿಧಿಯಲ್ಲಿನ ತತ್ವಗಳನ್ನು ಆಧರಿಸಿದೆ. ‘ವೈದ್ಯಕೀಯ ಉದ್ದೇಶಗಳಿಗಾಗಿ ಮಾತ್ರವೇ ಡ್ರಗ್ಸ್ ಅನ್ನು ಬಳಸಬೇಕು. ಆರೋಗ್ಯಕ್ಕೆ ಹಾನಿಕಾರಕವಾಗುವ ಡ್ರಗ್ಸ್‌ನ ಬಳಕೆಯನ್ನು ಸರ್ಕಾರವು ನಿಷೇಧಿಸಬೇಕು’ ಎನ್ನುತ್ತದೆ 47ನೇ ವಿಧಿ. ಮಾದಕವಸ್ತು ಸೇವನೆ, ಅಕ್ರಮ ಸಾಗಣೆ ನಿಷೇಧಕ್ಕೆ ಸಂಬಂಧಿಸಿದಂತೆ ದೇಶದಲ್ಲಿ ಮುಖ್ಯವಾಗಿ ಮೂರು ಕಾಯ್ದೆಗಳಿವೆ. ಅವುಗಳೆಂದರೆ: 1940ರ ಮಾದಕವಸ್ತು ಹಾಗೂ ಸೌಂದರ್ಯವರ್ಧಕಗಳ ಕಾಯ್ದೆ, 1985ರ ಮಾದಕವಸ್ತು ಹಾಗೂ ಉದ್ರೇಕಕಾರಿ ಮಾದಕವಸ್ತುಗಳ ಕಾಯ್ದೆ, 1988ರ ಮಾದಕವಸ್ತು ಅಕ್ರಮ ಸಾಗಣೆ ಹಾಗೂ ಉದ್ರೇಕಕಾರಿ ಮಾದಕವಸ್ತುಗಳ ತಡೆ ಕಾಯ್ದೆ. ಇಷ್ಟೊಂದು ಕಾನೂನುಗಳಿದ್ದರೂ ದೇಶದ ನಗರಗಳಲ್ಲಿ ಇಂದಿಗೂ ಮಾದಕವಸ್ತುಗಳ ಅಕ್ರಮ ಸಾಗಣೆ ಹಾಗೂ ಸೇವನೆ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಆಧುನಿಕ ತಂತ್ರಜ್ಞಾನದ ಈ ಯುಗದಲ್ಲಿ, ಹೊಸ ಹೊಸ ಸಿಂಥೆಟಿಕ್ ಡ್ರಗ್ಸ್ ಬಂದಿವೆ. ಮಾದಕವಸ್ತುಗಳ ಸಾಗಣೆ ಕೂಡ ಆಧುನಿಕಗೊಂಡಿದೆ. ಆದರೆ, ಮಾದಕವಸ್ತುವಿನ ಸುತ್ತಲ ಈ ಆಧುನಿಕ ಜಾಲವನ್ನು ಭೇದಿಸುವ ಕಾನೂನು ನಮ್ಮಲ್ಲಿ ಇಲ್ಲ. ಅಕ್ರಮ ಸಾಗಣೆಗಾಗಿ ಮನುಷ್ಯರೇ ಬೇಕಾಗಿಲ್ಲ ಎನ್ನುವಷ್ಟು ಡಾರ್ಕ್ ವೆಬ್, ಡೀಪ್ ವೆಬ್‌ಗಳಂಥ ತಂತ್ರಜ್ಞಾನವು ಬೆಳೆದುನಿಂತಿದೆ. ಈ ಜಾಲದಿಂದ ಯುವಕರನ್ನು ಹೊರತರಲು ಈ ಕೆಲವು ಕಾರ್ಯತಂತ್ರಗಳನ್ನು ಕೂಡಲೇ ಕೈಗೊಳ್ಳಬೇಕಾಗಿದೆ. ಅವು ಹೀಗಿವೆ: ಔಷಧ ಹಾಗೂ ವೈಜ್ಞಾನಿಕ ಉದ್ದೇಶಕ್ಕೆ ಬಳಸುವ ಡ್ರಗ್ಸ್‌ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪರವಾನಗಿ ನೀಡುತ್ತವೆ. ಕೇಂದ್ರದಲ್ಲಿ ಮಾದಕವಸ್ತು ಆಯುಕ್ತರು ಪರವಾನಗಿ ನೀಡಿದರೆ, ರಾಜ್ಯ ಮಟ್ಟದಲ್ಲಿ ಡ್ರಗ್ಸ್ ನಿಯಂತ್ರಕರು ಪರವಾನಗಿ ನೀಡುತ್ತಾರೆ. 1985ರ ಎನ್‌ಡಿಪಿಎಸ್ ಕಾಯ್ದೆ ಹಾಗೂ 1988ರ ಎನ್‌ಡಿಪಿಎಸ್ ಕಾಯ್ದೆ ಅಡಿಯಲ್ಲಿ ರಾಜ್ಯ ಪೊಲೀಸರಿಗೆ, ಎನ್‌ಸಿಬಿ ಹಾಗೂ ಕೇಂದ್ರ ಸರ್ಕಾರದ ಪೊಲೀಸರಿಗೆ ಅಧಿಕಾರ ನೀಡಲಾಗಿದೆ. ವ್ಯಸನಿಗಳ ಚಿಕಿತ್ಸೆ ಹಾಗೂ ವ್ಯಸನಮುಕ್ತ ಕೇಂದ್ರಗಳ ನಿರ್ವಹಣೆಯ ಜವಾಬ್ದಾರಿಯು ಕೇಂದ್ರ ಆರೋಗ್ಯ ಸಚಿವಾಲಯದ ಮೇಲಿದೆ. ಈ ಎಲ್ಲ ಸಂಸ್ಥೆಗಳ ನಡುವೆ ಅರ್ಥಪೂರ್ಣ ಸಹಕಾರವು ಮಾದಕವಸ್ತು ತಡೆ ಹೋರಾಟದಲ್ಲಿ ಹೆಚ್ಚು ಪರಿಣಾಮಕಾರಿಯಾಗಲಿದೆ.

ಮಾದಕವಸ್ತು ಸಾಗಣೆ ಸಂಬಂಧ ಗಡಿಗಳಲ್ಲಿ ನಡೆಯುವ ಚಟುವಟಿಕೆಗಳ ಕುರಿತ ಗುಪ್ತಚರ ಮಾಹಿತಿಗಳನ್ನು ಪರಸ್ಪರ ಹಂಚಿಕೊಳ್ಳುವುದು ಈ ಜಾಲವನ್ನು ಭೇದಿಸಲು ಮುಂದಿಡುವ ಪ್ರಮುಖ ಹೆಜ್ಜೆಯಾಗಬಲ್ಲದು. ಅಕ್ರಮ ಸಾಗಣೆಯಲ್ಲಿನ ಪ್ರಸ್ತುತ ಬೆಳವಣಿಗೆಗಳ ಕುರಿತು, ಇದನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಕಾರ್ಯತಂತ್ರಗಳ ಕುರಿತು ಚರ್ಚಿಸಲು ಅಂತರರಾಜ್ಯ ಪೊಲೀಸರ ಸಭೆಗಳನ್ನು ಆಯೋಜಿಸಬೇಕು. ಇಂಟರ್‌ಪೋಲ್ ಹಾಗೂ ವಿಶ್ವಸಂಸ್ಥೆಯ ಮಾದಕವಸ್ತು ಹಾಗೂ ಅಪರಾಧ ಕಚೇರಿಯೊಂದಿಗಿನ (ಯುಎನ್‌ಒಡಿಸಿ) ನಮ್ಮ ಸಹಭಾಗಿತ್ವವನ್ನು ಇನ್ನಷ್ಟು ಬಿಗಿಗೊಳಿಸಿಕೊಳ್ಳಬೇಕು.

ಪೆಡ್ಲರ್‌ಗಳು ಹಾಗೂ ಕಳ್ಳಸಾಗಣೆದಾರರನ್ನು ಬಂಧಿಸಲಾಗುತ್ತದಾದರೂ ಮಾದಕವಸ್ತುವಿನ ಪೂರೈಕೆಯ ಮೂಲವನ್ನು ಪತ್ತೆಹಚ್ಚುವಲ್ಲಿ ಪೊಲೀಸರು ಸೋಲುತ್ತಾರೆ. ಈ ಕಾರ್ಯಕ್ಕೆ ಹೆಚ್ಚಿನ ಪರಿಶ್ರಮದ ಅಗತ್ಯವಿದೆ. ಭಾರತದಲ್ಲಿ ಇದನ್ನು ಉತ್ಪಾದಿಸುವ ಸ್ಥಳಗಳು, ಅಕ್ರಮ ಸಾಗಣೆ ಮಾರ್ಗದ ನಕ್ಷೆಯನ್ನು ರೂಪಿಸಿಕೊಳ್ಳಬೇಕಿದೆ. ಕರಾವಳಿ ಪ್ರದೇಶದಲ್ಲಿ ಕಣ್ಗಾವಲು ವ್ಯವಸ್ಥೆಯನ್ನು ಇನ್ನಷ್ಟು ತೀವ್ರಗೊಳಿಸಬೇಕಿದೆ. ವಿಮಾನ ನಿಲ್ದಾಣದ ಕಣ್ಗಾವಲು ವ್ಯವಸ್ಥೆಯನ್ನೂ ಇನ್ನಷ್ಟು ಬಿಗಿಗೊಳಿಸಬೇಕಿದೆ. ಮಾದಕವಸ್ತು ಪತ್ತೆ ತಂತ್ರಜ್ಞಾನವನ್ನು ಆಧುನಿಕಗೊಳಿಸಿಕೊಳ್ಳಬೇಕಿದೆ.

ಡಾರ್ಕ್ ವೆಬ್ ಮಾರುಕಟ್ಟೆಯಲ್ಲಿನ ಕಾರ್ಯಚಟುವಟಿಕೆಗಳ ಕುರಿತು ನಿಗಾ ಇರಿಸಲು ಅತ್ಯಾಧುನಿಕ ಸೈಬರ್ ಕೇಂದ್ರಗಳನ್ನು ಸ್ಥಾಪಿಸುವ ಅಗತ್ಯವಿದೆ. ಈ ವೆಬ್ ಅನ್ನು ನಿಷ್ಕ್ರಿಯಗೊಳಿಸಲು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ಪಡೆದುಕೊಳ್ಳಬಹುದು. ಮಾದಕವಸ್ತುವಿನ ಹೊಸ ಟ್ರೆಂಡ್‌ಗಳನ್ನು ಪತ್ತೆ ಮಾಡಲು ಕೃತಕ ಬುದ್ಧಿಮತ್ತೆಯ ಬಳಕೆಯನ್ನು ಜಾರಿ ಮಾಡಬೇಕಿದೆ.

ಮಾದಕವಸ್ತುಗಳ ಅಕ್ರಮ ಸಾಗಣೆ ಕುರಿತು ತನಿಖೆ ನಡೆಸುವ ಸವಾಲನ್ನು ಸಶಕ್ತವಾಗಿ ಎದುರಿಸಲೆಂದೇ ರಾಜ್ಯ ಪೊಲೀಸರಲ್ಲಿ ವಿಶೇಷ ಕೌಶಲಗಳನ್ನು ಅಭಿವೃದ್ಧಿಪಡಿಸಬೇಕಿದೆ. ಸಂಘಟಿತವಾಗಿ ಅಪರಾಧ ಎಸಗುವ ಗುಂಪುಗಳನ್ನು ಪತ್ತೆ ಹಚ್ಚುವಂಥ ತನಿಖಾ ತಂತ್ರಗಾರಿಕೆಯನ್ನು ಕಲಿಸಲು ತನಿಖಾಧಿಕಾರಿಗೆ ತರಬೇತಿ ನೀಡಬೇಕು. ಮಾದಕವಸ್ತು ಪ್ರಕರಣಗಳಿಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳು ನೀಡಿದ ತೀರ್ಪಿನ ಅರಿವನ್ನೂ ತನಿಖಾಧಿಕಾರಿಗೆ ನೀಡಬೇಕು. ಆಗ ತನಿಖೆಯು ಪರಿಣಾಮಕಾರಿ ಆಗುವುದರ ಜೊತೆಗೆ, ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆಯೂ ಇರಲಿದೆ. ಕ್ರಿಪ್ಟೊ ಕರೆನ್ಸಿ ಸಂಬಂಧ ದೇಶದ ಕಾನೂನನ್ನು ಇನ್ನಷ್ಟು ಬಲಗೊಳಿಸಬೇಕು.

ಎಷ್ಟು ಪ್ರಮಾಣದ ಮಾದಕವಸ್ತುವನ್ನು ವಶಪಡಿಸಿಕೊಳ್ಳಲಾಗಿದೆ ಎನ್ನುವುದಕ್ಕೆ ಅನುಗುಣವಾಗಿ ವ್ಯಕ್ತಿಗೆ ಶಿಕ್ಷೆ ವಿಧಿಸುವ ಕಾರ್ಯವಾಗಬೇಕಿದೆ. ಮಾದಕವಸ್ತು ಅಕ್ರಮ ಸಾಗಣೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಕಾನೂನುಗಳನ್ನು ಮರುಪರಿಶೀಲಿಸಬೇಕಾಗಿದೆ. ಜೊತೆಗೆ ಇವುಗಳನ್ನು ಇನ್ನಷ್ಟು ಬಿಗಿಗೊಳಿಸಬೇಕಾಗಿದೆ. ಅನುಮಾನಾಸ್ಪದ ರೀತಿಯಲ್ಲಿ ಹಣ ವರ್ಗಾವಣೆ ಆಗುತ್ತಿದ್ದರೆ, ಇಂಥ ವ್ಯವಹಾರಗಳ ಕುರಿತು ಮಾಹಿತಿ ನೀಡದ ಬ್ಯಾಂಕಿಂಗ್ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಮಾದಕವಸ್ತು ಮಾಫಿಯಾದ ಸದಸ್ಯರು ಹಾಗೂ ಪದೇ ಪದೇ ಅಪರಾಧಗಳನ್ನು ಎಸಗುವವರಿಗೆ ಕಠಿಣ ಶಿಕ್ಷೆ ನೀಡುವಂತೆ ಆಗಬೇಕು.

ಯುವಕರು, ಅದರಲ್ಲಿಯೂ ಖಿನ್ನತೆಯಿಂದ ಬಳಲುತ್ತಿರುವವರು ಹಾಗೂ ಅಭದ್ರತೆಯ ಭಾವ ಇರುವವರು ಸುಲಭವಾಗಿ ಪೆಡ್ಲರ್‌ಗಳ ಬಲೆಗೆ ಬೀಳುತ್ತಾರೆ. ಜಾಗೃತಿ ಮೂಡಿಸಲು ಶೈಕ್ಷಣಿಕ ಸಂಸ್ಥೆಗಳು, ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯೊಂದಿಗೆ ಪೊಲೀಸ್ ಇಲಾಖೆಯೂ ಕೈಜೋಡಿಸಬೇಕು. ಉಪನ್ಯಾಸಗಳ ಮೂಲಕ, ಸಿನಿಮಾ ಪ್ರದರ್ಶನ ಹಾಗೂ ಅಕ್ರಮ ಸಾಗಣೆ ಪರಿಣಾಮಗಳ ಕುರಿತ ಬರಹಗಳನ್ನು ನೀಡುವುದರ ಮೂಲಕ ಯುವಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯವಾಗಬೇಕು. ಜಾಗೃತಿ ಮೂಡಿಸುವ ಹೋರಾಟದಲ್ಲಿ ಎನ್‌ಜಿಒಗಳೊಂದಿಗಿನ ಸಹಭಾಗಿತ್ವವೂ ಸಹಕಾರಿ ಆಗುತ್ತದೆ. ಧಾರ್ಮಿಕ ಹಾಗೂ ಸಾಂಸ್ಕೃತಿಕ ನಾಯಕರನ್ನು ಜಾಗೃತಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದೂ ಮುಖ್ಯವಾಗುತ್ತದೆ.

ಹಲವು ಎನ್‌ಜಿಒಗಳು ವ್ಯಸನಮುಕ್ತ ಕೇಂದ್ರಗಳನ್ನು ನಡೆಸುತ್ತಿವೆ. ಆದರೆ, ಈ ಕೆಲವು ಕೇಂದ್ರಗಳು ದುಬಾರಿಯಾಗಿವೆ. ಅದಕ್ಕಾಗಿ, ಸರ್ಕಾರವೇ ಜಿಲ್ಲಾ ಮಟ್ಟದಲ್ಲಿ ವ್ಯಸನಮುಕ್ತ ಕೇಂದ್ರಗಳನ್ನು ತೆರೆಯಬಹುದು. ಇಂಥ ಕೇಂದ್ರಗಳು ಹಾಗೂ ಆಪ್ತ ಸಮಾಲೋಚನೆಯು ಹಲವು ಜೀವಗಳನ್ನು ಉಳಿಸಬಹುದು. ಈ ಚಿಕಿತ್ಸೆಯು ಕೈಗೆಟಕುವ ದರದಲ್ಲಿ ಇರಬೇಕು. ಜೊತೆಗೆ, ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನೂ ನೀಡುವಂತಿರಬೇಕು. ಈ ಎಂಟೂ ಕಾರ್ಯತಂತ್ರಗಳು ಕೆಲವು ಉದಾಹರಣೆಗಳಷ್ಟೆ. ಮಾದಕವಸ್ತುವಿನ ಅಕ್ರಮ ಸಾಗಣೆಯು ವ್ಯಕ್ತಿಯ ಮೇಲೆ ಮಾತ್ರವಲ್ಲದೆ ಇಡೀ ಸಮಾಜದ ಮೇಲೇ ಪರಿಣಾಮ ಬೀರುತ್ತದೆ. ಒಂದಿಡೀ ಜನಾಂಗವನ್ನು ಹಾಳುಗೆಡಹುವಂಥ ಶಕ್ತಿ ಇದಕ್ಕಿದೆ. ಆದ್ದರಿಂದ, ಸಮಾಜದಿಂದ ಈ ವಿಪತ್ತನ್ನು ಹೊಡೆದಟ್ಟಲು ತನಿಖಾ ಸಂಸ್ಥೆಗಳ ಜೊತೆ ಸಮಾಜದ ಪ್ರತಿ ಪ್ರಜೆಯೂ ಕೈಜೋಡಿಸುವುದು ಅತ್ಯಗತ್ಯ.

ಲೇಖಕ: ಪೊಲೀಸ್ ಮಹಾನಿರ್ದೇಶಕ
ಆರ್ಥಿಕ ಅಪರಾಧಗಳ ವಿಭಾಗ, ಸಿಐಡಿ

ಚುರುಮುರಿ



ನಿಮ್ಮ ತಲೆಗೆ ನಿಮ್ಮದೇ ಕೈ

● ಡಿ.ಎಸ್.ಲಿಂಗರಾಜು

‘ಕರ್ನಾಟಕದ 16 ಜಿಲ್ಲೇಲಿ ಹವಮಾನ ಚೈಂಜ್ ಆಗಿ ಭಾರಿ ಎಫೆಕ್ಟಾಗ್ಯದಂತೆ?’ ಅಂತಂದ ಚಂದ್ರು.

‘ಅದೀಯೆ, ಕೊಡಗಿನಲ್ಲಿ ಸೆಕೆಯಂತೆ, ಯಾದಗಿರಿಯಲ್ಲಿ ಮಳೆ ಸುರೀತಾ ಅದೆ. ಇದರಿಂದ ಜನಕ್ಕೆ ಸ್ನಾನ ಕಷ್ಟವಂತೆ. ಆರ್ಥಿಕತೆಗೆ ಪೆಟ್ಟಾಗ್ಯದೆ ಅನ್ನೋ ವರದಿ ಬತ್ತಾ ಅದೆ’ ನನ್ನ ಹೇಳಿಕೆ ಕೊಟ್ಟೆ.

‘ದಿಟ ಕಯ್ಯಾ, ರಾಜಕೀಯದೋರು ಅವುರಿಗೆ ಅವುರೇ ಅವಮಾನ ಮಾಡ್ಕ್ಯತ್ತಾವ್ರೆ. ಇದರ ಎಫೆಕ್ಟು ಮಂಡ್ಯ, ಚಾಮರಾಜನಗರದೇಲಿ ಜಾಸ್ತಿಯಾಗ್ಯದೆ’ ಯಂಟಪ್ಪಣ್ಣ ಕಳವಳ ವ್ಯಕ್ತಪಡಿಸಿತು.

‘ಎಲಾ ಎಡವಟ್ಟುಗಳಾ, ಅದು ಅವಮಾನವಲ್ಲ ಕನ್ರೋ. ಹೆಚ್ಚಿದ ಜನಸಂಖ್ಯೆ, ಕುಸಿದಿರೋ ಆದಾಯ, ಮಳೆ, ಪ್ರವಾಹ, ಬರದಂತಾ ಹವಾಮಾನ ವೈಪರಿತ್ಯಗಳು ಜನದ ಜೀವ ಕಿತುಗಂದು ತಿನ್ನತಾವೆ ಅಂದಿರದು’ ತುರೇಮಣೆ ಕ್ಲಾರಿಫಿಕೇಷನ್ ಕೊಟ್ಟರು.

‘ನಾವು ಅನ್ನೇ ಸಾ ಅಂದುದ್ದು. ರಾಜಕೀಯದೇಲಿ ಹವಾಮಾನ ಬದಲಾವಣೆಯಾಗಿ ಸೇಡಿನ ಬೆಂಕಿ ಕತ್ತಿಕ್ಯಂದು ಉರೀತಾ ಅದೆ. ಅದರ ಎಫೆಕ್ಟು ಅನುಭವಿಸ್ತಿರೋ ಜನದ ಕಣ್ಣೀರು ರಾಜಕಾರಣಿಗಳು ಒರೆಸ್ತರೆ ಅಂತ ತಿಳಕಂದುದ್ದೇ ತಪ್ಪು’ ಚಂದ್ರು ಸಿಡಿದ.

‘ಬಡವರು ಸತ್ತರೆ ಸುಡಕ್ಕೆ ಮಸಾಣಿಲ್ಲಾ, ಹೊತ್ತುಕೋಗಕ್ಕೆ ಅಪ್ಪಂತಾ ದಾರಿಲ್ಲಾ. ಡೆಂಗ್ಯು, ಎಚ್1ಎನ್1 ಜ್ವರ ಕಾಡ್ತಾವೆ. ಜನದ ಕಷ್ಟಕ್ಕೆ ಕೊನೆಯೇ ಇಲ್ದಂಗಾಗ್ಯದೆ. ರಾಜಕೀಯದವು ಮಾತ್ರ ಊರ ಮ್ಯಾಲೆ ಊರು ಬಿದ್ದರೆ ನಂದೇನು ಹೋದತ್ತು ಅಂತ ಕೋಮುಗಾರಿಕೆ ಮಾಡ್ತಾ ಕೂತವೆ’ ಅಂತು ಯಂಟಪ್ಪಣ್ಣ.

‘ನಿಮ್ಮ ಯೇಗ್ತೇಗೆ ಇದೇ ಜಾಸ್ತಿಯಾತು ಅಂತ ರಾಜಕಾರಣಿಗಳು ತಿಳಕಂದವೆ. ನಿಮ್ಮ ಬಂಗವೇ ಹೇಳಿಕ್ಯಂದರೆ ರಾಜಕೀಯದೋರ ಬಂಗ ಕೇಳೋರು ಯಾರ್ಲಾ?’ ಅಂದ್ರು ತುರೇಮಣೆ.

‘ಅವರದ್ದೇನು ಬಂಗ ಸಾ?’ ನಾನು ಕೇಳಿದೆ.

‘ರಾಜಕೀಯದೋರು ಹಣ, ಅಧಿಕಾರ ಇಲ್ಲದಿದ್ದರೆ ಮುಂದೆಂಗೆ ಅಂತ ತಲೆಗೆ ಕೈ ಕೊಟ್ಕಂದು ಕೂತವ್ರೆ. ನಿಮ್ಮ ದರ್ದು ನಿಮ್ಮದು. ನಿಮ್ಮ ತಲೆಗೆ ನಿಮ್ಮದೇ ಕೈ’ ತುರೇಮಣೆ ಘೋರ ಸತ್ಯ ಬಿಚ್ಚಿಟ್ಟರು.

ದಿನದ ಟ್ವೀಟ್

ಉತ್ತಮವಾಗಿ ಯೋಜಿಸಿ, ದಟ್ಟಣೆ ತಪ್ಪಿಸಿ

ತುಮಕೂರಿನಿಂದ ಬೆಂಗಳೂರಿನ ಗೊರಗುಂಟೆಪಾಳ್ಯದವರೆಗಿನ ರಸ್ತೆಯು ಹೊರ ಊರುಗಳಿಂದ ಬರುವವರಿಂದ ತುಂಬಿ ಹೋಗಿರುತ್ತದೆ. ಬೆಂಗಳೂರಿನ ಪ್ರವೇಶಕ್ಕೆ ಹೊಸದಾದ ಬಹುಪ್ರವೇಶದ ಅವಕಾಶಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಪರಿಗಣಿಸಬೇಕು. ಇದರಿಂದ ಪೂರ್ವ, ಕೇಂದ್ರ ಮತ್ತು ಪಶ್ಚಿಮ ಭಾಗಗಳಿಂದ ಪ್ರವೇಶ ಸಾಧ್ಯವಾಗಿ, ಬೆಂಗಳೂರಿನ ಒಳಗೆ ಸಂಚಾರ ದಟ್ಟಣೆ ತಗ್ಗುತ್ತದೆ... ಪ್ರತಿಯೊಬ್ಬರೂ ತುಮಕೂರು ರಸ್ತೆ ಮತ್ತು ನಗರವನ್ನು ಬಳಸುವ ಅಗತ್ಯ ಬರುವುದಿಲ್ಲ...

ಭಾಸ್ಕರ್ ರಾವ್, ಬಿಜೆಪಿ ಮುಖಂಡ

ಕಿಡಿನುಡಿ

ಜಾಗತಿಕ ನಗರವಾದ ಬೆಂಗಳೂರು ತನ್ನ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಸ್ವಚ್ಛ ಸಾರ್ವಜನಿಕ ಶೌಚಾಲಯಗಳನ್ನು ಹೊಂದದೇ ಇರುವುದು ನಾಚಿಕೆಗೇಡು ಮತ್ತು ನೋವಿನ ಸಂಗತಿ. ಕಸದ ತೊಟ್ಟಿಗಳ ವಿಷಯಕ್ಕೂ ಇದು ಅನ್ವಯಿಸುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಅಗತ್ಯವಿರುವಷ್ಟು ಕಸದ ತೊಟ್ಟಿಗಳು ಕಾಣಸಿಗುವುದಿಲ್ಲ. ಅವುಗಳನ್ನೆಲ್ಲ ಒದಗಿಸದೆ, ಬಯಲಿನಲ್ಲಿ ಮೂತ್ರ ವಿಸರ್ಜಿಸಲಾಗುತ್ತದೆ ಮತ್ತು ಎಲ್ಲೆಡೆ ಕಸ ಎಸೆಯಲಾಗುತ್ತದೆ ಎಂದು ದೂರುವುದು ಹಾಸ್ಯಾಸ್ಪದ.

ಮಂಜುನಾಥ

25 ವರ್ಷಗಳ ಹಿಂದೆ

ಶುಕ್ರವಾರ, 15-10-1999

● **‘ಸಚಿವ ಸ್ಥಾನ ಕೈತಪ್ಪಲು ಹೆಗಡೆ ಸ್ವಯಂಕೃತ ಅಪರಾಧ ಕಾರಣ’**

ನವದೆಹಲಿ, ಅ. 14– ರಾಮಕೃಷ್ಣ ಹೆಗಡೆ ಅವರಿಗೆ ಈಗಿನ ಮಂತ್ರಿಮಂಡಲದಲ್ಲಿ ಅವಕಾಶ ಸಿಗದಿರಲು ಅವರ ‘ಕೆಲವು ಸ್ವಯಂಕೃತ ಅಪರಾಧಗಳು’ ಕಾರಣ ಎಂಬುದಾಗಿ ಜನತಾದಳ (ಯು) ಮೂಲಗಳು ತಿಳಿಸಿವೆ.

ಕರ್ನಾಟಕದಲ್ಲಿ ಜೆ.ಎಚ್. ಪಟೇಲ್ ನೇತೃತ್ವದ ಗುಂಪನ್ನು ತಂದು ಬಿಜೆಪಿ ಜತೆ ಮೈತ್ರಿ ಮಾಡಿಸಿದ್ದರಿಂದ ರಾಜ್ಯದಲ್ಲಿ ಪಕ್ಷವು ತನ್ನ ವರ್ಚಸ್ಸನ್ನು ಕಳೆದುಕೊಂಡಿತು ಮತ್ತು ಆಡಳಿತ ವಿರೋಧಿ ಅಲೆಯು ಬಿಜೆಪಿಯನ್ನು ಬಲಿ ತೆಗೆದುಕೊಂಡಿತು. ಆದ್ದರಿಂದ ರಾಮಕೃಷ್ಣ ಹೆಗಡೆ ಅವರನ್ನು ಸಂಪುಟದಲ್ಲಿ ಸೇರಿಸಿಕೊಳ್ಳಬಾರದು ಎಂಬುದಾಗಿ ಕರ್ನಾಟಕದ ಕೆಲವು ಬಿಜೆಪಿ ನಾಯಕರು ಪ್ರಧಾನಮಂತ್ರಿ ಅವರಿಗೆ ದೂರು ನೀಡಿದ್ದು ಒಂದು ಕಾರಣ ಎಂಬುದಾಗಿ ಗೊತ್ತಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 15-10-1974

● **‘ಪ್ರಾಮಾಣಿಕತೆ ಬ್ಯಾಂಕ್’**

ಕೊಚ್ಚಿ, ಅ. 14– ಜನಬಾಹುಳ್ಯದ ಪಟ್ಟಣದಲ್ಲಿ ನಿಮ್ಮ ಹಣ ಪಿಕ್‌ಪಾಕೆಟ್ ಆದರೆ ನೀವು ಯಾರ ಸಹಾಯವನ್ನು ಯಾಚಿಸುತ್ತೀರಿ? ಬೇರೊಬ್ಬರನ್ನು ಸಹಾಯಕ್ಕಾಗಿ ಯಾಚಿಸುವುದೆಂದರೆ ಮರ್ಯಾದಸ್ತ ನಾಗರಿಕರಿಗೆ ತುಂಬಾ ಪೇಚಿನ ಪ್ರಸಂಗ. ಇಂತಹ ಪ್ರಸಂಗಗಳು ಅಪರೂಪವಲ್ಲವೆಂದು ಕಂಡುಕೊಂಡ ಕೇರಳದ ಪೊಲೀಸರು ಕೊಚ್ಚಿಯಲ್ಲಿನ ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದಲ್ಲೊಂದು ಪ್ರಾಮಾಣಿಕತೆಯ ಬ್ಯಾಂಕು ಸ್ಥಾಪಿಸಿದ್ದಾರೆ.

ಈ ಸಣ್ಣ ಬ್ಯಾಂಕಿನ ಕಾರ್ಯನಿರ್ವಹಣೆಯು ತೀರಾ ಭಿನ್ನ. ಸರಳವಾದ ಜಗಲಿಯ ಮೇಲೆ, ಅಲ್ಲಿ ಪೊಲೀಸ್ ಪೇದೆಯ ಮೂರ್ತಿಯೊಂದಿದೆ. ಅದರ ಮೇಲೆ ‘ನಿಮ್ಮ ಪ್ರಾಮಾಣಿಕತೆಯಲ್ಲಿ ನಮಗೆ ನಂಬಿಕೆಯಿದೆ’ ಎಂಬ ಬರಹವಿದೆ. ಈ ಮೂರ್ತಿ ಎರಡು ಜೇಬುಗಳನ್ನು ಹೊಂದಿದ್ದು, ಅವೆರಡೂ ಹಣದ ಚೀಲಗಳು. ಬಲಗಡೆ ಜೇಬಿನಲ್ಲಿರುವ ಹಣವನ್ನು ನಿಜವಾಗಿಯೂ ಹಣದ ಅವಶ್ಯಕತೆಯಿರುವವರು ತೆಗೆದುಕೊಳ್ಳಬಹುದು. ಎಡಗಡೆಯ ಜೇಬಿನಲ್ಲಿ ಸಾರ್ವಜನಿಕರು ತಮಗೆ ಇಷ್ಟಬಂದಷ್ಟು ಹಣವನ್ನು ಹಾಕಬಹುದಲ್ಲದೆ, ಬಲಗಡೆಯ ಜೇಬಿನಿಂದ ಹಣವನ್ನು ಪಡೆದು ಉಪಯೋಗಿಸಿದವರು ಕೂಡಾ ಆ ಹಣವನ್ನು ಹಿಂದಿರುಗಿಸಲು ಅದರಲ್ಲಿ ಹಾಕಬಹುದು.

ಈ ಪ್ರಾಮಾಣಿಕತೆಯ ಬ್ಯಾಂಕಿನ ನೆರವನ್ನು ಪಡೆಯಲು ಇಚ್ಛಿಸುವವರಿಗೆ ಸಹಾಯ ಮಾಡಲು ಅಲ್ಲೊಬ್ಬ ಪೊಲೀಸ್ ಪೇದೆ ಕೂಡಾ ಇರುತ್ತಾನೆ.

ಸಂಗತ

ಸಮ್ಮೇಳನ ಮತ್ತು ಸಾಮಾಜಿಕ ಹೊಣೆ

ಕನ್ನಡ ಸಾಹಿತ್ಯ ಸಮ್ಮೇಳನವು ಸಮಷ್ಟಿ ಪ್ರಜ್ಞೆಯನ್ನು ಹೊಂದಿರಬೇಕು

● ನಾ.ದಿವಾಕರ

ಮಂಡ್ಯದಲ್ಲಿ ಡಿಸೆಂಬರ್ 20ರಿಂದ ಮೂರು ದಿನ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸುತ್ತ ನಡೆಯುತ್ತಿರುವ ಚರ್ಚೆಯು ಸಾಹಿತ್ಯೇತರ ರೂಪ ಪಡೆಯುತ್ತಿರುವುದು ವಿಪರ್ಯಾಸ. ಮೂಲತಃ ಮಂಡ್ಯ ಸಮ್ಮೇಳನದ ಮೂಲ ವಿಷಯ ಅಥವಾ ಥೀಮ್ ಕುರಿತು ಗಂಭೀರವಾದ ಚರ್ಚೆಗಳು ನಡೆಯಬೇಕಿತ್ತು. ಏಕೆಂದರೆ ಸಕ್ಕರೆ ಜಿಲ್ಲೆ ಇಂದು ಮಹಿಳೆಯರ ಅಕ್ಕರೆ ಕಳೆದುಕೊಂಡು, ಹೆಣ್ಣುಭ್ರೂಣ ಹತ್ಯೆಗಳ ಕೇಂದ್ರವಾಗಿದೆ. ಈ ದೃಷ್ಟಿಯಿಂದ ನೋಡಿದಾಗ, ಸಮ್ಮೇಳನದ ಮೂಲ ವಿಷಯವು ಮಹಿಳೆ ಮತ್ತು ಲಿಂಗ ಸೂಕ್ಷ್ಮತೆಯೇ ಆಗಬೇಕಿದೆ. ಹಾಗೆಯೇ ಸಮ್ಮೇಳನಾಧ್ಯಕ್ಷ ಸ್ಥಾನವನ್ನೂ ಮಹಿಳೆಗೇ ನೀಡಬೇಕಿದೆ. ಇದು ಕೇಳಿ ಪಡೆಯಬೇಕಾದ ಅವಕಾಶವಲ್ಲವಾದರೂ ಪಿತೃಪ್ರಾಧಾನ್ಯ ಮನಃಸ್ಥಿತಿ ಆಳವಾಗಿರುವುದರಿಂದ, ನೆನಪಿಸುವುದು ಪ್ರಜ್ಞಾವಂತ ಸಾಹಿತ್ಯಕ ಮನಸ್ಸುಗಳ ಕರ್ತವ್ಯ.

ಈಗ ಚರ್ಚೆಗೆ ಒಳಗಾಗುತ್ತಿರುವುದು ಸಮ್ಮೇಳನಾಧ್ಯಕ್ಷತೆಯ ಬಗ್ಗೆ. ಸಾಹಿತ್ಯೇತರ ಜಗತ್ತಿನಲ್ಲಿ ಕಾಣಬಹುದಾದ ಅನೇಕ ವ್ಯಕ್ತಿಗಳು ನಮ್ಮ ನಡುವೆ ಇದ್ದಾರೆ. ತಮ್ಮದೇ ಆದ ಆಸಕ್ತಿಯ ಕ್ಷೇತ್ರಗಳಲ್ಲಿ ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಕಾರಣರಾಗಿದ್ದಾರೆ. ಭಾಷಿಕ ನೆಲೆಯಲ್ಲಿ ಕನ್ನಡದ ಅಸ್ಮಿತೆಗಾಗಿ ನಿರಂತರವಾಗಿ ಹೋರಾಡುತ್ತಿರುವವರು ಇದ್ದಾರೆ. ಹಾಗೆಯೇ ಕರ್ನಾಟಕದ ಸಾಂಸ್ಕೃತಿಕ ಜಗತ್ತನ್ನು ವಿಸ್ತರಿಸುವ ಹಲವು ಕ್ರಿಯಾಶೀಲ ಚಟುವಟಿಕೆಗಳಲ್ಲಿ ತೊಡಗಿಕೊಂಡವರಿದ್ದಾರೆ. ಈ ಮಹನೀಯರ ಅಮೂಲ್ಯ ಕೊಡುಗೆಗಳನ್ನು ಸಮ್ಮಾನಿಸುತ್ತಲೇ, ಸಾಹಿತ್ಯ ಸಮ್ಮೇಳನದ ಮೂಲ ಕಲ್ಪನೆ, ಸ್ವರೂಪ ಮತ್ತು ಉದ್ದೇಶದ ಬಗ್ಗೆ ಗಂಭೀರವಾಗಿ ಯೋಚಿಸಬೇಕಿದೆ.

ಹಿಂದಿನ 110 ವರ್ಷಗಳಲ್ಲಿ ನಡೆದಿರುವ 86 ಸಮ್ಮೇಳನಗಳಲ್ಲಿ ಮಹಿಳಾ ಸಾಹಿತಿಗೆ ಸಿಕ್ಕಿರುವ ಸ್ಥಾನವನ್ನು ಗಮನಿಸಿದಾಗ, ಸಾಹಿತ್ಯ ಪರಿಷತ್ತು ಇಂದಿಗೂ ಗಂಡಾಳ್ವಿಕೆಯ ನೆರಳಲ್ಲೇ ಸಾಗುತ್ತಿರುವುದು ಸ್ಪಷ್ಟವಾಗುತ್ತದೆ. ಸಮ್ಮೇಳನಾಧ್ಯಕ್ಷರಾಗಿ ಮೊದಲ ಬಾರಿ ಮಹಿಳೆ ಆಯ್ಕೆಯಾಗಲು ಸುಮಾರು 60 ವರ್ಷಗಳೇ ಬೇಕಾದವು (1974– ಜಯದೇವಿತಾಯಿ ಲಿಗಾಡೆ). ಆನಂತರ ಮಹಿಳಾ ಸಾಹಿತಿಗಳಿಗೆ 26 ವರ್ಷಗಳ ರಜೆ ನೀಡಲಾಯಿತು. ಹೊಸ ಶತಮಾನದಲ್ಲಿ ನಡೆದಿರುವ 19 ಸಮ್ಮೇಳನಗಳಲ್ಲಿ ಮೂರು ಬಾರಿ ಮಹಿಳಾ ಸಾಹಿತಿಯನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ (2000– ಶಾಂತಾದೇವಿ ಮಾಳವಾಡ, 2003– ಕಮಲಾ ಹಂಪನಾ, 2010– ಗೀತಾ ನಾಗಭೂಷಣ). ಇದರರ್ಥ ಕನ್ನಡ ಸಾಹಿತ್ಯ ಲೋಕದಲ್ಲಿ ಸಮ್ಮೇಳನಾಧ್ಯಕ್ಷರಾಗುವ ಅರ್ಹತೆ ಇರುವ ಮಹಿಳಾ ಸಾಹಿತಿಗಳು ಇಲ್ಲವೆಂದೇನಲ್ಲ. ಆ ಗೌರವಯುತ ಸ್ಥಾನಕ್ಕೆ ಮಹಿಳೆಯನ್ನು ಕೂರಿಸುವ ವಿಶಾಲ ಚಿಂತನೆ-ಸೂಕ್ಷ್ಮ ಮನೋಭಾವ ಕನ್ನಡ ಸಾಹಿತ್ಯ ಲೋಕಕ್ಕೆ ಇಲ್ಲ ಎಂದಷ್ಟೇ. ಈ ಬಾರಿಯಾದರೂ ಇದು ಕೈಗೂಡುವುದೇ ನೋಡೋಣ.

ಆದರೆ ಈಗ ನಡೆಯುತ್ತಿರುವ ಚರ್ಚೆ ಸಮ್ಮೇಳನಾಧ್ಯಕ್ಷ ಸ್ಥಾನಕ್ಕೆ ಸಾಹಿತ್ಯೇತರ ವಲಯದಿಂದ ವ್ಯಕ್ತಿಗಳನ್ನು ಆಯ್ಕೆ ಮಾಡಬಹುದೇ ಎಂದು. ಈ ಕುರಿತು ಗಂಭೀರ ಚರ್ಚೆಗಳು ನಡೆದಿದ್ದು, ಪರಿಷತ್ತಿನ ಅಧ್ಯಕ್ಷರು ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಿ ನಿರ್ಧಾರ ಕೈಗೊಳ್ಳುವುದಾಗಿ ಹೇಳಿದ್ದಾರೆ, ಸಂತೋಷ. ಆದರೆ ಸಾಹಿತ್ಯೇತರ ಎಂಬ ವಿಶಾಲ ವಲಯವನ್ನು ನಿರ್ವಚಿಸುವವರಾರು? ರಾಜಕೀಯ, ಕೈಗಾರಿಕೋದ್ಯಮ, ವಾಣಿಜ್ಯೋದ್ಯಮ, ಸಾಮಾಜಿಕ ಚಟುವಟಿಕೆ, ಸಾಫ್ಟ್‌ವೇರ್ ಉದ್ಯಮ, ಕ್ರೀಡಾ ವಲಯ ಹೀಗೆ ವಿಸ್ತರಿಸುತ್ತಲೇ ಹೋಗುವ ‘ಸಾಹಿತ್ಯೇತರ’ ವಲಯದಲ್ಲಿ ಎಲ್ಲರನ್ನೂ ಹಿಂದಿಕ್ಕಿ ಮೊದಲ ಸಾಲಿನಲ್ಲಿ ನಿಲ್ಲುವುದು ರಾಜಕೀಯ ಮತ್ತು ಅದರ ಪ್ರಭಾವಳಿಯನ್ನೇ ಬಳಸಿಕೊಳ್ಳುವ ಇತರ ಕ್ಷೇತ್ರಗಳು. ಮತ್ತದೇ ಶಿಫಾರಸು, ಒತ್ತಡ, ಲಾಬಿಕೋರತನ ಮತ್ತು ‘ನಮ್ಮವರಿಗೊಂದು ಜಾಗ ಕೊಡಿ’ ಎನ್ನುವ ಗಟ್ಟಿ ಧ್ವನಿ.

ಸಾಹಿತ್ಯ ಎನ್ನುವುದು ನಮ್ಮ ಸುತ್ತಲಿನ ಸಮಾಜದ ಸ್ಥಿತ್ಯಂತರಗಳನ್ನು ವಸ್ತುನಿಷ್ಠವಾಗಿ ಬಿಂಬಿಸುವಂತಹ ಒಂದು ಅಕ್ಷರ ಲೋಕ. ಇಲ್ಲಿ ರಚನೆಯಾಗುವುದೆಲ್ಲವೂ ವಸ್ತುನಿಷ್ಠವಾಗಿರುವುದಿಲ್ಲ. ಏಕೆಂದರೆ ಸಾಹಿತಿಯ ವ್ಯಕ್ತಿಗತ ತಾತ್ವಿಕ ನಿಲುವುಗಳು ಸಾಹಿತ್ಯವನ್ನೂ ಪ್ರಭಾವಿಸುತ್ತವೆ. ಈ ನೆಲದ ನಿವಾಸಿಗಳು ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳು, ಜಟಿಲ ಸಾಂಸ್ಕೃತಿಕ ಸಿಕ್ಕುಗಳು ಮತ್ತು ತಳಸಮಾಜದಲ್ಲಿ ಅನುಭವಿಸುತ್ತಿರುವ ನಿತ್ಯಬದುಕಿನ ಸವಾಲುಗಳನ್ನು ಸಾಹಿತ್ಯಲೋಕದ ವಿವಿಧ ಪ್ರಕಾರಗಳು ಬಿಂಬಿಸುತ್ತಲೇ ಬರುತ್ತವೆ. ಈ ಅಕ್ಷರಾಭಿವ್ಯಕ್ತಿಯ ಹೂರಣವನ್ನು ಸಮಷ್ಟಿ ಪ್ರಜ್ಞೆಯೊಂದಿಗೆ ಕನ್ನಡ ಜನತೆಯ ಮುಂದಿಟ್ಟು ಪರಾಮರ್ಶಿಸುವ ಮತ್ತು ಆತ್ಮಾವಲೋಕನಕ್ಕೆ ಎಡೆ ಮಾಡಿಕೊಡುವ ರೀತಿಯಲ್ಲಿ ನಿಷ್ಕರ್ಷೆಗೆ ಒಳಪಡಿಸುವ ಜವಾಬ್ದಾರಿ ಕನ್ನಡ ಸಾಹಿತ್ಯ ಸಮ್ಮೇಳನಗಳ ಮೇಲಿರುತ್ತದೆ. ಆದ್ದರಿಂದಲೇ ಇಲ್ಲಿ ಅಧ್ಯಕ್ಷ ಪೀಠ ಅಲಂಕರಿಸುವವರಿಗೆ ಸಾಹಿತ್ಯಕ ಪ್ರಜ್ಞೆಯೊಂದಿಗೆ ಸಾಮಾಜಿಕ ಸೂಕ್ಷ್ಮ ಸಂವೇದನೆಗಳೂ ಇರುವುದು ಮುಖ್ಯವಾಗುತ್ತದೆ.

ಹಾಗಾಗಿ, ಸಮ್ಮೇಳನಾಧ್ಯಕ್ಷ ಸ್ಥಾನಕ್ಕೆ ಸಾಹಿತ್ಯೇತರರನ್ನು ತಂದು ಕೂರಿಸುವುದು ಸರಿಯಲ್ಲ. ಮಹಾರಾಷ್ಟ್ರದ ಸಾಹಿತ್ಯ ಸಮ್ಮೇಳನಗಳಲ್ಲಿ ರಾಜಕಾರಣಿಗಳು, ಅಧಿಕಾರಿಗಳಿಗೆ ವೇದಿಕೆ ಏರಲೂ ಅವಕಾಶ ಇರುವುದಿಲ್ಲ. ಕನ್ನಡದ ಮಟ್ಟಿಗೆ ಈ ಪರಂಪರೆಯನ್ನು ಅನುಸರಿಸಲಾಗಿಲ್ಲ. ಕನಿಷ್ಠ ಸಾಹಿತ್ಯಕ ಜವಾಬ್ದಾರಿಯ ದೃಷ್ಟಿಯಿಂದಲಾದರೂ ಸಮ್ಮೇಳನಾಧ್ಯಕ್ಷರನ್ನು ಸಾಹಿತ್ಯಲೋಕದಿಂದಲೇ ಆಯ್ಕೆ ಮಾಡುವುದು ಸೂಕ್ತ. ಮಂಡ್ಯ ಸಮ್ಮೇಳನಕ್ಕೆ ಮಹಿಳಾ ಸಾಹಿತಿಯನ್ನೇ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕಿರುವುದು ನಮ್ಮ ನೈತಿಕ ಕರ್ತವ್ಯವೂ ಹೌದು.

ವಾಚಕರ ವಾಣಿ

ಈಗಾಗಲೇ ತಳಕಂಡಿದ್ದಾಗಿದೆ!

ಜಾಮೀನಿನ ಮೇಲೆ ಹೊರಬಂದಿರುವ ಗೌರಿ ಲಂಕೇಶ್ ಹತ್ಯೆ ಆರೋಪಿಗಳನ್ನು ವಿಜಯಪುರದಲ್ಲಿ ಕೆಲವು ಹಿಂದೂ ಸಂಘಟನೆಗಳ ಮುಖಂಡರು ಅದ್ದೂರಿಯಾಗಿ ಸ್ವಾಗತಿಸಿರುವುದಕ್ಕೆ ಜಿ.ಎಂ.ರಾವ್ ಎಂಬುವರು ‘ಅವಿವೇಕದ ನಡೆ. ನಾವು ಪ್ರತಿದಿನವೂ ಇನ್ನಷ್ಟು ಕುಸಿಯುತ್ತಿದ್ದೇವೆ, ಅಲ್ಲವೇ?!’ ಎಂದು ಪ್ರತಿಕ್ರಿಯಿಸಿದ್ದಾರೆ (ಕಿಡಿನುಡಿ, ಅ. 14). ಗಾಂಧಿಯಂಥ ಗಾಂಧಿಯನ್ನೇ ದುರುಳನೊಬ್ಬ ಕೊಂದುಹಾಕಿದ ಮತ್ತು ಈ ಗಾಂಧಿ ಹಂತಕನನ್ನೇ ದೇಶಭಕ್ತನೆಂದು ವಿಜೃಂಭಿಸುವವರ ಮಧ್ಯೆಯೇ ನಾವಿಂದು ಉಸಿರಾಡಬೇಕಾದ ಅಸಹಾಯಕ ಸ್ಥಿತಿಯಲ್ಲಿ ದಿನ ದೂಡುತ್ತಿದ್ದೇವೆ. ಈಗಾಗಲೇ ಬೌದ್ಧಿಕವಾಗಿ ತಳಮುಟ್ಟಿರುವಾಗ, ಆ ದಿಸೆಯಲ್ಲಿ ಇನ್ನಷ್ಟು ಕುಸಿಯುವ ಸಂಭವವೇ ಇಲ್ಲವೆಂದು ಹೇಳಬಹುದು.

ಆನಂದ ರಾಮತೀರ್ಥ, ಜಮಖಂಡಿ

ಕಲೆ, ಸಂಸ್ಕೃತಿ ಅನಾವರಣ

ದಸರಾ ಜಂಬೂ ಸವಾರಿಯನ್ನು ನೇರ ಪ್ರಸಾರದಲ್ಲಿ ತೋರಿಸಿದ ಬೆಂಗಳೂರು ದೂರದರ್ಶನದ ಚಂದನ ವಾಹಿನಿಯು ಕೋಟ್ಯಂತರ ಜನರ ಮನಗೆದ್ದಿದೆ. ಹಿಂದಿ, ಇಂಗ್ಲಿಷ್, ಕನ್ನಡ ಭಾಷೆಗಳಲ್ಲಿ ವೀಕ್ಷಕ ವಿವರಣೆಯನ್ನು ನೀಡಲಾಯಿತು. ಮೆರವಣಿಗೆಯಲ್ಲಿ ಸಾಗಿದ 2,000 ಮಂದಿ ಕಲಾವಿದರು, 140 ಕಲಾ ತಂಡಗಳು ಹಾಗೂ 52 ಸ್ತಬ್ಧಚಿತ್ರಗಳ ವಿವರಣೆ ಸಹಿತ ಕನ್ನಡ ನಾಡಿನ ಕಲೆ, ಸಂಸ್ಕೃತಿಯನ್ನು ಅನಾವರಣಗೊಳಿಸಿದ ವೀಕ್ಷಕ ವಿವರಣೆಗಾರರು ನಾಡಿನ ಜನಮನವನ್ನು ಗೆದ್ದಿದ್ದಾರೆ. ಇದಕ್ಕಾಗಿ ಚಂದನ ವಾಹಿನಿ ಅಭಿನಂದನಾರ್ಹ.

ಗಂಗಾಧರ ವಿ., ಚಾಮರಾಜನಗರ

ರಾಜಕಾರಣಿಗಳ ಹಸ್ತಕ್ಷೇಪ ಸಲ್ಲ

ಹುಬ್ಬಳ್ಳಿ ಗಲಭೆ ಪ್ರಕರಣವನ್ನು ಸರ್ಕಾರ ವಾಪಸ್ ಪಡೆಯಲು ತೀರ್ಮಾನಿಸಿರುವ ವಿಷಯದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಯ ಸಮರ್ಥನೆ ಮತ್ತು ವಿರೋಧವು ‘ಎತ್ತು ಏರಿಗೆ ಎಳೆಯಿತು ಕೋಣ ನೀರಿಗೆ ಎಳೆಯಿತು’ ಎಂಬ ಗಾದೆ ಮಾತಿಗೆ ತಾಳೆಯಾದಂತೆ ಕಾಣುತ್ತಿದೆ. ಏಕೆಂದರೆ ಈ ಎರಡೂ ಪಕ್ಷಗಳು ಮತ ಗಳಿಸಲು ಜಾತಿ, ಸಮುದಾಯಗಳ ಓಲೈಕೆ ಮಾಡುವ ವಿಷಯ ಅಷ್ಟೇನೂ ಗುಟ್ಟಾಗಿ ಉಳಿದಿಲ್ಲ. ಆದರೂ ರಾಜಕೀಯ ಪಕ್ಷಗಳು ಇಂತಹ ವಿಷಯವನ್ನು ವೈಭವೀಕರಿಸಿ ಜನರ ಸೌಹಾರ್ದ ಹಾಳು ಮಾಡುವುದಂತೂ ನಿಜ.

ರಾಜ್ಯದಲ್ಲಿ ಇರುವ ಸಮಸ್ಯೆಗಳ ಬಗ್ಗೆ ಗಮನಹರಿಸದ ಸರ್ಕಾರ ಹಾಗೂ ವಿರೋಧ ಪಕ್ಷಗಳು ಅಧಿಕಾರದ ದುರಾಸೆಗೆ ಪ್ರಜಾಪ್ರಭುತ್ವದ ವಿರೋಧಿಗಳಂತೆ ನಡೆದುಕೊಳ್ಳುತ್ತಿವೆ. ಇಂತಹ ಪ್ರಕರಣಗಳ ವಿಚಾರದಲ್ಲಿ ರಾಜಕಾರಣಿಗಳು ಹಸ್ತಕ್ಷೇಪ ಮಾಡದೆ, ಪೊಲೀಸ್ ಹಾಗೂ ಕಾನೂನು ವ್ಯವಸ್ಥೆ ಮುಕ್ತವಾಗಿ ಕೆಲಸ ಮಾಡಲು ಬಿಡಬೇಕು. ಆಗ ರಾಜ್ಯದಲ್ಲಿ ಕಾನೂನು– ಸುವ್ಯವಸ್ಥೆ ಸರಿಯಾಗಿ ಇದ್ದು, ಜನ ನೆಮ್ಮದಿಯಿಂದ ಜೀವಿಸಲು ಸಾಧ್ಯವಾಗುತ್ತದೆ.

ಹುಸೇನಬಾಷಾ, ತಳೇವಾಡ, ಹುಬ್ಬಳ್ಳಿ

ಕನ್ನಡದ ಹಿತಕ್ಕೆ ನೆರವಾಗಲಿ

ಸಾಹಿತ್ಯ ಸಮ್ಮೇಳನಾಧ್ಯಕ್ಷರ ಆಯ್ಕೆಯ ವಿಷಯವು ರಾಜಕೀಯ ಗುಂಗಿನಿಂದ ಕೂಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಅ. 13). ಕನ್ನಡ ಸಾಹಿತ್ಯ ಪರಿಷತ್ತಿನ ಹೆಸರಿನಲ್ಲೇ ವ್ಯಾಪ್ತಿ, ಮಿತಿಗಳ ಸೂಚನೆ ಇದೆ. ಇದು ‘ಕರ್ನಾಟಕ’ ಅಲ್ಲ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಎಂದಾಗಲೂ ಅದು ಬಹುಮಟ್ಟಿಗೆ ರಾಜ್ಯ ಮಟ್ಟದ ಸಮಾವೇಶ. ಹೊರಗಿನಿಂದ ಬರುವವರು ಕಡಿಮೆ. ಪರಿಷತ್ತು ಕನ್ನಡದ, ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯೇ- ರಾಜ್ಯ ಸರ್ಕಾರ ಹಾಗೆ ಮಾನ್ಯ ಮಾಡಿದೆ. ರಾಜ್ಯದ ಬಜೆಟ್‌ನಿಂದ ಪರಿಷತ್ತಿಗೆ, ಸಮ್ಮೇಳನಕ್ಕೆ ಹಣ ನೀಡಲಾಗುತ್ತಿರುವುದರಿಂದ ಜವಾಬ್ದಾರಿ, ಉತ್ತರದಾಯಿತ್ವ ಇರಬೇಕಾಗುತ್ತದೆ. ಪರಿಷತ್ತು ಯಾವ ರೀತಿ ರೂಪುಗೊಳ್ಳಬೇಕು ಎಂದು ನ್ಯಾಯಮೂರ್ತಿ ಪಿ.ಕೆ.ಶ್ಯಾಮಸುಂದರ್ ಆಯೋಗವು 1987ರಲ್ಲೇ ಸಲಹೆಗಳನ್ನು ನೀಡಿತ್ತು. ಈಗ ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಸರಿಯಾಗಿ ಕಾರ್ಯನಿರ್ವಹಿಸುತ್ತಿರಬಹುದೇನೊ.

ಸಮ್ಮೇಳನದ ಆಯೋಜನೆಯಲ್ಲಿ ಜಿಲ್ಲಾ ಸಾಹಿತ್ಯ ಪರಿಷತ್ತಿನ ಪಾತ್ರವೂ ಇರುತ್ತದೆ. ಅದು ವ್ಯಕ್ತಿಕೇಂದ್ರಿತ ಆಗಿರಬಾರದು. ಇನ್ನು ಸಾಹಿತ್ಯೇತರ ವಿಷಯಗಳಿಗೆ ಯಾವ ಸ್ಥಾನ, ಆದ್ಯತೆ ಇರಬೇಕು? ಆಡಳಿತದಲ್ಲಿ ಕನ್ನಡ, ಪುಸ್ತಕೋದ್ಯಮ- ಇಂತಹ ವಿಷಯಗಳು ಆನುಷಂಗಿಕ. ಗಡಿ, ನೀರು, ಕೈಗಾರಿಕೆ, ಕೃಷಿ, ನಿರುದ್ಯೋಗ- ಹೀಗೆ ಎಲ್ಲ ಬಗೆಯ ಸಮಸ್ಯೆಗಳನ್ನೂ ಪ್ರಸ್ತಾಪಿಸಿ, ಠರಾವುಗಳನ್ನೂ ಕೈಗೊಂಡು ಏನನ್ನೂ ಸಾಧಿಸದ ಸ್ಥಿತಿ ಇದೆ. ಒಟ್ಟಿನಲ್ಲಿ ಸಮ್ಮೇಳನದ ಅಧ್ಯಕ್ಷರು ಸಾಹಿತಿಯಾಗಿರಬೇಕೋ ಸಾಹಿತ್ಯೇತರ ಸಾಧಕರಾಗಿರಬೇಕೋ ಎನ್ನುವುದು ಅಷ್ಟು ಮುಖ್ಯ ಅಲ್ಲ. ಸಮ್ಮೇಳನ ಅರ್ಥಪೂರ್ಣವಾಗಿ ನಡೆಯಬೇಕು, ಅದರಿಂದ ಕನ್ನಡದ ಹಿತಕ್ಕೆ ಸ್ವಲ್ಪವಾದರೂ ಸಹಾಯವಾಗಬೇಕು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಸ್ಫೂರ್ತಿ ತಂದವರು

ಐದನೇ ಸಲವೂ ನಿರಾಯಾಸವಾಗಿ
ಅಂಬಾರಿಯ ಹೊತ್ತು ಮೆರೆದ
ಕ್ಯಾಪ್ಟನ್ ಅಭಿಮನ್ಯು,
ಸ್ಫೂರ್ತಿ ಇರಬಹುದೇನೊ
ಸಿಂಗಾರ- ಬಂಗಾರವಾಗಿದ್ದ
ಅವರಿಬ್ಬರು ಗೆಳತಿಯರು
ಅತ್ತ ಲಕ್ಷ್ಮಿ- ಇತ್ತ ಹಿರಣ್ಯಾ!

ಎಸ್.ಭಗವತಿ, ಗೊರೂರು

ಪದವಿ ಪರೀಕ್ಷೆಗೂ ಇರಲಿ ವೆಬ್‌ಕಾಸ್ಟ್

ಹಿಂದಿನ ಶೈಕ್ಷಣಿಕ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವೆಬ್‌ಕಾಸ್ಟ್ ವ್ಯವಸ್ಥೆ ಅಳವಡಿಸುವ ಮೂಲಕ ನಕಲು ತಡೆಗೆ ದಿಟ್ಟ ಹೆಜ್ಜೆ ಇಡಲಾಗಿತ್ತು. ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಘಟಕ ಪರೀಕ್ಷೆ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯನ್ನೂ ವೆಬ್‌ಕಾಸ್ಟ್ ಕಣ್ಗಾವಲಿನಲ್ಲಿ ನಡೆಸಲು ತೀರ್ಮಾನಿಸಿರುವುದು ಸ್ವಾಗತಾರ್ಹ. ಇದೇ ಮಾದರಿಯಲ್ಲಿಯೇ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಪದವಿ ಪರೀಕ್ಷೆಗಳೂ ವೆಬ್‌ಕಾಸ್ಟ್‌ನ ಅಡಿಯಲ್ಲಿಯೇ ನಡೆಯುವಂತೆ ಆಗಬೇಕು.

ಪ್ರಸ್ತುತ ಪದವಿ ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಎಂಬುದು ದಾಖಲೆಯಲ್ಲಿ ಮಾತ್ರ ಇದೆ. ಪದವಿ ಮುಗಿಸಿ ಉದ್ಯೋಗ ಪಡೆಯುವ ವಿದ್ಯಾರ್ಥಿಗಳಿಗೆ ಆ ಕಾರ್ಯಕ್ಕೆ ಅಗತ್ಯವಾದ ಕೌಶಲ, ನಿಯತ್ತು, ಪರಿಶ್ರಮದ ಬೆಲೆ ಅರ್ಥವಾಗಬೇಕಾದರೆ, ಪರೀಕ್ಷೆಯಲ್ಲಿ ಇಂತಹ ಕಣ್ಗಾವಲಿನ ವ್ಯವಸ್ಥೆ ಇರಬೇಕಾಗುತ್ತದೆ.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸುಪ್ರೀಂ ಕೋರ್ಟ್ ಒಳ ಮೀಸಲಾತಿಯ ಬಗ್ಗೆ ತೀರ್ಪು ನೀಡಿದ ನಂತರ ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಮತ್ತು ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ಯಾವ ನಿಲುವು ಹೊಂದಿವೆ ಎನ್ನುವ ಬಗ್ಗೆ ಪ್ರಶ್ನೆಗಳು ಕೇಳಿಬರುತ್ತಲೇ ಇವೆ. ಕಾಂಗ್ರೆಸ್ ಒಳ ಮೀಸಲಾತಿಯ ಅನುಷ್ಠಾನದ ಬಗ್ಗೆ ಖಚಿತ ನಿಲುವನ್ನು ಇನ್ನೂ ಪ್ರಕಟಿಸಿಲ್ಲ. ಬೊಮ್ಮಾಯಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಘೋಷಿಸಿದಂತೆ ಮಾಧುಸ್ವಾಮಿ ವರದಿ ಅನುಷ್ಠಾನ ಮಾಡಬೇಕು ಎನ್ನುವುದು ಬಿಜೆಪಿಯ ಒತ್ತಾಯ. ಜೆಡಿಎಸ್ ಈ ವಿಚಾರದಲ್ಲಿ ಭಿನ್ನ ನಿಲುವನ್ನು ಹೊಂದಿದ್ದು, ಸರ್ಕಾರ ಒಳಮೀಸಲಾತಿಯ ವಿಚಾರದಲ್ಲಿ ಎಚ್ಚರಿಕೆಯಿಂದ ಮುಂದುವರಿಯಬೇಕು ಎಂದು ಹೇಳುತ್ತಿದೆ

ಒಳ ಮೀಸಲಿನ ಒಡಲಾಳ

‘ತುಳಿತಕ್ಕೆ ಒಳಗಾದವರ ಹಕ್ಕು: ತಕ್ಷಣ ಜಾರಿಗೆ ಬರಲಿ’

● ಆರ್.ಧರ್ಮಸೇನ

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿಗೆ ರಾಜ್ಯ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಸಂವಿಧಾನದ ಆಶಯಗಳಿಗೆ ಯಾವುದೇ ಧಕ್ಕೆ ಆಗದಂತೆ ಒಳ ಮೀಸಲಾತಿ ಪ್ರಮಾಣ ನಿಗದಿಪಡಿಸಬೇಕು. ಎಲ್ಲ ವರ್ಗಗಳಿಗೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮಾನತೆಗಾಗಿ ಒಳ ಮೀಸಲಾತಿ ನೀಡಲೇಬೇಕಿದೆ. ಈ ವಿಚಾರದಲ್ಲಿ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗ ನೀಡಿರುವ ವರದಿಯನ್ನು ಯಥಾವತ್ ಅನುಷ್ಠಾನಕ್ಕೆ ತರಬೇಕು. ಇದಕ್ಕೆ ಎಲ್ಲ ರಾಜಕೀಯ ಪಕ್ಷಗಳು ಪಕ್ಷಾತೀತವಾಗಿ ಸಹಮತ ವ್ಯಕ್ತಪಡಿಸಬೇಕು.

ಒಳ ಮೀಸಲಾತಿ ಹಕ್ಕಿಗಾಗಿ ಎಡಗೈ (ಮಾದಿಗ, ಆದಿ ಜಾಂಬವ) ಸಮುದಾಯದವರು ನೂರಾರು ಪ್ರತಿಭಟನೆಗಳನ್ನು ನಡೆಸಿದ್ದಾರೆ. ಈ ರಾಜ್ಯದಲ್ಲಿ ಅತೀ ಹೆಚ್ಚು ಪ್ರತಿಭಟನೆಗಳು ಈ ವಿಚಾರಕ್ಕಾಗಿಯೇ ನಡೆದಿವೆ. ಪ್ರತಿ ಹಳ್ಳಿಯಲ್ಲೂ ಪ್ರತಿಭಟನೆ ನಡೆದಿದೆ, ನಡೆಯುತ್ತಲೇ ಇದೆ. ಆದರೂ ಈ ವಿಚಾರದಲ್ಲಿ ಸ್ಪಷ್ಟವಾದ ನಿಲುವು–ತೀರ್ಮಾನ ಆಗಿಲ್ಲ. ನಮ್ಮ ತಂದೆ ಎನ್.ರಾಚಯ್ಯ ಅವರು ಒಳ ಮೀಸಲಾತಿ ಜಾರಿಗಾಗಿ ಓಡಾಡಿದ್ದರು. ಸ್ಪೃಶ್ಯರನ್ನೂ ನಮ್ಮೊಂದಿಗೆ (ಅಸ್ಪೃಶ್ಯ) ಮೀಸಲಾತಿಗೆ ಸೇರಿಸಲಾಗಿದೆ. ಅಂಬೇಡ್ಕರ್ ಅವರು ಹೇಳಿದ್ದ ಆರು ಜಾತಿಗಳ ಜೊತೆ ಇನ್ನೂ 95 ಜಾತಿಗಳನ್ನು ಪಟ್ಟಿಗೆ ಸೇರಿಸಲಾಗಿದೆ. ಈ ಎಲ್ಲ ಜಾತಿಗಳಿಗೂ ಸಮಾನ ಮೀಸಲಾತಿ ಕಲ್ಪಿಸಲಾಗಿದೆ. ‘ಒಳ ಮೀಸಲಾತಿ’ ಮೂಲಕ ನೀವು (ಸರ್ಕಾರ) ಯಾವ ವರ್ಗಕ್ಕೆ ಎಷ್ಟು ಪ್ರಮಾಣ ಹಂಚಿಕೆ ಮಾಡುತ್ತೀರೋ ಗೊತ್ತಿಲ್ಲ. ನಾವು (ಎಡಗೈ ಸಮುದಾಯ) ತುಳಿತಕ್ಕೆ ಒಳಗಾದ ಸಮುದಾಯದವರು. ಜನಸಂಖ್ಯೆಗೆ ಅನುಗುಣವಾಗಿ ಒಳಮೀಸಲಾತಿ ಕೊಡಬೇಕು. ಕೆನೆಪದರದಡಿ ಮೀಸಲಾತಿಯನ್ನು ಪರಿಷ್ಕರಿಸಿ, ಹೆಚ್ಚು ತುಳಿತಕ್ಕೆ ಒಳಗಾದವರನ್ನು ಮೇಲಕ್ಕೆತ್ತಬೇಕು.

ನಾನು ವಿಧಾನ ಪರಿಷತ್ ಸದಸ್ಯನಾಗಿದ್ದಾಗ ಒಳ ಮೀಸಲಾತಿ ವಿಚಾರದಲ್ಲಿ ಸಿದ್ದರಾಮಯ್ಯ ಮತ್ತು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನಡೆಸಿದ್ದ ಸಭೆಗಳಲ್ಲಿ ಭಾಗವಹಿಸಿದ್ದೆ. ಸದಾಶಿವ ಆಯೋಗದ ವರದಿಯಲ್ಲಿ ಕೆಲವು ಅಂಶಗಳನ್ನು ‘ಪೆನ್ಸಿಲ್’ನಲ್ಲಿ ಬರೆಯಲಾಗಿದೆ ಎಂಬ ಅಂಶದ ವಿಚಾರದಲ್ಲಿನ ವಾದ–ಗೊಂದಲ ಇನ್ನೂ ಬಗೆಹರಿದಿಲ್ಲ. ಈ ನಡುವೆ, ವರದಿ ಜಾರಿ ಕುರಿತು ಕಾಂಗ್ರೆಸ್‌ನಿಂದ ಸ್ಪಷ್ಟ ನಿಲುವು ಹೊರಬಾರದ ಕಾರಣ ಮಾದಿಗ ಸಮುದಾಯವು ದೊಡ್ಡ ಸಂಖ್ಯೆಯಲ್ಲಿ ಬಿಜೆಪಿ ಕಡೆ ವಾಲಿದೆ. ಆದರೆ, ಬಿಜೆಪಿ ಅವಧಿಯಲ್ಲಿ ಸಚಿವರಾಗಿದ್ದ ಜೆ.ಸಿ.ಮಾಧುಸ್ವಾಮಿ ನೇತೃತ್ವದ ಸಚಿವ ಸಂಪುಟ ಉಪ ಸಮಿತಿಯು ಈ ವರದಿ ಅಪ್ರಸ್ತುತ ಎಂದು ತಿರಸ್ಕರಿಸಿ, ಕೇಂದ್ರಕ್ಕೆ ತನ್ನದೇ ಶಿಫಾರಸು ಮಾಡಿದೆ. ಆದರೆ, ಕೇಂದ್ರ ಸರ್ಕಾರ ಕೂಡಾ ಯಾವುದೇ ನಿಲುವು ವ್ಯಕ್ತಪಡಿಸಿಲ್ಲ. ಈಗ ರಾಜಕೀಯ ಬದಲಾಗಿದೆ. ಒಳ ಮೀಸಲಾತಿ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಇತ್ತೀಚೆಗೆ ತೀರ್ಪು ನೀಡಿರುವುದರಿಂದ, ರಾಜಕೀಯ ಭಿನ್ನಾಭಿಪ್ರಾಯಗಳು ಏನೇ ಇದ್ದರೂ ರಾಜ್ಯ ಸರ್ಕಾರ ಈ ವಿಚಾರದಲ್ಲಿ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳಬೇಕು.

ಅಧಿಕಾರ ಚುಕ್ಕಾಣಿ ಹಿಡಿದ ನಂತರದ ಮೊದಲ ಸಚಿವ ಸಂಪುಟ ಸಭೆಯಲ್ಲಿಯೇ ಸದಾಶಿವ ಆಯೋಗದ ವರದಿ ಜಾರಿ ವಿಚಾರದಲ್ಲಿ ತೀರ್ಮಾನ ಕೈಗೊಳ್ಳುವುದಾಗಿ ಪಕ್ಷ ಭರವಸೆ ನೀಡಿತ್ತು. ಆದರೆ, ವರ್ಷ ಕಳೆದರೂ ಯಾವುದೂ ಆಗಿಲ್ಲ. ಈ ಕಾರಣಕ್ಕೆ ಎಡಗೈ ಸಮುದಾಯ ಮತ್ತೆ ಮತ್ತೆ ಬೀದಿ ಹೋರಾಟ ನಡೆಸುವ ಅನಿವಾರ್ಯ ಎದುರಾಗಿದೆ. ಸರ್ಕಾರ ಇದಕ್ಕೆ ಅವಕಾಶ ನೀಡಬಾರದು. ತುಳಿತಕ್ಕೆ ಒಳಗಾದ, ಅವಕಾಶ ವಂಚಿತ, ಶೋಷಿತ ಸಮುದಾಯಕ್ಕೆ ನ್ಯಾಯ ಕೊಡುವ ಕೆಲಸವನ್ನು ತಕ್ಷಣ ಮಾಡಬೇಕು. ರಾಜ್ಯದಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ನೆಲ– ಜಲ, ಸಂಪತ್ತು–ಸವಲತ್ತು, ಶಿಕ್ಷಣ– ಉದ್ಯೋಗ ಎಲ್ಲ ವರ್ಗಗಳಿಗೂ ಹಂಚಿಕೆಯಾಗುವಂತೆ ನೋಡಿಕೊಳ್ಳಬೇಕು. ಈ ವಿಚಾರವನ್ನು ವರ್ಷಾನುಗಟ್ಟಲೆ ತಳ್ಳಿಕೊಂಡು ಹೋಗಬಾರದು.

ಲೇಖಕ: ಕೆಪಿಸಿಸಿ ಎಸ್‌ಸಿ ಘಟಕದ ಅಧ್ಯಕ್ಷ

‘ರಾಜ್ಯ ಕಾಂಗ್ರೆಸ್ ಸರ್ಕಾರ ಎಚ್ಚರಿಕೆಯಿಂದ ಹೆಜ್ಜೆ ಇಡಲಿ’

● ಎಚ್.ಕೆ. ಕುಮಾರಸ್ವಾಮಿ

ದಲಿತರೂ ಸೇರಿದಂತೆ ಅವಕಾಶ ವಂಚಿತ ಪರಿಶಿಷ್ಟ ಸಮುದಾಯಗಳಿಗೆ ಒಳ ಮೀಸಲಾತಿ ನೀಡಬೇಕು ಎನ್ನುವುದಕ್ಕೆ ನಮ್ಮ ಸಹಮತವಿದೆ. ಒಳ ಮೀಸಲಾತಿ ಜಾರಿಗೊಳಿಸುವ ಸಂಪೂರ್ಣ ಅಧಿಕಾರ ಆಯಾ ರಾಜ್ಯಗಳಿಗೆ ಇದೆ ಎನ್ನುವುದನ್ನು ಸುಪ್ರೀಂ ಕೋರ್ಟ್ ಕೂಡ ಹೇಳಿದೆ. ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ ರಾಜ್ಯ ಸರ್ಕಾರಗಳು ಒಳ ಮೀಸಲಾತಿ ಜಾರಿ ಮಾಡಲು ಕೇಂದ್ರದ ಅನುಮತಿ ಪಡೆಯುವ ಅಗತ್ಯವಿಲ್ಲ. ಹಾಗಾಗಿ, ಹಾದಿ ಸುಗಮವಾಗಿದೆ.

ಒಳ ಮೀಸಲಾತಿ ಜಾರಿಗೆ ಇದ್ದ ಎಲ್ಲ ಅಡೆತಡೆಗಳೂ ಈಗ ನಿವಾರಣೆಯಾಗಿದ್ದರೂ, ಒಳಮೀಸಲಾತಿ ನೀಡುವ ಮೊದಲು ಇಡೀ ರಾಜ್ಯದಲ್ಲಿನ ಪರಿಶಿಷ್ಟ ಸಮುದಾಯದಲ್ಲಿರುವ ಎಲ್ಲ ಜಾತಿಯವರ ಜನಸಂಖ್ಯೆಯ ವಿವರಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಬೇಕಿದೆ. ಜಾತಿವಾರು ಜನಸಂಖ್ಯೆಯನ್ನು ಖಚಿತಪಡಿಸಿಕೊಳ್ಳದೇ ನೀಡುವ ಒಳ ಮೀಸಲಾತಿ ಇನ್ನಷ್ಟು ಸಮಸ್ಯೆಗಳನ್ನು ಹುಟ್ಟುಹಾಕುವ ಸಾಧ್ಯತೆ ಇರುತ್ತದೆ. ಹಾಗಾಗಿ, ರಾಜ್ಯ ಸರ್ಕಾರ ಅತ್ಯಂತ ಎಚ್ಚರಿಕೆಯಿಂದ ಹೆಜ್ಜೆಗಳನ್ನು ಇಡಬೇಕು. ರಾಜ್ಯದಲ್ಲಿ 101 ಪರಿಶಿಷ್ಟ ಜಾತಿಗಳಿವೆ. ಎಲ್ಲ ಜಾತಿಗಳಿಗೂ ಸೂಕ್ತ ನ್ಯಾಯ ಸಿಗುವಂತೆ ಕ್ರಮ ಕೈಗೊಳ್ಳಬೇಕು.

ಯಾವುದೇ ಒಂದು ಜಾತಿ ಮೀಸಲಾತಿ ಸೌಲಭ್ಯ ಬಳಸಿಕೊಳ್ಳುವುದರಲ್ಲಿ ಎಷ್ಟು ಪ್ರಮಾಣದಲ್ಲಿ ಹಿಂದುಳಿದಿದೆ, ಅದಕ್ಕೆ ಕಾರಣವಾದ ಅಂಶಗಳು, ಜನಸಂಖ್ಯೆ ಪ್ರಮಾಣ, ಶೈಕ್ಷಣಿಕ ಮಟ್ಟ, ಸರ್ಕಾರಿ ಉದ್ಯೋಗ ಪಡೆದವರ ಸಂಖ್ಯೆಯನ್ನು ವೈಜ್ಞಾನಿಕ ಸಮೀಕ್ಷೆಯ ಆಧಾರದಲ್ಲಿ ಸಂಗ್ರಹಿಸಲು ರಾಜ್ಯ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು.

ಒಳ ಮೀಸಲಾತಿ ಕುರಿತು ಅಧ್ಯಯನ ನಡೆಸಲು ರಚಿಸಿದ್ದ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯಾಗಲಿ, ರಾಜ್ಯ ಸರ್ಕಾರ ಹಿಂದೆ ಕೈಗೊಂಡ ಜಾತಿ ಗಣತಿಯಾಗಲಿ ಇಂದು ಅಪ್ರಸ್ತುತವೆನಿಸುತ್ತವೆ. ದಶಕದ ಹಿಂದೆ ಮಾಡಿದ ಸದಾಶಿವ ಆಯೋಗದ ಶಿಫಾರಸು ಈಗ ಮೌಲ್ಯ ಕಳೆದುಕೊಂಡಿದೆ. ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿದ್ದ ಜಾತಿ ಗಣತಿಯಲ್ಲಿನ ಅಂಕಿಅಂಶಗಳು ಈಗ ಹಳತಾಗಿದ್ದು, ಈಗಿನ ಸಂದರ್ಭಕ್ಕೆ ಸೂಕ್ತವೆನಿಸದು.

ರಾಜ್ಯ ಸರ್ಕಾರ ಜಾತಿಗಳ ನಿಖರ ಅಂಕಿಅಂಶಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಬೇಕು. ನಂತರ ಒಳ ಮೀಸಲಾತಿಯ ಕುರಿತು ಖಚಿತ ನಿರ್ಧಾರ ತೆಗೆದುಕೊಳ್ಳಬೇಕು. ಹಿಂದೆ ಆಡಳಿತದಲ್ಲಿದ್ದ ಬಿಜೆಪಿ ಚುನಾವಣಾ ಸಮಯದಲ್ಲಿ ರಾಜಕೀಯ ಕಾರಣಗಳಿಗಾಗಿ ತರಾತುರಿಯಲ್ಲಿ ತೆಗೆದುಕೊಂಡ ನಿರ್ಧಾರಗಳಿಂದ ಆಗಿದ್ದ ಪರಿಣಾಮಗಳನ್ನೂ ಕಾಂಗ್ರೆಸ್ ಸರ್ಕಾರ ಅರಿತುಕೊಳ್ಳಬೇಕು.

ಲೇಖಕ: ಜೆಡಿಎಸ್ ರಾಜ್ಯ ಘಟಕದ ಮಾಜಿ ಅಧ್ಯಕ್ಷ

‘ಜನಾಂದೋಲನ ರೂಪಿಸುತ್ತೇವೆ’

ಒಳ ಮೀಸಲಾತಿ ವಿಚಾರದಲ್ಲಿ ನಮಗೆ ಸ್ಪಷ್ಟತೆ ಇದೆ. ಪಕ್ಷದಲ್ಲಿ ಎಲ್ಲ ನಾಯಕರ ಸಹಮತ ಇದೆ. ಬಿ.ಎಸ್.ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಸರ್ಕಾರಗಳು ತೆಗೆದುಕೊಂಡ ನಿರ್ಣಯವನ್ನು ಕಾಂಗ್ರೆಸ್ ಸರ್ಕಾರ ಜಾರಿ ಮಾಡಲಿ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಹಾಗೂ ಹಿಂದುಳಿದವರಿಗೆ ನ್ಯಾಯೋಚಿತವಾಗಿ ಮೀಸಲಾತಿ ವರ್ಗೀಕರಣ ಮಾಡಲಾಗಿದೆ. ಬೊಮ್ಮಾಯಿ ಸರ್ಕಾರ ಕೇಂದ್ರಕ್ಕೆ ನೀಡಿದ ಶಿಫಾರಸನ್ನು ಯಥಾವತ್ತಾಗಿ ಜಾರಿಗೊಳಿಸಬೇಕು. ಈ ವಿಷಯದ ಕುರಿತಾಗಿ ರಾಜ್ಯವ್ಯಾಪಿ ಜನರಲ್ಲಿ ಅರಿವು ಮೂಡಿಸುವ ಜನಾಂದೋಲನ ರೂಪಿಸುತ್ತೇವೆ. ಅದಕ್ಕೂ ಮುನ್ನ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ನಮ್ಮ ಸರ್ಕಾರದ ನಿರ್ಧಾರವನ್ನು ಜಾರಿ ಮಾಡುವಂತೆ ಆಗ್ರಹಿಸುತ್ತೇವೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ಬಿಜೆಪಿ ಸರ್ಕಾರದ ತೀರ್ಮಾನ ಜಾರಿಯಾಗಲಿ’

● ಸಿಮೆಂಟ್ ಮಂಜು

ಒಳ ಮೀಸಲಾತಿಗೆ ಸಂಬಂಧಿಸಿದಂತೆ ಬಸವರಾಜ ಬೊಮ್ಮಾಯಿ ನೇತೃತ್ವದ ನಮ್ಮ ಸರ್ಕಾರ ಅತ್ಯಂತ ಸಮರ್ಪಕವಾದ ನಿರ್ಣಯ ಕೈಗೊಂಡಿತ್ತು. ಈಗಿನ ರಾಜ್ಯ ಸರ್ಕಾರವೂ ಅದನ್ನೇ ಯಥಾವತ್ತಾಗಿ ಜಾರಿ ಮಾಡಬೇಕು ಎನ್ನುವುದು ನನ್ನ ವೈಯಕ್ತಿಕ ಮತ್ತು ಪಕ್ಷದ ನಿಲುವೂ ಆಗಿದೆ. ನಮ್ಮ ಸರ್ಕಾರವು ಯಾವ ಸಮುದಾಯಕ್ಕೂ ಅನ್ಯಾಯವಾಗದಂತೆ ಅಳೆದು ತೂಗಿ ಮೀಸಲಾತಿಯನ್ನು ಹಂಚಿಕೆ ಮಾಡಿದೆ. ಇದಕ್ಕಿಂತ ಉತ್ತಮ ರೀತಿಯಲ್ಲಿ ಮೀಸಲಾತಿ ಹಂಚಿಕೆ ಮಾಡುವುದಕ್ಕೆ ಸಾಧ್ಯವಿಲ್ಲ.

ಪರಿಶಿಷ್ಟ ಜಾತಿಯ ಎಡಗೈ ಗುಂಪಿಗೆ ಶೇ 6, ಬಲಗೈ ಗುಂಪಿಗೆ ಶೇ 5.5, ಲಂಬಾಣಿ, ಕೊರಮ, ಕೊರಚ, ಭೋವಿಗಳಿಗೆ ಶೇ 4.5, ಈ ಮೇಲಿನ ಗುಂಪಿಗೆ ಸೇರದ ಜಾತಿಗಳಿಗೆ ಶೇ 1 ಸೇರಿದಂತೆ ಪರಿಶಿಷ್ಟ ಜಾತಿಗೆ ಶೇ 17ರಷ್ಟು ಮೀಸಲಾತಿ ನೀಡಲಾಗಿದೆ. ಹಿಂದುಳಿದ ವರ್ಗಗಳ ಪ್ರವರ್ಗ ‘2ಬಿ’ ಅಡಿಯಲ್ಲಿ ಮುಸ್ಲಿಂ ಸಮುದಾಯಕ್ಕೆ ನೀಡಲಾಗುತ್ತಿದ್ದ ಮೀಸಲಾತಿಯನ್ನು ರದ್ದು ಮಾಡಿ, ಅವರನ್ನು ಆರ್ಥಿಕವಾಗಿ ದುರ್ಬಲ ವರ್ಗಗಳ ಪಟ್ಟಿಗೆ ಸೇರಿಸಲಾಗಿತ್ತು. ಮುಸ್ಲಿಮರಿಗೆ ನೀಡುತ್ತಿದ್ದ ಶೇ 4ರಷ್ಟು ಮೀಸಲಾತಿಯನ್ನು ಒಕ್ಕಲಿಗರು, ಲಿಂಗಾಯತರು ಸೇರಿದಂತೆ ಹಲವು ಸಮುದಾಯಗಳಿಗೆ ಹಂಚಿಕೆ ಮಾಡಲಾಗಿದೆ. ಅದೇ ರೀತಿ, ಪ್ರವರ್ಗ 1ಕ್ಕೆ ಶೇ 4, ಪ್ರವರ್ಗ 2ಎಗೆ ಶೇ 15, ಪ್ರವರ್ಗ ಶೇ 2ಸಿಗೆ 6, ಪ್ರವರ್ಗ 2 ಡಿಗೆ ಶೇ 7 ಒಟ್ಟು ಶೇ 32 ರಷ್ಟು ಮೀಸಲಾತಿ ಮರು ಹಂಚಿಕೆ ಮಾಡಲಾಗಿದೆ.

ನ್ಯಾ.ಎ.ಜೆ.ಸದಾಶಿವ ಆಯೋಗದ ವರದಿಯ ಶಿಫಾರಸಿನ ಬದಲಿಗೆ, 2011ರ ಜನಗಣತಿಗೆ ಅನುಗುಣವಾಗಿ ಅಂದಿನ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅಧ್ಯಕ್ಷತೆಯ ಸಚಿವ ಸಂಪುಟ ಉಪಸಮಿತಿ ಮಾಡಿದ್ದ ಮೀಸಲಾತಿಯ ಮರುಹಂಚಿಕೆಗೆ ಸಂಪುಟ ಸಭೆ ಒಪ್ಪಿಗೆ ನೀಡಿತ್ತು. ಕೇಂದ್ರಕ್ಕೂ ಶಿಫಾರಸು ಮಾಡಿತ್ತು. ಸರ್ಕಾರ ಬದಲಾದ ಕಾರಣ ಅದು ಜಾರಿ ಆಗಿಲ್ಲ. ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಅದನ್ನು ಜಾರಿ ಮಾಡಬೇಕು ಎಂಬುದೇ ನಮ್ಮ ಆಗ್ರಹ.

ಲೇಖಕ: ಬಿಜೆಪಿ ರಾಜ್ಯ ಘಟಕದ ಎಸ್‌ಸಿ ಮೋರ್ಚಾ ಅಧ್ಯಕ್ಷ ಮತ್ತು ಶಾಸಕ

ಉಪೇಂದ್ರ ನಟನೆಯ ‘ಯುಐ’ ಡಿ.20ಕ್ಕೆ ತೆರೆಗೆ

ಉಪೇಂದ್ರ

‘ಉಪ್ಪಿ–2’ ಬಿಡುಗಡೆಯಾದ 9 ವರ್ಷಗಳ ಬಳಿಕ ನಟ ಉಪೇಂದ್ರ ನಟಿಸಿ, ನಿರ್ದೇಶಿಸಿರುವ ‘ಯುಐ’ ಸಿನಿಮಾ ಬಿಡುಗಡೆ ದಿನಾಂಕವನ್ನು ಚಿತ್ರತಂಡ ಘೋಷಿಸಿದೆ. ಡಿ.20ಕ್ಕೆ ‘ಯುಐ’ ಸಿನಿಮಾ ರಿಲೀಸ್ ಆಗಲಿದೆ.

ಅಕ್ಟೋಬರ್‌ನಲ್ಲೇ ‘ಯುಐ’ ಸಿನಿಮಾ ಬಿಡುಗಡೆಯಾಗುವುದು ಖಚಿತ ಎಂದು ಈ ಹಿಂದೆ ಚಿತ್ರದ ನಿರ್ಮಾಪಕ ಜಿ.ಮನೋಹರನ್ ತಿಳಿಸಿದ್ದರು. ಆದರೆ ಇದೀಗ ಬಿಡುಗಡೆಯನ್ನು ಮುಂದೂಡಲಾಗಿದೆ. ಈ ತಿಂಗಳಾಂತ್ಯದಲ್ಲಿ ಶ್ರೀಮುರಳಿ ನಟನೆಯ ‘ಬಘೀರ’ ಬಿಡುಗಡೆಯಾಗುತ್ತಿದ್ದು, ನವೆಂಬರ್ 15ರಂದು ಶಿವರಾಜ್‌ಕುಮಾರ್ ಅವರ ‘ಭೈರತಿ ರಣಗಲ್’ ಬಿಡುಗಡೆಯಾಗುತ್ತಿದೆ. ಡಿ.6ರಂದು ತೆಲುಗಿನ ‘ಪುಷ್ಪ–2’ ರಿಲೀಸ್ ಆಗುತ್ತಿದ್ದು, ಇವುಗಳನ್ನು ಗಮನದಲ್ಲಿಟ್ಟುಕೊಂಡು ಚಿತ್ರತಂಡ ಬಿಡುಗಡೆ ದಿನಾಂಕ ಘೋಷಿಸಿದೆ.

‘ತಲೆಗೆ ಬಿಟ್ಟ ಹುಳವನ್ನು ತೆಗೆಯೋ ಸಿನಿಮಾ ಇದು’ ಎಂದು ಹೇಳಿದ್ದ ನಟ ಉಪೇಂದ್ರ, ಇದೀಗ ‘ಇಷ್ಟ್ ದಿನ ಸಿನಿಮಾ ನೋಡಿ ನೀವ್ ಹಿಟ್/ಫ್ಲಾಪ್ ಅಂತ ಹೇಳ್ತಿದ್ರಿ. ಈ ಸಿನಿಮಾ ನಿಮ್ಮನ್ ನೋಡಿ...’ ಎನ್ನುತ್ತಾ ಹೊಸ ಹುಳವನ್ನು ಪ್ರೇಕ್ಷಕರ ತಲೆಗೆ ಬಿಟ್ಟಿದ್ದಾರೆ. 2022ರ ಜೂನ್‌ನಲ್ಲಿ ಸೆಟ್ಟೇರಿದ್ದ ‘ಯುಐ’ ಸಿನಿಮಾದಲ್ಲಿ ನಾಯಕಿಯಾಗಿ ರೀಷ್ಮಾ ನಾಣಯ್ಯ ನಟಿಸಿದ್ದಾರೆ. ಮನೋಹರನ್ ಹಾಗೂ ಕೆ.ಪಿ.ಶ್ರೀಕಾಂತ್ ಜಂಟಿಯಾಗಿ ಈ ಸಿನಿಮಾ ನಿರ್ಮಾಣ ಮಾಡಿದ್ದು, ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ತೆರೆಕಾಣಲಿದೆ.

ಯುವ ರಾಜ್‌ಕುಮಾರ್‌ಗೆ ರೋಹಿತ್ ಪದಕಿ ಆ್ಯಕ್ಷನ್ ಕಟ್

ಯುವ ರಾಜ್‌ಕುಮಾರ್

‘ಯುವ’ ಸಿನಿಮಾ ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದ ನಟ ಯುವ ರಾಜ್‌ಕುಮಾರ್ ಎರಡನೇ ಸಿನಿಮಾವನ್ನು ರೋಹಿತ್ ಪದಕಿ ನಿರ್ದೇಶಿಸಲಿದ್ದಾರೆ.

‘ರತ್ನನ್ ಪ್ರಪಂಚ’ ಖ್ಯಾತಿಯ ರೋಹಿತ್ ಸದ್ಯ ಧನಂಜಯ ನಟನೆಯ ‘ಉತ್ತರಕಾಂಡ’ ಸಿನಿಮಾದಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಸಿನಿಮಾವನ್ನು ಕೆ.ಆರ್.ಜಿ. ಸ್ಟುಡಿಯೊಸ್ ನಿರ್ಮಾಣ ಮಾಡುತ್ತಿದೆ. ಯುವ ರಾಜ್‌ಕುಮಾರ್ ಎರಡನೇ ಸಿನಿಮಾವನ್ನು ಪಿ.ಆರ್.ಕೆ ಪ್ರೊಡಕ್ಷನ್ಸ್, ಜಯಣ್ಣ ಫಿಲಂಸ್ ಮತ್ತು ಕೆ.ಆರ್.ಜಿ. ಸ್ಟುಡಿಯೊಸ್ ಜಂಟಿಯಾಗಿ ನಿರ್ಮಾಣ ಮಾಡಲಿದ್ದು, ಚಿತ್ರದ ಶೀರ್ಷಿಕೆಯನ್ನು ಸದ್ಯ ‘#ಯುವ02’ ಎಂದು ಇಡಲಾಗಿದೆ. ಇದೇ ಮೊದಲ ಬಾರಿಗೆ ಮೂರು ನಿರ್ಮಾಣ ಸಂಸ್ಥೆಗಳು ಜೊತೆಗೂಡಿ ಕನ್ನಡ ಸಿನಿಮಾವೊಂದನ್ನು ನಿರ್ಮಾಣ ಮಾಡುತ್ತಿದೆ. ಈ ಸಿನಿಮಾದ ಕಥೆಯೂ ರೋಹಿತ್ ಪದಕಿ ಅವರದ್ದು.

ಕನ್ನಡ ರಾಜ್ಯೋತ್ಸವದ ದಿನ ಚಿತ್ರದ ಶೀರ್ಷಿಕೆ ಹಾಗೂ ಫಸ್ಟ್ ಲುಕ್ ಬಿಡುಗಡೆ ಮಾಡುವುದಾಗಿ ಚಿತ್ರತಂಡ ಘೋಷಿಸಿದೆ. ಚಿತ್ರದ ತಾರಾಬಳಗದ ಮಾಹಿತಿಯನ್ನೂ ಶೀಘ್ರದಲ್ಲೇ ನೀಡಲಾಗುವುದು ಎಂದು ಕೆ.ಆರ್.ಜಿ. ಸ್ಟುಡಿಯೊಸ್ ತಿಳಿಸಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

❌ **ಕಾಂಗ್ರೆಸ್** ಸಂಸದ ದೀಪೀಂದರ್ ಸಿಂಗ್ ಹೂಡಾ ಅವರು ಅಳುತ್ತಿರುವ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇತ್ತೀಚೆಗೆ ಮುಕ್ತಾಯ ಕಂಡ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಸೋತಿದ್ದಕ್ಕಾಗಿ ಅವರು ಅಳುತ್ತಿದ್ದಾರೆ ಎಂದು ಹೇಳಿಕೊಂಡು ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು. ಅದು ಇತ್ತೀಚಿನ ವಿಡಿಯೊ ಅಲ್ಲ.

✅ **ವಿಡಿಯೊವನ್ನು** ಇನ್‌ವಿಡ್ ಟೂಲ್‌ಗೆ ಹಾಕಿದಾಗ ಹಲವು ಕೀಫ್ರೇಮ್‌ಗಳು ಕಂಡು ಬಂದವು. ಅವುಗಳಲ್ಲಿ ಒಂದು ಕೀ ಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಾಡಿದಾಗ, ಈ ವಿಡಿಯೊ ತುಣುಕನ್ನು ಹಲವರು ಹಂಚಿಕೊಂಡಿದ್ದು ಕಂಡು ಬಂತು. ಫೇಸ್‌ಬುಕ್‌ನಲ್ಲಿ ಮಾಡಲಾಗಿದ್ದ ಪೋಸ್ಟ್‌ಗೆ ಬಳಕೆದಾರರೊಬ್ಬರು, ಇದು ಲೋಕಸಭಾ ಚುನಾವಣೆಯ ಸಂದರ್ಭದ ವಿಡಿಯೊ ಎಂದು ಸ್ಕ್ರೀನ್ ಶಾಟ್ ಸಹಿತ ಪ್ರತಿಕ್ರಿಯಿಸಿದ್ದರು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಶೋಧ ನಡೆಸಿದಾಗ ಜೂನ್ 4ರಂದು ಯು ಟ್ಯೂಬ್‌ನಲ್ಲಿ ಅಪ್‌ಲೋಡ್ ಆಗಿರುವ ವಿಡಿಯೊ ಸಿಕ್ಕಿತು. ಈಗ ವೈರಲ್ ಆಗಿರುವ ವಿಡಿಯೊ ಮತ್ತು ಹಳೆಯ ವಿಡಿಯೊ ಒಂದೇ ಎಂಬುದು ಖಚಿತವಾಯಿತು. ಲೋಕಸಭಾ ಚುನಾವಣೆಯಲ್ಲಿ 3 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದ ಸಂದರ್ಭದಲ್ಲಿ ಜನರ ಮುಂದೆ ದೀಪೀಂದರ್ ಸಿಂಗ್ ಹೂಡಾ ಅವರು ಭಾವುಕರಾಗಿದ್ದ ವಿಡಿಯೊ ಅದಾಗಿತ್ತು. ಈ ಬಗ್ಗೆ ಮಾಧ್ಯಮಗಳೂ ವರದಿ ಮಾಡಿದ್ದವು ಎಂದು ಪಿಟಿಐ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಭೌತ ಬಂಧನ, ಭಾವ ಬಂಧನ

ನುಡಿ ಬೆಳಗು 44

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಒಂದು ಗಿಳಿ ಇತ್ತು. ಅದನ್ನು ಬಂಗಾರದ ಪಂಜರದೊಳಗೆ ಹಾಕಿದ್ದರು. ಬೆಳ್ಳಿ ತಟ್ಟೆಯಲ್ಲಿ ಹಾಲು, ಹಣ್ಣು ಕೊಡುತ್ತಿದ್ದರು. ಆದರೆ, ಪಂಜರಕ್ಕೆ ಕೀಲಿ ಹಾಕಿದ್ದರು. ‘ನಿನಗೆ ಬಂಗಾರದ ಪಂಜರ ಮಾಡೇವಿ, ಬೆಳ್ಳಿ ಬಟ್ಟಲಿನ್ಯಾಗ ಹಾಲು ಕೊಡ್ತೀವಿ’ ಅಂತ ಹೇಳಿದರೆ ಆ ಗಿಳಿ, ‘ಪಂಜರದಿಂದ ನನ್ನ ಹೊರಕ್ಕೆ ಬಿಡಿ, ಬಂಗಾರ ಗಿಂಗಾರ ಎಲ್ಲಾ ನಿಮಗೆ ಅಷ್ಟೆ. ನಮಗೆ ಸ್ವಚ್ಛಂದವಾಗಿ ಹಾರಕೋತ, ಹಾಡಕೋತ ಇದ್ದರೆ ಸಂತೋಷ’ ಅಂತು.

ಎಮ್ಮಿಗೆ ಹಗ್ಗ ಹಾಕೋದು, ಕಳ್ಳನಿಗೆ ಬೇಡಿ ಹಾಕೋದು ಎಲ್ಲಾ ಭೌತಿಕ ಬಂಧನ. ಇದನ್ನು ಬಿಡಿಸಿಕೊಳ್ಳಬಹುದು. ಎಮ್ಮಿಯನ್ನು ಹಗ್ಗದಿಂದ ಕಟ್ಟಿ ನೀವು ಎಳಕೋತ ಹೋಗ್ತೀರಿ. ದಾರಿಯಲ್ಲಿ ಯಾವುದೋ ಟ್ರ್ಯಾಕ್ಟರ್ ಬಂದು ಎಮ್ಮಿ ಹೆದರಿ ಓಡಾಕ ಹತ್ತಿದಾಗ ನೀವು ಎಮ್ಮಿ ಹಿಂದ ಓಡ್ತೀರಿ. ನೀವು ಎಮ್ಮಿ ಎಳಕೊಂಡು ಬರುವಾಗ ಎಮ್ಮಿಗೆ ಹಗ್ಗ ಕಟ್ಟಿದ್ದಿರಿ. ಆದರೆ ನೀವು ಎಮ್ಮೆ ಹಿಂದೆ ಓಡುವಾಗ ನಿಮಗೆ ಯಾವುದೇ ಹಗ್ಗ ಇರಲಿಲ್ಲ. ಆದರೂ ಓಡ್ತೀರಿ. ಇದಕ್ಕೆ ಭಾವ ಬಂಧನ ಅಂತಾರ. ಭೌತ ಬಂಧನದಿಂದ ಬಿಡಿಸಿಕೊಳ್ಳಬಹುದು. ಭಾವ ಬಂಧನದಿಂದ ಬಿಡಿಸಿಕೊಳ್ಳುವುದು ಕಷ್ಟ.

ಈಗ ನೀವು ಮದುವೆ ಆಗ್ತೀರಿ. ಹುಡುಗ ಹುಡುಗಿಯನ್ನು ಎಡಕ್ಕೆ ಬಲಕ್ಕೆ ಕುಳ್ಳಿರಿಸಿರ್ತಾರ. ಪುರೋಹಿತರು ಒಂದು ಅರಿವೆ ತೆಗೆದುಕೊಂಡು ನಿಮ್ಮ ಮತ್ತು ಆಕಿಯ ಬಟ್ಟೆಗೆ ಗಂಟು ಹಾಕ್ತಾರ. ಇದು ಬ್ರಹ್ಮ ಗಂಟು ಅಂತಾರ. ಇದು ಏಳೇಳು ಜನ್ಮಕ್ಕೂ ಗಂಟು ಅಂತಾ ಹೇಳಿ ಕೈ ಬಿಡ್ತಾರ. ಮುಂದೆ ಅರಿವೆಯ ಗಂಟೂ ಇಲ್ಲ. ಪುರೋಹಿತರೂ ಇಲ್ಲ. ಆದರೂ ಮನೆಯಲ್ಲಿ ಗಂಟು ಬಿದ್ದೈತೆ ಎಂತೀರಿ. ಗಂಟು ಎಲ್ಲೈತಿ? ಗಂಟು ಹೊರಗೆ ಬಿದ್ದಿಲ್ಲ, ಒಳಗೆ ಬಿದ್ದೈತಿ. ಇದು ಭಾವ ಬಂಧನ. ಗಂಧ, ನೋಟ, ರೂಪ, ರುಚಿ ಎಲ್ಲ ಗಂಟು ಹಾಕಿಕೊಂಡೈತಿ.

ಒಬ್ಬ ಶ್ರೀಮಂತರ ಮನೆಯಲ್ಲಿ ನಾಯಿ ಇತ್ತು. ಅದನ್ನು ಅವರು ಚೆನ್ನಾಗಿ ನೋಡ್ಕಂತಿದ್ರು. ಬಿಸ್ಕೀಟು ಹಾಕಾಕೆ, ಮೈ ತೊಳೆಯಾಕೆ ಒಬ್ಬ ಆಳು ಇದ್ದ. ಮನೆ ಕಾಯೋಕೆ ನಾಯಿ ಅಲ್ಲ, ನಾಯಿ ಕಾಯೋಕೆ ಒಬ್ಬ ಆಳು. ಅದಕ್ಕೆ ಎಲ್ಲರೂ ರಾಜಾ ರಾಜಾ ಅನತಿದ್ದರು. ಮಕ್ಕಳಾಗಿ ಹುಟ್ಟೋದಕ್ಕಿಂತ ನಾಯಿಯಾಗಿ ಹುಟ್ಟೋದು ಭೇಷಪಾ ಅನ್ನೋ ಹಂಗ ಅದನ್ನು ನೋಡ್ಕಂತಿದ್ರು. ಅದು ಒಂದು ದಿನ ಬೆಲ್ಟ್ ಹರಕೊಂಡು ಹೊರಕ್ಕೆ ಹೋತು. ಬೀದಿ ನಾಯಿ ಸ್ನೇಹ ಮಾಡಿತು. ರಾಜಾ ನಾಯಿ ಬೀದಿ ನಾಯಿಗೆ, ‘ನಮಗೆ ಬಹಳ ಕಷ್ಟ. ಕಿರಿಕಿರಿ. ಬೆಲ್ಟ್ ಹಾಕಿ ಇಟ್ಟಿರ್ತಾರ, ಕೂಡಂದ್ರೆ ಕೂಡಬೇಕು, ಏಳಂದ್ರ ಏಳಬೇಕು, ನೀನಾದರೆ ಸ್ವತಂತ್ರ. ಎಲ್ಲಿ ಬೇಕಾದರೂ ಹೋಗಬಹುದು. ನಿದ್ದೆ ಬಂದಲ್ಲಿ ಮಲಗಬಹುದು. ಹಸಿವಾದಾಗ ಏನದರೂ ತಿನ್ನಬಹುದು’ ಎಂದು ಹೇಳಕೋತ ಸಾಯಂಕಾಲದ ಮಟ ತಿರುಗ್ಯಾಡಿತು. ಸಂಜೆ ರಾಜಾ ನಾಯಿ, ‘ಮನೆಗೆ ಹೋಗ್ತೀನಿ’ ಅಂತು. ‘ಅಲ್ಲೋ ಇಲ್ಲೋ ಚಲೋ ಐತಿ ಅಂತಿದ್ಯಲ್ಲೋ, ಮತ್ಯಾಕ ಮನೆ ಕಡೆ ಹೊಂಟಿ’ ಎಂದು ಕೇಳಿತು ಬೀದಿ ನಾಯಿ. ಅದಕ್ಕೆ ‘ಮನೆಯವರು ಯಾವಾಗಲೂ ನನ್ನ ರಾಜಾ ರಾಜಾ ಅಂತಾ ಕರೀತಾರ. ಹಾಗೆ ಅನ್ನಿಸಿಕೊಳ್ಳಬೇಕು ಅಂತ ಬಯಕೆ. ಅದಕ್ಕೆ ಮನಿಗೆ ಹೋಗ್ತೀನಿ’ ಅಂತು ರಾಜಾ ನಾಯಿ. ಇದು ಭಾವ ಬಂಧನ. ಈ ಬಂಧನವೇ ದುಃಖಕ್ಕೆ ಮೂಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಅಕ್ಟೋಬರ್ 15, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿನ ಶುಕ್ಲ ತ್ರಯೋದಶಿ ಗಂ. 24-20 ನಕ್ಷತ್ರ: ಪೂರ್ವಭಾದ್ರ ಗಂ. 22-09 ಯೋಗ: ವೃದ್ಧಿ ಗಂ. 14-13, ಕರಣ: ಕೌಲವ ಗಂ. 14-04, ಕನ್ಯಾ ಮಾಸದ 29 ನೇ ದಿನ, ಮಳೆನಕ್ಷತ್ರ: ಚಿತ್ರ 2.
ರಾಹುಕಾಲ : ಮಧ್ಯಾಹ್ನ 03-00 – 04-30, ಸೂರ್ಯೋದಯ : 06-25 ಸೂರ್ಯಾಸ್ತ : 06-08, ಮುಸ್ಲಿಂ ದಿನಾಂಕ : 11 ರಬಿಯುಸ್ಸಾನಿ, ದಿನ ವಿಶೇಷ : ಫತೇಹ ಯಜ್ದುಮ್ (ಗ್ಯಾರ್ವೀನ್ ಷರೀಫ್) (ಮುಸ್ಲಿಂ)
ಅದೃಷ್ಟ ಸಂಖ್ಯೆ : 6, 11

ಮೇಷ: ಉದ್ಯೋಗದಲ್ಲಿ ಬದಲಾವಣೆಯ ಯೋಚನೆ ಮಾಡುವವರು ಸದ್ಯದ ಪರಿಸ್ಥಿತಿಯಲ್ಲಿ ಸಿಕ್ಕಿರುವ ಕೆಲಸದಲ್ಲೇ ತೃಪ್ತಿಪಡುವುದು ಒಳ್ಳೆಯದು. ಸೋಲೊಪ್ಪಿಕೊಳ್ಳದ ಗುಣವು ಸಹಚರರಲ್ಲಿ ಭಿನ್ನಾಭಿಪ್ರಾಯ ಮೂಡಿಸುವುದು.

ವೃಷಭ: ಯಾವುದೇ ರೀತಿಯ ಮಹತ್ವದ ಮಾತುಕತೆ ನಡೆಸುವಾಗ ಈ ದಿನ ಧೈರ್ಯವಾಗಿ ಮಾತನಾಡಿ. ಮಗನ ಮೇಲಿನ ನಂಬಿಕೆಯು ಕಡಿಮೆಯಾಗುವ ಪ್ರಸಂಗ ಬರಬಹುದು. ಕಾಸ್ಮೆಟಿಕ್ ವ್ಯಾಪಾರಿಗಳಿಗೆ ಲಾಭ ದಿನ.

ಮಿಥುನ: ವೈಯಕ್ತಿಕ ವಿಷಯಗಳನ್ನು ಆಪ್ತರಾದವರಲ್ಲಿ ಹಂಚಿಕೊಳ್ಳಲು ಸಮಯ ಕೂಡಿ ಬಂದಿದೆ. ಕಂಟ್ರಾಕ್ಟರ್‌ಗಳು ಮತ್ತು ಬಿಲ್ಡರ್ಸ್‌ಗಳಿಗೆ ಅನುಕೂಲಕರ ದಿನ. ದ್ವಿ ಚಕ್ರ ವಾಹನ ಖರೀದಿಯ ಯೋಗವಿದೆ.

ಕರ್ಕಾಟಕ: ಪ್ರೀತಿ ವಾತ್ಸಲ್ಯ ತೋರುವ ಜನರು ಇದ್ದಾರೆಂಬುದು ಆತ್ಮವಿಶ್ವಾಸ ಹೆಚ್ಚಲು ಕಾರಣ. ಒಂಟಿತನ ಹೋಗಲಾಡಿಸಿಕೊಳ್ಳಲು ಹೊಸ ಕೆಲಸಗಳತ್ತ ಮನಸ್ಸು ಹರಿಸುವ ಪ್ರಯತ್ನವನ್ನು ಮಾಡಿ.

ಸಿಂಹ: ಕಾರ್ಯಕ್ಷೇತ್ರದಲ್ಲಿ ಸಾಕಷ್ಟು ಎಚ್ಚರ ವಹಿಸದೇ ಅತಿ ಆತ್ಮವಿಶ್ವಾಸ, ಎಲ್ಲವೂ ತಿಳಿದಿದೆ ಎಂಬುವ ಅಹಂಕಾರ ಮುಂದುವರಿದರೆ ಸ್ಥಾನಮಾನಕ್ಕೆ ಹಾನಿಯಾಗುವ ಸನ್ನಿವೇಶ ಬರುವುದು.

ಕನ್ಯಾ: ನೂತನ ಅಧಿಕಾರಿಗಳ ಆಗಮನದಿಂದಾಗಿ ಕಚೇರಿಯಲ್ಲಿ ಹೆಚ್ಚಿನ ಕೆಲಸಗಳು ತೋರಿಬರಲಿವೆ. ಸರ್ಕಾರಿ ಕಚೇರಿಗಳಿಗೆ ಅಲೆದಾಟವು ಹೆಚ್ಚಾಗಿ ಹಣದ ಖರ್ಚಿಗೆ ಕಾರಣವಾದೀತು. ರಫ್ತಿನಿಂದ ಲಾಭ ಗಳಿಸುವಿರಿ.

ತುಲಾ: ಮಕ್ಕಳೊಂದಿಗೆ ವ್ಯವಹಾರದ ವಿಚಾರಗಳ ಬಗ್ಗೆ ಸುದೀರ್ಘ ಮಾತುಕತೆ ನಡೆಸುವಿರಿ. ಇತರರ ಕಷ್ಟ-ಸುಖಗಳಿಗೆ ನೆರವಾಗುವ ಮನೋಭಾವ ಬೆಳೆಸಿಕೊಳ್ಳಿ. ತಾಳ್ಮೆ ಪರೀಕ್ಷಿಸುವ ಕೆಲಸಕ್ಕೆ ಕೈ ಹಾಕದಿರಿ.

ವೃಶ್ಚಿಕ: ಪಥ್ಯ ಮಾಡುವುದರಿಂದ ಆರೋಗ್ಯ ಸುಧಾರಣೆಗೆ ಬರುತ್ತದೆ. ಕೊಟ್ಟ ಮಾತನ್ನು ಉಳಿಸಿ ಕೊಳ್ಳುವ ಮಾರ್ಗದಲ್ಲಿ ಪ್ರತಿ ಹೆಜ್ಜೆ ಇರಲಿ. ಮಗಳಿಗೆ ಉತ್ತಮ ಉದ್ಯೋಗ ದೊರೆತು ಸಂತಸವಾಗುತ್ತದೆ.

ಧನು: ಸಾಮಾಜಿಕ ಬದುಕಿನಲ್ಲಿ ಉತ್ತಮ ಸಾಧನೆಯನ್ನು ಮಾಡಲು ಸೂಕ್ತ ಅವಕಾಶ ಸಿಗಲಿದೆ. ವಿದೇಶದಿಂದ ಸ್ನೇಹಿತರ ಆಗಮನ ಸಂತೋಷ ತರಲಿದೆ. ವಿಷ್ಣುಸಹಸ್ರನಾಮದ ಪಠಣೆಯಿಂದ ಮನಸ್ಸಿಗೆ ನೆಮ್ಮದಿ ಸಿಗುವುದು.

ಮಕರ: ಸಮಾಜದಲ್ಲಿ ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುವ ಪಾಠವನ್ನು ಇಂದಿನ ದಿನವೇ ಬೋಧಿಸುವುದು. ಕೆಲಸದತ್ತ ಹೆಚ್ಚಿನ ಗಮನ ಹರಿಸಿ. ರಾಜಕೀಯ ಭವಿಷ್ಯಕ್ಕೆ ಮೋಡಕವಿದಂತೆ ಆಗುತ್ತದೆ.

ಕುಂಭ: ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ಉತ್ತಮ ಸಂಬಂಧ ಕೂಡಿ ಬರುವುದು. ನಾಯಕತ್ವದ ಗುಣಗಳನ್ನು ಪ್ರದರ್ಶಿಸಲು ಉತ್ತಮ ವೇದಿಕೆ ಸಿಗಲಿದೆ. ಧನಾರ್ಜನೆಗೆ ಅಡ್ಡಿಯಾಗಲಿದೆ.

ಮೀನ: ಬುದ್ಧಿವಂತಿಕೆ ಹಾಗೂ ಯೋಜನೆಗಳು ಸಂವಹನವನ್ನು ಸುಲಭಗೊಳಿಸುತ್ತವೆ. ವೃತ್ತಿಪರವಾಗಿ ಇರುವ ಸ್ಪರ್ಧೆಗಳಲ್ಲಿ ಹೆಚ್ಚಿನ ಮುನ್ನಡೆ ಇರುವುದು. ಸಕ್ರಿಯತೆ ಹಾಗೂ ಕಾರ್ಯಮಗ್ನತೆಯ ದಿನವು ಇದಾಗಿದೆ.

ಪದಬಂಧ 5832

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಾಂತಿಯ ಆವರಣ (5)
3.ಮೊದಲನೆಯ ಹಿಂದೂ ಸಂವತ್ಸರ (3)
5.ಸುಂಕವನ್ನು ಹೀಗೂ ಹೇಳುತ್ತಾರೆ (3)
7.ಕಟ್ಟುಪಾಡಿಗೆ ಒಳಪಡದುದು (4)
8. ಯುದ್ಧದಲ್ಲಿ ದೇಹರಕ್ಷಣೆಗೆ ಧರಿಸುವ ಉಕ್ಕಿನ ಅಂಗಿ (5)
11.ಪಣದಲ್ಲಿರುವ ಅಳತೆ (4)
13.ಮುಸಲ್ಮಾನ ಸಂತರ ಗೋರಿಯಿರುವ ಪವಿತ್ರಸ್ಥಳ (3)
16.ಕೋಟೆಯ ಮೇಲಿನ ಕೊತ್ತಳ (3)
17.ಮೃಗಾವಲಿನವನು ಇಲ್ಲಿದ್ದಾನೆ (5)

ಮೇಲಿಂದ ಕೆಳಕ್ಕೆ
1.ಜನ ಕೊನೆಗಿದ್ದಾಗ ಬೀಸಿದ ಬಿರುಗಾಳಿ (4)
2.ಲಡಾಯಿಯಲ್ಲಿ ಸಿಕ್ಕಿರುವ ದಾರದ ಸುರುಳಿ (2)
3.ಮುಖವಿಟ್ಟು ನೋಡಿ! ಪ್ರಧಾನವಾದುದು ಕಾಣುತ್ತದೆ! (3)
4.ನೇರವಲ್ಲದುದು ಇದು (2)
6.ಮೂರೆಳೆಯ ಸರ (3)
7.ಪ್ರಕರಣದಲ್ಲಿ ಸಿಕ್ಕಿದ್ದು ಕೆಲಸ ಮಾಡುವ ಸಲಕರಣೆ (5)
9.ಚಿಕ್ಕಂದಿನಿಂದಲೂ ಮಾಡಿದ ಲಲ್ಲೆ! (3)
10.ಎಚ್ಚರದಿಂದಿರುವವನು (4)
12.ರೀತಿಯೊಡಗೂಡುವ ಜೋಡು ನುಡಿ (3)
14.ಕೆರೆಕಟ್ಟೆಗಳ ನೀರು ಹೋಗುವ ಕಂಡಿ (2)
15.ಆಕಾಶದಲ್ಲಿ ಸಂಚರಿಸುವಂಥದು (2)



5831ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಅಟ್ಟಹಾಸ 4.ಹರಿಹಾಯು
6.ಖನಿ 8.ಗಣುಅ
10.ತಿಕೃತಿಪ್ರ 11.ನಂದಾದೀಪ
12.ವಸಂತ 13.ಸೃಷ್ಟಿಕರ್ತ
14.ಶಯ್ಯಾಗೃಹ
15.ಕಷಾಯ 16.ನಖ
18.ನಡೆವೆಣ 20.ರಜತಾದ್ರಿ

ಮೇಲಿಂದ ಕೆಳಕ್ಕೆ:
1.ಝರಿ 3.ಸಖ
5.ಯುಗಪ್ರವರ್ತಕ
7.ನಿರೂಪ 9.ಅನಂತಶಯನ
13.ಸೃಜನ 17.ಖರ
19.ವೆಚ್ಚ

ಸುಡೊಕು 6217

	5			6		1		
9							7	8
	8		7			2		6
6		1		5		7		9
			8	9	6			
8				7		5		2
3		9		1				
			6		7	9	3	4
7		8		2			1	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6216 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ಷೇರುಪೇಟೆ ವಹಿವಾಟು 591



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	24,964
ಇಂದಿನ ಅಂತ್ಯ	25,127
▲	163
ದಿನದ ಗರಿಷ್ಠ	25,159

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹305-495
ದ್ವಿತಳಿ (ಬಿ.ವಿ)	₹247-658

ಎನ್.ಆರ್.ಪುರ ರಬ್ಬರ್

ಆರ್ಎಸ್ಎಸ್-4	₹193
ಆರ್ಎಸ್ಎಸ್-5	₹188
ಗುಡ್ ಲಾಟ್	₹185

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹17600
ಎಸಿ	₹11200
ಆರ್ಪಿ	₹19000
ಆರ್ಸಿ	₹10270

ಅಂಗನವಾಡಿ: ಗೌರವಧನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ನೀಡಬೇಕಿದ್ದ ಮೂರು ತಿಂಗಳ ಗೌರವಧನದ ಹಿಂಬಾಕಿ ಮತ್ತು ಅಕ್ಟೋಬರ್ ತಿಂಗಳ ಗೌರವಧನವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಬಿಡುಗಡೆಗೊಳಿಸಿದೆ.

ಜೂನ್, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳ ಗೌರವಧನ ನೀಡಿಲ್ಲ ಎಂಬ ಬಗ್ಗೆ 'ಪ್ರಜಾವಾಣಿ'ಯಲ್ಲಿ ಸೋಮವಾರ ವಿಶೇಷ ವರದಿ ಪ್ರಕಟವಾಗಿತ್ತು.

ಜೂನ್, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಗೌರವಧನಕ್ಕಾಗಿ ₹452 ಕೋಟಿ ಬಿಡುಗಡೆ ಮಾಡಿದೆ. ಜೊತೆಗೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ರಾಜ್ಯದ 31 ಜಿಲ್ಲೆಗಳ 204 ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಿಬ್ಬಂದಿಯ ವೇತನ, ಬಾಹ್ಯಮೂಲ, ದಿನಗೂಲಿ ಸಿಬ್ಬಂದಿಯ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಗೌರವಧನ ಮತ್ತು ಆಡಳಿತ ವೆಚ್ಚಕ್ಕಾಗಿ ₹42 ಕೋಟಿ ಬಿಡುಗಡೆ ಮಾಡಿದೆ.

ರಾಜ್ಯ ಸರ್ಕಾರದಿಂದ ಮಂಜೂರಾಗಿರುವ ನಗರ ಪ್ರದೇಶ 450 ಅಂಗನವಾಡಿ ಕೇಂದ್ರಗಳು ಹಾಗೂ ಆಜಾದಿ ಕಾ ಅಮೃತ ಮಹೋತ್ಸವದ ಪ್ರಯುಕ್ತ ರಾಜ್ಯ ಸರ್ಕಾರದಿಂದ ಮಂಜೂರಾದ 3,538 ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಗೌರವಧನ ಪಾವತಿಸಲಾಗುವುದು ಎಂದು ಸರ್ಕಾರ ತಿಳಿಸಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	19000-26500
ಹಳತು	40500-48500
ಚಿತ್ರದುರ್ಗ	
ಅಪಿ	47600-48000
ಬೆಟ್ಟೆ	32600-33000
ಕೆಂಪುಗೋಟು	27400-27800
ರಾಶಿ	47100-47500
ಸಾಗರ	
ಬಿಳಿಗೋಟು	10111-25599
ಚಾಲಿ	26000-32849
ಕೋಕ	8099-19199
ಕೆಂಪುಗೋಟು	16280-31500
ರಾಶಿ	26339-49401
ಸಿಪ್ಪೆಗೋಟು	10500-16521
ಕುಮಟ	
ಚಿಪ್ಪು	23569-26019
ಕೋಕ	6569-22019
ಫ್ಯಾಕ್ಟರಿ	6019-16829
ಹಳೆಚಾಲಿ	36599-40009
ಹೊಸಚಾಲಿ	30199-34099
ಶಿವಮೊಗ್ಗ	
ಬೆಟ್ಟೆ	36000-54100
ಗೊರಬಲು	17009-47259
ರಾಶಿ	24090-49399
ಸರಕು	50099-83986
ಸಿದ್ದಾಪುರ	
ಬಿಳಿಗೋಟು	24809-27899
ಚಾಲಿ	31099-34199
ಕೋಕ	20800-23989
ಕೆಂಪುಗೋಟು	16169-18689
ರಾಶಿ	41099-46399
ತಟ್ಟಿಬೆಟ್ಟೆ	24999-29099
ಶಿರಸಿ	
ಬೆಟ್ಟೆ	24899-35609
ಬಿಳಿಗೋಟು	21699-30689
ಚಾಲಿ	32608-35368
ರಾಶಿ	40299-42609
ಯಲ್ಲಾಪುರ	
ಬಿಳಿಗೋಟು	18611-28201
ಚಾಲಿ	29169-34501
ಕೋಕ	4112-17410
ಕೆಂಪುಗೋಟು	21661-23761
ರಾಶಿ	36001-56150
ತಟ್ಟಿಬೆಟ್ಟೆ	25099-35300

ಕಟಾವು ಮಾಡಿದ ಏಲಕ್ಕಿ ಒಣಗಿಸಲಾಗದ ಸಂಕಟ

ಮಳೆ: ಏಲಕ್ಕಿ ರೈತರಿಗೆ ಸಂಕಷ್ಟ

ಪ್ರಜಾವಾಣಿ ವಾರ್ತೆ

ಮೂಡಿಗೆರೆ (ಚಿಕ್ಕಮಗಳೂರು): ಕಳೆದೊಂದು ವಾರದಿಂದ ತಾಲ್ಲೂಕಿನಲ್ಲಿ ಸುರಿಯುತ್ತಿರುವ ಮಳೆ, ಏಲಕ್ಕಿ ಬೆಳೆಗಾರರನ್ನು ತತ್ತರಿಸುವಂತೆ ಮಾಡಿದೆ. ದೇವರುಂದ, ಹಂತೂರು, ಮೇಕನಗದ್ದೆ, ಹೊಸ್ಕೆರೆ, ಏರಿಕೆ, ಭೈರಾಪುರ, ಗುತ್ತಿ, ಹೆಸಗೋಡು, ಮೂಲರಹಳ್ಳಿ ಭಾಗದ ರೈತರು ಏಲಕ್ಕಿ ಬೆಳೆಯುತ್ತಾರೆ. ಆಗಸ್ಟ್ ಅಂತ್ಯದಿಂದ ನವೆಂಬರ್ ಕೊನೆಯವರೆಗೆ ಏಲಕ್ಕಿ ಕಟಾವಿನ ಕಾಲ. ಆದರೆ, ಈ ಬಾರಿ ಮಳೆ ಮುಂದುವರಿದಿರುವುದು ಏಲಕ್ಕಿ ಬೆಳೆಗಾರರನ್ನು ಸಂಕಷ್ಟಕ್ಕೆ ದೂಡಿದೆ.

ಏಲಕ್ಕಿ ಬೆಳೆಗಾರರಲ್ಲಿ ಹೆಚ್ಚಿನವರು ಸಣ್ಣ ಬೆಳೆಗಾರರಿದ್ದು, ಬೆಳೆ ಒಣಗಿಸಲು ಡ್ರೈಯರ್‌ನಂತಹ ಆಧುನಿಕ ವ್ಯವಸ್ಥೆ ಹೊಂದಿಲ್ಲ. ಬಿಸಿಲಿನಲ್ಲೇ ಏಲಕ್ಕಿ ಒಣಗಿಸಿ ಮಾರಾಟ ಮಾಡಬೇಕಾಗಿದೆ. ಈಗಾಗಲೇ ಕಟಾವು ಮುಕ್ತಾಯವಾಗಿದ್ದು, 3 ಹಾಗೂ

ಮಾಕೋನಹಳ್ಳಿ ಗ್ರಾಮದ ಕಾರಬೈಲ್‌ನಲ್ಲಿ ಕಟಾವಿಗೆ ಸಿದ್ಧವಾಗಿರುವ ಏಲಕ್ಕಿ

4ನೇ ಸುತ್ತಿನಲ್ಲಿ ಕಟಾವು ಮಾಡಬೇಕಾದ ಕಾಯಿಗಳು ಮಾತ್ರ ಗಿಡದಲ್ಲಿ ಉಳಿದಿವೆ.

ಮೊದಲ ಹಂತದ ಕಟಾವು ಮಳೆಯ ನಡುವೆಯೇ ನಡೆದಿದೆ. ಅಕ್ಟೋಬರ್ ಬಳಿಕ ಮಳೆ ಕಡಿಮೆಯಾಗಬಹುದು ಎಂದು ನಿರೀಕ್ಷಿಸಿ, ಕಟಾವು ಮುಂದೂಡಿದ್ದ ರೈತರಿಗೆ, ಈಗ ನಿರಂತರವಾಗಿ ಸುರಿಯುತ್ತಿರುವ ಮಳೆ ಅಡ್ಡಿಯಾಗಿದೆ. ಕಟಾವು ಮಾಡಿದರೆ ಏಲಕ್ಕಿಯನ್ನು ಒಣಗಿಸಲಾಗದ ಸ್ಥಿತಿ ಒಂದೆಡೆಯಾದರೆ, ಇನ್ನೊಂದೆಡೆ ಗಿಡದಲ್ಲೇ ಹಣ್ಣಾದ ಏಲಕ್ಕಿ ನೆಲಕ್ಕೆ ಉದುರಿ ಬಿದ್ದು, ನಷ್ಟವಾಗುತ್ತಿರುವುದು ನುಂಗಲಾರದ ತುತ್ತಾಗಿದೆ.

> **ಸಣ್ಣ, ಅತಿ ಸಣ್ಣ ರೈತರಿಗೆ ಏಲಕ್ಕಿ ಒಣಗಿಸಿಕೊಳ್ಳಲು ಸರ್ಕಾರದ ನೆರವಿನಲ್ಲಿ ಸೌಲಭ್ಯ ಕಲ್ಪಿಸಿದರೆ ಮಳೆಗಾಲದಲ್ಲಿ ಕಟಾವಿಗೆ ಬರುವ ಏಲಕ್ಕಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ**
> **ಏಲಕ್ಕಿ ಬೆಳೆಗಾರರು,** ಮೂಡಿಗೆರೆ ತಾಲ್ಲೂಕು

ಮುಖ್ಯಾಂಶಗಳು

- ಮಳೆಗಾಲದಲ್ಲಿ ಕಟಾವಿಗೆ ಬರುವುದರಿಂದ ರೈತರಿಗೆ ಸಂಕಷ್ಟ
- 'ಏಲಕ್ಕಿ ಸಂಸ್ಕರಣೆ; ರೈತರಿಗೆ ಬೇಕು ವಿಶೇಷ ನೆರವು'

'ಈ ಬಾರಿ ಜುಲೈ ತಿಂಗಳಿಂದ ಮಳೆ ಪ್ರಮಾಣ ಹೆಚ್ಚಾಗಿದ್ದರಿಂದ ಏಲಕ್ಕಿ ಅವಧಿಗೆ ಮುನ್ನವೇ ಹಣ್ಣಾಗತೊಡಗಿತ್ತು. ಮೊದಲ ಹಂತದ ಕಟಾವನ್ನು ಮಳೆಯ ನಡುವೆಯೇ ನಡೆಸಿ, ಗಾಳಿಯಲ್ಲಿ ಹರಡಿ ಹೇಗೋ ಒಣಗಿಸಿಕೊಂಡೆವು. ಅಕ್ಟೋಬರ್‌ನಲ್ಲಿ ಮಳೆ ಕಡಿಮೆಯಾಗಬಹುದು ಎಂದು 2ನೇ ಕಟಾವನ್ನು ಮುಂದೂಡಿದ್ದೆವು. ಆದರೆ, ಸತತ ಮಳೆಯಿಂದ ಕಟಾವು ಮಾಡಲು ಸಮಸ್ಯೆಯಾಗಿದೆ. ವನ್ಯಪ್ರಾಣಿಗಳ ಹಾವಳಿ, ತಾಲ್ಲೂಕಿನಲ್ಲಿ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವುದು ಇತ್ಯಾದಿ ಸಮಸ್ಯೆಗಳಿಂದ ನಿಧಾನವಾಗಿ ಏಲಕ್ಕಿ ಬೆಳೆಯನ್ನೇ ಕೈ ಬಿಡಬೇಕಾದ ಸ್ಥಿತಿ ಇದೆ' ಎನ್ನುತ್ತಾರೆ ಬೆಳೆಗಾರ ಕಾರಬೈಲ್ ಜಗದೀಶ್.

ಉತ್ತಮ ಗುಣಮಟ್ಟದ ಏಲಕ್ಕಿಗೆ ಪ್ರಸ್ತುತ ಮಾರುಕಟ್ಟೆಯಲ್ಲಿ ಕೆ.ಜಿಗೆ ₹2,200ದಿಂದ ₹2,300ರಷ್ಟು ದರ ಇದೆ.

ಸುದ್ದಿ 2 ನಿಮಿಷ

ರಿಯಲ್ ಎಸ್ಟೇಟ್ ವಲಯ ಈಕ್ವಿಟಿ ಹೂಡಿಕೆ ಶೇ 46ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಜನವರಿ–ಸೆಪ್ಟೆಂಬರ್ ಅವಧಿಯಲ್ಲಿ ದೇಶದ ರಿಯಲ್ ಎಸ್ಟೇಟ್ ವಲಯದಲ್ಲಿನ ಈಕ್ವಿಟಿ ಹೂಡಿಕೆಯು ಶೇ 46ರಷ್ಟು ಏರಿಕೆಯಾಗಿದ್ದು, ₹74,798 ಕೋಟಿಯಷ್ಟಾಗಿದೆ ಎಂದು ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆ, ಸಿಬಿಆರ್‌ಇ ತಿಳಿಸಿದೆ.

2018ರಿಂದ ರಿಯಲ್ ಎಸ್ಟೇಟ್‌ನಲ್ಲಿನ ಈಕ್ವಿಟಿ ಹೂಡಿಕೆಯಲ್ಲಿ ಇದು ಅತ್ಯಧಿಕವಾಗಿದೆ.

ಈಕ್ವಿಟಿ ಹೂಡಿಕೆಯು, ಖಾಸಗಿ ಈಕ್ವಿಟಿ ಫಂಡ್ಸ್, ಪಿಂಚಣಿ ಫಂಡ್, ಸಾವರಿನ್ ವೆಲ್ತ್ ಫಂಡ್, ಸಾಂಸ್ಥಿಕ ಹೂಡಿಕೆದಾರರು, ರಿಯಲ್ ಎಸ್ಟೇಟ್ ಡೆವಲಪರ್‌ಗಳು, ರಿಯಲ್ ಎಸ್ಟೇಟ್ ಫಂಡ್–ಕಮ್– ಡೆವಲಪರ್‌ಗಳು, ಹೂಡಿಕೆ ಬ್ಯಾಂಕ್‌ಗಳು, ಕಾರ್ಪೊರೇಟ್ ಗ್ರೂಪ್‌ಗಳು, ಆರ್‌ಇಐಟಿ ಸೇರಿದಂತೆ ಹಲವು ಹೂಡಿಕೆಯನ್ನು ಒಳಗೊಂಡಿದೆ.



2018ರಲ್ಲಿ ₹48,746 ಕೋಟಿ, 2019ರಲ್ಲಿ ₹53,788 ಕೋಟಿ, 2020ರಲ್ಲಿ ₹50,426 ಕೋಟಿ, 2021ರಲ್ಲಿ ₹49,586, 2022ರಲ್ಲಿ ₹65,554 ಕೋಟಿ, 2023ರಲ್ಲಿ ₹62,192 ಕೋಟಿ ಈ ವಲಯದಲ್ಲಿ ಹೂಡಿಕೆಯಾಗಿದೆ.

'ಭಾರತದ ರಿಯಲ್ ಎಸ್ಟೇಟ್ ಮಾರುಕಟ್ಟೆಯಲ್ಲಿನ ಹೂಡಿಕೆ ಚಟುವಟಿಕೆಯು ಜನವರಿ-ಸೆಪ್ಟೆಂಬರ್ ಅವಧಿಯಲ್ಲಿ ಹೊಸ ಉತ್ತುಂಗಕ್ಕೇರಿದೆ. ಮುಂಬರುವ ತ್ರೈಮಾಸಿಕಗಳಲ್ಲಿ ಬಂಡವಾಳದ ನಿರಂತರ ಒಳಹರಿವು ನಿರೀಕ್ಷಿಸಲಾಗಿದೆ' ಎಂದು ಸಿಬಿಆರ್‌ಇನ ಸಿಇಒ ಅನ್ಶುಮಾನ್ ಮ್ಯಾಗಝೈನ್ ಹೇಳಿದ್ದಾರೆ.

ಎಚ್‌ಸಿಎಲ್ ಟೆಕ್ನಾಲಜೀಸ್‌ಗೆ ₹4,235 ಕೋಟಿ ಲಾಭ

ನವದೆಹಲಿ (ಪಿಟಿಐ): 2024–25ರ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಐ.ಟಿ ಸೇವಾ ಕಂಪನಿ ಎಚ್‌ಸಿಎಲ್ ಟೆಕ್ನಾಲಜೀಸ್ ₹4,235 ಕೋಟಿ ನಿವ್ವಳ ಲಾಭ ಗಳಿಸಿದೆ.

2023–24ರ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹3,832 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 10ರಷ್ಟು ಏರಿಕೆಯಾಗಿದೆ ಎಂದು ಕಂಪನಿ ಷೇರುಪೇಟೆಗೆ ಸೋಮವಾರ ತಿಳಿಸಿದೆ.

ವರಮಾನದಲ್ಲಿ ಶೇ 8ರಷ್ಟು ಏರಿಕೆಯಾಗಿದ್ದು, ₹28,862 ಕೋಟಿಯಾಗಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ಹೊಸದಾಗಿ 780 ಸಿಬ್ಬಂದಿಯನ್ನು ನೇಮಿಸಿಕೊಂಡಿದ್ದು, ಒಟ್ಟು ಉದ್ಯೋಗಿಗಳ ಸಂಖ್ಯೆ 2.18 ಲಕ್ಷಕ್ಕೆ ಮುಟ್ಟಿದೆ ಎಂದು ಕಂಪನಿ ತಿಳಿಸಿದೆ.

ಸೆನ್ಸೆಕ್ಸ್ 591 ಅಂಶ ಏರಿಕೆ

ಮುಂಬೈ (ಪಿಟಿಐ): ಐ.ಟಿ ಮತ್ತು ಬ್ಯಾಂಕಿಂಗ್ ವಲಯದ ಷೇರುಗಳ ಖರೀದಿ ಹೆಚ್ಚಳದಿಂದ ಷೇರು ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.



ಷೇರು ಸೂಚ್ಯಂಕಗಳ ಏರಿಕೆಯಿಂದ ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ಒಂದೇ ದಿನ ₹1.35 ಲಕ್ಷ ಕೋಟಿ ವೃದ್ಧಿಯಾಗಿದೆ.

ಕಂಪನಿಗಳ ಒಟ್ಟು ಎಂ–ಕ್ಯಾಪ್ ₹463 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 591 ಅಂಶ ಏರಿಕೆಯಾಗಿ, 81,973ಕ್ಕೆ ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 163 ಅಂಶ ಹೆಚ್ಚಳವಾಗಿ 25,127ಕ್ಕೆ ಸ್ಥಿರಗೊಂಡಿದೆ.

ಟೆಕ್ ಮಹೀಂದ್ರ, ಎಚ್‌ಡಿಎಫ್‌ಸಿ ಬ್ಯಾಂಕ್, ಲಾರ್ಸೆನ್ ಆ್ಯಂಡ್ ಟೂಬ್ರೊ, ಐಟಿಸಿ, ಇನ್ಫೊಸಿಸ್, ಇಂಡಸ್‌ಇಂಡ್ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಟೈಟನ್ ಮತ್ತು ಎಚ್‌ಸಿಎಲ್ ಟೆಕ್ನಾಲಜೀಸ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಮಾರುತಿ ಸುಜುಕಿ ಇಂಡಿಯಾ, ಟಾಟಾ ಸ್ಟೀಲ್, ಬಜಾಜ್ ಫೈನಾನ್ಸ್, ಅಲ್ಟ್ರಾ ಟೆಕ್ ಸಿಮೆಂಟ್, ನೆಸ್ಲೆ ಇಂಡಿಯಾ, ಎಕ್ಸಿಸ್ ಬ್ಯಾಂಕ್ ಮತ್ತು ಟಿಸಿಎಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಶೇ 2.52ರಷ್ಟು ಇಳಿಕೆಯಾಗಿದೆ. ಪ್ರತಿ ಬ್ಯಾರಲ್‌ಗೆ 77.05 ಡಾಲರ್‌ಗೆ (₹6,476) ತಲುಪಿದೆ.

ರಿಲಯನ್ಸ್ ಲಾಭ ಇಳಿಕೆ

ನವದೆಹಲಿ (ಪಿಟಿಐ): 2024–25ರ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ₹16,563 ಕೋಟಿ ನಿವ್ವಳ ಲಾಭ ಗಳಿಸಿದೆ.

2023–24ರ ಹಣಕಾಸು ವರ್ಷ ಇದೇ ಅವಧಿಯಲ್ಲಿ ₹17,394 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 5ರಷ್ಟು ಇಳಿಕೆಯಾಗಿದೆ. ತೈಲ ಸಂಸ್ಕರಣೆ ಮತ್ತು ಪೆಟ್ರೋಕೆಮಿಕಲ್ಸ್ ವ್ಯಾಪಾರದಲ್ಲಿನ ಇಳಿಕೆಯಿಂದ ಲಾಭದ ಪ್ರಮಾಣ ಕಡಿಮೆಯಾಗಿದೆ ಎಂದು ಕಂಪನಿ ಷೇರುಪೇಟೆಗೆ ಸೋಮವಾರ ತಿಳಿಸಿದೆ.

ಒಟ್ಟು ವರಮಾನವು ₹2.4 ಲಕ್ಷ ಕೋಟಿಯಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹2.38 ಲಕ್ಷ ಕೋಟಿಯಷ್ಟಿತ್ತು.

ಜಿಯೊ ಪ್ಲಾಟ್‌ಫಾರ್ಮ್ಸ್ ಲಾಭ ಜಿಗಿತ: ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಆರ್‌ಐಎಲ್) ಅಂಗಸಂಸ್ಥೆಯಾಗಿರುವ ಜಿಯೊ ಪ್ಲಾಟ್‌ಫಾರ್ಮ್ಸ್ ಸೆಪ್ಟೆಂಬರ್ ತ್ರೈಮಾಸಿಕದಲ್ಲಿನ ಲಾಭವು ಶೇ 23ರಷ್ಟು ಏರಿಕೆಯಾಗಿದ್ದು, ₹6,539 ಕೋಟಿ ಲಾಭ ಗಳಿಸಿದೆ.

ವರಮಾನವು ₹31,709 ಕೋಟಿಯಾಗಿದ್ದು, ಶೇ 18ರಷ್ಟು ಏರಿಕೆಯಾಗಿದೆ. ಪ್ರತಿ ಬಳಕೆದಾರನಿಂದ ಪಡೆಯುವ ಸರಾಸರಿ ಮಾಸಿಕ ಆದಾಯವು (ಎಆರ್‌ಪಿಯು) ₹195.1 ಆಗಿದೆ. ಜಿಯೊ 5ಜಿ ಬಳಕೆದಾರರ ಸಂಖ್ಯೆ 14.8 ಕೋಟಿಗೆ ಹೆಚ್ಚಳವಾಗಿದೆ.

ರಿಲಯನ್ಸ್ ರಿಟೇಲ್ ವರಮಾನ ಇಳಿಕೆ: ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿಮಿಟೆಡ್ (ಆರ್‌ಆರ್‌ವಿಎಲ್) ವರಮಾನವು ಶೇ 3ರಷ್ಟು ಇಳಿಕೆಯಾಗಿದ್ದು, ₹66,502 ಕೋಟಿಯಾಗಿದೆ.

ತೆರಿಗೆ ನಂತರದ ಲಾಭ ಶೇ 1ರಷ್ಟು ಹೆಚ್ಚಳವಾಗಿದ್ದು, ₹2,836 ಕೋಟಿಯಾಗಿದೆ.

3 ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆ: ತುರ್ತು ಭೂಸ್ಪರ್ಶ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಮುಂಬೈನಿಂದ ಹೊರಡಬೇಕಿದ್ದ ಮೂರು ಅಂತರರಾಷ್ಟ್ರೀಯ ವಿಮಾನಗಳಿಗೆ ಸೋಮವಾರ ಹುಸಿ ಬಾಂಬ್ ಬೆದರಿಕೆ ಬಂದಿತ್ತು. ಅದರಲ್ಲಿ ನ್ಯೂಯಾರ್ಕ್‌ಗೆ ಸಂಚರಿಸಬೇಕಿದ್ದ ಏರ್ ಇಂಡಿಯಾ ವಿಮಾನವು ನವದೆಹಲಿಯಲ್ಲಿ ತುರ್ತು ಭೂಸ್ಪರ್ಶ ಮಾಡಿದೆ.

'ಭದ್ರತಾ ತಪಾಸಣೆಯನ್ನು ನಡೆಸಲಾಗಿದ್ದು, ವಿಮಾನಗಳೊಳಗೆ ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

'239 ಪ್ರಯಾಣಿಕರಿದ್ದ 'ಏರ್‌ಇಂಡಿಯಾ–119' ವಿಮಾನವು ಸೋಮವಾರ ನ್ಯೂಯಾರ್ಕ್‌ಗೆ ಹೊರಟಿತ್ತು. ಆದರೆ ಭದ್ರತಾ ಸಮಿತಿಯ ಸೂಚನೆಯಂತೆ ವಿಮಾನವನ್ನು ನವದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿಸಬೇಕಾಯಿತು' ಎಂದು ಏರ್ ಇಂಡಿಯಾ ಪ್ರಕಟಣೆ ತಿಳಿಸಿದೆ.

'ಸಾಮಾಜಿಕ ಜಾಲತಾಣ 'ಎಕ್ಸ್' ಮೂಲಕ ಬೆದರಿಕೆ ಸಂದೇಶ ಬಂದಿದ್ದು, ಈ ಬಗ್ಗೆ ಪರಿಶೀಲನೆ ನಡೆಸಲಾಯಿತು. ವಿಮಾನಯಾನ ಸಂಸ್ಥೆಯ ಸಿಬ್ಬಂದಿ ಮತ್ತು ಪ್ರಯಾಣಿಕರನ್ನು ಜನರನ್ನು ತಪಾಸಣೆಗೆ ಒಳಪಡಿಸಲಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ತುರ್ತು ಭೂಸ್ಪರ್ಶಕ್ಕೆ ಭದ್ರತಾ ಸಮಿತಿ ಸೂಚನೆ
- 'ಎಕ್ಸ್' ಮೂಲಕ ಬಂದಿದ್ದ ಬೆದರಿಕೆ ಸಂದೇಶ
- ಇಂದು ಬೆಳಿಗ್ಗೆ ನ್ಯೂಯಾರ್ಕ್‌ನತ್ತ ವಿಮಾನ ಹಾರಾಟ

ಏರ್‌ಇಂಡಿಯಾ ವಿಮಾನವು ಮಂಗಳವಾರ ಬೆಳಿಗ್ಗೆ ಮತ್ತೆ ನ್ಯೂಯಾರ್ಕ್‌ನತ್ತ ಪ್ರಯಾಣ ಬೆಳೆಸಲಿದೆ.

ಇಂಡಿಗೋ ಸಂಸ್ಥೆಯ ಎರಡು ವಿಮಾನಗಳು ಸಹ ಹಲವು ಗಂಟೆ ವಿಳಂಬವಾಗಿ ಪ್ರಯಾಣ ಆರಂಭಿಸಿದವು.

ಇಂಡಿಗೋ ಸಂಸ್ಥೆಯ ವಿಮಾನಗಳನ್ನು ತೀವ್ರ ತಪಾಸಣೆಗೆ ಒಳಪಡಿಸಿ ಬಳಿಕ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ಭಾನುವಾರ ರಾತ್ರಿ 2 ಗಂಟೆಗೆ ಹೊರಡಬೇಕಿದ್ದ ಮುಂಬೈ- ಮಸ್ಕತ್ ವಿಮಾನವು 7 ಗಂಟೆ ವಿಳಂಬವಾಗಿ ಸಂಚಾರ ಆರಂಭಿಸಿತು. ಮುಂಬೈ-ಜೆದ್ದಾ ವಿಮಾನವು 10 ಗಂಟೆ ವಿಳಂಬವಾಗಿ ಹೊರಟಿತು.

ಹಣಕಾಸಿನ ಸ್ಥಿರತೆಗೆ ಎ.ಐ ಸವಾಲು: ಆರ್‌ಬಿಐ

ಮುಂಬೈ/ನವದೆಹಲಿ (ರಾಯಿಟರ್ಸ್/ಪಿಟಿಐ): ಜಾಗತಿಕ ಹಣಕಾಸು ಸೇವೆಗಳಲ್ಲಿ ಹೆಚ್ಚುತ್ತಿರುವ ಕೃತಕ ಬುದ್ಧಿಮತ್ತೆ ಮತ್ತು ಮಷೀನ್ ಲರ್ನಿಂಗ್ ಬಳಕೆಯು ಹಣಕಾಸಿನ ಸ್ಥಿರತೆಗೆ ಸವಾಲುಗಳನ್ನು ಸೃಷ್ಟಿಸಬಹುದು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಸೋಮವಾರ ಹೇಳಿದ್ದಾರೆ.

ಕಡಿಮೆ ಸಂಖ್ಯೆಯ ತಂತ್ರಜ್ಞಾನ ಪೂರೈಕೆದಾರರು ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸಿದಾಗ ಕೃತಕ ಬುದ್ಧಿಮತ್ತೆಯ ಮೇಲಿನ ಹೆಚ್ಚಿನ ಅವಲಂಬನೆಯು ಅಪಾಯಕ್ಕೆ ಕಾರಣವಾಗಬಹುದು. ಬ್ಯಾಂಕ್‌ಗಳು ಅಪಾಯ ತಗ್ಗಿಸುವ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ ಎಂದು ಹೇಳಿದ್ದಾರೆ.

ವೆಚ್ಚ ತಗ್ಗಿಸಲು, ರಿಸ್ಕ್‌ಗಳ ನಿರ್ವಹಣೆ ಮಾಡಲು, ಬ್ಯಾಂಕಿಂಗ್ ಸೇವೆ, ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಲು ಹಣಕಾಸು ಸೇವೆಗಳ ಪೂರೈಕೆದಾರರು ಕೃತಕ ಬುದ್ಧಿಮತ್ತೆ (ಎ.ಐ) ಬಳಸುತ್ತಿದ್ದಾರೆ. ಹೆಚ್ಚುತ್ತಿರುವ ಎ.ಐ ಬಳಕೆಯಿಂದ ಇವು ಸೈಬರ್ ದಾಳಿ ಮತ್ತು ದತ್ತಾಂಶ ಸೋರಿಕೆಗೆ ಒಳಗಾಗುವ ಅಪಾಯ ಇದೆ ಎಂದು ಹೇಳಿದ್ದಾರೆ.



ಶಕ್ತಿಕಾಂತ ದಾಸ್

ಸಮಯ, ವೆಚ್ಚ ತಗ್ಗಿಸುವ ಅಗತ್ಯ: ಭಾರತ ಸೇರಿದಂತೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಪ್ರಮುಖವಾದ ಸಾಗರೋತ್ತರ ಪಾವತಿ ವ್ಯವಸ್ಥೆಯ ಸಮಯ ಮತ್ತು ವೆಚ್ಚವನ್ನು ಕಡಿಮೆ ಮಾಡುವ ಅಗತ್ಯವಿದೆ ಎಂದು ದಾಸ್ ಹೇಳಿದ್ದಾರೆ.

ವಿದೇಶಗಳಲ್ಲಿ ದುಡಿಯುತ್ತಿರುವ ಭಾರತೀಯರು ತಾಯ್ನಾಡಿಗೆ ಕಳೆದ ವರ್ಷ ರವಾನಿಸಿದ ಹಣದ ಮೊತ್ತವು 111 ಬಿಲಿಯನ್ ಡಾಲರ್ (₹9.33 ಲಕ್ಷ ಕೋಟಿ) ಇತ್ತು ಎಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ವಲಸೆ ಸಂಸ್ಥೆಯ 2024ರ ವರದಿ (ಐಒಎಂ) ತಿಳಿಸಿದೆ.

2027ರ ವೇಳೆಗೆ ವಿವಿಧ ದೇಶಗಳ ನಡುವೆ ನಡೆಯುವ ಈ ಪಾವತಿಯ ಮೌಲ್ಯವು 250 ಟ್ರಿಲಿಯನ್ ಡಾಲರ್ (ಸುಮಾರು ₹21 ಸಾವಿರ ಲಕ್ಷ ಕೋಟಿ) ದಾಟಲಿದೆ ಎಂದು ಬ್ಯಾಂಕ್ ಆಫ್ ಇಂಗ್ಲೆಂಡ್ ಅಂದಾಜಿಸಿದೆ.

ಭಾರತ ಮತ್ತು ಇತರೆ ಕೆಲವು ದೇಶಗಳು ಸಾಗರೋತ್ತರ ವೇಗದ ಪಾವತಿ ವ್ಯವಸ್ಥೆಗಳ ಸಂಪರ್ಕವನ್ನು ವಿಸ್ತರಿಸಲು ಈಗಾಗಲೇ ಪ್ರಯತ್ನಗಳನ್ನು ಪ್ರಾರಂಭಿಸಿವೆ ಎಂದು ಹೇಳಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

5ನೇ ವರ್ಷದ ಪುಣ್ಯ ಸ್ಮರಣೆ

ಡಾ|| ಕೆ.ಸಿ.ಲಾವಣ್ಯ
ನಿಧನ : 15–10–2019
ನೀವು ಕಣ್ಮರೆಯಾದ ಈ ಐದು ವರ್ಷದಲ್ಲಿ
ನಿಮ್ಮ ಪ್ರೀತಿ ಮಮತೆ ವಾತ್ಸಲ್ಯದ ಸವಿನೆನಪು ನಮ್ಮೆಲ್ಲರನ್ನು ಸದಾ ಕಾಡುತ್ತಿದೆ
ಪ್ರತಿ ಹೆಜ್ಜೆಯಲ್ಲೂ ನೀವು ತೋರಿದ ತಾಳ್ಮೆ ಹಾಗೂ ಸಹನೆಯನ್ನು ನಾವು ಗೌರವಿಸುತ್ತೇವೆ.
ನೀವು ಕಣ್ಮರೆಯಾದ ಈ ಐದು ವರ್ಷದಲ್ಲಿ
ನಾವೆಲ್ಲರೂ ಅನುಭವಿಸಿದ ನೋವು ಹಂಚಿಕೊಳ್ಳಲು ಅಸಾಧ್ಯ.
ಜನರ ಸೇವೆಯೆ ಜನಾರ್ಧನ ಸೇವೆ ಎಂದು ಭಾವಿಸಿ ಸಲ್ಲಿಸಿದ ನಿಮ್ಮ ಆತ್ಮವಿಶ್ವಾಸದ ಅಚ್ಚು ಮೆಚ್ಚಿನ ಸೇವೆಯಿಂದ
ಇಂದಿಗೂ ಎಂದೆಂದಿಗೂ ಪ್ರತಿಯೊಬ್ಬರಲ್ಲೂ ನಿಮ್ಮ ನೆನಪು ಶಾಶ್ವತವಾಗಿ ಉಳಿದಿದೆ.
ಅಪರೂಪದ ಪ್ರತಿರೂಪ ನಿಮ್ಮದು ಎಂಬ ಹೆಮ್ಮೆ ನಮ್ಮದಾಗಿದೆ.
ಇಂತಿ ಸದಾ ನಿಮ್ಮ ನೆನಪಿನಲ್ಲಿರುವ
ಪತಿ ಡಾ|| ಬಿ.ಎನ್. ತ್ಯಾಗರಾಜ್
ಮಕ್ಕಳು ಪ್ರೀತಮ್ ಟಿ., ನೇಹರಾಜ್ ಟಿ. ಹಾಗೂ ಕುಟುಂಬ ವರ್ಗದವರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted
URGENT REQUIRED for Tele callers job :- Company want Kannada, Tamil, Telugu language Male & Female Candidate. Monthly Salary 25K + Incentives. Age 22 -40. Accommodation By Company.7988242391/701 58 82322

ಪ್ರವಾಸ
Travel
ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6/13 ದಿನಗಳು. 12.11.2024 ಅಹೋಬಲ,ನವನರಸಿಂಹ ಶ್ರೀಶೈಲ 14 ಕ್ಷೇತ್ರಗಳು 9500. 21.11.2024 ರಾಮೇಶ್ವರಂ ಕನ್ಯಾಕುಮಾರಿ 10 ಕ್ಷೇತ್ರಗಳು 9000. 03.12.2024 ಗುಜರಾತ್,ಮಧ್ಯಪ್ರದೇಶ 28000. 9448390735 9449721678

ಭವಿಷ್ಯ
Astrology
ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE
ADS IN PRAJAVANI
ALL KARNATAKA, ON ALL DAYS
www.dhclassifieds.com
@ 500/-* PER SQCM
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಜಾರ್ಖಂಡ್: ವಿವಿಧೆಡೆ ಇ.ಡಿ ದಾಳಿ

ರಾಂಚಿ (ಪಿಟಿಐ): ಜಲ ಜೀವನ್ ಮಿಷನ್ ಯೋಜನೆ ಅನುಷ್ಠಾನದಲ್ಲಿನ ಅಕ್ರಮಗಳ ಜತೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರ್ಖಂಡ್‌ನ ಹಿರಿಯ ಐಎಎಸ್ ಅಧಿಕಾರಿ, ಮತ್ತು ಸಚಿವರೊಬ್ಬರಿಗೆ ಸೇರಿದ ವಿವಿಧ ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ಶೋಧ ನಡೆಸಿದೆ.

ರಾಂಚಿಯ 20ಕ್ಕೂ ಹೆಚ್ಚು ಸ್ಥಳಗಳು, ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯ ಚೈಬಾಸಾದ ಕೆಲ ಸ್ಥಳಗಳ ಮೇಲೆ ದಾಳಿಗಳನ್ನು ನಡೆಸಲಾಗಿದೆ ಎಂದು ಇ.ಡಿ ಮೂಲಗಳು ತಿಳಿಸಿವೆ.

ಭೂಮಿ, ರಸ್ತೆ ಮತ್ತು ಕಟ್ಟಡ ನಿರ್ಮಾಣ ಇಲಾಖೆಯ ಕಾರ್ಯದರ್ಶಿ ಮನೀಶ್ ರಂಜನ್, ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವ ಮಿಥಿಲೇಷ್ ಕುಮಾರ್ ಠಾಕೂರ್ ಅವರ ಆಪ್ತ ಸಿಬ್ಬಂದಿ, ಅವರ ಸಹೋದರ, ಕೆಲ ಸರ್ಕಾರಿ ಅಧಿಕಾರಿಗಳು, ಗುತ್ತಿಗೆದಾರರು ಮತ್ತು ಉದ್ಯಮಿಗಳಿಗೆ ಸಂಬಂಧಿಸಿದ ಹಲವು ಸ್ಥಳಗಳಲ್ಲಿ ಇ.ಡಿ ಅಧಿಕಾರಿಗಳು ಶೋಧ ಕಾರ್ಯಾಚರಣೆ ನಡೆಸಿದರು ಎಂದು ಮೂಲಗಳು ಹೇಳಿವೆ.

ಈ ಹಿಂದೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಾಜಿ ಸಚಿವ ಅಲಂಗಿರ್ ಆಲಂ ಅವರನ್ನು ಬಂಧಿಸಿದ್ದ ವೇಳೆ, ಜಾರಿ ನಿರ್ದೇಶನಾಲಯ ಮನೀಶ್ ರಂಜನ್ ಅವರನ್ನು ವಿಚಾರಣೆಗೆ ಒಳಪಡಿಸಿತ್ತು.

'ಇ.ಡಿ ದಾಳಿಯು ಅನಿರೀಕ್ಷಿತವೇನಲ್ಲ, ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವ ಕಾರಣ ಈ ರೀತಿಯ ದಾಳಿಗಳು ನಡೆಯುತ್ತಲೇ ಇರುತ್ತವೆ' ಎಂದು ಜಾರ್ಖಂಡ್‌ನ ಮುಖ್ಯಮಂತ್ರಿ ಹೇಮಂತ್ ಸೊರೇನ್ ಪ್ರತಿಕ್ರಿಯಿಸಿದ್ದಾರೆ.

'ಇದು ರಾಜಕೀಯ ಪ್ರೇರಿತ ದಾಳಿಯಾಗಿದ್ದು, ಎಷ್ಟೇ ಒತ್ತಡ ಹೇರಿದರೂ ನಾನು ಬಿಜೆಪಿ ಸೇರುವುದಿಲ್ಲ' ಎಂದು ಸಚಿವ ಮಿಥಿಲೇಷ್ ಕುಮಾರ್ ಠಾಕೂರ್ ಹೇಳಿದ್ದಾರೆ.

'ನನ್ನನ್ನು ನೇಣಿಗೆ ಹಾಕಿದರೂ ಅಥವಾ ಜೀವಿತಾವಧಿವರೆಗೂ ಜೈಲಿನಲ್ಲಿ ಇರುವಂತೆ ಮಾಡಿದರೂ ಬಿಜೆಪಿ ಸೇರುವ ಪ್ರಶ್ನೆಯೇ ಇಲ್ಲ' ಎಂದು ಅವರು ತಿಳಿಸಿದ್ದಾರೆ.

ಭತ್ತ ರಾಶಿ

ಪಂಜಾಬ್‌ನ ಜಲಂಧರ್‌ನ ಮಾರುಕಟ್ಟೆಯಲ್ಲಿ ಸೋಮವಾರ ಕಾರ್ಮಿಕರು ಭತ್ತದ ರಾಶಿ ಕಾರ್ಯದಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

ದುರ್ಗಾ ಮೂರ್ತಿಯ ಮೆರವಣಿಗೆ ವೇಳೆ ಕೋಮು ಹಿಂಸಾಚಾರ; ಒಬ್ಬನ ಬಲಿ

ಬಹರಾಯಿಚ್ ಹಿಂಸಾಚಾರ: ವಾಹನಗಳಿಗೆ ಬೆಂಕಿ

ಬಹರಾಯಿಚ್ (ಉತ್ತರ ಪ್ರದೇಶ) (ಪಿಟಿಐ, ಪ್ರಜಾವಾಣಿ ವಾರ್ತೆ): ದುರ್ಗಾ ದೇವಿಯ ಮೂರ್ತಿಯ ಮೆರವಣಿಗೆ ವೇಳೆ ಉಂಟಾದ ಕೋಮು ಹಿಂಸಾಚಾರದಿಂದ 22 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಬಹರಾಯಿಚ್‌ನಲ್ಲಿ ಸೋಮವಾರ ಪರಿಸ್ಥಿತಿ ಬಿಗಡಾಯಿಸಿದೆ. ಪ್ರಕ್ಷುಬ್ಧ ಜನಸಮೂಹವು ಕಬ್ಬಿಣದ ಸಲಾಕೆಗಳನ್ನು ಹಿಡಿದುಕೊಂಡು ವಾಹನಗಳನ್ನು ಜಖಂಗೊಳಿಸಿ, ಅಂಗಡಿಗಳಿಗೂ ಬೆಂಕಿ ಹಚ್ಚಿದ್ದಾರೆ.

ಮುಸಲ್ಮಾನರು ಬಹುಸಂಖ್ಯಾತರಾಗಿರುವ ಮಹಾರಾಜ್‌ಗಂಜ್ ಪಟ್ಟಣದ ಮನ್ಸೂರ್ ಗ್ರಾಮದಲ್ಲಿ ಭಾನುವಾರ ರಾತ್ರಿ ದುರ್ಗಾ ಪ್ರತಿಮೆಯ ವಿಸರ್ಜನೆಗೆ ಮೆರವಣಿಗೆಯಲ್ಲಿ ಕರೆದೊಯ್ಯುವ ವೇಳೆ ಡಿ.ಜೆ. ನುಡಿಸಲು ಸ್ಥಳೀಯರು ಆಕ್ಷೇಪ ವ್ಯಕ್ತಪಡಿಸಿದರು. ಈ ವೇಳೆ ಎರಡು ಕಡೆಗಳಲ್ಲಿ ಗಲಾಟೆ ನಡೆಯಿತು.

ಹತ್ತಿರದ ಮನೆಗಳಿಂದ ದುರ್ಗಾ ಪ್ರತಿಮೆ ಮೇಲೆ ಕಲ್ಲುತೂರಾಟ ನಡೆಸಿದ್ದರಿಂದ ಮೂರ್ತಿ ಜಖಂಗೊಂಡಿತು. ಈ ವೇಳೆ ಅಪರಿಚಿತರು ಗುಂಡಿನ ದಾಳಿ ನಡೆಸಿದ್ದರಿಂದ ಮೆರವಣಿಗೆಯಲ್ಲಿ ಸಾಗುತ್ತಿದ್ದ ರಾಮ್ ಗೋಪಾಲ್ ಮಿಶ್ರಾಗೆ ಗುಂಡು ತಗುಲಿದೆ. ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ದರೂ, ಚಿಕಿತ್ಸೆ ನೀಡುವ ವೇಳೆ ಮೃತಪಟ್ಟರು ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಉತ್ತರಪ್ರದೇಶದ ಬಹರಾಯಿಚ್‌ನಲ್ಲಿ ದುಷ್ಕರ್ಮಿಗಳು ಸೋಮವಾರ ವಾಹನಗಳಿಗೆ ಬೆಂಕಿ ಹಚ್ಚಿದರು–ಪಿಟಿಐ ಚಿತ್ರ

ಮಿಶ್ರಾ ಸಾವಿನ ಬಳಿಕ ಕೋಮು ಹಿಂಸಾಚಾರಗಳು ನಡೆದವು. ಪಖಾರ್‌ಪುರ್ ಪಟ್ಟಣ ಸೇರಿದಂತೆ ವಿವಿಧೆಡೆಗಳಲ್ಲಿ ಮೆರವಣಿಗೆಯನ್ನು ರದ್ದುಗೊಳಿಸಲಾಯಿತು.

ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಮುಖ್ಯ ಆರೋಪಿ ಸಲ್ಮಾನ್ ಸೇರಿದಂತೆ 25 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಹಾರ್ದಿ ಪೊಲೀಸ್ ಠಾಣಾಧಿಕಾರಿ ಸೇರಿದಂತೆ ಇಬ್ಬರನ್ನು ಸರ್ಕಾರ ಅಮಾನತುಗೊಳಿಸಿದೆ.

ಪ್ರತಿಭಟನೆ: ಪೊಲೀಸ್ ಇಲಾಖೆ ಸೇರಿದಂತೆ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ವಿವಿಧೆಡೆ ಪ್ರತಿಭಟನೆಗಳು ನಡೆದವು. ಜನರಲ್ಲಿ ಧೈರ್ಯ ತುಂಬುವ ದೃಷ್ಟಿಯಿಂದ ಪೊಲೀಸರು ಪರೇಡ್ ನಡೆಸಿದರು. ಮನೆ, ಅಂಗಡಿ ಹಾಗೂ ವಾಹನಗಳಿಗೆ ಬೆಂಕಿ ಬಿದ್ದಿದ್ದರಿಂದ ಸ್ಥಳದಲ್ಲಿ ದಟ್ಟಣೆಯ ಹೊಗೆ ಆವರಿಸಿದೆ.

ಗೃಹ ಕಾರ್ಯದರ್ಶಿ ಸಂಜೀವ್ ಗುಪ್ತಾ, ಎಡಿಜಿಪಿ (ಕಾನೂನು ಹಾಗೂ ಸುವ್ಯವಸ್ಥೆ) ಅಮಿತಾಬ್ ಯಶ್ ಅವರು ಘಟನಾ ಸ್ಥಳಕ್ಕೆ ತಲುಪಿದ್ದು, ಪರಿಸ್ಥಿತಿ ಪರಾಮರ್ಶೆ ನಡೆಸಿದ್ದಾರೆ.

'ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವೃಂದಾ ಶುಕ್ಲಾ ತಿಳಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಉತ್ತರ ಪ್ರದೇಶದ ಉಪಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ,' ಉತ್ತರಪ್ರದೇಶದ ಶಾಂತಿ ಹಾಗೂ ಸೌಹಾರ್ದತೆಯ ಕದಡುವ ಯಾವುದೇ ಪ್ರಯತ್ನಗಳಿಗೂ ಯಶಸ್ಸು ಸಿಗುವುದಿಲ್ಲ. ಗಲಭೆಕೋರರನ್ನು ರಕ್ಷಿಸುವವರು ಮತ್ತೊಮ್ಮೆ ಸಕ್ರಿಯವಾಗಿದ್ದು, ಅಂತಹವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

'ಬಹರಾಯಿಚ್‌ನಲ್ಲಿ ನಡೆದ ಹಿಂಸಾಚಾರದ ಕುರಿತಂತೆ ಸುದ್ದಿ ಕೇಳಿ ತೀವ್ರ ಬೇಸರಗೊಂಡಿದ್ದು, ಆಡಳಿತ ವ್ಯವಸ್ಥೆಯು ನಿರ್ಲಕ್ಷ್ಯ ವಹಿಸಿದ್ದು ದುರದೃಷ್ಟಕರ' ಎಂದು ಕಾಂಗ್ರೆಸ್‌ನ ಹಿರಿಯ ನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ. 'ಮುಖ್ಯಮಂತ್ರಿ ಹಾಗೂ ರಾಜ್ಯ ಸರ್ಕಾರವು ತಕ್ಷಣವೇ ಜನರನ್ನು ವಿಶ್ವಾಸಕ್ಕೆ ಪಡೆದುಕೊಂಡು, ಹಿಂಸಾಚಾರವನ್ನು ಕೊನೆಗೊಳಿಸಲು ಪ್ರಯತ್ನಿಸಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಲು ಕ್ರಮ ಕೈಗೊಳ್ಳಬೇಕು. ಕಾನೂನನ್ನು ಕೈಗೆತ್ತಿಕೊಳ್ಳಲು ಅವಕಾಶ ನೀಡಬಾರದು' ಎಂದು ಮನವಿ ಮಾಡಿದ್ದಾರೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಘಟನೆಯ ಮಾಹಿತಿ ಪಡೆದುಕೊಂಡಿದ್ದು, ನಿಗದಿತ ಸಮಯದಲ್ಲಿಯೇ ಮೂರ್ತಿಗಳ ವಿಸರ್ಜನೆಗೆ ಅವಕಾಶ ಮಾಡಿಕೊಡಬೇಕು. ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಬೇಕು ಎಂದು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮುಂಬೈ ಧಾರಣೆ

ಶೇಂಗಾ 14-10-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9100-9200
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಪಾಮ್ ವಾರದ ಡೆಲಿವರಿ	1288 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1210 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹75,800 (75,700)

ಬೆಳ್ಳಿ ಕೆ.ಜಿ ₹90,100 (91,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹3500-4500
ಮಧ್ಯಮ	₹2000-3500
ಸಣ್ಣ	₹1000-2500

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹14000-16800
ತುರುವೇಕೆರೆ	₹15000-15300

ಪಿಎಚ್‌.ಡಿ ಮಾರ್ಗದರ್ಶಕರಿಂದ ಲಂಚಕ್ಕೆ ಬೇಡಿಕೆ: ಆರೋಪ

ಪ್ರಜಾವಾಣಿ ವಾರ್ತೆ

ಚೆನ್ನೈ: ಕೊಯಮತ್ತೂರಿನ ಸರ್ಕಾರಿ ಭಾರತಿಯಾರ್ ವಿಶ್ವವಿದ್ಯಾಲಯದ ಘಟಿಕೋತ್ಸವದ ವೇಳೆ ಸಂಶೋಧನಾ ವಿದ್ಯಾರ್ಥಿಯೊಬ್ಬರು 'ವಿ.ವಿಯ ಪಿಎಚ್‌.ಡಿ ಮಾರ್ಗದರ್ಶಕರು ವಿದ್ಯಾರ್ಥಿಗಳ ಬಳಿ ಲಂಚ ಪಡೆಯುವುದಲ್ಲದೆ, ತಮ್ಮ ವೈಯಕ್ತಿಕ ಕೆಲಸಗಳನ್ನು ಮಾಡುವಂತೆ ಒತ್ತಾಯಿಸುತ್ತಾರೆ' ಎಂದು ಆರೋಪಿಸಿ ರಾಜ್ಯಪಾಲ ಆರ್‌.ಎನ್‌.ರವಿ ಅವರಿಗೆ ದೂರು ನೀಡಿದ್ದು, ಸಂಚಲನ ಮೂಡಿಸಿದೆ.

ವಿಶ್ವವಿದ್ಯಾಲಯದ 39ನೇ ಘಟಿಕೋತ್ಸವ ಸೋಮವಾರ ನಡೆಯುತ್ತಿತ್ತು. ಈ ವೇಳೆ ರಾಜ್ಯಪಾಲರಿಂದ ಪಿಎಚ್‌.ಡಿ ಪದವಿ ಪ್ರಮಾಣಪತ್ರ ಸ್ವೀಕರಿಸಿದ ಸಂಶೋಧನಾರ್ಥಿ ಎ. ಪ್ರಕಾಶ್ ಅವರು ಮಾರ್ಗದರ್ಶಕರು ನೀಡುವ ಕಿರುಕುಳಗಳ ಬಗ್ಗೆ ಪತ್ರ ನೀಡಿದರು.

'ವಿ.ವಿಯ ವಿದ್ಯಾರ್ಥಿ ನಿಲಯದಲ್ಲಿ ಮೂಲಸೌಕರ್ಯದ ಕೊರತೆಯಿದೆ' ಎಂಬುದನ್ನು ಅವರು ಪತ್ರದಲ್ಲಿ ವಿವರಿಸಿದ್ದಾರೆ. ಕೆಲ ವಿದ್ಯಾರ್ಥಿಗಳ ಜತೆಗೂಡಿ ಪ್ರಕಾಶ್, ಪತ್ರವನ್ನು ರಾಜ್ಯಪಾಲರಿಗೆ ನೀಡಿದರು. ವೇದಿಕೆಯಲ್ಲಿದ್ದ ಕೆಲವರಿಂದ ಇದಕ್ಕೆ ವಿರೋಧ ವ್ಯಕ್ತವಾಯಿತು.

ಉನ್ನತ ಶಿಕ್ಷಣ ಸಚಿವ ಗೋವಿ ಚೆಜಿಯಾನ್, ಕುಲಪತಿ ಸೇರಿದಂತೆ ಇತರ ಅಧಿಕಾರಿಗಳ ಜತೆ ವೇದಿಕೆಯಲ್ಲಿದ್ದರು. ಆದರೆ ವಿದ್ಯಾರ್ಥಿ ನೀಡಿದ ದೂರಿನ ಬಗ್ಗೆ ಅವರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

'ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ'

'ಸಂಶೋಧನಾ ವಿದ್ಯಾರ್ಥಿಗಳು ವಿ.ವಿ ವಿರುದ್ಧ ಮಾತನಾಡಲು ಹೆದರುತ್ತಾರೆ. ಕೆಲ ಮಾರ್ಗದರ್ಶಕರು ವಿದ್ಯಾರ್ಥಿಗಳನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ. ಕೆಲವರಂತೂ ವಿದ್ಯಾರ್ಥಿಗಳ ಎಟಿಎಂ ಕಾರ್ಡ್‌ಗಳನ್ನು ಕೇಳುತ್ತಾರೆ. ಇನ್ನೂ ವಿದ್ಯಾರ್ಥಿಗಳನ್ನು ತಮ್ಮ ಮನೆಗೆ ಕರೆಸಿಕೊಂಡು ಅವರ ವೈಯಕ್ತಿಕ ಕೆಲಸಗಳನ್ನು ಮಾಡುವಂತೆ ಒತ್ತಾಯಿಸುತ್ತಾರೆ' ಎಂದು ಪ್ರಕಾಶ್ ಆರೋಪಿಸಿದ್ದಾರೆ.

ಪ್ರಬಂಧ ಅಂತಿಮಗೊಳಿಸುವುದಕ್ಕೂ ಮುನ್ನ ₹ 50 ಸಾವಿರದಿಂದ ₹ 1 ಲಕ್ಷದಷ್ಟು ವ್ಯಯಿಸುವಂತೆಯೂ ಒತ್ತಡ ಹೇರುತ್ತಾರೆ ಎಂದದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧದ ಆರೋಪಕ್ಕೆ ತೀವ್ರ ಆಕ್ಷೇಪ – ಮಾತಿನ ಚಕಮಕಿ

ವಕ್ಫ್ ಸಭೆ: ವಿರೋಧ ಪಕ್ಷಗಳ ಬಹಿಷ್ಕಾರ

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲನೆಗೆ ಸಂಬಂಧಿಸಿದಂತೆ ಸಂಸತ್‌ನ ಜಂಟಿ ಸಮಿತಿಯು ಕಾನೂನು ಹಾಗೂ ನಿಯಾಮವಳಿಗಳಿಗೆ ತಕ್ಕಂತೆ ಕಾರ್ಯನಿರ್ವಹಿಸುತ್ತಿಲ್ಲ ಎಂದು ಆರೋಪಿಸಿ ವಿರೋಧ ಪಕ್ಷಗಳ ಹಲವು ಸಂಸದರು ಸೋಮವಾರ ನಡೆದ ಸಭೆಯನ್ನು ಬಹಿಷ್ಕರಿಸಿದರು.

ಸಂಸತ್‌ನಲ್ಲಿ ನಡೆದ ಸುದೀರ್ಘ ಸಭೆಯಲ್ಲಿ ಬಿಜೆಪಿ ಹಾಗೂ ವಿರೋಧ ಪಕ್ಷದ ಸಂಸದರ ನಡುವೆ ಮಾತಿನ ಚಕಮಕಿ ನಡೆಯಿತು. ಮುಸ್ಲಿಂ ಸಮುದಾಯಕ್ಕೆ ಸಂಬಂಧಿಸಿದ ಕಾನೂನಿಗೆ ಸಂಬಂಧಿಸಿದಂತೆ ಹಿಂದೂ ಸಂಘಟನೆಗಳ ಮುಖಂಡರನ್ನು ಆಹ್ವಾನಿಸಿದ ಔಚಿತ್ಯವನ್ನು ಪ್ರಶ್ನಿಸಿದರು.

ಖರ್ಗೆ ಹೆಸರು ಉಲ್ಲೇಖ– ಆಕ್ರೋಶ: 'ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖಂಡ ರೆಹಮಾನ್ ಖಾನ್ ಅವರು ವಕ್ಫ್‌ಗೆ ಸಂಬಂಧಿಸಿದ ಆಸ್ತಿಗಳ ಕಬಳಿಕೆಯಲ್ಲಿ ಭಾಗಿಯಾಗಿದ್ದಾರೆ' ಎಂದು ಬಿಜೆಪಿಯ ಮಾಜಿ ಉಪಾಧ್ಯಕ್ಷ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ಅವರು ಸಭೆಯಲ್ಲಿ ಹೆಸರು ಉಲ್ಲೇಖಿಸಿದರು.

ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲನೆಗೆ ಸಂಬಂಧಿಸಿದಂತೆ ನವದೆಹಲಿಯಲ್ಲಿ ಸೋಮವಾರ ನಡೆದ ಜಂಟಿ ಸಂಸದೀಯ ಸಮಿತಿ ಸಭೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಸಂಸದ ಗೌರವ್ ಗೊಗೋಯಿ, ಎಐಎಂಐಎಂನ ಅಸಾದುದ್ದೀನ್ ಒವೈಸಿ –ಪಿಟಿಐ ಚಿತ್ರ

'ಉನ್ನತ ಗಣ್ಯರ ವಿರುದ್ಧ ಸಾಬೀತಾಗದ ಆರೋಪಗಳನ್ನು ಮಾಡಲಾಗುತ್ತಿದೆ. ಈ ಸಮಿತಿಯಲ್ಲಿ ಅದನ್ನು ಪ್ರಸ್ತಾಪಿಸುವುದು ಸರಿಯಲ್ಲ. ಸಭೆಯಲ್ಲಿ ಇರದವರ ವಿರುದ್ಧ ಆರೋಪ ಮಾಡುತ್ತಿದ್ದು, ಅವರು ತಮ್ಮ ಮೇಲಿನ ಆರೋಪಗಳನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ವಿರೋಧ ಪಕ್ಷದ ಸಂಸದರು ಆಕ್ಷೇಪ ವ್ಯಕ್ತಪಡಿಸಿದರು.

ಆದರೆ, ಸಮಿತಿಯ ಅಧ್ಯಕ್ಷ ಜಗದಾಂಬಿಕಾ ಪಾಲ್ ಅವರು ವಿರೋಧ ಪಕ್ಷದವರ ಆರೋಪಗಳನ್ನು ತಳ್ಳಿಹಾಕಿ, ಮಾಣಿಪ್ಪಾಡಿ ಅವರಿಗೆ ಮಾತನಾಡಲು ಅವಕಾಶ ನೀಡಿದರು.

ಹಿಂದೂ ಸಂಘಟನೆಗಳ ಆಹ್ವಾನಕ್ಕೆ ವಿರೋಧ

ಸಮಿತಿ ಸಭೆಗೆ ಹಿಂದೂ ಸಂಘಟನೆಯ ಮುಖಂಡರನ್ನು ಆಹ್ವಾನಿಸಿದ್ದಕ್ಕೆ ವಿರೋಧ ಪಕ್ಷದ ಸದಸ್ಯರು ಪ್ರತಿಭಟನೆ ದಾಖಲಿಸಿದರು. ವಕ್ಫ್ (ತಿದ್ದುಪಡಿ) ಮಸೂದೆಯು ಮುಸ್ಲಿಂ ಸಮುದಾಯಕ್ಕೆ ಸಂಬಂಧಿಸಿದ್ದು, ಹಿಂದೂ ಸಂಘಟನೆಗಳ ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಲು ಮುಂದಾದ ವೇಳೆ ಆಕ್ಷೇಪ ವ್ಯಕ್ತಪಡಿಸಿದರು.

'ವಕ್ಫ್ ಕಾಯ್ದೆಯಿಂದ ಮುಸ್ಲಿಂಯೇತರ ದೇವಸ್ಥಾನ ಸೇರಿದಂತೆ ಇತರೆ ಆಸ್ತಿಗಳ ಮೇಲೆ ಯಾವ ರೀತಿ ಪರಿಣಾಮ ಬೀರುತ್ತಿದೆ ಎಂದು ಅಭಿಪ್ರಾಯ ದಾಖಲಿಸಲು ಸಂಘಟನೆ ಹಾಗೂ ಮುಖಂಡರು ಭಾಗವಹಿಸಿದ್ದಾರೆ. ಅವರ ಅಭಿಪ್ರಾಯದ ಕುರಿತು ಸಮಿತಿಯು ವಿಸ್ತೃತ ಸಮಾಲೋಚನೆ ನಡೆಸಬಹುದು' ಬಿಜೆಪಿ ಸಂಸದರು ತಿಳಿಸಿದರು.

'ಮೂಲಭೂತ ಸಿದ್ಧಾಂತ ಹೊಂದಿರುವ ಸನಾತನ ಸಂಸ್ಥೆ, ಹಿಂದೂ ಜನಜಾಗೃತಿ ಸಂಸ್ಥೆಯು 'ಹಿಂದೂರಾಷ್ಟ್ರ' ನಿರ್ಮಾಣ ಮಾಡುವ ಗುರಿ ಹೊಂದಿದ್ದು, ದೇಶದಲ್ಲಿ ಹಿಂಸಾಚಾರದಲ್ಲಿ ತೊಡಗಿದೆ. ಇಂತಹವರಿಗೆ ಆಹ್ವಾನ ನೀಡಿದ್ದು ಸರಿಯಲ್ಲ' ಎಂದು ಸಮಿತಿ ಅಧ್ಯಕ್ಷ ಪಾಲ್ ಅವರಿಗೆ ಪತ್ರ ಬರೆದಲ್ಲಿ ಒವೈಸಿ ಆರೋಪ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಕೀಲರಾದ ವಿಷ್ಣುಶಂಕರ್ ಜೈನ್, ಅಶ್ವಿನಿ ಉಪಾಧ್ಯಾಯ್, ಮಹಾರಾಷ್ಟ್ರದ ನಾಸಿಕ್‌ನ ಕಾಲಾರಾಮ್ ದೇಗುಲದ ಮಹಾಂತ ಸುಧೀರ್‌ದಾಸ್ ಮಹಾರಾಜ್ ಅವರನ್ನು ಸಭೆಗೆ ಕರೆದಿದ್ದಕ್ಕೂ ಆಕ್ಷೇಪ ವ್ಯಕ್ತಪಡಿಸಿದರು.

ಜಮೀಯತ್ ಉಲೇಮಾ–ಎ– ಹಿಂದ್‌ನ ಮಹಮ್ಮದ್ ಮದನಿ ಕೂಡ ಸಭೆಯಲ್ಲಿ ಭಾಗವಹಿಸಿದ್ದರು. ಮಸೂದೆಗೆ ಸಂಘಟನೆಯು ಬಲವಾಗಿ ವಿರೋಧಿಸುತ್ತದೆ ಎಂದರು.

'ವಕ್ಫ್‌ಗೆ ಸಂಬಂಧಿಸಿದ ಆಸ್ತಿಗಳು ಕೆಲವರಿಂದ ಕಬಳಿಕೆಯಾಗಿದ್ದು, ಮಸೂದೆಗೆ ಸಂಬಂಧಿಸಿದ್ದೇ ಆಗಿದೆ' ಎಂದು ಮಾಣಿಪ್ಪಾಡಿ ಸಮರ್ಥಿಸಿಕೊಂಡರು.

ಇದರಿಂದ ಆಕ್ರೋಶಗೊಂಡ ಕಾಂಗ್ರೆಸ್ ಸಂಸದರಾದ ಗೌರವ್ ಗೊಗೋಯಿ, ಇಮ್ರಾನ್ ಮಸೂದ್, ಡಿಎಂಕೆಯ ಎ.ರಾಜಾ, ಶಿವಸೇನಾದ (ಉದ್ಧವ್ ಬಣ) ಅರವಿಂದ್ ಸಾವಂತ್, ಎಐಎಂಐಎಂನ ಅಸಾದುದ್ದೀನ್ ಒವೈಸಿ, ಸಮಾಜವಾದಿ ಪಕ್ಷದ ಮೊಹಿಬುಲ್ಲಾ, ಆಮ್ ಆದ್ಮಿ ಪಕ್ಷದ ಸಂಜಯ್ ಸಿಂಗ್ ಅವರು ಸಭೆಯಿಂದ ಹೊರ ನಡೆದರು.

'ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲನೆ ನಡೆಸುತ್ತಿರುವ ಜಂಟಿ ಸದನ ಸಮಿತಿಯು ಕಾನೂನಿಗೆ ತಕ್ಕಂತೆ ಕಾರ್ಯನಿರ್ವಹಿಸುತ್ತಿಲ್ಲ' ಎಂದು ಸಾವಂತ್ ಅವರು ಮಾಧ್ಯಮಗಳಿಗೆ ತಿಳಿಸಿದರು.

ಮುಂದಿನ ಕಾರ್ಯವಿಧಾನ ಕುರಿತು ವಿರೋಧ ಪಕ್ಷದ ಸಂಸದರು ಪ್ರತ್ಯೇಕ ಸಭೆ ನಡೆಸಿದರು. ಈ ಕುರಿತು ಲೋಕಸಭಾ ಸ್ಪೀಕರ್‌ಗೆ ಮಂಗಳವಾರ ಪತ್ರ ಬರೆಯುವ ಸಾಧ್ಯತೆಯಿದೆ.

ಮುಂಬೈನಲ್ಲಿ ಟೋಲ್ ಶುಲ್ಕ ರದ್ದು: ಆದೇಶ

ಪ್ರಜಾವಾಣಿ ವಾರ್ತೆ

ಮುಂಬೈ: ಮುಂಬೈ ಪ್ರವೇಶಿಸುವ ಮತ್ತು ನಿರ್ಗಮಿಸುವ ಎಲ್ಲ ಐದು ಹೆದ್ದಾರಿಗಳಲ್ಲಿ ಟೋಲ್ ಶುಲ್ಕವನ್ನು 'ಮಹಾಯುತಿ' ಸರ್ಕಾರ ರದ್ದುಗೊಳಿಸಿದೆ.

ಈ ಆದೇಶವು ಸೋಮವಾರ ಮಧ್ಯರಾತ್ರಿಯಿಂದಲೇ ಜಾರಿಗೆ ಬರಲಿದೆ.

ವಿಧಾನಸಭೆಗೆ ಶೀಘ್ರದಲ್ಲೇ ಚುನಾವಣೆ ಘೋಷಣೆಯಾಗುವ ಸಾಧ್ಯತೆ ಇದೆ. ಹೀಗಾಗಿ, ಸರ್ಕಾರದ ಈ ನಿರ್ಧಾರ ಮಹತ್ವ ಪಡೆದಿದೆ. ಇದುವರೆಗೆ ವಿಧಿಸುತ್ತಿದ್ದ ₹45 ಟೋಲ್ ಶುಲ್ಕವನ್ನು ರದ್ದುಗೊಳಿಸಲು ಸಚಿವ ಸಂಪುಟ ಸೋಮವಾರ ನಿರ್ಧರಿಸಿದೆ.

ಕಾರು, ಜೀಪ್, ಮಿನಿ ಗೂಡ್ಸ್ ವಾಹನ ಸೇರಿ ಲಘು ವಾಹನಗಳಿಗೆ (ಎಲ್‌ಎಂವಿ) ಟೋಲ್ ಶುಲ್ಕ ವಿನಾಯಿತಿ ಕಲ್ಪಿಸಲಾಗಿದೆ. 'ನಿತ್ಯ ನೂರಕ್ಕೂ ಹೆಚ್ಚು ನಿರ್ಧಾರಗಳನ್ನು ಪ್ರಕಟಿಸುತ್ತಿರುವ ಸರ್ಕಾರ, ಅವುಗಳನ್ನು ಹೇಗೆ ತಾನೆ ಜಾರಿಗೊಳಿಸಲು ಸಾಧ್ಯ' ಎಂದು ಶಿವಸೇನೆ (ಉದ್ಧವ್ ಠಾಕ್ರೆ ಬಣ) ನಾಯಕ ಸಂಜಯ್ ರಾವತ್ ಕುಟುಕಿದ್ದಾರೆ.

ಸುಪ್ರೀಂ ಕೋರ್ಟ್ ಅಭಿಪ್ರಾಯ

'ಪಿಎಂಎಲ್‌ಎ ಕಾಯ್ದೆಯು ಅದೆಷ್ಟೇ ಕಠಿಣವಾಗಿರಬಹುದು, ನ್ಯಾಯಮೂರ್ತಿಗಳಾದ ನಾವು ಕಾನೂನಿನ ಚೌಕಟ್ಟಿನ ಅಡಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಅನಾರೋಗ್ಯಕ್ಕೆ ತುತ್ತಾಗಿರುವ ವ್ಯಕ್ತಿಗೆ ಜಾಮೀನು ನೀಡಬೇಕು ಎಂದು ಕಾನೂನು ಹೇಳುತ್ತದೆ'

'ಅನಾರೋಗ್ಯಕ್ಕೆ ಒಳಗಾದ ವ್ಯಕ್ತಿಗೆ ಜಾಮೀನು ನೀಡಬಹುದು'

ನವದೆಹಲಿ: ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯು (ಪಿಎಂಎಲ್‌ಎ) ಬಹಳ ಕಠಿಣವಾಗಿದ್ದರೂ, ಆರೋಪಿಯು ಆರೋಗ್ಯವಾಗಿ ಇಲ್ಲದಿದ್ದಾಗ ಆತನಿಗೆ ಈ ಕಾಯ್ದೆಯ ಅಡಿಯಲ್ಲಿ ಜಾಮೀನು ನೀಡಬಹುದು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಸೇವಾ ವಿಕಾಸ ಸಹಕಾರ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಅಮರ್ ಸಾಧುರಾಮ್ ಮೂಲಚಂದಾನಿ ಅವರಿಗೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರು ಇರುವ ತ್ರಿಸದಸ್ಯ ಪೀಠವು ವೈದ್ಯಕೀಯ ಕಾರಣಕ್ಕಾಗಿ ಜಾಮೀನು ಮಂಜೂರು ಮಾಡಿದೆ.

ಅಮರ್ ಅವರು, ₹429 ಕೋಟಿ ಮೊತ್ತದ ಹಣದ ಅವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬಂಧನದಲ್ಲಿದ್ದಾರೆ. ಅವರನ್ನು 2023ರ ಜುಲೈ 1ರಂದು ಬಂಧಿಸಲಾಗಿತ್ತು.

ಆರೋಪಿಯ ವಿರುದ್ಧ ನಾಲ್ಕು ಎಫ್‌ಐಆರ್‌ಗಳು ಇವೆ ಎಂದು ಹಿರಿಯ ವಕೀಲ ಎ.ಎಸ್. ನಾಡಕರ್ಣಿ ಅವರು ಪೀಠದ ಗಮನಕ್ಕೆ ತಂದರು. ಅಮರ್ ಅವರು ಒಂದು ವರ್ಷಕ್ಕೂ ಹೆಚ್ಚಿನ ಅವಧಿಯಿಂದ ಜೈಲಿನಲ್ಲಿ ಇದ್ದಾರೆ ಎಂಬುದನ್ನು ಪೀಠವು ದಾಖಲಿಸಿಕೊಂಡಿತು.

ಅಮರ್ ಅವರು ವೈದ್ಯಕೀಯ ಕಾರಣಕ್ಕೆ ತಮಗೆ ಜಾಮೀನು ನೀಡಬೇಕು ಎಂಬ ಕೋರಿಕೆಯೊಂದಿಗೆ ಸಲ್ಲಿಸಿದ್ದ ಅರ್ಜಿಯನ್ನು ಬಾಂಬೆ ಹೈಕೋರ್ಟ್ ಆಗಸ್ಟ್‌ನಲ್ಲಿ ವಜಾಗೊಳಿಸಿದೆ. ಇದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಸಿದ್ದೀಕಿ ಹತ್ಯೆ: ಶೂಟರ್‌ಗಾಗಿ ತೀವ್ರ ಶೋಧ

ಉಜ್ಜಯಿನಿ, ಖಾಂಡ್ವಾದಲ್ಲಿ ಹುಡುಕಾಟ • ಮೂರನೇ ಆರೋಪಿ 21ರವರೆಗೆ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಭೋಪಾಲ್/ ಮುಂಬೈ: ಮಹಾರಾಷ್ಟ್ರದ ಎನ್‌ಸಿಪಿ (ಅಜಿತ್ ಪವಾರ ಬಣ) ನಾಯಕ, ಮಾಜಿ ಸಚಿವ ಬಾಬಾ ಸಿದ್ದೀಕಿ (66) ಹತ್ಯೆ ಪ್ರಕರಣದಲ್ಲಿ ಶಂಕಿತ ಶೂಟರ್ ಶಿವಕುಮಾರ್ ಗೌತಮ್‌ಗಾಗಿ ಮುಂಬೈ ಪೊಲೀಸರು ಮಧ್ಯ ಪ್ರದೇಶದ ಉಜ್ಜಯಿನಿ ಮತ್ತು ಖಾಂಡ್ವಾ ಜಿಲ್ಲೆಗಳ ಪೂಜಾ ಸ್ಥಳಗಳ ಬಳಿ ತೀವ್ರ ಶೋಧ ನಡೆಸಿದ್ದಾರೆ.

ಈ ಪ್ರಕಣದಲ್ಲಿ ಪೊಲೀಸರು ಇಲ್ಲಿಯವರೆಗೆ ಹರಿಯಾಣದ ನಿವಾಸಿ ಗುರ್ಮೈಲ್ ಬಲ್ಜಿತ್ ಸಿಂಗ್ (23), ಉತ್ತರ ಪ್ರದೇಶದ ಧರ್ಮರಾಜ್ ರಾಜೇಶ್ ಕಶ್ಯಪ್ (19) ಮತ್ತು ಪುಣೆಯ ಸಹ ಸಂಚುಕೋರ ಪ್ರವೀಣ್ ಲೋಣ್ಕರ್ ಅವರನ್ನು ಬಂಧಿಸಿದ್ದಾರೆ. ಪ್ರಕರಣಕ್ಕೆ ಬೇಕಿರುವ ಮೊಹಮ್ಮದ್ ಜಿಶನ್ ಅಖ್ತರ್ ಮತ್ತು ಗೌತಮ್‌ಗಾಗಿ ಹುಡುಕಾಟ ನಡೆಸಿದ್ದಾರೆ.

ಉತ್ತರ ಪ್ರದೇಶದ ಬಹರಾಯಿಚ್ ಜಿಲ್ಲೆಯವನಾದ ಗೌತಮ್‌ನ ಜಾಡು ಹಿಡಿದು ಮುಂಬೈ ಪೊಲೀಸರು ಮಧ್ಯ ಪ್ರದೇಶಕ್ಕೆ ಬಂದಿದ್ದು, ಸ್ಥಳೀಯ ಪೊಲೀಸರ ಜತೆಗೂಡಿ ಉಜ್ಜಯಿನಿ ಮತ್ತು ಖಾಂಡ್ವಾಗಳಲ್ಲಿನ ಪ್ರಸಿದ್ಧ ಮಹಾಕಾಲ್ ಮತ್ತು ಓಂಕಾರೇಶ್ವರ ದೇವಾಲಯಗಳ ಬಳಿಯೂ ಸೇರಿದಂತೆ ಇತರೆಡೆ ಶೋಧ ಕೈಗೊಂಡಿದ್ದಾರೆ.

ಪುಣೆಯಲ್ಲಿ ಸಂಚಿನ ಯೋಜನೆ: ಸಿದ್ದೀಕಿ ಕೊಲೆಗೆ ಆರೋಪಿಗಳು ಪುಣೆಯಲ್ಲಿ ಸಂಚು ರೂಪಿಸಿದ್ದರು. ಶೂಟರ್‌ಗಳಿಗೆ ಸಿದ್ದೀಕಿ ಅವರನ್ನು ಗುರುತಿಸಲು ಅವರ ಭಾವಚಿತ್ರ ಮತ್ತು ಫ್ಲೆಕ್ಸ್ ಬ್ಯಾನರ್ ಅನ್ನು ಒದಗಿಸಲಾಗಿತ್ತು ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಇದೇ 21ರವರೆಗೆ ಪೊಲೀಸ್ ವಶಕ್ಕೆ: ಮೂರನೇ ಆರೋಪಿ ಪ್ರವೀಣ್ ಲೋಣ್ಕರ್ ಅನ್ನು ಇದೇ 21ರವರೆಗೆ ಪೊಲೀಸ್ ವಶಕ್ಕೆ ಒಪ್ಪಿಸಿ ಇಲ್ಲಿನ ನ್ಯಾಯಾಲಯ ಆದೇಶಿಸಿದೆ. ಪೊಲೀಸರು ಪುಣೆಯಲ್ಲಿ ಆತನನ್ನು ಭಾನುವಾರ ಬಂಧಿಸಿದ್ದರು.

ಲಾರೆನ್ಸ್ ಈಗ ದೊಡ್ಡ ಗ್ಯಾಂಗ್

ಲಾರೆನ್ಸ್ ಬಿಷ್ಣೋಯ್

ಮಾಜಿ ಸಚಿವ ಸಿದ್ದೀಕಿ ಹತ್ಯೆಯಲ್ಲಿ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ (31) ತಂಡದ ಹೆಸರು ಕೇಳಿ ಬಂದ ಬೆನ್ನಲ್ಲೇ, ಅದೀಗ ದೊಡ್ಡ ಗ್ಯಾಂಗ್ ಆಗಿ ಬಿಂಬಿತವಾಗುತ್ತಿದೆ.

ಬಿಷ್ಣೋಯ್ ಗ್ಯಾಂಗ್ ದೇಶದಾದ್ಯಂತ ಶಾರ್ಪ್‌ಶೂಟರ್‌ಗಳೂ ಸೇರಿದಂತೆ ಸುಮಾರು 700 ಸದಸ್ಯರನ್ನು ಹೊಂದಿದೆ ಎಂದು ರಾಷ್ಟ್ರೀಯ ತನಿಖಾ ಏಜೆನ್ಸಿಯ (ಎನ್‌ಐಎ) ಮೂಲಗಳು ತಿಳಿಸಿವೆ.

ರಾಜಸ್ಥಾನದ ಜೋಧ್‌ಪುರದಲ್ಲಿ 1998ರಲ್ಲಿ ಕೃಷ್ಣಮೃಗಗಳನ್ನು ಕೊಂದಿದ್ದ ಆರೋಪ ಎದುರಿಸುತ್ತಿರುವ ಬಾಲಿವುಡ್ ಪ್ರಸಿದ್ಧ ನಟ ಸಲ್ಮಾನ್ ಖಾನ್‌ಗೆ ಲಾರೆನ್ಸ್ ಬಿಷ್ಣೋಯ್ ಕಡೆಯಿಂದ ಸರಣಿ ಬೆದರಿಕೆಗಳು ಬಂದಿದ್ದವು. ಬಿಷ್ಣೋಯ್ ಸಮುದಾಯವು ಕೃಷ್ಣಮೃಗಗಳನ್ನು ಪವಿತ್ರ ಪ್ರಾಣಿಗಳೆಂದು ಪರಿಗಣಿಸುತ್ತದೆ.

ಜೋಧ್‌ಪುರ ನ್ಯಾಯಾಲಯವು 2018ರ ಏಪ್ರಿಲ್‌ನಲ್ಲಿ ಸಲ್ಮಾನ್ ಖಾನ್‌ಗೆ ಐದು ವರ್ಷಗಳ ಸಜೆ ಮತ್ತು ₹ 10 ಸಾವಿರ ದಂಡ ವಿಧಿಸಿತ್ತು. ಈ ಶಿಕ್ಷೆಯನ್ನು ಸಲ್ಮಾನ್ ರಾಜಸ್ಥಾನದ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ.

ಸದ್ಯ ಡ್ರಗ್ಸ್ ಪ್ರಕರಣದಲ್ಲಿ ಬಂಧಿತರಾಗಿ ಗುಜರಾತಿನ ಸಬರಮತಿ ಜೈಲಿನಲ್ಲಿರುವ ಲಾರೆನ್ಸ್ ಬಿಷ್ಣೋಯ್, ಪಂಜಾಬಿ ಗಾಯಕ ಸಿಧು ಮೂಸೆವಾಲಾ, ಖಾಲಿಸ್ತಾನಿ ಪ್ರತ್ಯೇಕತಾವಾದಿ ಸುಖ್‌ದೂಲ್ ಸಿಂಗ್ ಹತ್ಯೆ ಸೇರಿದಂತೆ ಎರಡು ಡಜನ್‌ಗೂ ಹೆಚ್ಚು ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಕೆನಡಾ ಮೂಲದ ಗ್ಯಾಂಗ್‌ಸ್ಟರ್ ಗೋಲ್ಡಿ ಬ್ರಾರ್ ಜತೆಗೂ ಲಾರೆನ್ಸ್‌ಗೆ ಸಂಬಂಧವಿದೆ.

3 ದಶಕಗಳಲ್ಲಿನ ದೊಡ್ಡ ರಾಜಕೀಯ ಹತ್ಯೆ

ಬಾಬಾ ಸಿದ್ದೀಕಿ ಹತ್ಯೆಯು ಮೂರು ದಶಕಗಳಲ್ಲಿ ಮುಂಬೈ ಕಂಡಿರುವ ಅತಿ ದೊಡ್ಡ ರಾಜಕೀಯ ವ್ಯಕ್ತಿಯ ಹತ್ಯೆಯಾಗಿದೆ.

25ರಿಂದ 30 ವರ್ಷಗಳಲ್ಲಿ ಇಬ್ಬರು ದೊಡ್ಡ ರಾಜಕಾರಣಿಗಳ ಹತ್ಯೆಯಾಗಿತ್ತು. 1997ರ ಜನವರಿ 16ರಲ್ಲಿ ಡಾ. ದತ್ತ ಸಾಮಂತ್ ಮತ್ತು 2006ರ ಮೇ 3ರಂದು ಪ್ರಮೋದ್ ಮಹಾಜನ್ ಅವರು ಕೊಲೆಯಾಗಿದ್ದರು ಎಂದು ಗುಪ್ತಚರ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಡಾ. ಸಾಮಂತ್ ಅವರು ಡಾಕ್ಟರ್ ಸಾಹೇಬ್ ಎಂದೇ ಪ್ರಸಿದ್ಧರಾಗಿದ್ದರು. ಅವರು ಜವಳಿ ಗಿರಣಿ ಕಾರ್ಮಿಕರ ಚಳವಳಿ ಮತ್ತು 1982ರ ಬಾಂಬೆ ಗಿರಣಿಗಳ ಮುಷ್ಕರದ ನೇತೃತ್ವ ವಹಿಸಿದ್ದರು. ಎಂಟನೇ ಲೋಕಸಭೆಯಲ್ಲಿ ಮುಂಬೈ ಸೌತ್ ಸೆಂಟ್ರಲ್ ಕ್ಷೇತ್ರವನ್ನು ಪಕ್ಷೇತರರಾಗಿ ಪ್ರತಿನಿಧಿಸಿದ್ದರು. ಅವರ ಹತ್ಯೆ ಪ್ರಕರಣದಲ್ಲಿ ಛೋಟಾ ರಾಜನ್ ಹೆಸರು ಕೇಳಿಬಂದಿತ್ತು.

ಬಿಜೆಪಿಯ ಪ್ರಮುಖ ನಾಯಕರಾಗಿದ್ದ ಕೇಂದ್ರದ ಮಾಜಿ ಸಚಿವ ಪ್ರಮೋದ್ ಮಹಾಜನ್ ಅವರನ್ನು ಅವರ ಸಹೋದರ ಪ್ರವೀಣ್ ಮಹಾಜನ್ ಗುಂಡಿಕ್ಕಿ ಹತ್ಯೆ ಮಾಡಿದ್ದರು.

90ರ ದಶಕದಲ್ಲಿ ಬಿಜೆಪಿ ನಾಯಕ ಮತ್ತು ಮಾಜಿ ಶಾಸಕರಾದ ರಾಮದಾಸ್ ನಾಯಕ್ (ಖೇರ್ವಾಡಿ), ಪ್ರೇಮ್ ಕುಮಾರ್ ಶರ್ಮಾ (ಖೇತ್ವಾಡಿ) ಮತ್ತು ಮೌಲಾನಾ ಜಿಯಾವುದ್ದೀನ್ ಬುಖಾರಿಯ ಅವರ ಹತ್ಯೆಗಳಾಗಿದ್ದವು. ಈ ರೀತಿಯ ರಾಜಕೀಯ ವ್ಯಕ್ತಿಗಳ ಕೊಲೆಗಳ ಪೈಕಿ 1970ರ ಜೂನ್ 5ರಂದು ನಡೆದ ಕೃಷ್ಣ ದೇಸಾಯಿ ಅವರ ಹತ್ಯೆಯೇ ಮೊದಲನೇಯದ್ದು ಎಂದು ಅವರು ಮಾಹಿತಿ ನೀಡಿದರು.

ನಾಳೆ ಪ್ರಮಾಣ ವಚನ ಸ್ವೀಕರಿಸಲಿರುವ ಒಮರ್

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಮೊದಲ ಮುಖ್ಯಮಂತ್ರಿಯಾಗಿ ಅ.16ರಂದು ಪ್ರಮಾಣ ವಚನ ಸ್ವೀಕರಿಸಲು ನ್ಯಾಷನಲ್ ಕಾನ್ಫರೆನ್ಸ್ ನಾಯಕ ಒಮರ್ ಅಬ್ದುಲ್ಲಾ ಅವರಿಗೆ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಸೋಮವಾರ ಆಹ್ವಾನ ನೀಡಿದರು.

ಕೇಂದ್ರ ಸರ್ಕಾರವು ಅಲ್ಲಿದ್ದ ರಾಷ್ಟ್ರಪತಿ ಆಳ್ವಿಕೆಯನ್ನು ಹಿಂಪಡೆದ ಒಂದು ದಿನದ ಬಳಿಕ ಒಮರ್ ಅವರಿಗೆ ಆಹ್ವಾನ ನೀಡಲಾಗಿದೆ.

'ಅ.11ರಂದು ಜಮ್ಮು ಮತ್ತು ಕಾಶ್ಮೀರ ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಡಾ.ಫಾರೂಕ್ ಅಬ್ದುಲ್ಲಾ ಅವರಿಂದ ನಾನು ಸ್ವೀಕರಿಸಿದ ಪತ್ರದಲ್ಲಿ ಶಾಸಕಾಂಗ ಪಕ್ಷದ ನಾಯಕರಾಗಿ ನಿಮ್ಮನ್ನು ಆಯ್ಕೆ ಮಾಡಿದ್ದಾಗಿ ತಿಳಿಸಲಾಗಿದೆ' ಎಂದು ಸಿನ್ಹಾ ಅವರು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಕಾಂಗ್ರೆಸ್, ಸಿಪಿಐ(ಎಂ), ಆಪ್ ಮತ್ತು ಇತರೆ ಪಕ್ಷೇತರ ಚುನಾಯಿತ ಅಭ್ಯರ್ಥಿಗಳಿಂದಲೂ ನ್ಯಾಷನಲ್ ಕಾನ್ಫರೆನ್ಸ್‌ಗೆ ಬೆಂಬಲ ನೀಡಿರುವ ಬಗ್ಗೆ ಪತ್ರ ಬಂದಿವೆ. ಶ್ರೀನಗರದಲ್ಲಿ ಅ.16ರಂದು ಬೆಳಿಗ್ಗೆ 11.30ಕ್ಕೆ ಪ್ರಮಾಣ ವಚನ ಬೋಧಿಸುವುದಾಗಿ ತಿಳಿಸಿದ್ದಾರೆ.

ಸರ್ಕಾರ ರಚಿಸಲು ಒಮರ್ ಅಬ್ದುಲ್ಲಾ ಅವರಿಗೆ ಎಲ್‌ಜಿ ಮನೋಜ್ ಸಿನ್ಹಾ ಸೋಮವಾರ ಆಹ್ವಾನ ನೀಡಿದರು

ದೆಹಲಿ: ಪಟಾಕಿ ಬಳಕೆಗೆ ನಿಷೇಧ

ನವದೆಹಲಿ (ಪಿಟಿಐ): ನಗರದ ವಾಯು ಮಾಲಿನ್ಯವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ದೆಹಲಿ ಸರ್ಕಾರವು ಎಲ್ಲ ವಿಧದ ಪಟಾಕಿಗಳ ಬಳಕೆಗೆ ಸೋಮವಾರ ನಿಷೇಧ ಹೇರಿದೆ. ಈ ನಿಷೇಧವು ತಕ್ಷಣದಿಂದಲೇ ಜಾರಿಯಾಗಲಿದೆ ಮತ್ತು 2025ರ ಜನವರಿ 1ರವರೆಗೆ ಇರಲಿದೆ ಎಂದೂ ಸರ್ಕಾರ ಹೇಳಿದೆ.

ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿರುವಪರಿಸರಸಚಿವಗೋಪಾಲ್‌ರಾಯ್,'ಚಳಿಗಾಲದಲ್ಲಿ ನಗರದ ವಾಯು ಮಾಲಿನ್ಯವು ಏರಿಕೆ ಆಗಲಿದೆ. ಆದ್ದರಿಂದ, ಎಲ್ಲ ವಿಧದ ಪಟಾಕಿಗಳ ಉತ್ಪಾದನೆ, ಸಂಗ್ರಹ, ಮಾರಾಟ ಹಾಗೂ ಬಳಕೆಯನ್ನು ನಿಷೇಧಿಸಲಾಗಿದೆ' ಎಂದು ತಿಳಿಸಿದ್ದಾರೆ.

'ದೆಹಲಿ ನಿವಾಸಿಗಳು ಮಾಲಿನ್ಯ ನಿಯಂತ್ರಣದ ಈ ಕಾರ್ಯದಲ್ಲಿ ಸರ್ಕಾರಕ್ಕೆ ಸಹಕಾರ ನೀಡಬೇಕು' ಎಂದೂ ಕೋರಿದರು. ಆನ್‌ಲೈನ್ ಮೂಲಕವು ಪಟಾಕಿಗಳನ್ನು ಮಾರಾಟ ಮಾಡುವುದಕ್ಕೂ ಸರ್ಕಾರ ನಿಷೇಧ ಹೇರಿದೆ. ಈ ಬಗ್ಗೆ ದೆಹಲಿ ಮಾಲಿನ್ಯ ನಿಯಂತ್ರಣ ಮಂಡಳಿಯು ವಿಸ್ತೃತವಾದ ಸೂಚನೆಯನ್ನು ಬಿಡುಗಡೆ ಮಾಡಿದೆ. ಈ ನಿಷೇಧವನ್ನು ಉಲ್ಲಂಘಿಸಿದವರಿಗೆ ಕಠಿಣ ಶಿಕ್ಷೆಯಾಗಲಿದೆ ಎಂದೂ ಮಂಡಳಿ ಹೇಳಿದೆ.



ಪಲ್ಲಕ್ಕಿಗಳ ಮೆರವಣಿಗೆ ಹಿಮಾಚಲ ಪ್ರದೇಶದ ಕುಲ್ಲು ಪಟ್ಟಣದಲ್ಲಿ ಅಂತರರಾಷ್ಟ್ರೀಯ ದಸರಾ ಹಬ್ಬದ ಪ್ರಯುಕ್ತ ಭಕ್ತರು ದೇವತೆಗಳ ಪಲ್ಲಕ್ಕಿಗಳ ಮೆರವಣಿಗೆ ನಡೆಸಿದರು –ಪಿಟಿಐ ಚಿತ್ರ

ಆಂಬುಲೆನ್ಸ್ ದುರ್ಬಳಕೆ: ಸಚಿವ ಸುರೇಶ್ ಗೋಪಿ ವಿರುದ್ಧ ತನಿಖೆ

ತ್ರಿಶ್ಶೂರ್ (ಕೇರಳ) (ಪಿಟಿಐ): ಪ್ರಸಕ್ತ ವರ್ಷದ ಏಪ್ರಿಲ್‌ನಲ್ಲಿ ನಡೆದ ತ್ರಿಶ್ಶೂರ್ ಪೂರಂ ಉತ್ಸವದಲ್ಲಿ ಕೇಂದ್ರ ಸಚಿವ ಸುರೇಶ್ ಗೋಪಿ ಅವರು ಆಂಬುಲೆನ್ಸ್ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಆರೋಪದ ಬಗ್ಗೆ ಇಲ್ಲಿನ ಪೊಲೀಸರು ಪ್ರಾಥಮಿಕ ತನಿಖೆ ಆರಂಭಿಸಿದ್ದಾರೆ.

ಈ ಸಂಬಂಧ ಸಿಪಿಐನ ಸ್ಥಳೀಯ ನಾಯಕರೊಬ್ಬರು ದೂರು ನೀಡಿದ್ದಾರೆ. ಅದನ್ನು ಆಧರಿಸಿ ಪೊಲೀಸರು ಕೇಂದ್ರ ಪ್ರವಾಸೋದ್ಯಮ ಮತ್ತು ಪೆಟ್ರೋಲಿಯಂ ಖಾತೆಯ ರಾಜ್ಯ ಸಚಿವ ಸುರೇಶ್ ಗೋಪಿ ವಿರುದ್ಧ ತನಿಖೆ ಕೈಗೆತ್ತಿಕೊಂಡಿದ್ದಾರೆ.

ಇದು ಲೋಕಸಭೆ ಚುನಾವಣೆಗೂ ಮುನ್ನ ನಡೆದ ಘಟನೆಯಾಗಿದ್ದು, ಎಫ್‌ಐಆರ್ ದಾಖಲಿಸಬಹುದೇ ಎಂಬುದರ ಕುರಿತು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ಕುರಿತ ಪ್ರಾಥಮಿಕ ವಿಚಾರಣೆಗಾಗಿ ದೂರನ್ನು ತ್ರಿಶ್ಶೂರ್‌ನ ಸಹಾಯಕ ಪೊಲೀಸ್ ಆಯುಕ್ತರಿಗೆ (ಎಸಿಪಿ) ರವಾನಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಸುರೇಶ್ ಗೋಪಿ

ಪೂರಂ ಹಬ್ಬದ ಬಳಿಕ ನಡೆದ ಲೋಕಸಭಾ ಚುನಾವಣೆಯಲ್ಲಿ ಗೋಪಿ ಅವರು ತ್ರಿಶೂರ್‌ನ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಪಡೆದರು.

ಪೂರಂನಲ್ಲಿ ಗೋಪಿ ಅವರು ಸೇವಾ ಭಾರತಿ ಆಂಬುಲೆನ್ಸ್ ಮೂಲಕ ಪೂರಂ ಮೈದಾನಕ್ಕೆ ಬಂದಿದ್ದರು. ಈ ಮೂಲಕ ಅವರು ವೈದ್ಯಕೀಯ ತುರ್ತು ಪರಿಸ್ಥಿತಿಗಳಿಗೆ ಮೀಸಲಿರುವ ವಾಹನವನ್ನು ವೈದ್ಯಕೀಯೇತರ ಉದ್ದೇಶಗಳಿಗೆ ಬಳಸಿದ್ದಾರೆ ಎಂದು ಸಿಪಿಐ ನಾಯಕ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಹದಗೆಟ್ಟ ಇಬ್ಬರ ಆರೋಗ್ಯ ಸ್ಥಿತಿ • ರಾಜ್ಯಭವನಕ್ಕೆ ಪ್ರತಿಭಟನಾ ರ್‍ಯಾಲಿ

10ನೇ ದಿನಕ್ಕೆ ಕಿರಿಯ ವೈದ್ಯರ ಉಪವಾಸ

ಕೋಲ್ಕತ್ತ (ಪಿಟಿಐ): ಆರ್‌.ಜಿ.ಕರ್ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ ಕೊಲೆಗೈದ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಕ್ಕೆ ಆಗ್ರಹಿಸಿ ವೈದ್ಯರು ನಡೆಸುತ್ತಿರುವ ಆಮರಣಾಂತ ಉಪವಾಸ ಸತ್ಯಾಗ್ರಹ ಸೋಮವಾರ 10ನೇ ದಿನಕ್ಕೆ ಕಾಲಿರಿಸಿದೆ.

ಉಪವಾಸ ನಿರತ ವೈದ್ಯರಲ್ಲಿ ಮತ್ತಿಬ್ಬರ ಆರೋಗ್ಯ ಹದಗೆಟ್ಟಿದ್ದು, ಅವರಲ್ಲಿ ಒಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಉಪವಾಸನಿರತ ಎನ್‌ಆರ್‌ಎಸ್ ವೈದ್ಯಕೀಯ ಕಾಲೇಜಿನ ಕಿರಿಯ ವೈದ್ಯ ಪುಲಾಸ್ತ ಆಚಾರ್ಯ ಅವರ ಆರೋಗ್ಯ ಹದಗೆಟ್ಟಿದ್ದು, ಭಾನುವಾರ ರಾತ್ರಿಯೇ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಪುಲಾಸ್ತ ಅವರು ತೀವ್ರ ನಿಗಾ ಘಟಕದಲ್ಲಿದ್ದಾರೆ. ಅವರಿಗೆ ಚಿಕಿತ್ಸೆ ನೀಡಲು ನಾವು ವೈದ್ಯರ ಗುಂಪು ರಚಿಸಿದ್ದೇವೆ' ಎಂದು ಎನ್‌ಆರ್‌ಎಸ್ ವೈದ್ಯಕೀಯ ಕಾಲೇಜಿನ ಹಿರಿಯ ವೈದ್ಯರು ತಿಳಿಸಿದ್ದಾರೆ.

'ತಾನ್ಯ ಪಾಂಜಾ ಎಂಬ ಮತ್ತೊಬ್ಬ ಕಿರಿಯ ವೈದ್ಯೆಯ ಆರೋಗ್ಯ ಕೂಡ ಸೋಮವಾರ ಮಧ್ಯಾಹ್ನ ಹದಗೆಟ್ಟಿದೆ. ಆಕೆಯ ದೇಹ ಸ್ಥಿತಿ ಸ್ಥಿರವಾಗಿದ್ದು, ಧರಣಿ ನಿರತ ಸ್ಥಳದಲ್ಲೇ ಆಕೆಯ ಬಗ್ಗೆ ನಿಗಾವಹಿಸಲಾಗಿದೆ,' ಎಂದು ವೈದ್ಯರೊಬ್ಬರು ತಿಳಿಸಿದ್ದಾರೆ.

ಸಮಾವೇಶ ರದ್ದತಿಗೆ ಮನವಿ: ರಾಜ್ಯದಲ್ಲಿ ಅ.15ರಂದು 'ದುರ್ಗಾ ಪೂಜಾ ಮಹೋತ್ಸವ' ಇದೆ. ಆದರೆ, ಅದೇ ದಿನ ವೈದ್ಯರು ಸಮಾವೇಶ ಹಮ್ಮಿಕೊಂಡಿದ್ದಾರೆ. ಪೂಜಾ ಮಹೋತ್ಸವದ ಹಿನ್ನೆಲೆಯಲ್ಲಿ ಸಮಾವೇಶ ರದ್ದುಗೊಳಿಸಬೇಕೆಂದು ವೈದ್ಯರ ಜಂಟಿ ವೇದಿಕೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಮನೋಜ್ ಪಂತ್ ಆಗ್ರಹಿಸಿದ್ದಾರೆ.

ಆದರೆ, ಪಂತ್ ಅವರ ಈ ಆಗ್ರಹಕ್ಕೆ ವೈದ್ಯರ ಜಂಟಿ ವೇದಿಕೆ ಬೇಸರ ವ್ಯಕ್ತಪಡಿಸಿದೆ. ಕಿರಿಯ ವೈದ್ಯರು ಆಮರಣಾಂತ ಉಪವಾಸ ಮಾಡುತ್ತಿದ್ದರೂ ಸರ್ಕಾರ ಹಬ್ಬದ ಆಚರಣೆಗೆ ಆದ್ಯತೆ ನೀಡಿದೆ ಎಂದು ವೇದಿಕೆ ಅಸಮಾಧಾನ ವ್ಯಕ್ತಪಡಿಸಿದೆ.

ಕೋಲ್ಕತ್ತದಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಬಗ್ಗೆ ಪಾರದರ್ಶಕ ತನಿಖೆಗೆ ಒತ್ತಾಯಿಸಿ ಕಿರಿಯ ವೈದ್ಯರು ಸೋಮವಾರ ರಾಜಭವನಕ್ಕೆ ಪ್ರತಿಭಟನಾ ರ್‍ಯಾಲಿ ನಡೆಸಿದರು –ಪಿಟಿಐ ಚಿತ್ರ

ಫಲ ನೀಡದ ಸಭೆ

ಆರ್‌.ಜಿ ಕರ್ ಕಾಲೇಜು ಪ್ರಕರಣದಿಂದ ಉಂಟಾಗಿರುವ ಬಿಕ್ಕಟ್ಟು ಶಮನಗೊಳಿಸಲು ಸೋಮವಾರ ಆಯೋಜಿಸಿದ್ದ ಪಶ್ಚಿಮ ಬಂಗಾಳದ 12 ವೈದ್ಯರಿದ್ದ ಸಂಘ ಹಾಗೂ ಮುಖ್ಯಕಾರ್ಯದರ್ಶಿ ಮನೋಜ್ ಪಂತ್ ಅವರ ನಡುವಿನ ನಿರ್ಣಾಯಕ ಸಭೆ ಯಾವುದೇ ಫಲ ನೀಡಲಿಲ್ಲ. ಬಿಕ್ಕಟ್ಟು ಶಮನಕ್ಕೆ ಗಡುವು ನಿಗದಿಗೊಳಿಸಲು ಸರ್ಕಾರ ಒಪ್ಪದ ಕಾರಣ ಸಮಸ್ಯೆ ಬಗೆಹರಿಯಲಿಲ್ಲ ಎಂದು ಮೂಲಗಳು ತಿಳಿಸಿವೆ.

ಸಭೆಗೆ ಆರೋಗ್ಯ ಇಲಾಖೆ ಕಾರ್ಯದರ್ಶಿ ಎನ್‌.ಎಸ್ ನಿಗಮ್ ಹಾಜರಾಗದಿರುವ ಬಗ್ಗೆ ವೈದ್ಯ ಪ್ರತಿನಿಧಿಗಳು ಪ್ರಶ್ನಿಸಿದರು. ಅಲ್ಲದೇ, ಉಪವಾಸ ನಿರತ ಕಿರಿಯ ವೈದ್ಯರನ್ನು ನೇರವಾಗಿ ಭೇಟಿ ಮಾಡಿ ಅವರೊಂದಿಗೆ ಮಾತುಕತೆ ನಡೆಸುವಂತೆಯೂ ಪಂತ್ ಅವರನ್ನು ವೈದ್ಯರು ಒತ್ತಾಯಿಸಿದರು.

ಸರ್ಕಾರಿ ಮೂಲಗಳ ಪ್ರಕಾರ ನಿಗಮ್ ಅವರು ಆರ್‌.ಜಿ ಕರ್ ವಿಷಯ ಕುರಿತ ಸುಪ್ರೀಂ ಕೋರ್ಟ್ ಕಲಾಪಕ್ಕೆ ಹಾಜರಾಗಲು ದೆಹಲಿಗೆ ತೆರಳಿದ್ದರು. 'ಸಭೆಯು ಫಲಪ್ರದವಾಗಲಿಲ್ಲ. ಬಿಕ್ಕಟ್ಟು ಶಮನಕ್ಕೆ ಗಡುವು ನಿಗದಿಗೊಳಿಸಲು ಪಂತ್ ಒಪ್ಪಲಿಲ್ಲ,' ಎಂದು ಪಶ್ಚಿಮ ಬಂಗಾಳ ವೈದ್ಯರ ವೇದಿಕೆಯ ಅಧ್ಯಕ್ಷ ಡಾ.ಕೌಶಿಕ್ ಚಾಕಿ ತಿಳಿಸಿದ್ದಾರೆ.

ಸಭೆ ಬಗ್ಗೆ ಪ್ರತಿಕ್ರಿಯೆ ನೀಡಿರುವ ಪಂತ್, ಎರಡೂವರೆ ತಾಸು ನಾವು ಚರ್ಚಿಸಿದ್ದೇವೆ. ವೈದ್ಯರ 10 ಬೇಡಿಕೆಗಳಲ್ಲಿ ಈಗಾಗಲೇ ಏಳನ್ನು ಈಡೇರಿಸಲಾಗಿದೆ. ಉಳಿದ ಮೂರರಲ್ಲಿ ಗಡುವು ನಿಗದಿ ಕುರಿತ ಬೇಡಿಕೆ ಇದೆ. ಇದು ಆಡಳಿತಾತ್ಮಕ ನಿರ್ಧಾರವಾಗಿರುವುದರಿಂದ ಈ ಕ್ಷಣದಲ್ಲಿ ನಾವು ಗಡುವು ನಿಗದಿ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು. ಕಿರಿಯ ವೈದ್ಯರ ಉಪವಾಸ ನಿರತ ಹೋರಾಟವನ್ನು ಕೊನೆಗೊಳಿಸಲು ಅವರ ಮನವೊಲಿಸುವಂತೆ ವೈದ್ಯರ ವೇದಿಕೆಯನ್ನು ಆಗ್ರಹಿಸಲಾಗಿದೆ ಎಂದು ಸಹ ಅವರು ತಿಳಿಸಿದರು.

ವಯನಾಡ್ ದುರಂತ: ಕೇಂದ್ರದ ವಿರುದ್ಧ ಕೇರಳ ವಿಧಾನಸಭೆ ಕಿಡಿ

ಪ್ರಜಾವಾಣಿ ವಾರ್ತೆ/ ಪಿಟಿಐ

ತಿರುವನಂತಪುರ: ಭೂಕುಸಿತದಿಂದ ತತ್ತರಿಸಿರುವ ವಯನಾಡ್‌ನಲ್ಲಿ ಪರಿಹಾರ ಮತ್ತು ಪುನರ್ವಸತಿ ಕಾರ್ಯಕೈಗೊಳ್ಳಲು ಆರ್ಥಿಕ ನೆರವು ನೀಡಲು ವಿಳಂಬ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿ ಕೇಂದ್ರ ಸರ್ಕಾರದ ವಿರುದ್ಧ ಕೇರಳ ವಿಧಾನಸಭೆಯಲ್ಲಿ ಸೋಮವಾರ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು.

ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿದ ತಿಂಗಳುಗಳ ನಂತರವೂ, ಹಣಕಾಸಿನ ನೆರವು ಸಿಗದಿದ್ದಕ್ಕೆ ಅಸಮಾಧಾನ ವ್ಯಕ್ತವಾಯಿತು.

ವಿಧಾನಸಭೆಯು ಸರ್ವಾನುಮತದಿಂದ ಅಂಗೀಕರಿಸಿರುವ ನಿರ್ಣಯದಲ್ಲಿ ಸಂತ್ರಸ್ತರ ಬ್ಯಾಂಕ್ ಸಾಲವನ್ನು ಮನ್ನಾ ಮಾಡಬೇಕು ಎಂಬುದನ್ನು ಉಲ್ಲೇಖಿಸಲಾಗಿದೆ.

ಈ ಕುರಿತಂತೆ ಕಾಂಗ್ರೆಸ್‌ನ ಶಾಸಕ ಟಿ. ಸಿದ್ದೀಕ್ ಮಂಡಿಸಿದ ನಿಲುವಳಿ ಸೂಚನೆ ಮೇಲೆ ನಡೆದ ಚರ್ಚೆಯ ಸಂದರ್ಭ, ಆಡಳಿತಾರೂಢ ಎಲ್‌ಡಿಎಫ್ ಹಾಗೂ ವಿರೋಧಪಕ್ಷದ ಒಕ್ಕೂಟ ಯುಡಿಎಫ್ ಒಟ್ಟಾಗಿ ಕೇಂದ್ರದ ವಿರುದ್ಧ ಕಿಡಿಕಾರಿದವು.

> **ವಯನಾಡ್‌ನಲ್ಲಿ ಪರಿಹಾರ ಕಾರ್ಯ ಕೈಗೊಳ್ಳಲು ಕೇಂದ್ರ ಸರ್ಕಾರ ಎಲ್ಲ ರೀತಿಯ ನೆರವು ಒದಗಿಸಲಿದೆ. ಸಂತ್ರಸ್ತರನ್ನು ಯಾವುದೇ ಕಾರಣಕ್ಕೂ ಕಡೆಗಣಿಸುವುದಿಲ್ಲ**
> **ನಿರ್ಮಲಾ ಸೀತಾರಾಮನ್**
> ಕೇಂದ್ರ ಹಣಕಾಸು ಸಚಿವೆ

'ಫೋಟೊ ಶೂಟ್'ಗಾಗಿ ಮೋದಿ ವಿಪತ್ತು ಪೀಡಿತ ಪ್ರದೇಶಕ್ಕೆ ಭೇಟಿ ನೀಡಿದ್ದಾರೆ ಎಂದು ಯುಡಿಎಫ್ ಕಿಡಿಕಾರಿದರೆ, ದುರಂತದ ಸಂದರ್ಭದಲ್ಲಿ ಪುನರ್ವಸತಿಗಾಗಿ ಆರ್ಥಿಕ ನೆರವು ಒದಗಿಸುವುದು ಕೇಂದ್ರ ಸರ್ಕಾರದ ನೈತಿಕ ಜವಾಬ್ದಾರಿಯಾಗಿದೆ ಎಂದು ಎಲ್‌ಡಿಎಫ್ ಹೇಳಿದೆ.

'ಮೋದಿಯವರ ಭರವಸೆಯ ಹೊರತಾಗಿಯೂ ಭೂಕುಸಿತ ಸಂತ್ರಸ್ತರ ಪುನರ್ವಸತಿಗಾಗಿ ಕೇಂದ್ರವು ಒಂದು ಪೈಸೆಯನ್ನು ನೀಡಿಲ್ಲ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ವಿವರವಾದ ಪ್ರಸ್ತಾಪಗಳನ್ನು ಸಲ್ಲಿಸಿದ ನಂತರವೂ ಕೇಂದ್ರದ ನೆರವು ವಿಳಂಬವಾಗಿದೆ' ಎಂದು ವಯನಾಡ್‌ನ ಕಲ್ಪೆಟ್ಟ ಕ್ಷೇತ್ರದ ಕಾಂಗ್ರೆಸ್ ಶಾಸಕ ಟಿ. ಸಿದ್ದೀಕ್ ಅಸಮಾಧಾನ ವ್ಯಕ್ತಪಡಿಸಿದರು.

ನಾಪತ್ತೆಯಾದವರ ಶೋಧ ಕಾರ್ಯ ಸ್ಥಗಿತ: ವಿಪಕ್ಷಗಳ ತರಾಟೆ

ಭೂಕುಸಿತದಲ್ಲಿ ಇನ್ನೂ 47 ಜನರು ನಾಪತ್ತೆಯಾಗಿದ್ದರೂ ರಾಜ್ಯ ಸರ್ಕಾರ ಶೋಧವನ್ನು ನಿಲ್ಲಿಸಿದೆ ಎಂದು ಪ್ರತಿಪಕ್ಷಗಳು ತರಾಟೆಗೆ ತೆಗೆದುಕೊಂಡವು.

'ಕರ್ನಾಟಕದ ಶಿರೂರಿನಲ್ಲಿ ಸಂಭವಿಸಿದ ಭೂಕುಸಿತದಲ್ಲಿ ನಾಪತ್ತೆ ಆದವರ ಪತ್ತೆಗಾಗಿ 72 ದಿನ ಶೋಧ ನಡೆದರೆ, ವಯನಾಡ್‌ನಲ್ಲಿ ಕೇವಲ 14 ದಿನ ಶೋಧ ನಡೆಸಲಾಯಿತು. ಶೋಧವನ್ನು ಪುನರಾರಂಭಿಸಬೇಕು' ಎಂದು ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಆಗ್ರಹಿಸಿದರು.

ವಯನಾಡ್‌ನ ಭೂಕುಸಿತ ಸಂತ್ರಸ್ತರ ಪುನರ್ವಸತಿಗಾಗಿ ರಾಜ್ಯ ಸರ್ಕಾರ ಸಕಲ ಪ್ರಯತ್ನ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಹೇಳಿದರು.

ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅಭಿಮತ

ಟೆಸ್ಟ್ ಕ್ರಿಕೆಟ್ ಈಗ ಬೌಲರ್‌ಗಳ ಆಟ

● ಗಿರೀಶ ದೊಡ್ಡಮನಿ

ಬೆಂಗಳೂರು: ದಶಕಗಳ ಹಿಂದೆ ಭಾರತ ಕ್ರಿಕೆಟ್ ತಂಡವು ಹಲವಾರು ಅಂತರರಾಷ್ಟ್ರೀಯ ಪಂದ್ಯಗಳನ್ನು ಜಯಿಸಲು ಮಹತ್ವದ ಕಾಣಿಕೆ ನೀಡಿದವರು ಎಡಗೈ ಬ್ಯಾಟರ್ ಗೌತಮ್ ಗಂಭೀರ್. ಇನಿಂಗ್ಸ್ ಆರಂಭಿಸುತ್ತಿದ್ದ ಅವರು 2011ರ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಆಡಿದ ಇನಿಂಗ್ಸ್ ಇಂದಿಗೂ ಕ್ರಿಕೆಟ್‌ಪ್ರಿಯರ ಮನದಲ್ಲಿ ಹಸಿರಾಗಿದೆ. ಅಂದು ಶತಕ ತಪ್ಪಿಸಿಕೊಂಡರೂ ಪಂದ್ಯದ ಜಯದಲ್ಲಿ ಮಹತ್ವದ ಕಾಣಿಕೆ ಕೊಟ್ಟಿದ್ದರು.

ಟೆಸ್ಟ್ ಕ್ರಿಕೆಟ್‌ನಲ್ಲಿಯೂ ಅವರ ಸಾಧನೆಗಳು ಕಮ್ಮಿಯೇನಲ್ಲ. ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್ ಅವರಂತಹ ದಿಗ್ಗಜರೊಂದಿಗೆ ಇನಿಂಗ್ಸ್ ಆರಂಭಿಸಿದ ಶ್ರೇಯ ಕೂಡ ದೆಹಲಿಯ ಬ್ಯಾಟರ್ ಅವರದ್ದು. ತಮ್ಮ ನಿಷ್ಠುರ ನಡೆ, ನುಡಿಗಳಿಂದ ಸದಾ ಚರ್ಚೆಯಲ್ಲಿದ್ದವರು. ಇದೀಗ ಭಾರತ ತಂಡದ ಮುಖ್ಯ ಕೋಚ್ ಆದ ನಂತರವೂ ಅವರ ಆಕ್ರಮಣಶೀಲ ಗುಣ ಒಂಚೂರು ಕಡಿಮೆಯಾಗಿಲ್ಲ.

ಭಾರತ ಕ್ರಿಕೆಟ್ ತಂಡದ ಆಟಗಾರ ಕೆ.ಎಲ್. ರಾಹುಲ್ ಮತ್ತು ಸಹ ಆಟಗಾರರು ಅಭ್ಯಾಸ ನಡೆಸಿದರು ಪ್ರಜಾವಾಣಿ ಚಿತ್ರಗಳು:ಎಸ್.ಕೆ. ದಿನೇಶ್

ರಾಷ್ಟ್ರೀಯ ತಂಡದ ಕೋಚ್ ಆದ ನಂತರ ಮೊದಲ ಬಾರಿಗೆ ಬೆಂಗಳೂರಿಗೆ ಬಂದಿದ್ದಾರೆ. ಬುಧವಾರ ಇಲ್ಲಿ ಆರಂಭವಾಗಲಿರುವ ನ್ಯೂಜಿಲೆಂಡ್ ತಂಡದ ಎದುರಿನ ಮೊದಲ ಟೆಸ್ಟ್‌ನಲ್ಲಿ ಗಂಭೀರ್ ಮಾರ್ಗದರ್ಶನದ ಭಾರತ ತಂಡ ಕಣಕ್ಕಿಳಿಯಲಿದೆ. ಉದ್ಯಾನನಗರಿಯ ರಾಹುಲ್ ದ್ರಾವಿಡ್ ಅವರ ನಂತರ ಗಂಭೀರ್ ಕೋಚ್ ಸ್ಥಾನ ಪಡೆದಿದ್ದಾರೆ. ಅದಕ್ಕಾಗಿಯೇ ಅವರ ಮೇಲೆ ಕ್ರಿಕೆಟ್ ಪ್ರಿಯರ ಗಮನ ನೆಟ್ಟಿದೆ. ಈಚೆಗೆ ಬಾಂಗ್ಲಾದೇಶ ಎದುರಿನ ಸರಣಿಯಲ್ಲಿ ಭಾರತ ತಂಡವು ಅಮೋಘ ಜಯ ಸಾಧಿಸಿತ್ತು.

ಸೋಮವಾರ ರೋಹಿತ್ ಶರ್ಮಾ ಬಳಗವು ಇಲ್ಲಿ ಅಭ್ಯಾಸ ನಡೆಸಿತ್ತು. ಇದೇ ಸಂದರ್ಭದಲ್ಲಿ ಗಂಭೀರ್ ಪತ್ರಕರ್ತರೊಂದಿಗೆ ಮಾತಿಗೆ ಕುಳಿತಿದ್ದರು.

ಬೌಲರ್‌ಗಳ ಪರ ಬ್ಯಾಟ್ ಬೀಸಿದ ಗಂಭೀರ್, 'ಈಗ ಕಾಲ ಬದಲಾಗಿದೆ. ಇಂದಿನ ಟೆಸ್ಟ್ ಕ್ರಿಕೆಟ್ ಮಾದರಿಯು ಬೌಲರ್‌ಗಳದ್ದು. ಅವರು 20 ವಿಕೆಟ್ ಗಳಿಸಿದರೆ ತಂಡವು ಪಂದ್ಯ ಜಯಿಸುತ್ತದೆ. ಬ್ಯಾಟರ್‌ಗಳು ಪಂದ್ಯದಲ್ಲಿ ಲಯ ತರುತ್ತಾರೆ. ಒಂದು ವೇದಿಕೆ ನಿರ್ಮಿಸುತ್ತಾರಷ್ಟೇ. ಬ್ಯಾಟರ್‌ಗಳು ಪಾರಮ್ಯ ಮೆರೆದ ಪಂದ್ಯಗಳ ಫಲಿತಾಂಶ ಹೊರಹೊಮ್ಮದಿರಬಹುದು. ಆದರೆ ಬೌಲರ್‌ಗಳು ಮಿಂಚಿದ ಪಂದ್ಯಗಳ ಫಲಿತಾಂಶ ಖಚಿತ' ಎಂದರು.

'ಒಂದೇ ದಿನದಲ್ಲಿ ತಂಡವು 400 ರನ್ ಮೊತ್ತ ಪೇರಿಸುವಂತೆ ಆಡಬಲ್ಲ ಬ್ಯಾಟರ್‌ಗಳು ನಮ್ಮ ಬಳಗದಲ್ಲಿದ್ದಾರೆ.. ಎರಡು ದಿನಪೂರ್ತಿ ಆಡಿ ಡ್ರಾ ಮಾಡಿಕೊಡುವ ಆಟ ಬಲ್ಲವರೂ ಇದ್ದಾರೆ. ಆದರೆ ತಂಡವಾಗಿ ಮತ್ತು ತಂಡಕ್ಕಾಗಿ ಆಡುವ ತುಡಿತ ಎಲ್ಲರಲ್ಲೂ ಇರುವುದು ನಮ್ಮ ಶಕ್ತಿ. ಯಾರೇ ಅವಕಾಶ ಪಡೆದರೂ ತಮ್ಮ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡುವ ಸಮರ್ಥರು. ಆದ್ದರಿಂದ ಅವರನ್ನು ತಡೆಯಲಾಗದು. ಅವರು ಆಕ್ರಮಣಶೀಲರಾಗಿ ಆಡುತ್ತಾರೆಂದರೆ ಆಡಲಿ. ಅದರಿಂದ ತಂಡಕ್ಕೇ ಲಾಭ' ಎಂದು ಗಂಭೀರ್ ಹೇಳಿದರು.

'ಪಿಚ್ ಸ್ಥಿತಿ, ಹವಾಮಾನ ಮತ್ತು ಎದುರಾಳಿ ತಂಡದ ಸಾಮರ್ಥ್ಯಗಳ ಅವಲೋಕನದ ನಂತರವೇ ಅಂತಿಮ ಹನ್ನೊಂದರ ಬಳಗದ ತೀರ್ಮಾನವಾಗುತ್ತದೆ. ನಮ್ಮ ತಂಡದಲ್ಲಿ ಶ್ರೇಷ್ಠ ದರ್ಜೆಯ ಆಟಗಾರರು ಎಲ್ಲ ವಿಭಾಗಗಳಲ್ಲಿದ್ದಾರೆ. ಅವರಲ್ಲಿ ಯಾರನ್ನೇ ಆಯ್ಕೆ ಮಾಡಿದರೂ ಉತ್ತಮ ಫಲ ಖಚಿತ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿರಾಟ್ ಕೊಹ್ಲಿ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 9 ಸಾವಿರ ರನ್‌ಗಳ ಮೈಲಿಗಲ್ಲಿನ ಹೊಸ್ತಿಲಲ್ಲಿದ್ದಾರೆ. ಈ ಕುರಿತು ಮಾತನಾಡಿದ ಅವರು, 'ವಿರಾಟ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದಾಗಿನಿಂದಲೂ ನೋಡಿದ್ದೇನೆ. ಅವರೊಬ್ಬ ಶ್ರೇಷ್ಠ ಬ್ಯಾಟರ್. ಅದಕ್ಕೆ ಕಾರಣ ಅವರ ರನ್ ಗಳಿಕೆಯ ಹಸಿವು. ಆಟದ ಕುರಿತ ಶ್ರದ್ಧೆ ಮತ್ತು ಬದ್ಧತೆಗಳು. ಅವರು ಇನ್ನೂ ಇಂತಹ ಹಲವು ಸಾಧನೆ ಮಾಡಲು ಸಮರ್ಥರು' ಎಂದರು.

ಮುಖ್ಯಾಂಶಗಳು

- ಅಭ್ಯಾಸ ನಡೆಸಿದ ರೋಹಿತ್, ಕೆ.ಎಲ್. ರಾಹುಲ್
- ಗಾಯಗೊಂಡಿರುವ ಕೇನ್ ವಿಲಿಯಮ್ಸನ್ ಅಲಭ್ಯ

ಗೌತಮ್ ಗಂಭೀರ್

ನ್ಯೂಜಿಲೆಂಡ್ ತಂಡದ ರಚಿನ್ ರವೀಂದ್ರ

ರಚಿನ್ ರವೀಂದ್ರಗೆ 'ಬೆಂಗಳೂರು ಟೆಸ್ಟ್'

ನ್ಯೂಜಿಲೆಂಡ್ ತಂಡದ ಆಲ್‌ರೌಂಡರ್ ರಚಿನ್ ರವೀಂದ್ರ ಅವರು ಬೆಂಗಳೂರು ಮೂಲದವರು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅವರು ಇದೇ ಮೊದಲ ಸಲ ಟೆಸ್ಟ್ ಪಂದ್ಯದಲ್ಲಿ ಆಡಲಿದ್ದಾರೆ.

ಆದರೆ ಅವರಿಗೆ ಚಿನ್ನಸ್ವಾಮಿ ಅಂಗಳ ಹೊಸದಲ್ಲ. ವಿಶ್ವಕಪ್ ಟೂರ್ನಿಯ ಸಂದರ್ಭದಲ್ಲಿ ಏಕದಿನ ಪಂದ್ಯಗಳನ್ನು ಇಲ್ಲಿ ಆಡಿದ್ದಾರೆ. ಹೋದ ಸಲದ ಐಪಿಎಲ್ ಪಂದ್ಯಗಳಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಪರವಾಗಿ ಆಡಿದ್ದಾರೆ.

'ನನ್ನ ಕುಟುಂಬದ ಮೂಲ ಬೆಂಗಳೂರು. ವೆಲಿಂಗ್ಟನ್ ನಲ್ಲಿ ನಾನು ಹುಟ್ಟಿ ಬೆಳೆದೆ. ನಾನು ಕಿವೀಸ್ ಪ್ರಜೆ. ಆದರೂ ಭಾರತೀಯ ಮೂಲದ ಬಗ್ಗೆ ನನಗೆ ಅಪಾರ ಹೆಮ್ಮೆಯಿದೆ. ಇಲ್ಲಿ ಟೆಸ್ಟ್ ಆಡುತ್ತಿರುವುದು ವಿಶೇಷ ಅನುಭವ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಸೆಮಿಫೈನಲ್‌ಗೆ ನ್ಯೂಜಿಲೆಂಡ್

ಭಾರತದ ನಾಕೌಟ್ ಕನಸು ಭಗ್ನ: ಪಾಕಿಸ್ತಾನಕ್ಕೂ ನಿರಾಸೆ

ದುಬೈ: ಸ್ಪಿನ್– ವೇಗದ ದಾಳಿಯ ಬಲದಿಂದ ನ್ಯೂಜಿಲೆಂಡ್ ತಂಡ ಸೋಮವಾರ ಏಕಪಕ್ಷೀಯ ಪಂದ್ಯದಲ್ಲಿ 54 ರನ್‌ಗಳಿಂದ ಪಾಕಿಸ್ತಾನ ತಂಡವನ್ನು ಸೋಲಿಸಿ ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ 'ಎ' ಗುಂಪಿನಿಂದ ಸೆಮಿಫೈನಲ್ ತಲುಪಿತು. ಆ ಮೂಲಕ ಭಾರತದ ನಾಕೌಟ್ ಆಸೆ ಕೂಡ ನುಚ್ಚುನೂರಾಯಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಲು ನಿರ್ಧರಿಸಿದ ನ್ಯೂಜಿಲೆಂಡ್ ತಂಡವನ್ನು ಪಾಕ್ ಸ್ಪಿನ್ನರ್‌ಗಳು 6 ವಿಕೆಟ್‌ಗೆ 110 ರನ್‌ಗಳ ಸಾಧಾರಣ ಮೊತ್ತಕ್ಕೆ ಕಟ್ಟಿ ಹಾಕಿದ್ದರು. ಆದರೆ, ತಿರುಗೇಟು ನೀಡಿದ ಕಿವೀಸ್ ಬೌಲರ್‌ಗಳು ಪಾಕಿಸ್ತಾನ ತಂಡವನ್ನು 11.4 ಓವರುಗಳಲ್ಲೇ 56 ರನ್‌ಗಳಿಗೆ ಉರುಳಿಸಿದರು.

ಲೆಗ್ ಸ್ಪಿನ್ನರ್ ಅಮೇಲಿಯಾ ಕೆರ್ (14ಕ್ಕೆ3) ಮತ್ತು ಆಫ್ ಬ್ರೇಕ್ ಬೌಲರ್ ಎಡೆನ್ ಕರ್ಸನ್ (7ಕ್ಕೆ2) ಅವರು ಹೆಚ್ಚಿನ ಯಶಸ್ಸು ಪಡೆದರು. ವೇಗಿಗಳಾದ ಲೀ ತಹುಹು ಮತ್ತು ರೋಸ್ಮರಿ ಮೇರ್ ತಲಾ ಒಂದು ವಿಕೆಟ್ ಪಡೆದರು.

ನ್ಯೂಜಿಲೆಂಡ್ ಮೂರು ಗೆಲುವಿನೊಡನೆ 'ಎ' ಗುಂಪಿನಲ್ಲಿ ಎರಡನೇ ಸ್ಥಾನದೊಡನೆ ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು. ಎಲ್ಲ ನಾಲ್ಕೂ ಪಂದ್ಯಗಳನ್ನೂ ಗೆದ್ದ ಆಸ್ಟ್ರೇಲಿಯಾ ಎಂಟು ಪಾಯಿಂಟ್‌ಗಳೊಡನೆ ಈ ಮೊದಲೇ ಸೆಮಿಗೆ ಸ್ಥಾನ ಕಾದಿರಿಸಿತ್ತು.

ಈ ಪಂದ್ಯದಲ್ಲಿ ಒಂದೊಮ್ಮೆ ಪಾಕಿಸ್ತಾನ 10.4 ಓವರುಗಳಲ್ಲಿ 111 ರನ್ ಗಳಿಸುತ್ತಿದ್ದರೆ, ಆ ತಂಡಕ್ಕೂ ಸೆಮಿ ಫೈನಲ್‌ಗೇರುವ ಅವಕಾಶವಿತ್ತು. ಪಾಕಿಸ್ತಾನ ಹೆಚ್ಚಿನ ಓವರ್ ತೆಗೆದುಕೊಂಡು ಗೆಲುವು ಸಾಧಿಸಿದ್ದರೆ, ನೆಟ್ ರನ್ ರೇಟ್ ಆಧಾರದಲ್ಲಿ ಭಾರತಕ್ಕೆ ನಾಕೌಟ್ ಅವಕಾಶವಿರುತಿತ್ತು. ಆದರೆ, ಈ ಎರಡೂ ತಂಡಗಳು ಈಗ ಟೂರ್ನಿಯಿಂದ ಹೊರಬಿದ್ದಿವೆ. ಹರ್ಮನ್‌ಪ್ರೀತ್ ಕೌರ್ ಬಳಗವು ನಾಲ್ಕರಲ್ಲಿ ಎರಡನ್ನು ಗೆದ್ದು, ನಾಲ್ಕು ಅಂಕ ಸಂಪಾದಿಸಿದ್ದರೆ, ಪಾಕಿಸ್ತಾನ ಒಂದು ಪಂದ್ಯ ಮಾತ್ರ ಜಯಿಸಿದೆ.

ಇದಕ್ಕೆ ಮೊದಲು ನ್ಯೂಜಿಲೆಂಡ್ ಪರ ಆರಂಭ ಆಟಗಾರ್ತಿ ಸೂಝಿ ಬೇಟ್ಸ್ ಅತ್ಯಧಿಕ 28 ರನ್ ಗಳಿಸಿದರು. ಮಧ್ಯಮ ಕ್ರಮಾಂಕದಲ್ಲಿ ಬ್ರೂಕ್ ಹ್ಯಾಲಿಡೇ 22 ರನ್ ಗಳಿಸಿದರು. ಪಾಕಿಸ್ತಾನ ಪರ ಎಡಗೈ ಸ್ಪಿನ್ನರ್ ನಶ್ರಾ ಸಂಧು (18ಕ್ಕೆ3) ಯಶಸ್ವಿ ಬೌಲರ್ ಎನಿಸಿದರು.

ಸ್ಕೋರುಗಳು: ನ್ಯೂಜಿಲೆಂಡ್: 20 ಓವರುಗಳಲ್ಲಿ 6 ವಿಕೆಟ್‌ಗೆ 110 (ಸೂಝಿ ಬೇಟ್ಸ್ 28, ಬ್ರೂಕ್ ಹ್ಯಾಲಿಡೇ 22; ನಶ್ರಾ ಸಂಧು 18ಕ್ಕೆ3); ಪಾಕಿಸ್ತಾನ: 11.4 ಓವರುಗಳಲ್ಲಿ 56 (ಫಾತಿಮಾ ಸನಾ 21; ಅಮೇಲಿಯಾ ಕೆರ್ 14ಕ್ಕೆ3, ಎಡೆನ್ ಕರ್ಸನ್ 7ಕ್ಕೆ2). ಪಂದ್ಯದ ಆಟಗಾರ್ತಿ: ಎಡೆನ್ ಕರ್ಸನ್.

ಗೆಲುವಿನ ಸಂಭ್ರಮದಲ್ಲಿ ನ್ಯೂಜಿಲೆಂಡ್ ಆಟಗಾರ್ತಿಯರು –ಎಪಿ/ಪಿಟಿಐ ಚಿತ್ರ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2024

ಐಟಿಎಫ್ ಓಪನ್: ಮುಖ್ಯ ಸುತ್ತಿಗೆ ಶ್ರೀನಿಧಿ ಬಾಲಾಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಶ್ರೀನಿಧಿ ಬಾಲಾಜಿ ಇಲ್ಲಿನ ಕೆಎಸ್‌ಎಲ್‌ಟಿಎ ಟೆನಿಸ್ ಅಂಗಣದಲ್ಲಿ ಮಂಗಳವಾರ ಆರಂಭವಾಗುವ ಎಸ್‌ಕೆಎಂಇ ಐಟಿಎಫ್ ಓಪನ್ ಟೆನಿಸ್ ಟೂರ್ನಿಯ ಮುಖ್ಯ ಸುತ್ತು ಪ್ರವೇಶಿಸಿದರು.

ಸೋಮವಾರ ನಡೆದ ಅರ್ಹತಾ ಸುತ್ತಿನ ಕೊನೆಯ ಪಂದ್ಯದಲ್ಲಿ ಶ್ರೀನಿಧಿ 5-7, 6-4, 10-4ರಿಂದ ಕಾಶಿಶ್ ಭಾಟಿಯಾ ಅವರನ್ನು ಸೋಲಿಸಿದರು. ಈ ಮೂಲಕ ಮಹಿಳೆಯರ ಸಿಂಗಲ್ಸ್‌ನ 32ರ ಘಟ್ಟದ ಸ್ಪರ್ಧೆಗೆ ಭಾರತದ ಇತರ ಐದು ಆಟಗಾರ್ತಿಯರೊಂದಿಗೆ ಅವರೂ ಸೇರಿಕೊಂಡರು.

ವೈಲ್ಡ್‌ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದ 18 ವರ್ಷ ವಯಸ್ಸಿನ ಸ್ಥಳೀಯ ಪ್ರತಿಭೆ, ಭಾನುವಾರ ಮೊದಲ ಸುತ್ತಿನಲ್ಲಿ 10ನೇ ಶ್ರೇಯಾಂಕದ ಹಾಂಗ್‌ಕಾಂಗ್‌ನ ನವೋಮಿ ಹಗಿ ಅವರಿಗೆ ಆಘಾತ ನೀಡಿದ್ದರು. ಕರ್ನಾಟಕದ ಇತರ ಮೂವರು ಆಟಗಾರ್ತಿಯರಾದ ವಂಶಿತಾ ಪಠಾನಿಯಾ, ಅಮೋದಿನಿ ನಾಯಕ್ ಮತ್ತು ಸೋನಿಕಾ ಜಗದೀಶ್ ಅರ್ಹತಾ ಸುತ್ತಿನಲ್ಲೇ ಹೊರಬಿದ್ದರು.

ಅಗ್ರ ಶ್ರೇಯಾಂಕದ ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ ಅವರು ಮುಖ್ಯ ಸುತ್ತಿನಲ್ಲಿ ಕ್ವಾಲಿಫೈಯರ್ ಆಟಗಾರ್ತಿ ಸಾಹಿರಾ ಸಿಂಗ್ ವಿರುದ್ಧ ಅಭಿಯಾನ ಆರಂಭಿಸುವರು. ಕಳೆದ ವರ್ಷ ಇಲ್ಲಿ ಪ್ರಶಸ್ತಿ ಗೆದ್ದಿದ್ದ ಶ್ರೀವಲ್ಲಿ, ಮೈಸೂರಿನಲ್ಲಿ ಭಾನುವಾರ ಮುಕ್ತಾಯವಾದ ಐಟಿಎಫ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದಾರೆ.

ಎಚ್‌ಐಎಲ್: ಎರಡನೇ ದಿನ ವೆಗ್ನೆಝ್‌ಗೆ ₹40 ಲಕ್ಷ

ನವದೆಹಲಿ (ಪಿಟಿಐ): ಬೆಲ್ಜಿಯಂನ ಮಿಡ್‌ಫೀಲ್ಡರ್ ವಿಕ್ಟರ್ ವೆಗ್ನೆಝ್ ಅವರು ಹಾಕಿ ಇಂಡಿಯಾ ಲೀಗ್ ಹರಾಜು ಪ್ರಕ್ರಿಯೆ ಎರಡನೇ ದಿನವಾದ ಸೋಮವಾರ ಅತಿ ದುಬಾರಿ ಆಟಗಾರ ಎನಿಸಿದರು. ಅವರು ₹40 ಲಕ್ಷ ಮೊತ್ತಕ್ಕೆ ಸೂರ್ಮಾ ಹಾಕಿ ಕ್ಲಬ್ ಪಾಲಾದರು.

ಡಚ್ ಆಟಗಾರರಾದ ಥಿಯರಿ ಬ್ರಿಂಕ್‌ಮನ್ (₹38 ಲಕ್ಷ) ಮತ್ತು ಆರ್ಥರ್ ವಾನ್ ಡೊರೆನ್ (₹32 ಲಕ್ಷ) ಅವರೂ ಉತ್ತಮ ಮೊತ್ತಕ್ಕೆ ಕಳಿಂಗ ಲ್ಯಾನ್ಸರ್ಸ್ ಪಾಲಾದರು. ಥಾಮಸ್ ಡೊಮಿನ್ ₹36 ಲಕ್ಷಕ್ಕೆ ಡೆಲ್ಲಿ ಎಸ್‌ಜಿ ಪೈಪರ್ಸ್ ಪಾಲಾದರೆ, ಆಸ್ಟ್ರೇಲಿಯಾದ ಆರನ್ ಝಲೆವ್‌ಸ್ಕಿ (₹27 ಲಕ್ಷ) ಅವರನ್ನು ಕಳಿಂಗ ಲ್ಯಾನ್ಸರ್ ಪಡೆಯಿತು. ಬ್ಲೇಕ್ ಗೋವರ್ಸ್ ಅವರು ₹27 ಲಕ್ಷಕ್ಕೆ ತಮಿಳುನಾಡು ಡ್ರ್ಯಾಗನ್ಸ್ ಪಾಲಾದರು.

ಮೊರಿಯಾಂಗ್‌ಥೆಮ್ಸ್ ರವಿಚಂದ್ರ (₹32 ಲಕ್ಷಕ್ಕೆ ಕಳಿಂಗ ಲ್ಯಾನ್ಸರ್ಸ್) ಮತ್ತು ಮೊಹಮ್ಮದ್ ರಾಹೀಲ್ ಮೌಸೀನ್ (₹25 ಲಕ್ಷಕ್ಕೆ ತಮಿಳುನಾಡು ಡ್ರ್ಯಾಗನ್ಸ್) ಅವರು ಹರಾಜು ಪ್ರಕ್ರಿಯೆಯ ಎರಡನೇ ದಿನ ಉತ್ತಮ ಮೊತ್ತ ಗಳಿಸಿದ ಭಾರತದ ಪ್ರಮುಖ ಆಟಗಾರರು ಎನಿಸಿದರು.

ರಣಜಿ ಟ್ರೋಫಿ ಕ್ರಿಕೆಟ್: ನಿಕಿನ್ ಜೋಸ್‌ಗೆ ತಪ್ಪಿದ ಶತಕ

ಕರ್ನಾಟಕ–ಮಧ್ಯಪ್ರದೇಶಕ್ಕೆ ತಲಾ ಒಂದು ಅಂಕ

ಪ್ರಜಾವಾಣಿ ವಾರ್ತೆ

ಇಂದೋರ್: ಕರ್ನಾಟಕ ಮತ್ತು ಆತಿಥೇಯ ಮಧ್ಯಪ್ರದೇಶ ತಂಡಗಳು ರಣಜಿ ಟ್ರೋಫಿ 'ಸಿ' ಗುಂಪಿನ ಪಂದ್ಯದಲ್ಲಿ ತಲಾ ಒಂದು ಪಾಯಿಂಟ್ ಪಡೆದವು. ಕೊನೆಯ ದಿನವಾದ ಸೋಮವಾರ, ಮಂದ ಬೆಳಕಿನಿಂದ ಈ ಪಂದ್ಯ ಬೇಗನೇ ಅಂತ್ಯಕಂಡಿತು. ಆರಂಭ ಆಟಗಾರನಾಗಿ ಬಡ್ತಿ ಪಡೆದ ನಿಕಿನ್ ಜೋಸ್ ಒಂದು ರನ್‌ನಿಂದ ಶತಕ ಕಳೆದುಕೊಂಡರು.

ಹೋಳ್ಕರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮಧ್ಯಪ್ರದೇಶ ಭಾನುವಾರದ ಮೊತ್ತಕ್ಕೇ (8 ವಿಕೆಟ್‌ಗೆ 425) ತನ್ನ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಕರ್ನಾಟಕ 75 ಓವರುಗಳಲ್ಲಿ 5 ವಿಕೆಟ್‌ಗೆ 206 ರನ್ ಗಳಿಸಿತು. ಟೀ ನಂತರ ಮಂದ ಬೆಳಕು ಪಂದ್ಯಕ್ಕೆ ಅಡ್ಡಿಮಾಡಿತು.

ನಿಕಿನ್ ಜೋಸ್ ಎಚ್ಚರಿಕೆ ಮಿಶ್ರಿತ ಆಕ್ರಮಣದ ಆಟವಾಡಿ ಎಂಟು ಬೌಂಡರಿ, ನಾಲ್ಕು ಸಿಕ್ಸರ್‌ಗಳಿದ್ದ 99 ರನ್ ಗಳಿಸಿದರು. ಕುಮಾರ್ ಕಾರ್ತಿಕೇಯ ಬೌಲಿಂಗ್‌ನಲ್ಲಿ ಲೆಗ್ ಬಿಫೋರ್ ಬಲೆಗೆ ಬಿದ್ದರು. ಒಂದು ಹಂತದಲ್ಲಿ ಕರ್ನಾಟಕ 72 ರನ್‌ಗಳಾಗುವಷ್ಟರಲ್ಲಿ 4 ಪ್ರಮುಖ ವಿಕೆಟ್ ಕಳೆದುಕೊಂಡು ಪರದಾಡಿತ್ತು. ಆದರೆ ನಿಕಿನ್ ಮತ್ತು ಶ್ರೇಯಸ್ ಗೋಪಾಲ್ (ಔಟಾಗದೇ 60, 110ಎ) ಐದನೇ ವಿಕೆಟ್‌ಗೆ 127 ರನ್ ಸೇರಿಸಿ ತಂಡವನ್ನು ರಕ್ಷಿಸಿದರು.

ನಿಕಿನ್ ಜೋಸ್

ನಾಯಕ ಮಯಂಕ್ ಅಗರವಾಲ್, ವೇಗಿ ಕಾರ್ತಿಕೇಯ ಬೌಲಿಂಗ್‌ನಲ್ಲಿ ಸಿಲಿ ಪಾಯಿಂಟ್‌ನಲ್ಲಿ ಕ್ಯಾಚಿತ್ತರು. ಮನಿಷ್ ಪಾಂಡೆ, ಗಲಿಯಲ್ಲಿದ್ದ ರಜತ್ ಪಾಟೀದಾರ್ ಅವರು ಹಿಡಿದ ಕ್ಯಾಚಿಗೆ ನಿರ್ಗಮಿಸಬೇಕಾಯಿತು. ದೇವದತ್ತ ಪಡಿಕ್ಕಲ್ (16) ಮತ್ತು ಮೊದಲ ಪಂದ್ಯವಾಡಿದ ರವಿಚಂದ್ರನ್ ಸ್ಮರಣ್ (17) ಬೇರೂರುವ ಹಂತದಲ್ಲೇ ವಾಪಸಾದರು.

ಮಧ್ಯಪ್ರದೇಶಕ್ಕೆ ಮೊದಲ ಇನಿಂಗ್ಸ್ ಮುನ್ನಡೆಯ ಆಸೆ ಚಿಗುರೊಡೆಯುವಂತೆ ಕಂಡಾಗ ನಿಕಿನ್– ಶ್ರೇಯಸ್ ಜೋಡಿ ಆ ಲೆಕ್ಕಾಚಾರ ಬುಡಮೇಲು ಮಾಡಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮಧ್ಯಪ್ರದೇಶ: 8 ವಿಕೆಟ್‌ಗೆ 425 ಡಿಕ್ಲೇರ್ಡ್; ಕರ್ನಾಟಕ: 75 ಓವರುಗಳಲ್ಲಿ 5 ವಿಕೆಟ್‌ಗೆ 206 (ನಿಕಿನ್ ಜೋಸ್ 99, ಶ್ರೇಯಸ್ ಗೋಪಾಲ್ ಔಟಾಗದೇ 60; ಕುಮಾರ್ ಕಾರ್ತಿಕೇಯ 68ಕ್ಕೆ3, ಸಾರಾಂಶ್ ಜೈನ್ 103ಕ್ಕೆ2). ಪಂದ್ಯದ ಆಟಗಾರ: ಶುಭಂ ಶರ್ಮಾ.

ಭಾರ್ಗವ್‌ಗೆ 6 ವಿಕೆಟ್: ಮುಂಬೈಗೆ ಸೋಲು

ವಡೋದರ (ಪಿಟಿಐ): ಎಡಗೈ ಸ್ಪಿನ್ನರ್ ಭಾರ್ಗವ್ ಭಟ್ ಅವರ (55ಕ್ಕೆ6) ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಬರೋಡ ತಂಡ, ರಣಜಿ ಟ್ರೋಫಿ 'ಎ' ಗುಂಪಿನ ಪಂದ್ಯದ ಕೊನೆಯ ದಿನವಾದ ಸೋಮವಾರ ಹಾಲಿ ಚಾಂಪಿಯನ್ ಮುಂಬೈ ತಂಡವನ್ನು 84 ರನ್‌ಗಳಿಂದ ಸೋಲಿಸಿತು.

ಗೆಲುವಿಗೆ 262 ರನ್ ಗಳಿಸುವ ಸವಾಲಿನೊಂದಿಗೆ ಮುಂಬೈ ತಂಡ ಭಾನುವಾರ 2 ವಿಕೆಟ್‌ಗೆ 42 ರನ್ ಗಳಿಸಿತ್ತು. ಆದರೆ 42 ಬಾರಿಯ ಚಾಂಪಿಯನ್ನರು ಕೊನೆಯ ದಿನ 177 ರನ್‌ಗಳಿಗೆ ಆಲೌಟ್ ಆದರು. 34 ವರ್ಷದ ಭಟ್ 19.4 ಓವರುಗಳ ದಾಳಿಯಲ್ಲಿ ಮುಂಬೈ ಇನಿಂಗ್ಸ್ ಧ್ವಂಸಗೊಳಿಸಿದರು. ಸಿದ್ದೇಶ್ ಲಾಡ್ (59) ಮತ್ತು ಶ್ರೇಯಸ್ ಅಯ್ಯರ್ (30) ಬಿಟ್ಟರೆ ಉಳಿದವರು ಹೋರಾಟ ತೋರಲಿಲ್ಲ.

ಸಂಕ್ಷಿಪ್ತ ಸ್ಕೋರು: ಬರೋಡ: 290 ಮತ್ತು 60.3 ಓವರುಗಳಲ್ಲಿ 185 (ಕೃನಾಲ್ ಪಾಂಡ್ಯ 55; ತನುಷ್ ಕೋಟ್ಯಾನ್ 61ಕ್ಕೆ5); ಮುಂಬೈ: 214 ಮತ್ತು 48.2 ಓವರುಗಳಲ್ಲಿ 177 (ಸಿದ್ದೇಶ್ ಲಾಡ್ 59, ಶ್ರೇಯಸ್ ಅಯ್ಯರ್ 30; ಭಾರ್ಗವ್ ಭಟ್ 55ಕ್ಕೆ6, ಮಹೇಶ್ ಪಿತಿಯಾ 68ಕ್ಕೆ2)

ತಮಿಳುನಾಡು ತಂಡಕ್ಕೆ ವಿಮಲ್ ಆಸರೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ತಾಳ್ಮೆಯ 82 ರನ್ (139 ಎಸೆತ) ಗಳಿಸಿದ ನಾಯಕ ಆರ್.ವಿಮಲ್ ಕುಮಾರ್ ಅವರು ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಉಪಯುಕ್ತ ಜೊತೆಯಾಟಗಳ ಮೂಲಕ ತಮಿಳುನಾಡು ತಂಡ ಕುಸಿಯದಂತೆ ನೋಡಿಕೊಂಡರು.

ವಿಮಲ್ ಕುಮಾರ್

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಸೋಮವಾರ ಎರಡನೇ ದಿನದಾಟದ ಅಂತ್ಯಕ್ಕೆ ತಮಿಳುನಾಡು ತಂಡ 49 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 165 ರನ್ ಕಲೆ ಹಾಕಿತು.

ಮೈದಾನದ ಹೊರಾಂಗಣ ತೇವಗೊಂಡಿದ್ದ ಕಾರಣ ಭಾನುವಾರ ಮೊದಲ ದಿನದಾಟ ಒಂದೂ ಎಸೆತ ಕಾಣದೆ ರದ್ದಾಗಿತ್ತು. ಎರಡನೇ ದಿನವೂ ಹೊರಾಂಗಣ ತೇವವಾಗಿದ್ದು, ಎರಡು ಬಾರಿ ಪರಿಶೀಲನೆಯ ನಂತರ ಮಧ್ಯಾಹ್ನ 1.30ಕ್ಕೆ ಕೊನೆಗೂ ಆಟ ಆರಂಭವಾಯಿತು.

ಈ ಟೂರ್ನಿಗೆ ಪ್ರಸಕ್ತ ವರ್ಷ ಜಾರಿಗೆ ತಂದಿರುವ ಹೊಸ ನಿಯಮದ ಪ್ರಕಾರ, ಪ್ರವಾಸಿ ತಂಡವು ಮೊದಲು ಬ್ಯಾಟಿಂಗ್ ಅಥವಾ ಬೌಲಿಂಗ್ ಆಯ್ಕೆ ಮಾಡಿಕೊಳ್ಳುವ ನಿರ್ಧಾರವನ್ನು ತೆಗೆದುಕೊಳ್ಳಬಹುದಾಗಿದೆ. ತಮಿಳುನಾಡು ತಂಡ ಬ್ಯಾಟಿಂಗ್‌ಗೆ ನಿರ್ಧರಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ತಮಿಳುನಾಡು: 49 ಓವರ್‌ಗಳಲ್ಲಿ 4ಕ್ಕೆ 165 (ವಿಮಲ್ ಕುಮಾರ್ 82, ಅಜಿತೇಶ್ 21, ಆತೀಶ್ 16, ಮೊಹಮ್ಮದ್ ಅಲಿ 12, ರಿತಿಕ್ ಈಶ್ವರನ್ ಬ್ಯಾಟಿಂಗ್ 22, ಮಾಧವ ಪ್ರಸಾದ್ ಬ್ಯಾಟಿಂಗ್ 2; ಕೆ.ಶಶಿಕುಮಾರ್ 35ಕ್ಕೆ 2, ಪಾರಸ್ ಗುರುಬಕ್ಷ ಆರ್ಯ 45ಕ್ಕೆ 1).

ಭಾರತ ವಿರುದ್ಧ ಟೆಸ್ಟ್ ಸರಣಿ: ಮಧ್ಯಮ ಕ್ರಮಾಂಕಕ್ಕೆ ಮರಳಲು ಸಜ್ಜಾದ ಸ್ಮಿತ್

ಮೆಲ್ಬರ್ನ್ (ಪಿಟಿಐ): ಕೆಲಕಾಲ ಆರಂಭ ಆಟಗಾರನ ಪಾತ್ರ ನಿರ್ವಹಿಸಿದ್ದ ಅನುಭವಿ ಬ್ಯಾಟರ್ ಸ್ಟೀವ್ ಸ್ಮಿತ್ ಅವರು ಪ್ರವಾಸಿ ಭಾರತ ವಿರುದ್ಧ ಮುಂಬರುವ ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ ತಮ್ಮ ಮೆಚ್ಚಿನ ನಾಲ್ಕನೇ ಕ್ರಮಾಂಕಕ್ಕೆ ಮರಳಲಿದ್ದಾರೆ ಎಂದು ರಾಷ್ಟ್ರೀಯ ಆಯ್ಕೆಗಾರ ಜಾರ್ಜ್ ಬೇಲಿ ಸೋಮವಾರ ಖಚಿತಪಡಿಸಿದ್ದಾರೆ.

ಡೇವಿಡ್ ವಾರ್ನರ್ ನಿವೃತ್ತಿಯ ನಂತರ ಇನಿಂಗ್ಸ್ ಆರಂಭಿಸುವ ಹೊಣೆಯನ್ನು ಸ್ಮಿತ್ ನಿಭಾಯಿಸಿದ್ದರು. ಇದಾಗಿ ಎರಡನೇ ಟೆಸ್ಟ್‌ನಲ್ಲಿ ಅಜೇಯ 91 ರನ್ ಗಳಿಸಿದ್ದರೂ, ನಂತರ ಅದೇ ಸ್ಥಿರತೆ ಕಾಪಾಡಲಿಲ್ಲ. ನ್ಯೂಜಿಲೆಂಡ್ ವಿರುದ್ಧ ಸರಣಿಯ ನಾಲ್ಕು ಇನಿಂಗ್ಸ್‌ಗಳಲ್ಲಿ ಅವರು ಬರೇ 51 ರನ್ ಗಳಿಸಿದ್ದರು. ಕ್ಯಾಮೆರಾನ್ ಗ್ರೀನ್ ಅವರು ಗಾಯಾಳಾಗಿದ್ದು ಬೆನ್ನು ನೋವಿಗೆ ಶಸ್ತ್ರಚಿಕಿತ್ಸೆ ಪಡೆಯಲಿದ್ದಾರೆ. ಬಾರ್ಡರ್– ಗಾವಸ್ಕರ್ ಟ್ರೋಫಿಗಾಗಿ ಐದು ಟೆಸ್ಟ್‌ಗಳ ಸರಣಿಯ ಮೊದಲ ಪಂದ್ಯ ನವೆಂಬರ್ 22ರಂದು ಪರ್ತ್‌ನಲ್ಲಿ ಆರಂಭವಾಗಲಿದೆ.

ಎಂಇಜಿ ಅಂಡ್ ಸೆಂಟರ್ ತಂಡದ ಪ್ರವೇಶ್ ಬಿಶ್ತ್ (ಎಡ) ಮತ್ತು ರೆಬೆಲ್ಸ್ ತಂಡದ ಅವಿನಾಶ್ ವಿ. ಚೆಂಡಿಗಾಗಿ ಸೆಣಸಾಟ ನಡೆಸಿದರು –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ಶೈಜಾ ಮಿಂಚು: ರೆಬೆಲ್ಸ್‌ಗೆ ಜಯ

ಬೆಂಗಳೂರು: ರಿನ್ರೀಥನ್ ಶೈಜಾ ಅವರ ಅಮೋಘ ಆಟದ ಬಲದಿಂದ ರೆಬೆಲ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 2–1 ಗೋಲುಗಳಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ನಿಯಾಸ್ ನಾಜರ್ 51ನೇ ನಿಮಿಷ ಎಂಇಜಿ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ, ಕೊನೆಯ ಹಂತದಲ್ಲಿ ಶೈಜಾ (85ನೇ ಮತ್ತು 87ನೇ ನಿ) ಎರಡು ಗೋಲು ಗಳಿಸಿದರು.

ಸಂಕ್ಷಿಪ್ತ ಸುದ್ದಿ

ರೇಸ್: 16ನೇ ಸ್ಥಾನ ಪಡೆದ ಪ್ರಗತಿ ಗೌಡ

ಬೆಂಗಳೂರು: ಕರ್ನಾಟಕದ ಯುವ ರೇಸರ್ ಪ್ರಗತಿ ಗೌಡ ಅವರು ತಮ್ಮ ನಾಲ್ಕನೇ ಅಂತರರಾಷ್ಟ್ರೀಯ ಸ್ಪರ್ಧೆಯಾದ 'ರ್‍ಯಾಲಿ ಡು ಸೆಂಟರ್ ಅಲ್ಸೇಸ್' ರೇಸ್‌ನಲ್ಲಿ 16ನೇ ಸ್ಥಾನ ಪಡೆದರು.

ಫ್ರಾನ್ಸ್‌ನಲ್ಲಿ ಭಾನುವಾರ ನಡೆದ ರೇಸ್‌ಯಲ್ಲಿ 67 ಇತರ ರೇಸರ್‌ಗಳೊಂದಿಗೆ ಸ್ಪರ್ಧಿಸಿದ 26 ವರ್ಷ ವಯಸ್ಸಿನ ಪ್ರಗತಿ, ಗಂಟೆಗೆ ಸರಾಸರಿ 108.5 ಕಿಲೋ ಮೀಟರ್ ವೇಗದಲ್ಲಿ ಕಾರನ್ನು ಚಲಾಯಿಸಿ ಗಮನ ಸೆಳೆದರು. ಈ ರ್‍ಯಾಲಿಯಲ್ಲಿ ಸ್ಪರ್ಧಿಗಳು ಒಟ್ಟು 306.11 ಕಿ.ಮೀ. ದೂರ ಕ್ರಮಿಸಬೇಕಾಗಿತ್ತು.

ಮೊದಲ ಲೆಗ್‌ನಲ್ಲಿ 36ನೇ ಸ್ಥಾನ ಗಳಿಸಿದ್ದ ಪ್ರಗತಿ, ಎರಡನೇ ಲೆಗ್‌ನಲ್ಲಿ ಸವಾಲನ್ನು ಮೆಟ್ಟಿನಿಂತು ಆತ್ಮವಿಶ್ವಾಸದಿಂದ ವಾಹನ ಚಲಾಯಿಸಿ 16ನೇ ಸ್ಥಾನ ಪಡೆದರು.

ಪ್ಯಾರಿಸ್‌ನಲ್ಲಿ ಆಗಸ್ಟ್‌ನಲ್ಲಿ ನಡೆದ 'ರ್‍ಯಾಲಿ ಡೆಸ್ ವ್ಯಾಲೀಸ್–2024' ಟೂರ್ನಿಯಲ್ಲಿ ಪ್ರಗತಿ ಮೂರನೇ ಸ್ಥಾನ ಪಡೆದಿದ್ದರು. ಅದು ಅವರ ಚೊಚ್ಚಲ ಅಂತರರಾಷ್ಟ್ರೀಯ ರ್‍ಯಾಲಿಯಾಗಿತ್ತು.

ದೇಶೀಯ ಟೂರ್ನಿಗಳಿಗೆ ಇಂಪ್ಯಾಕ್ಟ್ ಪ್ಲೇಯರ್ ನಿಯಮ ರದ್ದು

ನವದೆಹಲಿ (ಪಿಟಿಐ): ಐಪಿಎಲ್ ಟೂರ್ನಿಯಲ್ಲಿ ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಮುಂದುವರಿಸಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ), ಮುಂಬರುವ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಸೇರಿದಂತೆ ದೇಶೀಯ ಟಿ20 ಟೂರ್ನಿಗಳಲ್ಲಿ ಈ ನಿಯಮ ರದ್ದುಮಾಡಿದೆ.

ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಕೆಲ ವರ್ಷಗಳ ಹಿಂದೆ ಪರಿಚಯಿಸಲಾಗಿತ್ತು. ಬಳಿಕ, ಐಪಿಎಲ್‌ಗೆ ಅದನ್ನು ವಿಸ್ತರಿಸಲಾಗಿತ್ತು. ಈಗ ರದ್ದು ಕುರಿತಂತೆ ಬಿಸಿಸಿಐ ಎಲ್ಲ ರಾಜ್ಯಗಳ ಕ್ರಿಕೆಟ್ ಮಂಡಳಿಗಳಿಗೆ ಪ್ರಕಟಣೆಯಲ್ಲಿ ತಿಳಿಸಿದೆ.

ಫಖರ್‌ಗೆ ನೋಟಿಸ್

ಲಾಹೋರ್ (ಪಿಟಿಐ): ಆಟಗಾರರ ನೀತಿಸಂಹಿತೆ ಉಲ್ಲಂಘನೆಗಾಗಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಯು (ಪಿಸಿಬಿ) ತನ್ನ ಕೇಂದ್ರೀಯ ಗುತ್ತಿಗೆ ಆಟಗಾರ ಫಖರ್ ಜಮಾನ್‌ಗೆ ಷೋಕಾಸ್ ನೋಟಿಸ್ ನೀಡಿದೆ.

ಇಂಗ್ಲೆಂಡ್ ವಿರುದ್ಧದ ಎರಡನೇ ಮತ್ತು ಮೂರನೇ ಟೆಸ್ಟ್ ಪಂದ್ಯಕ್ಕೆ ಪಾಕಿಸ್ತಾನ ತಂಡದಿಂದ ಬಾಬರ್ ಅಜಂ ಅವರನ್ನು ಹೊರಗಿಟ್ಟ ನಿರ್ಧಾರವನ್ನು ಫಖರ್ ಸಾಮಾಜಿಕ ಮಾಧ್ಯಮದಲ್ಲಿ ಪ್ರಶ್ನಿಸಿದ್ದರು.

ಡೆನ್ಮಾರ್ಕ್ ಓಪನ್: ಕಣದಲ್ಲಿ ಸಿಂಧು, ಸೇನ್

ಒಡೆನ್ಸ್ (ಡೆನ್ಮಾರ್ಕ್): ಬ್ಯಾಡ್ಮಿಂಟನ್‌ಗೆ ಪುನರಾಗಮನದ ಬಳಿಕ ನಿರಾಶೆ ಅನುಭವಿಸಿರುವ ಭಾರತದ ಪ್ರಮುಖ ತಾರೆಗಳಾದ ಪಿ.ವಿ. ಸಿಂಧು ಮತ್ತು ಲಕ್ಷ್ಯ ಸೇನ್ ಅವರಿಗೆ ಈಗ ಲಯಕ್ಕೆ ಮರಳಲು ಮತ್ತೊಂದು ಅವಕಾಶವಿದೆ. ಮಂಗಳವಾರ ಆರಂಭವಾಗುವ ಡೆನ್ಮಾರ್ಕ್ ಓಪನ್ 750 ಮಟ್ಟದ ಟೂರ್ನಿಯಲ್ಲಿ ಇವರಿಬ್ಬರು ಉತ್ತಮ ಆಟದ ನಿರೀಕ್ಷೆಯಲ್ಲಿದ್ದಾರೆ.


ಲಕ್ಷ್ಯ ಸೇನ್

ಬಿಡಬ್ಲ್ಯುಎಫ್ ವಿಶ್ವ ಟೂರ್‌ನ 13ನೇ ಟೂರ್ನಿ ಇದಾಗಿದ್ದು, ₹7.14 ಕೋಟಿ ಬಹುಮಾನ ಹೊಂದಿದೆ.

23 ವರ್ಷ ವಯಸ್ಸಿನ ಸೇನ್ ಮೊದಲ ಸುತ್ತಿನಲ್ಲಿ ಚೀನಾದ ಲು ಗುವಾಂಗ್ ವಿರುದ್ಧ ಆಡಲಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಎರಡು ಬಾರಿ ಪದಕ ಗೆದ್ದಿರುವ ಸಿಂಧು, ಚೀನಾ ತೈಪೆಯ ಪೈ ಯು ಪೊ ವಿರುದ್ಧ ಆಡುವ ಮೂಲಕ ಇಲ್ಲಿ ಅಭಿಯಾನ ಆರಂಭಿಸುವರು.

ಸಿಂಧು ಬಿಟ್ಟರೆ ಮಹಿಳಾ ಸಿಂಗಲ್ಸ್‌ನಲ್ಲಿ ಮಾಳವಿಕಾ ಬನ್ಸೋಡ್, ಆಕರ್ಷಿ ಕಶ್ಯಪ್ ಮತ್ತು ಉದಯೋನ್ಮುಖ ಆಟಗಾರ್ತಿ ಉನ್ನತಿ ಹೂಡಾ ಕೂಡ ಕಣದಲ್ಲಿದ್ದಾರೆ.